ಸಂವಾದ

ಏಪ್ರಿಲ್ ೨೦೧೧ ರೂ. ೨೦

ಅಂಬೇಡ್ಕರ್ ವಿಶೇಷಾಂಕ

ಅಂಬೇಡ್ಕರ್ ಸಂವಿಧಾನ V/S ಭಾರತದ ಸಂವಿಧಾನ

ಸಂವಾದ

ಮಾಸ ಪತ್ರಿಕೆ

ಸಂಪುಟ ೯ ಸಂಚಿಕೆ ೬
ಏಪ್ರಿಲ್ ೨೦೧೧

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080-23480278,
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೩೧
- ❑ ಸಂಪಾದಕರೊಂದಿಗೆ ಸಂವಾದ:
  - ○ ಸೈಬಣ್ಣ ಮುಡಬೂಳ ೦೪
  - ○ ಮಲ್ಲಿಕಾರ್ಜುನ ಗುಮ್ಮಗೋಳ ೦೫
  - ○ ಎಸ್. ಬಿ. ಜೋಗುರ ೦೬
  - ○ ಯು. ಎನ್. ಸಂಗನಾಳಮಠ ೦೭
- ❑ ಮಹಾನ್ ರಾಷ್ಟ್ರಪ್ರೇಮಿ ಅಂಬೇಡ್ಕರ್
  - ○ ಎ. ಆರ್. ಮೌರ್ಯ ೦೮
- ❑ ಅಂಬೇಡ್ಕರ್ ವಾದಿಯ ಕಣ್ಣಲ್ಲಿ ಬಾಬಾಸಾಹೇಬ್
  - ○ ಡಾ. ಎಚ್.ಎಸ್. ಅನುಪಮಾ ೧೦
- ❑ ಅಂಬೇಡ್ಕರ್ ಸಂವಿಧಾನ V/S ಭಾರತದ ಸಂವಿಧಾನ
  - ○ ಶಿವಸುಂದರ್ ೧೪





- ❑ ಮತಾಂತರ ನಿಲ್ಲಿಸಿ, ಜಾತ್ಯಾಂತರ ಬೆಂಬಲಿಸಿ!? ೨೦
  - ○ ಎಚ್. ಕೆ. ಕೃಷ್ಣ ಅರಕೆರೆ
- ❑ ಬಾಬಾ ಸಾಹೇಬರು... ಅಕ್ಷರ, ಅನ್ನ, ಭಯ... ೨೪
  - ○ ಹುಲಿಕುಂಟೆ ಮೂರ್ತಿ
- ❑ 'ಹಿಂದೂ' ಎಂಬ ಕೇಂದ್ರವೂ ಹೊಲೆಯ ಎಂಬ ಪರಿಧಿಯೂ
  - ○ ಪ್ರೊ॥ ಟಿ. ಯಲ್ಲಪ್ಪ ೨೬
- ❑ ದಲಿತರು ಹಿಂದೂಗಳೇ?
  - ○ ವೈ. ಮರಿಸ್ವಾಮಿ ೩೮
- ❑ ಮೂರು ಪ್ರಬಂಧಗಳು
  - ○ ಡಾ. ಬಿ. ಎಂ. ಪುಟ್ಟಯ್ಯ ೩೨
- ❑ ಹೊಸ ಪಕ್ಷಿ ರಾಗ...
  - ○ ಜ್ಯೋತಿ ಗುರುಪ್ರಸಾದ್ ೪೦
- ❑ ಕಾಲಮಾನ-೧೫
  - ○ ಡಾ. ಮುಜಾಫ್ಫರ್ ಅಸ್ಸಾದಿ ೪೪
- ❑ ಹಾಗೆ ನೋಡಿದರೆ -೫
  - ○ ಡಾ. ಬಂಜಗೆರೆ ಜಯಪ್ರಕಾಶ ೩೮
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ❑ ಬುದ್ಧಾಯಣ
  - ○ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ಹುಡುಕಾಟ ೧೩ ❑ ಅಂಬೇಡ್ಕರ್ ಮತ್ತು ನಾವು ೧೯ ❑ ಹೊಲಗೇರಿ ಎಂಬ University ೩೬

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಪತ್ರಗಳು

ಅಮೇರಿಕಾದ ಯುದ್ಧ ದಾಹ ಮತ್ತು ನಮ್ಮ ಮೌನ

ಪ್ರಿಯ ಸಂಪಾದಕರೇ,

ವಿಶ್ವದ ದೊಡ್ಡಣ್ಣನ ದೊಡ್ಡಸಿಕೆ ಸದ್ಯಕ್ಕಂತೂ ನಿಲ್ಲುವಂತೆ ಕಾಣುತ್ತಿಲ್ಲ. ಸಂಪತ್ಭರಿತ ದೇಶಗಳು ತನ್ನ ಹಿಡಿತಕ್ಕೆ ಸಿಗುವವರೆಗೆ ಅದರ ಯುದ್ಧದಾಹ ತಣಿಯುವುದಿಲ್ಲ. ಇಂಧನಮೂಲ ಸಂಪತ್ತಿದ್ದರಂತೂ ಕಬಳಿಸಲು ತುದಿಗಾಲಲ್ಲಿ ನಿಂತಿರುತ್ತದೆ. ಇರಾಕ್, ಆಫ್ಘನ್ ನಂತರ ಮುಂದೇನು ಎನ್ನುತ್ತಿರುವಾಗಲೇ ತೈಲ ಸಂಪತ್‌ಭರಿತ ಲಿಬಿಯಾ ದೇಶದ ಮೇಲೆರಗಿದೆ.

ಪ್ರತಿಯೊಬ್ಬನೂ ತನ್ನ ನಿರಾಳ ಬದುಕಿಗಾಗಿ, ಸ್ವಾತಂತ್ರ್ಯಕ್ಕಾಗಿ ತುಡಿಯುತ್ತಲೇ ಇರುತ್ತಾನೆ. ತೊಳಲಾಟದಿಂದ ಹೊರಬರಲು ಒಂದು ನಿರ್ದಿಷ್ಟ ಸಮಯಕ್ಕಾಗಿ ಕಾಯುತ್ತಿರುತ್ತಾನೆ. ಅಂತಹ ಹಾತೊರೆತ ನಿರಂತರವಾಗಿರುತ್ತದೆ. ಎಲ್ಲೋ ಮೂಲೆಯಲ್ಲಿ ಸಣ್ಣ ದನಿ ಮೊಳಗಿದರೂ ಸಾಕು ಅಷ್ಟೂ ದಿನದ ಮೌನ ದಿಡೀರನೆ ಸ್ಫೋಟಗೊಳ್ಳುತ್ತದೆ. ಅದಕ್ಕೆ ತಾಜಾ ಉದಾಹರಣೆ ಎಂದರೆ ಈಜಿಪ್ಟ್‌ನಲ್ಲಾದ ಯಶಸ್ವಿ ಜನಕ್ರಾಂತಿ. ನಾಲ್ಕು ದಶಕಗಳ ಹೊಸ್ನಿ ಮುಬಾರಕ್‌ರ ರಾಜಪ್ರಭುತ್ವವನ್ನು ಧಿಕ್ಕರಿಸಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಮನ್ವಂತರಕ್ಕೆ ತಮ್ಮ ಪ್ರಾಣಗಳನ್ನು ಲೆಕ್ಕಿಸದೆ ಮುಂದಾದ ಈಜಿಪ್ಟ್ ಜನತೆಯ ಶಾಂತಿಯ ಹೋರಾಟ ಅನುಕರಣೀಯ.

ಸಣ್ಣ ದೇಶವೊಂದರಿಂದ ಉಂಟಾದ ಈ ಜನಾಂದೋಲನದಿಂದ ಇತರೆ ರಾಜಪ್ರಭುತ್ವ ಹೊಂದಿರುವ ದೇಶಗಳಲ್ಲಿನ ಜನರೂ ಪ್ರೇರೇಪಿತರಾಗಿ ಪ್ರಜಾಪ್ರಭುತ್ವದ ಕಹಳೆ ಮೊಳಗಿಸುತ್ತಿದ್ದಾರೆ. ಅದರ ಗಾಳಿ ಸಿರಿಯಾ, ಯೆಮೆನ್‌ನಲ್ಲೂ ಬೀಸಿದ್ದು ಅರಸೊತ್ತಿಗೆಯ ವಿರುದ್ಧದ ಪ್ರತಿಭಟನೆ ಮುಂದುವರೆದಿದೆ. ಹಿಂಸಾಚಾರಕ್ಕೆ ನೂರಾರು ಅಮಾಯಕ ನಾಗರೀಕರು ಬಲಿಯಾಗಿದ್ದಾರೆ. ಈ ಸನ್ನಿವೇಶವನ್ನು ನಿಭಾಯಿಸುವಲ್ಲಿ ವಿಶ್ವಸಂಸ್ಥೆ ಎಡವಿದೆ ಎನ್ನುವುದಕ್ಕಿಂತಲೂ ದೊಡ್ಡಣ್ಣ ಅಮೇರಿಕಾದ ಅಣತಿಯಂತೆ ಗೋಣು ಆಡಿಸುತ್ತಿದೆ ಎನ್ನುವುದು ಜಾಗತಿಕ ಸತ್ಯ.

ಅಮೇರಿಕಾಕ್ಕೆ ದುರುದ್ದೇಶ ಇಲ್ಲದಿದ್ದರೆ, ನಮಗೆ ಶಸ್ತ್ರಾಸ್ತ್ರ ಕೊಡಿ ಸರ್ವಾಧಿಕಾರಿ ಗಢಾಫಿ ವಿರುದ್ಧ ನಾವು ಹೋರಾಡುತ್ತೇವೆ ಎಂದು ಲಿಬಿಯಾ ಜನತೆ ಕೇಳಿದರೆ; ಅವರನ್ನು ಶಾಂತಿಯುತ ಹೋರಾಟದತ್ತ ತಿರುಗಿಸುವುದರ ಬದಲು ತಾನೇ ಆ ದೇಶದ ಮೇಲೆ ಬಾಂಬುಗಳನ್ನು ಸುರಿಸಿ ಯುದ್ಧಕ್ಕೆ ಮುಂದಾಗಿರುವ ಅಮೇರಿಕಾ ದೇಶದ ದುರುದ್ದೇಶ ಎಲ್ಲರಿಗೂ ಅರ್ಥವಾಗುತ್ತದೆ. ಅದಕ್ಕೆ ಅಂತದ್ದೆ ದಾಹ ಮನಸ್ಥಿತಿಯನ್ನು ಹೊಂದಿರುವ ದೇಶಗಳೂ ಕೈಜೋಡಿಸಿದ್ದು ಯುದ್ಧ ವಿರೋಧಿ ಮನಸ್ಸುಗಳು ಕನಲಿವೆ.

ಜನತಂತ್ರಕ್ಕೆ ಮಾರಕವಾದ ಆಡಳಿತ ವ್ಯವಸ್ಥೆಯನ್ನು ಆಯಾ ದೇಶದ ಜನರೇ ಕಿತ್ತೊಗೆಯುವ ಸನ್ನಿವೇಶವನ್ನು ನಿರ್ಮಾಣ ಮಾಡಬೇಕೆ ಹೊರತು, ಸಣ್ಣ ಅವಕಾಶ ಸಿಕ್ಕರೂ ಸಾಕು ಅದನ್ನೆ ನೆಪಮಾಡಿ ಕೊಂಡು ಮೂಗು ತೂರಿಸಿ ದಬ್ಬಾಳಿಕೆ ನಡೆಸುವ ಯಜಮಾನಿಕೆ ಪ್ರವೃತ್ತಿ ಸಲ್ಲದು. ಮುಂದೊಂದು ದಿನ ಈ ಪರಕೀಯ ಹಿಡಿತವೇ ಮತ್ತಷ್ಟು ಸಂಘರ್ಷಗಳಿಗೆ ದಾರಿಮಾಡಿಕೊಡುತ್ತದೆ.

ಇತ್ತ ನಮ್ಮ ದೇಶ ತಟಸ್ಥ ನೀತಿ ಅನುಸರಿಸುವ ಮೂಲಕ ಅಮೇರಿಕಾದ ಧಗಾಕೋರತನಕ್ಕೆ ಪರೋಕ್ಷವಾಗಿ ಕುಮ್ಮಕ್ಕು ನೀಡಿರುವುದು ಖಂಡನೀಯ. ನಮ್ಮದು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವೆಂದು ಬೀಗುತ್ತೇವೆ. ಆದರೆ ನಿಜವಾಗಿಯು ಇಲ್ಲಿ ಜನತಂತ್ರವಿದೆಯೇ? ರಾಜಪ್ರಭುತ್ವದ ಮುಂದುವರೆದ ಭಾಗದಂತಿರುವ ಕುಟುಂಬ ರಾಜಕಾರಣವನ್ನು ಏನೆಂದು ಕರೆಯಬೇಕು. ಇದು ಪ್ರಜಾಪ್ರಭುತ್ವದ ಅಣಕವಲ್ಲವೆ? ಒಬ್ಬ ವ್ಯಕ್ತಿ ದೌರ್ಜನ್ಯದಿಂದ ಮರಣ ಹೊಂದಿದ್ದರಿಂದ ರೊಚ್ಚಿಗೆದ್ದ ಲಿಬಿಯಾ ಜನತೆ ಪ್ರಭುತ್ವದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಆದರೆ ಇಲ್ಲಿ ಪ್ರತಿನಿತ್ಯ ಎಷ್ಟೊಂದು ದಲಿತರ, ಅಸಹಾಯಕರ ಮಾರಣಹೋಮ ನಡೆಯುತ್ತಿದೆ. ಈಬಗ್ಗೆ ಎಷ್ಟು ಜನಕ್ಕೆ ಮನಕಲಕಿದೆ. ಇಷ್ಟೊಂದು ಭ್ರಷ್ಟಾಚಾರ ನಡೆಸಿಯೂ ರಾಜಾರೋಷವಾಗಿ ದರ್ಬಾರ್ ಮಾಡುತ್ತಿದ್ದಾರಲ್ಲ. ಪ್ರಜ್ಞಾವಂತ ಮನಸ್ಸುಗಳಿಗೆ ನಾಟುತ್ತಿಲ್ಲವೆ. ಸಿರಿಯಾ, ಯೆಮೆನ್, ಲಿಬಿಯಾ, ಈಜಿಪ್ಟ್ ಜನಕ್ರಾಂತಿಗಳಿಂದ ಈ ದೇಶದ ಜನತೆ ಪ್ರೇರಣೆ ಪಡೆಯುವುದು ಯಾವಾಗ. ಇನೆಷ್ಟು ದಿನ ಈ ಮೌನ?

ಡಾ. ಕಾಶಿನಾಥ್ ಭೈರನಹಟ್ಟಿ
ಬೆಂಗಳೂರು

ಸಮ್ಮೇಳನಗಳ ಹೆಸರಲ್ಲಿ ಸಂಸ್ಕೃತಿಯ ವಾಣಿಜ್ಯೀಕರಣ!

ಪ್ರಿಯ ಸಂಪಾದಕರೇ,

ಕನ್ನಡದ ಪರವಾದ ಹೋರಾಟ ಇಂದು-ನಿನ್ನೆಯದಲ್ಲ. ಅದಕ್ಕೆ ಹಲವಾರು ಶತಮಾನಗಳ ಇತಿಹಾಸವಿದೆ. ಆಲೂರು ವೆಂಕಟರಾಯರಂತಹ ನಾಡಿನ ನೂರಾರು ಸಾಹಿತಿಗಳ ಕನಸು - ಕನವರಿಕೆಗಳಿವೆ. ಸಾವಿರಾರು ಬುದ್ಧಿಜೀವಿಗಳು ಸವೆಸಿದ ಕಷ್ಟದ ಹಾದಿ ಇದೆ. ಕನ್ನಡಪರವಾದ ಚಳುವಳಿಗೆ ಇಷ್ಟೆಲ್ಲ ಹಿನ್ನಲೆ ಇದ್ದರೂ, ಏಕೆ ಕನ್ನಡ ಇಂದು ಕರ್ನಾಟಕದಲ್ಲಿ ಇಂತಹ ಸ್ಥಿತಿಯಲ್ಲಿದೆ? ಏಕೆ ಕನ್ನಡಿಗ ತನ್ನ ನಾಡಿನಲ್ಲೇ ಅನಾಥನಾಗುತ್ತಿದ್ದಾನೆ? ಎಂದು ಯೋಚಿಸ ಹೊರಟರೆ ಕೆಲವು ಪ್ರಮುಖ ಅಂಶಗಳು ಸ್ಪಷ್ಟವಾಗುತ್ತಾ ಹೋಗುತ್ತವೆ.

ಅದಕ್ಕೆ ಒಂದು ಉತ್ತಮ ಉದಾಹರಣೆ ಎಂದರೆ ವಿಶ್ವಕನ್ನಡ ಸಮ್ಮೇಳನದ ಉದ್ಘಾಟನೆಯ ಕುರಿತಂತೆ ಬರಗೂರು/ನಾರಾಯಣ ಮೂರ್ತಿಯವರ ನಡುವಿನ ತಾತ್ವಿಕ ಭಿನ್ನಾಭಿಪ್ರಾಯದ ಕುರಿತ ಚರ್ಚೆ. ಹಾಗೆ ನೋಡುವುದಾರೆ ಒಂದು ಅರ್ಥದಲ್ಲಿ ವಿಶ್ವಕನ್ನಡ ಸಮ್ಮೇಳನದ ಮೂಲ ಉದ್ದೇಶ ಕರ್ನಾಟಕವನ್ನು, ಕನ್ನಡ ಸಂಸ್ಕೃತಿಯನ್ನು ಇಲ್ಲಿನ ಜೀವನಕ್ರಮದ ಉತ್ಸವಗಳನ್ನು ಬೌದ್ಧಿಕ ರೂಪದಲ್ಲಿ, ಆಕರ್ಷಕವಾಗಿ ಮನರಂಜನಾತ್ಮಕವಾಗಿ ಹೊರಜಗತ್ತಿನ ಮುಂದೆ ಮಂಡಿಸುವುದಾಗಿದೆ.

ಅದಕ್ಕೆ ಉತ್ತರವಾಗಿ ನಾರಾಯಣ ಮೂರ್ತಿಯವರಂತಹ ಒಬ್ಬ ಆಧುನಿಕ ವ್ಯಾಪಾರಿ ಸಮ್ಮೇಳನವನ್ನು ಉದ್ಘಾಟಿಸಿದರೆ ಸಮ್ಮೇಳನದ ನಿಜವಾದ ಉದ್ದೇಶ ಈಡೇರಬಹುದು ಎಂದು ಸರ್ಕಾರ ಚಿಂತಿಸಿದಂತೆ ಕಾಣುತ್ತಿದೆ. ಈ ನಿರ್ಧಾರಕ್ಕೆ ಸಂಬಂಧಿಸಿ ಬರಗೂರು ಅವರು ಎತ್ತಿರುವ ತಾತ್ವಿಕ ಭಿನ್ನಾಭಿಪ್ರಾಯ ಒಂದು ನೆಲೆಯಿಂದ ಬಹಳ ಪ್ರಮುಖವಾದುದು.

ಅಂದರೆ ಒಂದು ಭಾಷೆ, ಸಂಸ್ಕೃತಿ ತನ್ನನ್ನು ತಾನು ಹೊರಜಗತ್ತಿಗೆ ವಾಣಿಜ್ಯೀಕರಿಸಿಕೊಳ್ಳುವುದು ಸುಲಭ. ಆದರೆ ಅದು ರೋಗದ ಮಾರ್ಗ. ಒಂದು ನಾಡು ತನ್ನಲ್ಲಿರುವ ಕಲೆ, ಜೀವನಕ್ರಮದ ಉತ್ಸವಗಳನ್ನು ಸಮ್ಮೇಳನಗಳ ಹೆಸರಿನಲ್ಲಿ ವಾಣಿಜ್ಯೀಕರಿಸಿಕೊಳ್ಳುವುದು ಮತ್ತು ಅದನ್ನು ರಫ್ತು ಮಾಡಲೆತ್ನಿಸುವುದು ಅಗ್ಗದದಾರಿ.

ಇದನ್ನೆ ಬರಗೂರು ಅವರು ಕನ್ನಡಿಗರ ಆತ್ಮಗೌರವದ ಪ್ರಶ್ನೆ ಎಂದು ಕರೆದದ್ದು ಅನ್ನಿಸುತ್ತದೆ. ವಿಶ್ವಕನ್ನಡ ಸಮ್ಮೇಳನದ ಮುಖ್ಯ ಉದ್ದೇಶ ಜಾಗತಿಕರಣದ ಬಿರುಗಾಳಿಗೆ, ವ್ಯಾಪಾರಿ ಪ್ರಪಂಚದ ಏಕರೂಪದ ಸಂಸ್ಕೃತಿಯ ನಿರ್ಮಾಣದ ಮೂಢತನಕ್ಕೆ ವೇದಿಕೆ ಒದಗಿಸುವುದಲ್ಲ. ಬದಲಾಗಿ ಕನ್ನಡವನ್ನು, ಇಲ್ಲಿನ ವೈವಿದ್ಯಮಯ ಸಂಸ್ಕೃತಿಯನ್ನು ಜನಜೀವನವನ್ನು ಜಗತ್ತಿಗೆ ತಲುಪಿಸಿ ಜಗತ್ತು ನಮ್ಮ ನೆಲದಿಂದ ಕಯುವುದು ಏನಿದೆ ಎಂಬುದನ್ನು ತೋರಿಸುವ ಉದ್ದೇಶ ಹೊಂದಿರಬೇಕು. ಈ ಹಿನ್ನೆಲೆಯಲ್ಲಿ ಸಾಹಿತ್ಯದ ಹಿನ್ನಲೆಯ ವ್ಯಕ್ತಿ ಸಮ್ಮೇಳನ ಉದ್ಘಾಟಿಸಿದ್ದರೆ ಉತ್ತಮವಿತ್ತು ಎಂಬುದು ನನ್ನ ಅಭಿಪ್ರಾಯ.

ಡಾ. ಕಿರಣ್ ಎಂ. ಗಾಜನೂರು
ಶಂಕರಘಟ್ಟ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ

ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ

ರೂ.೨೫೦/- ರೂ.೭೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ

ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-

ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಆತಂಕ ಮೂಡಿಸಿರುವ ಮೇಧಾವಿಗಳ ಮೌನ!

ಸಂಪಾದಕರೊಡನೆ ಸಂವಾದ

ಸೈಬಣ್ಣ ಮುಡಬೂಳ

ಎಲ್ಲಿ ವಿಚಾರಗಳಿಗೆ, ವೈಚಾರಿಕತೆಗೆ ಬೆಲೆಯಿರುವದಿಲ್ಲವೊ ಅಲ್ಲಿ ಪ್ರಗತಿಗೆ ಅವಕಾಶವಿರುವದಿಲ್ಲ ಜಪಾನ್. ದೇಶದ ಮೇಲೆ ಅಮೇರಿಕಾ ಬಾಂಬ್ ಪ್ರಯೋಗಿಸಿ ಇಡೀ ದೇಶದ ಮೇಲೆ ಮಾರಕ ಪರಿಣಾಮವನ್ನುಂಟು ಮಾಡಿತ್ತು. ಅಂತಹ ಪರಿಣಾಮವನ್ನು ದಿಟ್ಟವಾಗಿ ಎದುರಿಸಿ ಅಲ್ಪ ಅವಧಿಯಲ್ಲಿಯೆ ಜಗತ್ತಿನ ಬಲಾಢ್ಯ ರಾಷ್ಟ್ರವಾಗಿ ಇಂದು ಜಗತ್ತಿನ ಮುಂದಿದೆ.

ಮಾನ್ಯ ಸಂಪಾದಕರೇ,

ಭಾರತವು ವಿಶ್ವ ನಕಾಶೆಯಲ್ಲಿ ತನ್ನದೆಯಾದ ಛಾಪನ್ನು ಮೂಡಿಸುತ್ತಿರುವ ರಾಷ್ಟ್ರವಾಗಿದೆ. ವಿಶ್ವಮಟ್ಟದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿ ಕೊಳ್ಳುತ್ತಿರುವದು ಗಮನಾರ್ಹ ಸಂಗತಿಯಾಗಿದೆ.

ಇಂತಹ ರಾಷ್ಟ್ರವು ಇತ್ತಿಚೆಗೆ ಹಲವಾರು ಸಮಸ್ಯೆ, ಆತಂಕ, ಮುಕ್ತ ವಾತಾವರಣದ ಕೊರತೆಯನ್ನು ಎದುರಿಸುತ್ತಿರುವದು ಕಂಡು ಬರುತ್ತಿದೆ. ಇದರ ಹಿನ್ನಲೆಯನ್ನು ಭೇದಿಸ ಹೊರಟರೆ ಹಲವಾರು ಸತ್ಯ-ಸಂಗತಿಗಳು ಗೋಚರವಾಗುತ್ತವೆ. ಮುಖ್ಯವಾಗಿ ಇಡೀ ರಾಷ್ಟ್ರವು ಗಮನ ಹರಿಸಬೇಕಾದದ್ದು ಬೌದ್ಧಿಕ ವಲಯವನ್ನು ಕಡೆಗಣಿಸುತ್ತಿರುವದಕ್ಕೆ. ಯಾವುದೆ ರಾಷ್ಟ್ರವು ಸದೃಢ, ಪ್ರಗತಿಯುತ ರಾಷ್ಟ್ರವಾಗಬೇಕಾದರೆ ಅದಕ್ಕೆ ಬೌದ್ಧಿಕ ವಲಯದ ಅಗತ್ಯತೆ ಹೆಚ್ಚಾಗಿರುತ್ತದೆ. ಇಂತಹ ಬೌದ್ಧಿಕ ವಲಯವು ರಾಷ್ಟ್ರದ ಅಭಿವೃದ್ಧಿಯಲ್ಲಿ ಗಮನಾರ್ಹವಾದ ಕೊಡುಗೆಗಳನ್ನು ನಿಡುತ್ತದೆಯಲ್ಲದೆ, ಸಾಧಕ-ಭಾದಕಗಳ ಕುರಿತು ಅಮೂಲಾಗ್ರವಾಗಿ ಪರಿಶೀಲಿಸಿ ರಾಷ್ಟ್ರ ನಿರ್ಮಾಣದಲ್ಲಿ ತೊಡಗುತ್ತದೆ.

ಹಾಗಾಗಿ ಬೌದ್ಧಿಕ ವಲಯಕ್ಕೆ ಯಾವುದೇ ರಾಷ್ಟ್ರದಲ್ಲಿ ಅಗ್ರಸ್ಥಾನವಿರುತ್ತದೆ. ಭಾರತ ದೇಶದ ಪರಿಸ್ಥಿತಿಯ ಚಿತ್ರಣವನ್ನು ಪರಿಶೀಲಿಸುತ್ತಾ ಹೋದರೆ ಇಲ್ಲಿ ಬೌದ್ಧಿಕ ವಲಯಕ್ಕೆ ಉಸಿರುಗಟ್ಟುವಂತಹ ವಾತಾವರಣ ನಿರ್ಮಾಣವಾಗಿದೆ. ಪರಿಣಾಮವಾಗಿ ಹಲವಾರು ಕ್ಷೇತ್ರಗಳು ಅಧೋಗತಿಗಿಳಿದಿವೆ. ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಏರುಪೇರುಗಳಾಗುತ್ತಿವೆ. ಹಾಗಾಗಿ ಬುದ್ಧಿ ಜೀವಿಗಳು, ಮೇಧಾವಿಗಳು ಪರಿಸ್ಥಿತಿಯಿಂದ ಉಂಟಾಗಿರುವ ಮೌನವನ್ನು ಮುರಿದು ಸಾಮಾಜಿಕ ಸ್ಥಿರತೆಗಾಗಿ, ರಾಷ್ಟ್ರದ ಪ್ರಗತಿಗಾಗಿ ಮಧ್ಯೆ ಪ್ರವೇಶ ಮಾಡಬೇಕಾದ ತುರ್ತು ಪರಿಸ್ಥಿತಿಯಿದೆ.

ಎಲ್ಲಿ ವಿಚಾರಗಳಿಗೆ, ವೈಚಾರಿಕತೆಗೆ ಬೆಲೆಯಿರುವದಿಲ್ಲವೊ ಅಲ್ಲಿ ಪ್ರಗತಿಗೆ ಅವಕಾಶವಿರುವದಿಲ್ಲ ಜಪಾನ್. ದೇಶದ ಮೇಲೆ ಅಮೇರಿಕಾ ಬಾಂಬ್ ಪ್ರಯೋಗಿಸಿ ಇಡೀ ದೇಶದ ಮೇಲೆ ಮಾರಕ ಪರಿಣಾಮವನ್ನುಂಟು ಮಾಡಿತ್ತು. ಅಂತಹ ಪರಿಣಾಮವನ್ನು ದಿಟ್ಟವಾಗಿ ಎ7ದುರಿಸಿ ಅಲ್ಪ ಅವಧಿಯಲ್ಲಿಯೆ ಜಗತ್ತಿನ ಬಲಾಢ್ಯ ರಾಷ್ಟ್ರವಾಗಿ ಇಂದು ಜಗತ್ತಿನ ಮುಂದಿದೆ. ಇದರಲ್ಲಿ ಬುದ್ದಿಜೀವಿಗಳ ಮೇಧಾವಿಗಳ ಪಾತ್ರ ಹಿರಿದಾದುದು.

ಈ ಸಂದರ್ಭದಲ್ಲಿ ಪ್ರಾನ್ಸನ ಮಹತ್ವಾಕಾಂಕ್ಷಿ ಅರಸನಾಗಿದ್ದಂತಹ ನೆಪೋಲಿಯನ್ ಬೋನ ಪಾರ್ಟಿಯ ಮಾತು ನೆನಪಿಗೆ ಬರುತ್ತದೆ. ಅದೇನೆಂದರೆ "Ideas are Ruled The World" ಯಾವ ಕಾಲಕ್ಕೂ, ಯಾವುದೇ ಸಂದರ್ಭದಲ್ಲಾದರೂ "ವಿಚಾರಗಳೇ ಜಗತ್ತನ್ನು ಆಳುತ್ತವೆ." ವಿಚಾರಗಳ ಹೊರತಾಗಿ ಜಗತ್ತಿನಲ್ಲಿ ಯಾವುದು ಶಾಶ್ವತವಾಗಿ ಉಳಿಯುವದಿಲ್ಲ. ಹಾಗಾಗಿ ಸಮಾಜಕ್ಕೂ ದೇಶದ ಪ್ರಗತಿಗೂ, ಮೇಧಾವಿಗಳ ಉಪಸ್ಥಿತಿ ಅವಶ್ಯ. ಸಮಾಜವೆಂಬ ಸರೋವರವು ವ್ಯವಸ್ಥಿತವಾಗಿ ಸುಗಮವಾಗಿ ಸಮತಟ್ಟಾಗಿ ಹರಿಯಬೇಕಾದರೆ, ವಿಚಾರಗಳಿಗೆ ಪ್ರಾಮುಖ್ಯತೆ ಇರಲೇಬೇಕಾಗುತ್ತದೆ. ಇದಾಗದಿದ್ದರೆ ಸಮಾಜವೆಂಬ ಸರೋವರ ಕದಡಿ ಸಾಮಾಜಿಕ ಅಶಾಂತಿ, ಗೊಂದಲಗಳು ಉಂಟಾಗುತ್ತವೆ.

ಹಾಗಾಗಿ ಬುದ್ದಿಜೀವಿಗಳಿಗೆ, ಮೇಧಾವಿಗಳಿಗೆ ಕಡಿವಾಣ ಹಾಕುವ ವ್ಯವಸ್ಥೆಯನ್ನು ವಿರೋಧಿಸಬೇಕಾದ ಸಂದರ್ಭ ಬಂದೊದಗಿದೆ. ಇವರ ಸೇವೆಯನ್ನು ಸಮಾಜ ಮತ್ತು ರಾಷ್ಟ್ರ ಕಡೆಗಣಿಸಿದರೆ ತನ್ನ ಅಸ್ತಿತ್ವಕ್ಕೆ ದಕ್ಕೆ ತಂದುಕೊಳ್ಳಬೇಕಾದಂತಹ ಪರಿಸ್ಥಿತಿ ಬರಬಹುದು. ಅಮೇರಿಕಾದಂತಹ ಪುಟ್ಟ ರಾಷ್ಟ್ರವು ಜಗತ್ತಿನ ಬಲಾಢ್ಯ ರಾಷ್ಟ್ರವಾಗಬೇಕಾದರೆ ಅಲ್ಲಿನ ಬುದ್ದಿಜೀವಿಗಳು ಅಪಾರ ಶ್ರಮ ವಹಿಸಿ ಬೇರೆ ರಾಷ್ಟ್ರಗಳಿಗೆ ಮಾದರಿಯಾಗಿದ್ದಾರೆ. ಅಲ್ಲಿನ ಸಮಾಜವು ಸಶಕ್ತವಾಗಿ ರೂಪುಗೊಂಡಿದ್ದು ಬೌದ್ಧಿಕ ವಲಯದಿಂದ. ಹಾಗಾಗಿ ಭಾರತ ಇಂತಹ ವಲಯಕ್ಕೆ ಮುಕ್ತವಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಬೇಕಾಗುತ್ತದೆ. ಮೇಧಾವಿಗಳ ಮೌನದಿಂದ ಎಲ್ಲಾ ಕ್ಷೇತ್ರಗಳು ತಮ್ಮ ಅಂತಃಸತ್ವವನ್ನು ಕಳೆದುಕೊಂಡಿವೆ. ಮುಖ್ಯವಾಗಿ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ ಮುಂತಾದವು ಎಲ್ಲ ಕ್ಷೇತ್ರಗಳು ಭ್ರಮನಿರಸನವನ್ನುಂಟು ಮಾಡಿವೆ.

ಒಂದು ಊರು, ಒಂದು ರಾಜ್ಯ, ಅಥವಾ ಒಂದು ರಾಷ್ಟ್ರ ಹಾಳಾಗಿ ಹೋಗಲು ಗೂಂಡಾಗಿರಿ, ಭಯೋತ್ಪಾದನೆ, ಅಕ್ರಮ ಚಟುವಟಿಕೆಗಳು ಮಾಡಬೇಕಾಗಿಲ್ಲ. ಬದಲಾಗಿ ಬುದ್ದಿಜೀವಿಗಳು, ಮೇಧಾವಿಗಳು ಮೌನ ವಹಿಸಿದರೆ ಸಾಕು ಊರಾಗಲಿ ಅಥವಾ ರಾಷ್ಟ್ರವಾಗಲಿ ಹಾಳಾಗಿ ಹೋಗುತ್ತದೆ. ಅಷ್ಟರ ಮಟ್ಟಿಗೆ ಮೇಧಾವಿಗಳ ತೊಡಗಿಸಿಕೊಳ್ಳುವಿಕೆ ರಾಷ್ಟ್ರದ, ಸಮಾಜದ ಹಿತದೃಷ್ಟಿಯಿಂದ ಮುಖ್ಯವಾಗುತ್ತದೆ. ಸಮಾಜದಲ್ಲಿ ನಡೆಯುವ ಅರ್ಥಹೀನ ಆಚರಣೆಗಳ, ಅಕ್ರಮಗಳ ಅನೈತಿಕತೆಗಳ ಕುರಿತಾಗಿ ಮೇದಾವಿಗಳ ದನಿಗೆ ಜೀವ ಬರುವದಿಲ್ಲವೋ ಅಲ್ಲಿಯವರೆಗೆ ಸ್ವಸ್ಥ ಸಮಾಜ ಅಥವಾ ರಾಷ್ಟ್ರ ನಿರ್ಮಾಣ ಸಾಧ್ಯವಿಲ್ಲ. ಹಾಗಾಗಿ ರಾಷ್ಟ್ರವು ಬುದ್ಧಿಜೀವಿಗಳ ಸಂಖ್ಯೆಯ ಹೆಚ್ಚಳದ ಕಡೆ ಗಮನಹರಿಸಿ ತನ್ನ ಬೇರನ್ನು ಗಟ್ಟಿಮಾಡಿಕೊಳ್ಳಬೇಕು. ಇದಕ್ಕಾಗಿ ಮೊದಲು ಶೈಕ್ಷಣಿಕ ವ್ಯವಸ್ಥೆಯನ್ನು ಸತ್ವಯುತವಾಗಿ ಅನುಷ್ಠಾನಕ್ಕೆ ತರಬೇಕು. ಶೈಕ್ಷಣಿಕ ವ್ಯವಸ್ಥೆಯ ಪರಿಣಾಮಕಾರಿ ಅನುಷ್ಠಾನದಿಂದಾಗಿ ಸಮಾಜದಲ್ಲಿ ವೈಚಾರಿಕತೆಯ ಪ್ರಸರಣ ಸಾಧ್ಯವಾಗುವದರ ಮೂಲಕ ವೈಚ್ಛಾರಿಕತೆಯ ಬಲವರ್ಧನೆಗೆ ಅವಕಾಶವಾಗುತ್ತದೆ. ಜೊತೆಗೆ ಬುದ್ಧಿಜೀವಿಗಳ ಸಂಖ್ಯೆ ಹೆಚ್ಚಳವಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಸಮಾಜದಲ್ಲಿ ನಡೆಯುವ ತಪ್ಪುಗಳನ್ನು ಬುದ್ದಿಜೀವಿಗಳು ತಪ್ಪು ಎಂದು ಹೆಳುವದು ಅನಿವಾರ್ಯವಾಗಿದೆ. ಒಂದು ವೇಳೆ ತಪ್ಪನ್ನು ತಪ್ಪು ಎಂದು ಹೇಳದಿದ್ದರೆ ಮುಂದೊಂದು ಘೋರ ಅವಾಂತರಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಹಾಗಾಗಿ ಸತ್ಯ ಕಹಿಯಾದರೂ ಬುದ್ದಿಜೀವಿಗಳು ಇದನ್ನು ನಿರ್ವಹಿಸುವ ಹೊಣೆಗಾರಿಕೆ ತೆಗೆದುಕೊಳ್ಳಬೇಕಾಗಿದೆ.

ಬುದ್ದಿಜೀವಿಗಳ ಮೌನ ಎಲ್ಲಾ ಸ್ಥರದಲ್ಲೂ, ಕ್ಷೇತ್ರದಲ್ಲೂ ದೊಡ್ಡ ಹೊಡೆತವನ್ನು ನೀಡುತ್ತಿದೆಯೆಂದು ಹೇಳಬಹುದು. ಹಾಗಾಗಿ ಬುದ್ದಿ ಜೀವಿಗಳನ್ನು ಚೆನ್ನಾಗಿ ನಡೆಸಿಕೊಳ್ಳುವದರ ಮೂಲಕ ಸ್ವಸ್ಥ ಸಮಾಜಕ್ಕೂ, ಸಶಕ್ತ ರಾಷ್ಟ್ರ ನಿರ್ಮಾಣಕ್ಕೂ ಅವಕಾಶ ನೀಡಿದಂತಾಗುತ್ತದೆ. ಬುದ್ದಿಜೀವಿಗಳು ಸಕ್ರಿಯ ಕಾರ್ಯ ನಿರ್ವಹಿಕೆಯಿಂದ ಹಿಂದೆ ಸರಿದರೆ ಅದರ ಫಲಿತಾಂಶ ಘೋರವಾದದ್ದು. ಸಮಾಜದಲ್ಲಿರುವ ಎಲ್ಲಾ ಸಾಮಾಜಿಕ ಸಂಸ್ಥೆಗಳು ಸೊರಗಿ, ತಮ್ಮ ಸತ್ವವನ್ನು ಕಳೆದುಕೊಳ್ಳುವದರಲ್ಲಿ ಸಂದೇಹವಿಲ್ಲ.

ಹಾಗಾಗಿ ಮುಂದಿನ ಸಶಕ್ತ, ಸುಂದರ ರಾಷ್ಟ್ರ ನಿರ್ಮಾಣಕ್ಕೆ ಬುದ್ದಿ ಜೀವಿಗಳ ಪಾಲ್ಗೊಳ್ಳುವಿಕೆ ಅಗತ್ಯ ಹಾಗೂ ಭವಿಷ್ಯದ ಪ್ರಜೆಗಳಿಗೆ ಉತ್ತಮ ಮಾರ್ಗದರ್ಶನ ದೊರೆತಂತಾಗುತ್ತದೆ. ಇಂತಹ ಸ್ಫೂರ್ತಿಯುತ ಉತ್ತೇಜನದಿಂದಾಗಿ ಯುವಪೀಳಿಗೆ ಹಲವಾರು ಸಾಧನೆಗಳ ಪ್ಯಲಿಗಲ್ಲನ್ನು ನಿರ್ಮಿಸಿದಂತಾಗುತ್ತದೆ. ಇಂತಹ ಸಂದರ್ಭದಲ್ಲಿ ಒಂದು ವಿಷಯವನ್ನು ನೆನಪಿಸಿಕೊಳ್ಳುವದು ಅವಶ್ಯವೆನಿಸುತ್ತದೆ. ಅದೇನೆಂದರೆ ಜಗತ್ತಿನ ಭೂಪಟದಲ್ಲಿ ಚಿಕ್ಕ ರಾಷ್ಟ್ರವೆನಿಸಿ ಕೊಂಡಿರುವ ಕ್ಯೂಬಾ ದೇಶವು ಬಲಾಢ್ಯ ರಾಷ್ಟ್ರವಾಗಿರುವಂತಹ ಅಮೇರಿಕಾವನ್ನು ಸಮರ್ಥವಾಗಿ ಎದುರಿಸಿದ್ದು, ಇದು ಸಾಧ್ಯವಾದದ್ದು ಕ್ಯೂಬಾ ಹೊಂದಿರುವ ಬುದ್ದಿಜೀವಿಗಳಿಂದ. ಫ್ಯೂಡಲ್ ಕ್ಯಾಸ್ಟ್ರೋ ಎಂಬ ಅಧ್ಯಕ್ಷರು ಸ್ವತಃ ಮೇಧಾವಿಯೇ. ಮೇಲಿನ ಎಲ್ಲಾ ಅಂಶಗಳನ್ನು ಉಲ್ಲೇಖಿಸುವ ಅಗತ್ಯವೆನೆಂದರೆ ಮೇಧಾವಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಸಮಾಜ ಪಡೆದುಕೊಳ್ಳುವದರಿಂದ ವಿಮುಖವಾಗುತ್ತಿದೆ. ಹಾಗಾಗಿ ಅವರ ಪ್ರಸ್ತುತತೆಯನ್ನು ನಾವು ಪಡೆದುಕೊಳ್ಳಬೇಕಾದ ವಾತಾವರಣ ನಿರ್ಮಾಣವಾಗಬೇಕಾಗಿದೆ. ಇದಕ್ಕಾಗಿ ಸಮಾಜವು ವೈಚಾರಿಕ ಮುಕ್ತತೆಯನ್ನು ಮೈಗೂಡಿಸಿಕೊಳ್ಳಬೇಕು. ಜೊತೆಗೆ ಮಾಧ್ಯಮಗಳು ಇದರ ಬಗ್ಗೆ ಗಂಭೀರವಾದಂತಹ ಚಿಂತನೆ ನಡೆಸುವ ಅವಶ್ಯಕತೆಯಿದೆ. ಹಾಗಾಗಿ ಸಮಾಜ ಮತ್ತು ಮಾಧ್ಯಮ ಎರಡೂ ಮೇಧಾವಿಗಳ ಮೌನ ಮುರಿಯುವ ಕೆಲಸ ಮಾಡಬೇಕಿದೆ. ಹಾಗಾದಾಗ ಮಾತ್ರ ಅಭಿವೃದ್ದಿಯನ್ನು ನಿರೀಕ್ಷಿಸಲು ಸಾಧ್ಯ. □

ಸಂಪಾದಕರೊಡನೆ ಸಂವಾದ

ಮತದಾರನಿಗೂ ಒಂದು 'ದಿನ'!

ಮಲ್ಲಿಕಾರ್ಜುನ ಗುಮ್ಮಗೋಳ

ಮಾನ್ಯ ಸಂಪಾದಕರೇ,

ನಾವು ಪ್ರತಿನಿತ್ಯ ಒಂದಿಲ್ಲೊಂದು ದಿನಾಚರಣೆಯನ್ನು ಆಚರಿಸುತ್ತಲೇ ಇರುತ್ತೇವೆ. ಭೂ ದಿನ, ಪರಿಸರ ದಿನ, ಅಮ್ಮಂದಿರ ದಿನ, ಮಹಿಳಾ ದಿನ, ಕಾರ್ಮಿಕರ ದಿನ, ಪ್ರೇಮಿಗಳ ದಿನ ಹೀಗೆ ನೂರೆಂಟು ದಿನಾಚರಣೆಗಳನ್ನು ಆಚರಿಸುತ್ತೇವೆ. ಹಾಗಾದರೆ ಈ ಆಚರಣೆಗಳ ಉದ್ದೇಶವಾದರೂ ಏನು? ಅವುಗಳನ್ನು ನಾವು ಏಕೆ ಆಚರಿಸಬೇಕು? ಎಂಬೆಲ್ಲ ಯೋಚನೆಗಳು ಬರುವದು ಸಹಜ. ಈ ದಿನಾಚರಣೆ ಎಂಬ ಕಲ್ಪನೆ ಮೂಲತಃ ಅದು ಪಾಶ್ಚಾತ್ಯವಾದುದು. ಬ್ರಿಟೀಷರ ಆಳ್ವಿಕೆಯೊಂದಿಗೆ ಬಂದ ಅದು, ಜಾಗತೀಕರಣದ ಪರಿಣಾಮವಾಗಿ ಇನ್ನೂ ಹೆಚ್ಚಾಗಿ ನಮ್ಮ ಸಂಸ್ಕೃತಿಯಲ್ಲಿ ಬೆರೆತು ಒಂದು ಹೊಸ ಅಥವಾ ದೇಶಿ ರೂಪವನ್ನು ಪಡೆದುಕೊಂಡಿದೆ. ಈ ರೀತಿಯ ಆಚರಣೆಯ ಉದ್ದೇಶ ಒಂದು ನಿರ್ಧಿಷ್ಟವಾದ ತತ್ವವನ್ನು, ಸಿದ್ಧಾಂತವನ್ನು ಹಾಗೂ ಅಭಿಪ್ರಾಯವನ್ನು ಸಾರ್ವಜನಿಕಗೊಳಿಸುವದೇ ಆಗಿದೆ. ಆ ಮೂಲಕ ಒಂದು ನಿರ್ಧರಿತವಾದ ಉದ್ದೇಶ ಅಥವಾ ಗುರಿಯನ್ನು ಸಾಧಿಸುವದಾಗಿದೆ.

ಈ ನಿಟ್ಟಿನಲ್ಲಿ ದಿನಾಚರಣೆಗಳ ಮಹತ್ವವನ್ನು ಅರಿತ ಭಾರತದ ಚುನಾವಣಾ ಆಯೋಗ ತನ್ನ ಸಂಸ್ಥಾಪನಾ ದಿನವಾದ ಜನವರಿ 25ನೇ ತಾರೀಖನ್ನು "ರಾಷ್ಟ್ರೀಯ ಮತದಾರರ ದಿನ" ಎಂದು ಆಚರಿಸಲು ಘೋಷಿಸಿದೆ. ಇದರ ಉದ್ದೇಶ ಮತದಾರರಲ್ಲಿ ರಾಜಕೀಯ ಸಂಸ್ಕೃತಿ (Political Culture)ಯನ್ನು, ನಾಗರಿಕ ಜವಾಬ್ದಾರಿಯನ್ನು ಹಾಗೂ ನೈಜ ಪ್ರಜಾಪ್ರಭುತ್ವ (Inclusive Democracy)ವನ್ನು ಅಸ್ತಿತ್ವಕ್ಕೆ ತರುವದಾಗಿದೆ.

ಮತದಾರರು ಭ್ರಷ್ಟರಾಗಿದ್ದಾರೆ ಹಣ, ಹೆಂಡ, ವಸ್ತುಗಳನ್ನು ಕೊಡದೆ ಹೋದರೆ ತಮಗೆ ಮತ ಹಾಕುವದಿಲ್ಲ ಎಂದು ಜನಪ್ರತಿನಿಧಿಗಳು ಆರೋಪಿಸುತ್ತಾರೆ. ರಾಜಕಾರಣಿಗಳು ದೇಶವನ್ನು ಲೂಟಿಮಾಡಿದ್ದಾರೆ. ಅಂಥವರಿಂದ ಹಣ ಪಡೆದುಕೊಂಡರೆ ಯಾವ ತಪ್ಪು ಇಲ್ಲ ಎಂದು ಮತದಾರರು ಹೇಳುತ್ತಾರೆ. ಇನ್ನೊಂದು ಪ್ರಜ್ಞಾವಂತ ವರ್ಗ ವ್ಯವಸ್ಥೆ ಕೆಟ್ಟುಹೋಗಿದೆ ಎಂದು ವ್ಯವಸ್ಥೆಯಲ್ಲಿಯೇ ತಪ್ಪು ಹುಡುಕುತ್ತಿದೆ. ಇಂತಹ ಸಂದರ್ಭದಲ್ಲಿ ಮತದಾರ ನನ್ನು ಎಚ್ಚರಗೊಳಿಸುವ ಕೆಲಸವನ್ನು ಮಾಡಲು ಈ ಮೂಲಕ ಚುನಾವಣಾ ಆಯೋಗ ಯತ್ನ ಮಾಡುತ್ತಿದೆ.

ವಿಮುಖವಾಗುತ್ತಿರುವ ಪ್ರಜಾಪ್ರಭುತ್ವವನ್ನು ಕೇವಲ ಕಾನೂನಾಗಲಿ, ನ್ಯಾಯಾಂಗವಾಗಲಿ, ಅಧಿಕಾರ ನಿಯೋಜನೆಯಿಂದಾಗಲಿ ರಕ್ಷಿಸಲು ಸಾಧ್ಯವಿಲ್ಲ. ಮತದಾರ ಪ್ರಭು ಆ ಕೆಲಸವನ್ನು ಮಾಡಬೇಕಾಗಿದೆ. ಶುದ್ಧ ಹಸ್ತರನ್ನು ಆಯ್ಕೆಮಾಡಬೇಕು. ಅಂದಾಗ ಮಾತ್ರ ಸಂವಿಧಾನಾತ್ಮಕ ಸಂಸ್ಥೆಗಳು ಹಾಗೂ ಹುದ್ದೆಗಳು ಪ್ರಜಾಪ್ರಭುತ್ವವನ್ನು ಉಳಿಸಬಲ್ಲವು. ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳೆಂಬ ರಾಜಕೀಯ ತತ್ವಗಳನ್ನು ಸಫಲಗೊಳಿಸಲು ಸಾಧ್ಯವಾಗುತ್ತದೆ.

ಪ್ರಸಕ್ತ ಸನ್ನಿವೇಶದಲ್ಲಿ ಮತದಾರರಲ್ಲಿ ನಾಲ್ಕು ರೀತಿಯ ವರ್ಗಗಳನ್ನು ಕಾಣಬಹುದು.

1. ರಾಜಕಾರಣದ ಬಗ್ಗೆ ದಿವ್ಯ ನಿರ್ಲಕ್ಷ ತಾಳಿ ಮತಗಟ್ಟೆಗೆ ಬರದೆ ಇರುವ ವರ್ಗ ಉದಾ: ಉದ್ಯಮಿಗಳು, ಕಾರ್ಪೋರೇಟ್ ಒಡೆಯರು, ತಂತ್ರಜ್ಞರು, ವೈದ್ಯರು, ಪ್ರೊಫೆಸರ್‌ಗಳು ಹಾಗೂ ಇತರೆ ಮೇಲ್ವರ್ಗದ ನಾಗರಿಕರು.

2. ಯಾವುದೇ ಆಮಿಷಕ್ಕೆ ಬಲಿಯಾಗದೆ ಮತ ಚಲಾಯಿಸುವ ವರ್ಗ. ಉದಾ: ಸಾಹಿತಿಗಳು, ಬುದ್ಧಿಜೀವಿಗಳು, ಕಲಾವಿದರು, ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರು, ಸೈನಿಕರು ಹಾಗೂ ಶಿಕ್ಷಕರು ಇತ್ಯಾದಿ

3.ಜಾತಿಮತ ಆದರಸಿ ಮತ ಚಲಾಯಿಸುವ ವರ್ಗ. ಉದಾ: ಸ್ವತಂತ್ರ ಯೋಚನೆಯಿಲ್ಲದ, ಸಾಮುದಾಯಿಕ ಪ್ರಜ್ಞೆಯ, ಸಂಕುಚಿತ ಭಾವನೆಯ ವರ್ಗ. ಮತ-ಮಂದಿರ, ಮಸೀದಿ ಮತ್ತು ಇಗರ್ಜಿಗಳ ಅಣತಿಯಂತೆ ಮತ ಚಲಾಯಿಸುವವರು. ತಮ್ಮ ಸ್ವಲಾಭಕ್ಕಾಗಿ ಜಾತಿ ಪಂಗಡಗಳನ್ನು ಕಟ್ಟಿಕೊಂಡ ಅಭ್ಯರ್ಥಿಗಳು ಮತ್ತು ಮತದಾರರಲ್ಲಿ ಜಾತಿ ಪ್ರಜ್ಞೆ ಮೂಡಿಸುವ ಪುಡಾರಿಗಳು.

4. ಮೂಲಭೂತ ಅಗತ್ಯಗಳಿಗಾಗಿ ಪರಿತಪಿಸುವ ವರ್ಗ. ಉದಾ: ಕೂಲಿಕಾರರು, ಕಾರ್ಮಿಕರು, ಕೊಳಗೇರಿ ನಿವಾಸಿಗಳು. ಹಣ, ವಸ್ತು, ಹೆಂಡಕ್ಕೆ ಮತ ಹಾಕುವವರು. ಉದಾ: ಬಿಕ್ಷುಕರು, ವಸತಿಹೀನರು, ನಿರ್ಗತಿಕರು, ಮದ್ಯವ್ಯಸನಿಗಳು ಇತ್ಯಾದಿ. ಒಂದು ಹೊತ್ತಿನ ಊಟ ಸಂಪಾದಿಸುವ ಸಲುವಾಗಿ ದೇಶದ ಶೇ 37ರಷ್ಟು ಜನ ಕಷ್ಟಪಡುತ್ತಿದ್ದಾರೆ. ಅಂಥವರಲ್ಲಿ ಬಹಳಷ್ಟು ಜನ ಚುನಾವಣೆ, ಜಾತ್ರೆ ಉತ್ಸವ ಹಾಗೂ ಸಾಮೂಹಿಕ ಮದುವೆಗಳಂತಹ ಸಂದರ್ಭಗಳಲ್ಲಿ ಹಾಕುವ ಊಟಕ್ಕಾಗಿ ಮುಗಿಬೀಳುವದನ್ನು ನಾವು ನೋಡಿದ್ದೇವೆ. ಇಂಥಹವರು ಈ ವರ್ಗದಲ್ಲಿ ಬರುತ್ತಾರೆ.

ಈ ಮೇಲಿನ ನಾಲ್ಕೂ ವರ್ಗಗಳಲ್ಲಿ ಯಾವುದೆ ಫಲಾಪೇಕ್ಷೆ ಇಲ್ಲದೆ ಮತ ಚಲಾಯಿಸುವ ದೇಶ ಭಕ್ತ, ರಾಷ್ಟ್ರಪ್ರೇಮಿ ಸ್ವಭಾವದ ಜನರು ಇದ್ದೇ ಇರುತ್ತಾರೆ. ಅಂಥ ನಾಗರಿಕರು ಸದ್ಯದ ರಾಜಕೀಯ ಅಧೋಗತಿಯ ಬಗ್ಗೆ ಕಳವಳಗೊಂಡಿದ್ದಾರೆ. ಬದಲಾವಣೆಗೆ ಹಾತೊರೆಯುತ್ತಿದ್ದಾರೆ. ಬರುವ ಐದಹತ್ತು ವರ್ಷಗಳಲ್ಲಿ ಮತದಾರರನ್ನು ಎಲ್ಲ ಆಮಿಷಗಳಿಂದ ಮುಕ್ತಗೊಳಿಸಿ ಸಾರ್ವಭೌಮರನ್ನಾಗಿ ಮಾಡಬೇಕಾಗಿದೆ.

ಪ್ರಜಾಪ್ರಭುತ್ವ ಎಂದರೆ ಬಹು ಸಂಖ್ಯಾತರ ಆಳ್ವಿಕೆ. ಅದು ಈ ದೇಶದಲ್ಲಿ ಸಾಧ್ಯವಾಗಿದೆಯೇ? ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತಿದೆ. ಬಹುತ್ವದ ಆಳ್ವಿಕೆಯನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು.

1. ಈ ದೇಶದ ಬಹುಸಂಖ್ಯಾತರೆಂದರೆ ರೈತರು ಮತ್ತು ಕಾರ್ಮಿಕರು. ಸಿದ್ಧಾಂತದ ಪ್ರಕಾರ ಅಧಿಕಾರ ಅವರ ಕೈಯಿಗೆ ಬರಬೇಕು. ಆದರೆ ಅದು ಪ್ಯೂಡಲಿಸ್ಟ್‌ಗಳ ಕೈಯಲ್ಲಿ ಸಿಕ್ಕಿಹಾಕಿಕೊಂಡಿದೆ.

2. ಪ್ರಜಾಪ್ರಭುತ್ವದಲ್ಲಿ ಬಹುಮತವೆಂದರೆ ಶೇ. 50ಕ್ಕಿಂತ ಹೆಚ್ಚು ಮತ. ಆದರೆ ಇಂದಿನ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಯು ಪಡೆದ ಮತಗಳು ಕೇವಲ ಶೇ. 30ರಷ್ಟು ಮಾತ್ರ. ಇತ್ತೀಚೆಗೆ ನಡೆದ ಬಿ.ಬಿ.ಎಂ.ಪಿ ಚುನಾವಣೆಯಲ್ಲಿ ಮತದಾನ ಪ್ರಮಾಣ ಕೇವಲ ಸರಾಸರಿ 50ರಷ್ಟು ಮಾತ್ರ. ನಗರದಲ್ಲಿ ವಾಸವಾಗಿರುವ ಸುಶಿಕ್ಷಿತರು ಚಲಾಯಿಸಿದ ಮತಗಳಿವು. ತಮಗೆ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಮಾತನಾಡುವ, ಅದಕ್ಕಾಗಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವ ಈ ನಾಗರಿಕರು ಮತದಾನ ತಮ್ಮ ಕರ್ತವ್ಯ ಎಂದು ಏಕೆ ಭಾವಿಸುವದಿಲ್ಲ? ಮತದಾನಕ್ಕಾಗಿ ಕೊಡುವ ರಜೆಯನ್ನು ಮೋಜು ಮಸ್ತಿಗಾಗಿ ಉಡಾಯಿಸುವ ಜನರಿಗಿಂತ ಅನಕ್ಷರಸ್ಥರೇ ಎಷ್ಟೋ ಪಾಲು ಮೇಲು ಅಲ್ಲವೇ? ಹಳ್ಳಿಗಳಲ್ಲಿ ವಾಸಿಸುವವರನ್ನು ಗಾಂಪರು ಎಂದು ಕರೆಯುತ್ತೇವೆ. ಅಂಥವರು ಪಂಚಾಯತ್ ಚುನಾವಣೆಯಲ್ಲಿ ಚಲಾಯಿಸಿದ ಮತಗಳ ಸಂಖ್ಯೆ ಸರಾಸರಿ 80ರಷ್ಟು, ಆದ್ದರಿಂದ ಮತದಾನ ಪ್ರಮಾಣ ಹೆಚ್ಚಿಸಲು ಕಡ್ಡಾಯ ಮತದಾನ(Compulsory Voting) ಜಾರಿಗೆತರಬೇಕು.

1951–52ರಿಂದ ಇಲ್ಲಿಯವರೆಗೆ ನಡೆದ ಚುನಾವಣೆಗಳನ್ನು ಅವಲೋಕಿಸಿದರೆ ಮತದಾನ ಪ್ರಮಾಣ ಕೇವಲ ಶೇ 50–60ರಷ್ಟು ಮಾತ್ರ ಆಗಿರುವದು ಕಂಡು ಬರುತ್ತದೆ. ವಯೋವೃದ್ಧರು, ರೋಗಿಗಳು, ಕೈದಿಗಳು, ವಲಸಿಗರು, ಹಾಗೂ ಮತದಾನದಿಂದ ವಂಚಿತ ಎಲ್ಲ ಜನರು ಕಡ್ಡಾಯವಾಗಿ ಮತದಾನ ಮಾಡಲು ಅವಕಾಶ ಕಲ್ಪಿಸಬೇಕು. ಆಸ್ಪತ್ರೆ ಮತ್ತು ಜೈಲುಗಳಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಬೇಕು. ಪಲ್ಸ್ ಪೋಲಿಯೋ ಕಾರ್ಯಕ್ರಮದಂತೆ "pulse vote" ಎಂಬ ಅಭಿಯಾನ ಮಾಡಬೇಕು. ಆ ಮೂಲಕ ಮನೆಯಿಂದ ಆಚೆ ಬರಲಾಗದವರ ಮತಗಳನ್ನು ಸಂಗ್ರಹಿಸಬೇಕು. ಇದರಿಂದ ನಿಜವಾದ ಪ್ರಜಾಪ್ರಾತಿನಿಧ್ಯ ರಚನೆಯಾಗಲು ಸಾಧ್ಯವಾಗುತ್ತದೆ.

ವಾಂಛೂ ಹಾಗೂ ತಾರ್ಕುಂಡೆ ಸಮಿತಿಗಳು ಕೊಟ್ಟ ಚುನಾವಣಾ ಸುಧಾರಣಾ ವರದಿಯನ್ನು ಜಾರಿಗೆ ತರುವ ಮೂಲಕ ಮತದಾರರಿಗೆ ವಿಶೇಷಾಧಿಕಾರಗಳನ್ನು ದೊರಕಿಸಿಕೊಡಬೇಕು. ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಯನ್ನು ಜಾರಿಗೆ ತರುವದು ಏಕ ಮತ ವರ್ಗಾವಣೆಯ ಪದ್ಧತಿ ಮೂಲಕ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ A, B, C, & ಆ ಎಂದು ಪ್ರಾತಿನಿಧ್ಯ ನೀಡಿ ಆಯ್ಕೆ ಮಾಡಬೇಕು. ಇದರಿಂದ ಅಭ್ಯರ್ಥಿಯ ಸ್ಥಾನ ಖಾಲಿಯಾದರೆ ಎರಡನೆ ಸ್ಥಾನದಲ್ಲಿರುವ ಅಭ್ಯರ್ಥಿಯನ್ನು ಪ್ರತಿನಿಧಿಯೆಂದು ಘೋಷಿಸಿ ಉಪ ಚುನಾವಣೆಯನ್ನು ತಪ್ಪಿಸಬಹುದು.

ಹಿಂದಕ್ಕೆ ಕರೆಯಿಸಿಕೊಳ್ಳುವ ಪದ್ಧತಿ: ಆಯ್ಕೆಯಾದ ಅಭ್ಯರ್ಥಿ ಜನರ ಆಶೋತ್ತರಗಳಿಗೆ ಸ್ಪಂದಿಸದೆ ಇದ್ದರೆ ಭ್ರಷ್ಟನಾದರೆ, ದುರಾಡಳಿತದಲ್ಲಿ ತೊಡಗಿದರೆ ಅಂತಹ ಅಭ್ಯರ್ಥಿಯನ್ನು ದೋಷಾರೋಪಣೆಯ ಗೊತ್ತುವಳಿ

(9ನೇ ಪುಟಕ್ಕೆ)

ಹೋರಾಟದ ರಥವನ್ನು ಹಿಂದೆ ದೂಡಬೇಡಿ

ಸಂಪಾದಕರೊಡನೆ ಸಂವಾದ

ಯು. ಎನ್. ಸಂಗನಾಳಮಠ

ಅಂಬೇಡ್ಕರ್ ಎಂದೂ ಹಿಂಸೆಯ ಹಾದಿ ತುಳಿಯಲಿಲ್ಲ. ಬ್ರಿಟಿಷರೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡರೂ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೋತ್ಸಾಹಿದರು. ಅಂಬೇಡ್ಕರ್–ಗಾಂಧಿ ಒಂದೇ ಯುಗದಲ್ಲಿದ್ದರೂ ತಾತ್ವಿಕವಾಗಿ ಭಿನ್ನವಾಗಿದ್ದರು. ಗಾಂಧಿಯವರಿಗೆ ಬ್ರಿಟಿಷರಿಂದ ಭಾರತವನ್ನು ಮರಳಿ ಪಡೆಯುವದಾಗಿದ್ದರೆ ಅಂಬೇಡ್ಕರ್ ತಲೆ ತಲಾಂತರದಿಂದ ಬಂದ ಜಾತಿ ವ್ಯವಸ್ಥೆಯ ವಿರುದ್ಧ ಬಂಡಾಯ ಹೂಡಿದ್ದರು.

ಮಾನ್ಯ ಸಂಪಾದಕರೇ,

ಜಾತಿಯವಾಗಿ ಸಂಭವಿಸುತ್ತಿದ್ದ ಅನ್ಯಾಯ ಮತ್ತು ಶೋಷಣೆಯ ವಿರುದ್ಧ ದನಿ ಎತ್ತಿದವರಲ್ಲಿ ಮಹಾರಾಷ್ಟ್ರದ ಜ್ಯೋತಿಬಾಫುಲೆ, ಕೇರಳದ ನಾರಾಯಣ ಗುರು ಪ್ರಥಮರೆನಿಸಿದ್ದಾರೆ ದಲಿತ ನಾಯಕನಾಗಿ ಅಂಬೇಡ್ಕರ್ ಅವರು ಶೋಷಣೆಯ ಶಾಪ ವಿಮುಕ್ತಿಗಾಗಿ ಹೋರಾಟವನ್ನು ಸಂಘಟನಾತ್ಮಕವಾಗಿ ನಡೆಸಿದ್ದು ಐತಿಹಾಸಿಕವಾಗಿ ಮಹತ್ವ ಹೊಂದಿದೆ.

ಅಂಬೇಡ್ಕರ್ ಅವರು ಸುಬೇದಾರ್ ವೃತ್ತಿಯ ಕೌಟಂಬಿಕ ಹಿನ್ನಲೆ ಹೊಂದಿ, ಅಕ್ಷರಸ್ಥ ಮನೆತನದವರಾಗಿದ್ದರು, ಅಸ್ಪೃಶ್ಯತೆಯನ್ನು ಸ್ವತಃ ಅನುಭವಿಸಿದವರು. ಸ್ವಂತ ಪ್ರತಿಭೆಗೆ ಪೂರ್ವಕವಾಗಿ ಸಮಾಜದ ಗಣ್ಯರ ಸಹಾಯದಿಂದ ಉನ್ನತ ಶಿಕ್ಷಣ ಪಡೆದರು. ಕೊಲ್ಹಾಪುರದ ಉದೋದಾದ ಮಹಾರಾಜರು ಅಂಬೇಡ್ಕರ್ ಅವರಿಗೆ ವಿದ್ಯೆ – ಆರ್ಥಿಕ ನೆರವನ್ನಿತ್ತವರು. ಅಂಬೇಡ್ಕರ್ ಅವರದೆ ಹೋರಾಟದ ಪ್ರವೃತ್ತಿ ಜೊತೆಗೆ ಸಂಘಟನೆಯ ಶಕ್ತಿ.

ಭಾರತೀಯ ಸಾಮಾಜಿಕ ರಚನೆಯಲ್ಲಿ ವರ್ಣವ್ಯವಸ್ಥೆಯ ನಿರ್ಮಾಣ, ಶೂದ್ರರ ಮೂಲ, ಅಸ್ಪೃಶ್ಯತೆಯ ಕಾರಣಗಳನ್ನು ಹುಡುಕಿ ಐತಿಹಾಸಿಕ ಸತ್ಯವನ್ನು ಧೈರ್ಯದಿಂದ ಸಾಬೀತು ಪಡಿಸಿದರು. ಸಾವಿರಾರು ವರ್ಷಗಳ ಆವರಣದ್ದು ಶೂದ್ರರನ್ನು ಅತಿಶೂದ್ರರನ್ನು ಕತ್ತಲೆಯ ಕೂಪದೊಳಗೆ ನೂಕಿ, ಅನ್ಯಾಯ ಎಸಗುತ್ತ ಮನುಷ್ಯರನ್ನು ಪಶುವಿಗಿಂತ ಕೀಳಾಗಿ ಕಾಣುತ್ತ ಬಂದಿರುವ ಸ್ವಾನುಭವದ ಸತ್ಯದ ತಾಯಿಬೇರನ್ನು ಹುಡುಕುವ ಪ್ರಯತ್ನ ಮಾಡಿದರು. ಜೀವನದುದ್ದಕ್ಕೂ ಈ ಅನ್ಯಾಯಕ್ಕೆ ಏಕಮಾತ್ರ ವ್ಯಕ್ತಿಯಾಗಿ ಬಂದು ಶಕ್ತಿಯಾಗಿ ಬೆಂಕಿಚೆಂಡು ಆದರು.

ಆದರೂ ಅಂಬೇಡ್ಕರ್ ಎಂದೂ ಹಿಂಸೆಯ ಹಾದಿ ತುಳಿಯಲಿಲ್ಲ. ಬ್ರಿಟಿಷರೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡರೂ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೋತ್ಸಾಹಿ ದರು. ಅಂಬೇಡ್ಕರ್–ಗಾಂಧಿ ಒಂದೇ ಯುಗದಲ್ಲಿದ್ದರೂ ತಾತ್ವಿಕವಾಗಿ ಭಿನ್ನವಾಗಿದ್ದರು ಗಾಂಧಿಯವರಿಗೆ ಬ್ರಿಟಿಷರಿಂವ ಭಾರತವನ್ನು ಮರಳಿ ಪಡೆಯುವದಾಗಿದ್ದರೆ ಅಂಬೇಡ್ಕರ್ ತಲೆ ತಲಾಂತರದಿಂದ ಬಂದ ಜಾತಿ ವ್ಯವಸ್ಥೆಯ ವಿರುದ್ಧ ಬಂಡಾಯ ಹೂಡಿದ್ದರು.

ಅಂಬೇಡ್ಕರ್ ೧೯೩೬ರಲ್ಲಿ ಸಿಖ್ ಮತಕ್ಕೆ ಮತಾಂತರವಾಗುವ ನಿರ್ಧಾರ ಹೊಂದಿದ್ದರು ದಲಿತ ಸಿಖರಿಗೆ ಇಷ್ಟವಾಗಲಿಲ್ಲ. ಹೈದ್ರಾಬಾದ್ ನಿಜಾಂ ಇಸ್ಲಾಂ ಮತಕ್ಕೆ ಮತಾಂತರವಾದರೆ 'ಅತಿದೊಡ್ಡ ಮೊತ್ತ'ದ ಆಶೆಯ ಆಶ್ವಾಸನೆ ನೀಡಿದರು. ಆದರೆ ಅಂಬೇಡ್ಕರ್ ೧೯೫೬ರಲ್ಲಿ ತಮ್ಮ ಸಮುದಾಯದೊಂದಿಗೆ ಬೌದ್ಧಮತಕ್ಕೆ ಮತಾಂತರವಾದರು. ಹಿಂದೂ ಮತಕ್ಕೆ ನಿಕಟವಾದ ಸುಧಾರಣಾವಾದಿಯಾದ ಬೌದ್ಧಮತಕ್ಕೆ ಮತಾಂತರವಾ ದದ್ದು ಅಂಬೇಡ್ಕರ್ ಅವರ ದೂರದರ್ಶಿತ್ವವನ್ನು ಪ್ರತಿ ಪಾದಿಸುತ್ತದೆ. ಅಸ್ಪೃಶ್ಯರ ನೋವಿಗೆ ಆರ್ಥಿಕ ಶೋಷಣೆ ಜೊತೆಗೆ ಸಾಮಾಜಿಕ ಶೋಷಣೆಯೂ ಕಾರಣ ಎಂದರು. ಸಮತಾವಾದ ಅನ್ನವನ್ನು ಕೊಡುತ್ತದೆ ಆದರೆ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ ಅದಕ್ಕಾಗಿ ಅದನ್ನು ನಿರಾಕರಿಸುತ್ತಾರೆ. ಜಾತಿಪದ್ಧತಿ ನಿರ್ಮೂಲನೆ ಮಾಡಿ ಜಾತಿ – ವರ್ಗ ರಹಿತ ಸಮಾಜವನ್ನು ಕಟ್ಟುವ ಗುರಿ ಹೊಂದಿದ ಸಮಾಜವಾದ ಅನ್ನ ಮತ್ತು ಸ್ವಾತಂತ್ರ್ಯವನ್ನು ಕೊಡುತ್ತದೆ ಎಂದು ಅದನ್ನು ಒಪ್ಪುತ್ತಾರೆ.

ಅಂಬೇಡ್ಕರ್ ರಾಷ್ಟ್ರೀಕರಣವನ್ನು ಅನುಮೋದಿಸುತ್ತಾರೆ "ರಾಜ್ಯಗಳು ಮತ್ತು ಅಲ್ಪಸಂಖ್ಯಾತರು ತಮ್ಮ ಗ್ರಂಥದಲ್ಲಿ" ರಾಜ್ಯವೇ ಪ್ರಮುಖ ಹಾಗು ಮೂಲಭೂತ ಕೈಗಾರಿಕೆಗಳನ್ನು ವಹಿಸಿಕೊಳ್ಳಬೇಕು ಹಾಗೂ ಅವುಗಳನ್ನು ನಡೆಸಬೇಕು, ಜೀವವಿಮೆಯು ರಾಜ್ಯದ ಏಕಸ್ವಾಮ್ಯವಾಗಿರಬೇಕು, ಭೂಮಿಯನ್ನು ಜಾತಿ – ಮತಗಳ ತಾರತಮ್ಯ ಇಲ್ಲದೇ ಹಂಚಬೇಕು ಎಂಬ ಅಭಿಪ್ರಾಯ ಹೊಂದಿದ್ದರು.

೧೯೩೮ರಲ್ಲಿ ಪತ್ರಿಕೆಯೊಂದರ ಸಂದರ್ಶನದಲ್ಲಿ 'ನೀವು ಕಾಂಗ್ರೆಸ್ ಏಕೆ ಸೇರುವುದಿಲ್ಲ' ಎಂಬ ಪ್ರಶ್ನೆಗೆ 'ಏಕೆಂದರೆ ನಾನು ಸೋಷಲಿಸ್ಟ್' ಕಾಂಗ್ರೆಸ್ಸಿನಲ್ಲಿ ಸೋಷಲಿಸ್ಟರು ಇಲ್ಲವೇನು ಎಂಬ ಪ್ರಶ್ನೆಗೆ 'ಇದ್ದಾರೆ, ಅವರು ಒಳಗಿದ್ದಾರೆ ನಾನು ಹೊರಗಿದ್ದೇನೆ. ನನಗೆ ಮುಕ್ತವಾದ ವಾತಾವರಣ ಇಷ್ಟ' ಎಂದರು. ಇಡೀ ಮಾನವ ಜನಾಂಗ ಶೋಷಣೆಯಿಂದ ಮುಕ್ತವಾಗಿ ಸುಖೀ ಜೀವನ ನಡೆಸಬೇಕು. ಜನತೆಯು ತಮ್ಮ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಬೆಳೆಸಿಕೊಳ್ಳಲು ಸ್ವಾತಂತ್ರ್ಯವಿರಬೇಕು. ಇದಕ್ಕೆ ಪ್ರಜಾಪ್ರಭುತ್ವ ಅನಿವಾರ್ಯ ಪ್ರಜಾಪ್ರಭುತ್ವ ಸಫಲವಾಗಬೇಕಾದರೆ ಸಮಾಜದಲ್ಲಿ ಅಸಮಾನತೆ ಇರಬಾರದು, ದಬ್ಬಾಳಿಕೆಗೆ ಒಳಗಾದ ವರ್ಗ ಇರಬಾರದು ಎಂದಿದ್ದಾರೆ.

"ಸ್ವಾಮಿ. ಸಂವಿಧಾನವನ್ನು ನಾನೇ ರಚಿಸಿದೆ ಅಂತ ನನ್ನ ಗೆಳೆಯರು ಹೇಳುತ್ತಾರೆ. ಆದರೆ ಅದನ್ನು ಬೆಂಕಿಗೆ ಹಾಕುವಲ್ಲಿ ನಾನೇ ಮೊದಲಿಗನಾಗಬಲ್ಲೆ ಎಂಬುದೂ ತಿಳಿದಿರಲಿ. ಏಕೆಂದರೆ ಇಂಥ ಸಂವಿಧಾನವನ್ನು ನಾನು ಇಷ್ಟಪಡುವುದಿಲ್ಲ. ಅದರಿಂದ ಯಾರಿಗೂ ಪ್ರಯೋಜನವಾಗದು" ಈ ಮಾತನ್ನು ಹೇಳಿದವರು ಅಂಬೇಡ್ಕರ್. ೧೯೫೩ ಸೆ. ೨ರಂದು ಆಂಧ್ರ ರಾಜ್ಯ ಸ್ಥಾಪನೆ ಕುರಿತ ವಿಧೇಯಕದ ಮೇಲೆ ಚರ್ಚೆ ನಡೆದ ಸಂದರ್ಭದಲ್ಲಿ ೧೯೫೫ಮಾರ್ಚ್ ೧೯ರಂದು ರಾಜ್ಯಸಭೆಯಲ್ಲಿ ಮಂಡಿಸಿದ ೩೧,ನೇವಿಧಿಯ ತಿದ್ದುಪಡಿಯನ್ನು ವಿರೋಧಿಸಿದ್ದರು. (ಆಸ್ತಿ ಸ್ವಾಧೀನ ಕಾನೂನಿನ ಅಡಿಯಲ್ಲಿ ಒದಗಿಸಲಾದ ಪರಿಹಾರ ಸಾಲದು ಎಂಬ ನೆಲೆಯಲ್ಲಿ ಕಾನೂನನ್ನು ಯಾವುದೇ ನ್ಯಾಯಾಲಯ ಪ್ರಶ್ನಿಸುವಂತಿಲ್ಲ) ೩೧.ನೇವಿಧಿ ನನ್ನ ಪ್ರಕಾರ ತೀವ್ರ ವಿಧಿ ಎಂದರು. ಇವೆಲ್ಲ ಏಕೆ? ಹೇಗೆ?

ಸಂವಿಧಾನದ ಕರಡು ಪ್ರತಿ ಸಿದ್ಧಪಡಿಸಲು ಅನೇಕ ಸಮಿತಿ–ಉಪಸಮಿತಿಗಳು ಬಿ. ಎನ್. ರಾವ್, ಹೆಚ್.ಎನ್ ಮುಖರ್ಜಿ, ಕೆ. ಎಂ. ಮುನ್ಷಿ, ಕೆ. ಟಿ. ಷಾ, ಅಂಬೇಡ್ಕರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಹರನಾಮ ಸಿಂಗರ ನೇತೃತ್ವದಲ್ಲಿ ಕಾರ್ಯ ಆರಂಭಿಸಿದ್ದವು. ೧೯೪೬ ಡಿಸೆಂಬರ್ ದಿಂದ ೧೯೪೭ ಆಗಸ್ಟ್ ೨೯ರವರೆಗೂ ಸಂವಿಧಾನ ರಚನಾ ಸಮಿತಿ ಅಸ್ತಿತ್ವಕ್ಕೆ ಬಂದಿರಲಿಲ್ಲ. ಕರಡು ಪ್ರತಿಯನ್ನು ಬಿ. ಎನ್. ರಾವ್, ಎಚ್. ಎನ್. ಮುಖರ್ಜಿ ೧೫ ಪರಿಚ್ಛೇದಗಳು, ೨೪೦ ವಿಧಿಗಳೊಂದಿಗೆ ತಯಾರಿಸಿದ್ದರು. ಈಗಾಗಲೇ ಡಾ॥ ಅಂಬೇಡ್ಕರ್ ಹಲವು ದೇಶಗಳ ಸಂವಿಧಾನವನ್ನು ಅಭ್ಯಸಿಸಿ, ನಮ್ಮ ದೇಶದ ಸಂಸ್ಕೃತಿ, ಇತಿಹಾಸಕ್ಕೆ ಅನ್ಯಾಯವಾಗದ ರೀತಿಯಲ್ಲಿ ಹೊರದೇಶದ ಸಂವಿಧಾನದ ಮುಖ್ಯ ಅಂಶಗಳನ್ನು ಅಳವಡಿಸಿ ಕೊಳ್ಳುವ ಬಗ್ಗೆ ಮನದಟ್ಟು ಮಾಡಿ ಕೊಂಡಿದ್ದರು.

ಕರಡು ಸಮಿತಿ ಅಧ್ಯಕ್ಷರಾಗಿ ೧೯೪೮ರ ಫೆಬ್ರವರಿ ೨೧ರಂದು ಸಂವಿಧಾನ ಸಭೆಯಲ್ಲಿ ಔಪಚಾರಿಕವಾಗಿ ಮಂಡಿಸಿದರು. ಪುನಃ ಚರ್ಚೆಯಾದ ನಂತರ ೧೯೪೮ ನವೆಂಬರ್ ೪ರಂದು ಮಂಡಿಸಿದಾಗ ಕರಡು ಸಂವಿಧಾನದಲ್ಲಿ ಹೊಸತೇನೂ ಇಲ್ಲ ಅದರಲ್ಲಿ ಅರ್ಧದಷ್ಟು ೧೯೩೫ರ ಭಾರತ ಸರಕಾರ ಕಾಯ್ದೆಯಿಂದ ನಕಲು ಮಾಡಲಾಗಿದೆ ಉಳಿದದ್ದನ್ನು ಇತರ ರಾಷ್ಟ್ರಗಳ ಸಂವಿಧಾನಗಳಿಂದ ಆಯ್ದುಕೊಳ್ಳಲಾಗಿದೆ ಎಂದರು. ಸಂವಿಧಾನ ರೂಪಿಸುವಲ್ಲಿ ಅಂಬೇಡ್ಕರ್ ಅವರ ಪರಿಶ್ರಮವಿದೆ ಎಂದು ಯಾರೂ ಅಲ್ಲಗಳೆಯಲಾರರು. ಹಿಂದೂ ಸಂಹಿತೆ ಮಸೂದೆಯ ಕೆಲ ಅಂಶ ವಿರೋಧಿಸಿ ಈ ಹಿನ್ನೆಲೆಯಲ್ಲಿ ನೆಹರೂ ಅವರ ನಿಲುವನ್ನು ಒಪ್ಪದೇ ಅಂಬೇಡ್ಕರ್ ಅವರು ತಮ್ಮ ಕಾನೂನು ಸಚಿವ ಹುದ್ದೆಗೆ ರಾಜೀನಾಮೆ ನೀಡಿದರು.

"ನಾನು ನಡೆಸಿಕೊಂಡು ಬಂದ ಹೋರಾಟದ ರಥವನ್ನು ಯೋಗ್ಯತೆ ಇದ್ದರೆ ಮುಂದೆ ಸಾಗಿಸಿ ಆದರೆ ಹಿಂದೆ ಮಾತ್ರ ದೂಡಬೇಡಿ" ಎಂದ ಅವರ ಮಾತನ್ನು ಪುನಃ ಈಗ ಯೋಚಿಸಬೇಕಾಗಿದೆ. ರಥದ ಸಾರಥ್ಯ ವಹಿಸುವ ಸಾಮರ್ಥ್ಯ ಯಾರಲ್ಲಿಯೂ ಇಲ್ಲವೇ ಎಂಬ ಸಂಶಯ ಮೂಡಿದೆ. □

ಸಂಪಾದಕರೊಡನೆ ಸಂವಾದ

ಸಮೂಹ ಪ್ರಜ್ಞೆಯ ಶೋಷಣೆ ಮತ್ತು ಬರವಣಿಗೆ

ಎಸ್. ಬಿ. ಜೋಗುರ

ಮಾನ್ಯ ಸಂಪಾದಕರೇ,

ವ್ಯಕ್ತಿಯೊಬ್ಬನ ಆಲೋಚನಾ ಕ್ರಮ ಮತ್ತು ಜಗತ್ತನ್ನು ಗ್ರಹಿಸುವ ರೀತಿ ಆತನ ಶಿಕ್ಷಣ, ಉದ್ಯೋಗ, ಅಂತಸ್ತು, ಜಾತಿ, ಜನಾಂಗ, ಮೈಬಣ್ಣ, ಸಾಂಸ್ಕೃತಿಕ ಪರಿಸರವನ್ನು ಆಧರಿಸಿರುತ್ತದೆ. ಎಡ್ವರ್ಡ್ ಸೈದ್ ಹಾಗೂ ಇಟಲಿಯ ಗ್ರಾಮ್ಸಿಯಂತಹ ಚಿಂತಕರು ಹೇಳುವಂತೆ ಒಂದು ರಾಷ್ಟ್ರದ ರಾಜಕೀಯ ಪ್ರಭುತ್ವದಿಂದ ವಿಮುಖವಾಗಿ ಬರೆಯಲಾಗದ ಪರಿಸ್ಥಿತಿಯನ್ನು ಎಷ್ಟೇ ಬೌದ್ಧಿಕವಾದ ಔನತ್ಯವನ್ನು ಸಾಧಿಸಿರುವವನಿಗೂ ಸಾಧ್ಯವಾಗದ ಪರಿಸ್ಥಿತಿಯೊಂದು ಸ್ವಾಭಾವಿಕವಾಗಿಯೇ ನಿರ್ಮಾಣವಾಗಿರುತ್ತದೆ. ಹೀಗೆ ಮೀರಲಾಗದ ಪ್ರಭಾವಳಿಯನ್ನು ಕುರಿತು ಮಾತನಾಡುತ್ತಾ ಸೈದ್, ನೋಮ್ ಚೊಮಸ್ಕಿಯವರು ಮಾಡಲಾದ ವಿಯಟ್ನಾಮ್ ಯುದ್ಧ ಮತ್ತು ವಸ್ತುನಿಷ್ಠ ಶಿಷ್ಯವೇತನವನ್ನು ಆಧರಿಸಿದ ಅಧ್ಯಯನವೊಂದನ್ನು ಹೆಸರಿಸಿದ್ದಾರೆ [ಓರಿಯಂಟಾಲಿಸಂ ಪು-11] ಅಷ್ಟಕ್ಕೂ ಬರಹಗಾರನೊಬ್ಬ ತಾನು ವಾಸ ಮಾಡುವ ಸಮುದಾಯದ ಪ್ರತಿನಿಧಿ.

ಚಿಂತನೆ ಮತ್ತು ಬರವಣಿಗೆಯ ಮೂಲಕ ತಾನು ಆ ಸಮುದಾಯದ ಮಿಕ್ಕ ಜನ ಸಮೂಹಕ್ಕಿಂತಲೂ ತುಸು ವಿಭಿನ್ನ ಎಂದು ತೋರಿಸಿಕೊಳ್ಳಬಹುದೇ ಹೊರತು ತಾನೊಬ್ಬ ಅಪ್ಪಟವಾಗಿ ಬೇರೆ ಜಗತ್ತಿನ ಭಾವಜೀವಿ ಎಂದು ಸಾಬೀತು ಪಡಿಸಿಕೊಳ್ಳಲಾಗುವದಿಲ್ಲ. ಹಾಗೆ ಮಾಡ ಹೊರಟರೆ ಆತ ಸಮಾಜಸ್ವೀಕೃತ ವ್ಯಕ್ತಿಯಾಗಲಾರ. ಅದೇ ವೇಳೆಗೆ ಬರಹಗಾರನೊಬ್ಬ ಸಸ್ತಾ ಪ್ರಚಾರದ ಬೆನ್ನಿಗೆ ಬಿದ್ದು ಗೊಂದಲದ ಹೇಳಿಕೆ ಮತ್ತು ಬರವಣಿಗೆಯನ್ನೇ ತನ್ನ ಕ್ರಿಯೇಟಿವಿಟಿ ಎಂದು ಪ್ರತಿಪಾದಿಸ ಹೊರಡುವದೂ..ಅದನ್ನು ಕೆಲ ಹಿತಾಸಕ್ತಿಗಳು ಬೆಕೆಂತಲೇ ಹೌದು.. ಹೌದು.. ವಿಶಿಷ್ಟ ಬರವಣಿಗೆ..! ಎನ್ನುತ್ತಾ ನಡೆದರೆ ಮುಂದೊಂದು ದಿನ ಆ ಲೇಖಕನ ಬರವಣಗೆಯ ಪ್ರತೀ ಸಾಲನ್ನು ದುರ್ಬಿನು ಹಿಡಿದು ಓದುವ ದಿನಗಳು ಬರಬಹುದು.

ಬರಹಗಾರ ವಿಶ್ವದ ಯಾವದೇ ಮೂಲೆಯವನಾಗಿರಲಿ.. ಯಾವದೇ ಧರ್ಮ, ಜಾತಿ, ಜನಾಂಗ, ಭಾಷೆಗಳಿಗೆ ಸಂಬಂಧಿಸಿರಲಿ ಏನೇ ಕ್ರಿಯೇಟಿವ್ ಆಗಿರುವ ಬರವಣಿಗೆಯನ್ನು ಮಾಡಬೇಕೆಂದು ಹೊರಟರೂ ಬರವಣಿಗೆಯ ಆರಂಭದ ಸಾಲುಗಳಲ್ಲಿಯೇ ತಮ್ಮ ಎಲ್ಲ

ನಮ್ಮ ಜೀವನ ಮತ್ತು ಅನುಭವದ ಮೇಲೆ ಸದಾ ಸವಾರಿ ಮಾಡುವ ನಮ್ಮ ನಮ್ಮ ಕೌಟುಂಬಿಕ ಹಿನ್ನೆಲೆ ಮತ್ತು ಸಾಂಸ್ಕೃತಿಕ ಪರಿಸರದ ಬಗೆಗಿನ ಹುಸಿ ಕಾಳಜಿಗಳು ಬರಹಗಾರ ಎಷ್ಟೇ ಜಾಗರೂಕವಾಗಿರುವಾಗಲೂ ಜಾರಿಕೊಳ್ಳುವದಂತೂ ಗ್ಯಾರಂಟಿ. ತುಂಬಾ ಜಾಗೃತವಾಗಿರಬೇಕಾದ ಸಂದರ್ಭದಲ್ಲಿಯೂ ಅನೇಕ ದಿನಗಳಿಂದ ನಿದ್ದೆಗೆಟ್ಟ ಮನುಷ್ಯ ಯತಾರ್ಥವಾಗಿ ಕಣ್ಣು ರೆಪ್ಪೆ ಮುಚ್ಚಿ ತಟ್ಟನೇ ತೆಗೆಯುವ ಕ್ರಿಯೆಯಷ್ಟೇ ಸ್ವಾಭಾವಿಕವಾಗಿ ಅದು ನಮ್ಮ ವಿಚಾರ ಮತ್ತು ಬರಹದಲ್ಲಿ ಬಯಲಾಗಿರುತ್ತವೆ. ಅದೊಂಥರಾ ವಿಚಿತ್ರ ಚಡಪಡಿಕೆ. ಹೇಳದೇ ಇರದ ಹೇಳಲಾಗದ ಚಡಪಡಿಕೆ. ಅಂತಿಮವಾಗಿ ಅಡ್ಡಗೋಡೆಯ ಮೇಲಿನ ದೀಪದ ಬೆಳಕು.

ಬಗೆಯ ಆಸಕ್ತಿಗಳನ್ನು.. ಮೋಹವನ್ನು ಪ್ರಜ್ಞಾತೀತವಾಗಿಯೇ ಬಯಲುಗೊಳಿಸಿರುತ್ತಾರೆ.

ಅದಕ್ಕೆ ಕಾರಣವೂ ಸ್ಪಷ್ಟವಾಗಿದೆ. ನಮ್ಮ ಜೀವನ ಮತ್ತು ಅನುಭವದ ಮೇಲೆ ಸದಾ ಸವಾರಿ ಮಾಡುವ ನಮ್ಮ ನಮ್ಮ ಕೌಟುಂಬಿಕ ಹಿನ್ನೆಲೆ ಮತ್ತು ಸಾಂಸ್ಕೃತಿಕ ಪರಿಸರದ ಬಗೆಗಿನ ಹುಸಿ ಕಾಳಜಿಗಳು. ಬರಹಗಾರ ಎಷ್ಟೇ ಜಾಗರೂಕವಾಗಿರುವಾಗಲೂ ಜಾರಿಕೊಳ್ಳುವದಂತೂ ಗ್ಯಾರಂಟಿ. ತುಂಬಾ ಜಾಗೃತವಾಗಿರ ಬೇಕಾದ ಸಂದರ್ಭದಲ್ಲಿಯೂ ಅನೇಕ ದಿನಗಳಿಂದ ನಿದ್ದೆಗೆಟ್ಟ ಮನುಷ್ಯ ಯತಾರ್ಥವಾಗಿ ಕಣ್ಣು ರೆಪ್ಪೆ ಮುಚ್ಚಿ ತಟ್ಟನೇ ತೆಗೆಯುವ ಕ್ರಿಯೆಯಷ್ಟೇ ಸ್ವಾಭಾವಿಕವಾಗಿ ಅದು ನಮ್ಮ ವಿಚಾರ ಮತ್ತು ಬರಹದಲ್ಲಿ ಬಯಲಾಗಿರುತ್ತವೆ. ಅದೊಂಥರಾ ವಿಚಿತ್ರ ಚಡಪಡಿಕೆ. ಹೇಳದೇ ಇರದ ಹೇಳಲಾಗದ ಚಡಪಡಿಕೆ. ಅಂತಿಮವಾಗಿ ಅಡ್ಡಗೋಡೆಯ ಮೇಲಿನ ದೀಪದ ಬೆಳಕು.

ಲೇಖಕನೊಬ್ಬ ಬರೆಯುವಾಗಿನ ರಾಜಕೀಯ ಸಂದರ್ಭಗಳೂ ಅವನ ಬರವಣಿಗೆಯ ಮೇಲೆ ಪ್ರಭಾವ ಬೀರುವದುಂಟು. ವ್ಯವಸ್ಥೆಯ ಮಧ್ಯೆಯೇ ಸೃಷ್ಟಿ ಕ್ರಿಯೆ ನಡೆಯಬೇಕಾಗುವದರಿಂದ ನಮ್ಮನ್ನು ಸುತ್ತುವರೆದ ಪ್ರಭಾವಗಳಿಂದ ತಪ್ಪಿಸಿಕೊಂಡು ಓಡಿ ಹೋಗಲಂತೂ ಆಗದು. ಹಾಗೆಯೇ ಸೋಲೊಪ್ಪಿಕೊಂಡು ಬರೆಯಲೂ ಆಗದು ಹಾಗೆಂದು ಮಧ್ಯಮ ಮಾರ್ಗ ಹಿಡಿದರೆ ಕೀರ್ತಿ ಶನಿ ಅಂಟುವದಿಲ್ಲವಲ್ಲ..? ಚರಿತ್ರೆಯುದ್ದಕ್ಕೂ ಸಾಹಿತ್ಯ..ಚರಿತ್ರೆ.. ತತ್ವಜ್ಞಾನಗಳೆಲ್ಲವೂ ಪ್ರಭುತ್ವಗಳನ್ನು ಖುಷಿ ಪಡಿಸುವ ನಿಟ್ಟನಲ್ಲಿಯೇ ಸಾಗಿಬಂದಿವೆ. ಹೀಗಿರಲು. ನಮ್ಮ ಜೊತೆಗಿದ್ದು ಸಾಹಿತ್ಯ ಕೃಷಿಮಾಡುವ ಬಹುತೇಕರು ತಾವೇನೋ ವಿಭಿನ್ನವಾಗಿ ಹೇಳುವ ಮೂಲಕ ಒಟ್ಟು ಗಣದಿಂದ ಪ್ರತ್ಯೇಕವಾಗಿ ಗುರುತಿಸಿಕೊಳ್ಳಬೇಕು ಎನ್ನುವ ಭರಾಟೆಯಲ್ಲಿ ತಿಳಿದೋ.. ತಿಳಿಯದೆಯೋ ಅನೇಕ ಬಗೆಯ ತಾತ್ವಿಕ ತಿಕ್ಕಾಟಗಳಿಗೆ ಎಡೆಮಾಡಿ ಕೊಡುವದುಂಟು.

ಮಿಕ್ಕವರಿಗಿಂತಲೂ ಭಿನ್ನವಾಗಿ ಬರೆಯುವದು ಖಂಡಿತಾ ಸೃಜನಶೀಲ ಗುಣವೇ.. ಆದರೆ ಸಮುದಾಯದ ಪ್ರಜ್ಞೆಯನ್ನು ಅಜ್ಞಾತವಾಸದಲ್ಲಿಟ್ಟು ಹಾಗೆ ಮಾಡುವ ಅವಶ್ಯಕತೆ ಇಲ್ಲ. ಪರಂಪರೆಯ ಹೆಸರಲ್ಲಿ.. ದೇಶೀಯತೆಯ ಹೆಸರಲ್ಲಿ ಹಿಂದಡಿ ಇಡುವಂತ ಮಾರ್ಗವನ್ನು ಕಟ್ಟಿಕೊಡುವ ಯತ್ನ ಯಾರೂ ಮಾಡಬಾರದು ಎಂದು ಹೇಳುತ್ತಲೇ ಬರಹಗಾರನ ಅಸ್ತಿತ್ವದ ಸಂದರ್ಭ ಮತ್ತು ರಾಜಕೀಯ ಪ್ರಭುತ್ವವನ್ನು ಜೊತೆಗೆ ನಾವು ಹುಟ್ಟಿ ಬೆಳೆದ ಪರಿಸರವನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಯಾವದೇ ಒಬ್ಬ ಬರಹಗಾರ ತನ್ನ ಪರಿಸರದ ಮೌಲ್ಯ ಮತ್ತು ನಂಬುಗೆಗಳನ್ನು ಪ್ರಜ್ಞಾಪೂರ್ವಕವಾಗಲೀ, ಪ್ರಜ್ಞಾತೀತವಾಗಲೀ ಮೀರಿ ಬರೆಯಲಾರ. ಹಾಗಾದಾಗ ಆ ಲೇಖಕ ನಿಲ್ಲುವ ಜಾಗ ಯಾವುದು ಎನ್ನುವದನ್ನು ಸಾಹಿತ್ಯಕ ವಲಯದ ಜಾಗೃತ ಮನಸುಗಳು ತೀರ್ಮಾನಿಸುತ್ತವೆ. ಅದೇ ವೇಳೆಗೆ ಪರಂಪರೆಯ ಹೆಸರಲ್ಲಿ ಕಸವನ್ನೇ ರಸವೆಂದು ಸಾಧಿಸಹೊರಡುವದು.. ಅದನ್ನು ಸರಿ ಎಂದು ಒಪ್ಪಿಕೊಳ್ಳುವದು ಎರಡೂ ಅಷ್ಟೇ ಅಪಾಯಕಾರಿಯಾದವುಗಳು.

ಕ್ರಿಯೇಟಿವ್ ಲೇಖಕರೆಂದು ಗುರುತಿಸಿಕೊಂಡವರು ಕೂಡಾ ಕೌಟುಂಬಿಕ ಪ್ರಭಾವ ಮತ್ತು ಜೀವನಾನುಭವದ ಸಹವಾಸದಿಂದ ವಂಚಿತರಾಗಿರಲಾರರು ಅಂದುಕೊಳ್ಳುತ್ತೇನೆ. ಬೇರುಗಳಿಲ್ಲದೇ ಬೀಜ ಮೊಳಕೆಯೊಡೆಯುವದು.. ಸಸಿಯಾಗುವದು.. ಮರವಾಗುವದು. ಹೂವು.. ಹೀಚು..ಕಾಯಿ..ಹಣ್ಣು ಬಿಡುವದು ಸಾಧ್ಯವೇ..? ನಮ್ಮ ಓದು.. ಗ್ರಹಿಕೆ ಚರ್ಮವಾದರೆ ಸುತ್ತಲಿನ ಸಾಂಸ್ಕೃತಿಕ ಪರಿಸರ ಚರ್ಮದೊಳಗಿನ ಚರ್ಬಿಯಿದ್ದಂತೆ. ನಾವು ಎಷ್ಟೇ ಗಲತ್ ತಿಪಲಗಳನ್ನು ಮಾಡಿದರೂ ಅವರೆಡನ್ನೂ ಬೇರೆ ಮಾಡಲಾಗದು. ಅಂತೆಯೇ ಆಯಾ ಲೇಖಕನ ಬರವಣಿಗೆ ಅವನ ಜಾತಿ..ಧರ್ಮ.. ಸಮುದಾಯದ ನಂಬುಗೆ.. ಮೌಲ್ಯ.. ಪರಂಪರೆ.. ಉದ್ಯೋಗ.. ಮುಂತಾದವುಗಳಿಂದ ಸಂಪೂರ್ಣವಾಗಿ ಮುಕ್ತವಾಗಿರಲು ಸಾಧ್ಯವಿಲ್ಲ.

ಹಾಗೆಂದು ತೌಡನ್ನೇ ಹಿಟ್ಟೆಂದು ಮುಕ್ಕಿಸುವ ಯತ್ನವನ್ನು ಮಾಡಬಾರದು. ವಸ್ತುನಿಷ್ಟವಾಗಿ ಸಮಷ್ಟಿಯ ಹಿತದಿಂದ ಆರೋಗ್ಯಕರವಾಗಿರುವ ನಂಬುಗೆಗಳನ್ನು ಮಾತ್ರ ಬೆಂಬಲಿಸಿ ಬರೆಯಬೇಕೇ ಹೊರತು ಬಹುದೊಡ್ಡ ಸಾಮಾಜಿಕ ಸ್ತರವೊಂದರ ಶೋಷಣೆಯ ಸುಳಿಹು ಮತ್ತು ವಾಸನೆ ದಟ್ಟವಾಗಿ ಇರುವಾಗಲೂ ಅಂಥಾ ಆಚರಣೆ.. ನಂಬುಗೆ.. ಪರಂಪರೆಯನ್ನು ಪರೋಕ್ಷವಾಗಿಯೂ ಬೆಂಬಲಿಸಿ ಬರೆಯುವದು.. ಮಾತನಾಡುವದು ಸರಿಯಲ್ಲವೇನೋ..? ಲೇಖಕನೊಬ್ಬನ ಎಲ್ಲ ನಂಬುಗೆಗಳು, ಆಚರಣೆಗಳು, ಎಲ್ಲ ಕಾಲಕ್ಕೂ ಆರೋಗ್ಯಕರವಾಗಿಯೇ ಇರುತ್ತವೆ ಎನ್ನುವಂತೆ ಬರೆಯುವದು.. ಪ್ರತಿಪಾದಿಸುವದು ಎಚ್ಚರಿದ್ದೂ ಮಲಗಿದಂತೆ ನಟಿಸುವ ನಟನೆಯಾಗಬಹುದಷ್ಟೇ.! □

ಮಹಾನ್ ರಾಷ್ಟ್ರಪ್ರೇಮಿ ಅಂಬೇಡ್ಕರ್

ವಿ. ಆರ್ ಮೌರ್ಯ

I must say that you think Mr. gandhi is greater than the country is greater than the greatest than the greatest man.

ಈ ಮಾತನ್ನು ಬಾಬಾಸಾಹೇಬ್-ಅಂಬೇಡ್ಕರರು ಸರದಾರ ವಲ್ಲಭ ಬಾಯಿ ಪಟೇಲರಿಗೆ ಪತ್ರದ ಮೂಲಕ ಹೇಳುತ್ತಾರೆ. ಈಗ ನಮಗೆ ಅರಿವಾಗುತ್ತದೆ. ಭಾರತದ ಸ್ವಾತಂತ್ರ್ಯಕ್ಕಾಗಿ ಹಲವರು ಚಳವಳಿಗಳನ್ನು ನಡೆಸಿ. ಅನೇಕ ಘೋಷಣೆಗಳನ್ನು ಕೂಗಿ, ಹಲವು ಸತ್ಯಾಗ್ರಹವನ್ನು ನಡೆಸಿ ನಮಗೆ ಸ್ವಾತಂತ್ರ್ಯ ತಂದು ಕೊಟ್ಟಿರುವುದು ಈಗ ಇತಿಹಾಸ. ಅಂತಹವರಲ್ಲಿ ಪ್ರಮುಖರು ಗಾಂಧೀಜಿ, ಸುಭಾಷರು, ಭಗತ್ ಸಿಂಗ್, ಆಜಾದ್, ನೆಹರೂ, ಮಂಗಳಪಾಂಡೆ. ಇನ್ನೂ ಮುಂತಾದವರು ದೇಶಕ್ಕಾಗಿ ತಮ್ಮ ಪ್ರಾಣವನ್ನೆ ಮುಡುಪಿಟ್ಟಿದ್ದರು.

ಇವರುಗಳ ಜೊತೆಗೆ ಅಂಬೇಡ್ಕರರು ಸಹ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು ಎಂದು ತಿಳಿಸುವ ಪ್ರಯತ್ನವೇ ಈ ಲೇಖನ. ಏಕೆಂದರೆ ಬಾಬಾಸಾಹೇಬರು ಕೇವಲ ಶೋಷಿತವರ್ಗಗಳ ಹಿತಾಸಕ್ತಿಗೆ ಬ್ರಿಟಿಷರೊಂದಿಗೆ ಹೆಚ್ಚು ಕಾಣಿಸಿಕೊಂಡರು ಎಂಬ ಕೆಲವು ತಪ್ಪು ಕಲ್ಪನೆಗಳು ನಮ್ಮ ಜನಗಳಲ್ಲಿ ತುಂಬಿದೆ.

ಈ ತಪ್ಪು ಕಲ್ಪನೆಗಳನ್ನು ನಾಶಪಡಿಸಿ, ಬಾಬಾಸಾಹೇಬರ ಅಂತರಾಳವನ್ನು ನನಗೆ ತಿಳಿದಿರುವಷ್ಟು ಮಟ್ಟಿಗೆ ತಮಗೆ ತಿಳಿಸುತ್ತಿದ್ದೇನೆ. ಆದರೆ ಮೊದಲಿಗೆ ನೀವು ನಿಮ್ಮಗಳ ಹೃದಯದಲ್ಲಿ ಒಂದು ವಿಷಯವನ್ನು ಅಚ್ಚೊತ್ತಿಕೊಳ್ಳಬೇಕಾಗಿದೆ. ಅದೇನೆಂದರೆ ಗಾಂಧೀಜಿ ಮತ್ತು ಕಾಂಗ್ರೆಸ್ಸು ಬ್ರಿಟಿಷರಿಂದ ಸ್ವಾತಂತ್ರ್ಯ ಕೇಳುತ್ತಿದ್ದರೆ, ಬಾಬಾಸಾಹೇಬರು ತಮ್ಮ ದೇಶದ ತಮ್ಮ ಧರ್ಮದವರೇ ಆದ ಹಿಂದೂ ಸವರ್ಣಿಯರಿಂದ ಸ್ವಾತಂತ್ರ್ಯ ಪಡೆಯಲು ಹೋರಾಡುತ್ತ ನಂತರ ಬ್ರಿಟಿಷರಿಂದ ಸ್ವಾತಂತ್ರ್ಯ ಬಯಸುತ್ತಿದ್ದರು.

ಆದರೆ ನಂತರದಲ್ಲಿ ಇವರೆಡನ್ನು ಜೊತೆಜೊತೆಗೆ ಪಡೆಯಲು ನಿರ್ಧರಿಸಿದ್ದರು. 1930ರಲ್ಲಿ ನಡೆದ ಮೊದಲ ದುಂಡುಮೇಜಿನ ಪರಿಷತ್ತಿನಲ್ಲಿ ಅಂಬೇಡ್ಕರರು ವ್ಯಕ್ತಪಡಿಸಿದ ಮಾತುಗಳನ್ನು ಗಮನಿಸಿದರೆ ಅವರು ಎಂತಹ ಮಹಾನ್ ರಾಷ್ಟ್ರಪ್ರೇಮಿ ಎಂದು ನಮಗೆ ತಿಳಿದು ಬರುತ್ತದೆ. ಅಂದು ಲಂಡನ್ನಿನಲ್ಲಿ ಅವರು ಆಡಿದ ಮಾತುಗಳಿಂದ ಪ್ರಭಾವಿತರಾಗಿ ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದ ಪತ್ರಿಕೆಗಳು, ಬಾಬಾ ಸಾಹೇಬರ ವಿರೋಧಿಗಳು ಆಗಿದ್ದಂತಹ ಅಂದಿನ ಕಾಂಗ್ರೆಸ್ ನಾಯಕರುಗಳು ಸಹ ದಿಗ್ಭ್ರಮೆ ಹೊಂದಿ ಬಾಬಾ ಸಾಹೇಬರನ್ನು ಕೊಂಡಾಡಿದ್ದರು.

ಸೆಪ್ಟೆಂಬರ್ 6, 1930ರಂದು ದುಂಡು ಮೇಜಿನ ಪರಿಷತ್ತಿಗಾಗಿ ಅಂಬೇಡ್ಕರರಿಗೆ ಆಹ್ವಾನ ಬಂದಿತು. ಇಂಗ್ಲೆಂಡ್ ಮತ್ತು ಭಾರತಕ್ಕೆ ಇದೊಂದು ಮಹತ್ವದ ಪರಿಷತ್ತಾಗಿತ್ತು. ಅಲ್ಲಿಗೆ ತೆರಳುವ ಮುನ್ನ ಆಗಸ್ಟ್ 8ರಂದು ನಾಗಪುರದಲ್ಲಿ ನಿಮ್ನ ವರ್ಗಗಳ ಸಮಾವೇಶದಲ್ಲಿ ಮಾತನಾಡಿದ ಬಾಬಾಸಾಹೇಬ್ ಅಂಬೇಡ್ಕರ್ "ನಿಮ್ನ ವರ್ಗಗಳಿಗೆ ಬ್ರಿಟಿಷರು ತೊಲಗುವುದರಿಂದ ಪ್ರಯೋಜನವಿಲ್ಲ. ಬ್ರಿಟಿಷರು ತೊಲಗುವ ಜೊತೆಗೆ ಹಿಂದೂ ಸವರ್ಣಿಯರ ಸನಾತನ ವಾದ ಕೂಡ ನಿರ್ನಾಮವಾಗಬೇಕು" ಎಂದು ಹೇಳಿದರು. ಈ ಮೇಲಿನ ಮಾತುಗಳಲ್ಲಿ ಅಂಬೇಡ್ಕರರಿಗೆ ಇದ್ದ ನಿಲುವನ್ನು ಮೇಲ್ನೋಟಕ್ಕೆಯೆ ತಿಳಿಯುವಂತಾಗಿದೆ. 'ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದ ಮೇಲೆ ಅಧಿಕಾರ ಹೊಂದಲಾಗದು' ಎಂದು ಯಾವಾಗಲು ಹೇಳುತ್ತಿದ್ದ ಅಂಬೇಡ್ಕರರು ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಬೇಕೆಂದು ಹೇಳುತ್ತಿದ್ದರು.

ತಮ್ಮ ಮಾತನ್ನು ಮುಂದುವರೆಸುತ್ತ ಬ್ರಿಟಿಷರ ಆಡಳಿತವನ್ನು ಉದ್ದೇಶಿಸಿ ಇದೊಂದು ಅತ್ಯಂತ ದುಬಾರಿ ಆಡಳಿತ, ಐಷಾರಾಮಿ ಆಡಳಿತ, ಜನ ಸಾಮಾನ್ಯರ ಭವಿಷ್ಯವನ್ನು ಕಾಲಕಸದಂತೆ ಕಂಡ ಆಡಳಿತ, ಬ್ರಿಟಿಷ್ ಆಡಳಿತದ ಮೊದಲರ್ಧ ಶತಮಾನದಲ್ಲಿ ಐದು ಬೀಕರ ಬರಗಾಲಗಳು ಬಂದವು. ಇವುಗಳಲ್ಲಿ ಒಟ್ಟು 10 ಲಕ್ಷಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡರು. ಇಷ್ಟೇ ಸಂಖ್ಯೆಯ ಜನ ಮನೆ-ಮಾರು ಕಳೆದುಕೊಂಡರು. ಎರಡನೇ ಅರ್ಧ ಶತಮಾನದಲ್ಲಿ ಮತ್ತೆ ಆರು ಬರಗಾಲಗಳು ಅಪ್ಪಳಿಸಿದವು. ಆಗ 50 ಲಕ್ಷ ಜನ ಅಸುನೀಗಿದರು. ಕಡೇ ಅರ್ಧ ಶತಮಾನದಲ್ಲಾದರೋ ಬರಗಾಲಗಳ ಸಂಖ್ಯೆ 18ಕ್ಕೇರಿತು. ಇವುಗಳಲ್ಲಿ 260ಲಕ್ಷ ಜನ ಬಲಿಯಾದರು. ಇದಕ್ಕೆಲ್ಲಾ ಯಾರು ಹೊಣೆ? ಜನರ ಜೀವನಾವಶ್ಯಕತೆಗಳನ್ನು ಪೂರೈಸಲಾಗದ ಬ್ರಿಟಿಷರೇ ಅಲ್ಲವೇನು? ಜನರ ಪ್ರಾಣಗಳೊಂದಿಗೆ, ಭವಿಷ್ಯದೊಂದಿಗೆ ಚೆಲ್ಲಾಟವಾಡುವ ಅಧಿಕಾರ ಬ್ರಿಟಿಷ್ ಆಡಳಿತಕ್ಕೆ ಎಲ್ಲಿದೆ? ಬ್ರಿಟಿಷರು ಭಾರತದಲ್ಲಿ ಇರುವವರೆಗೆ ಇಲ್ಲಿನ ಜನರಿಗೆ ಮುಕ್ತಿ ಇಲ್ಲ. ಅವರು ತೊಲಗಿದಾಗಲೆ ಅವರ ಕೆಟ್ಟ ನೀತಿಗಳು ತೊಲಗಿಯಾವು ಎಂದು ಗುಡುಗಿದರು. ಈ ಮಾತಗಳನ್ನು ಕೇಸರಿ ಅಂತಹ ಪತ್ರಿಕೆಗಳೂ ಸಹಾ ಕೊಂಡಾಡಿ ಬರೆದಿದ್ದವು. (ಕೇಸರಿ ಪತ್ರಿಕೆಯ ಹರಿಕಾರ ಬಾಲಗಂಗಾಧರ ತಿಲಕ್, ಇವರು ಅಸ್ಪೃಶ್ಯತಾ ನಿರ್ಮೂಲನ ಮಸೂದೆಗೆ ಸಹಿ ಹಾಕಿರಲಿಲ್ಲ) ಏಕೆಂದರೆ

ಬಾಬಾಸಾಹೇಬರು ತಮ್ಮ ದೇಶದ ತಮ್ಮ ಧರ್ಮದವರೇ ಆದ ಹಿಂದೂ ಸವರ್ಣೀಯರಿಂದ ಸ್ವಾತಂತ್ರ್ಯ ಪಡೆಯಲು ಹೋರಾಡುತ್ತ ನಂತರ ಬ್ರಿಟಿಷರಿಂದ ಸ್ವಾತಂತ್ರ್ಯ ಬಯಸುತ್ತಿದ್ದರು. ಆದರೆ ನಂತರದಲ್ಲಿ ಇವರೆಡನ್ನು ಜೊತೆ ಜೊತೆಗೆ ಪಡೆಯಲು ನಿರ್ಧರಿಸಿದ್ದರು. ೧೯೩೦ರಲ್ಲಿ ನಡೆದ ಮೊದಲ ದುಂಡು ಮೇಜಿನ ಪರಿಷತ್ತಿನಲ್ಲಿ ಅಂಬೇಡ್ಕರರು ವ್ಯಕ್ತಪಡಿಸಿದ ಮಾತುಗಳನ್ನು ಗಮನಿಸಿದರೆ ಅವರು ಎಂತಹ ಮಹಾನ್ ರಾಷ್ಟ್ರಪ್ರೇಮಿ ಎಂದು ನಮಗೆ ತಿಳಿದು ಬರುತ್ತದೆ. ಅಂದು ಲಂಡನ್ನಿನಲ್ಲಿ ಅವರು ಆಡಿದ ಮಾತುಗಳಿಂದ ಪ್ರಭಾವಿತರಾಗಿ ರಾಷ್ಟ್ರೀಯ ಅಂತರ ರಾಷ್ಟ್ರೀಯ ಮಟ್ಟದ ಪತ್ರಿಕೆಗಳು, ಬಾಬಾ ಸಾಹೇಬರ ವಿರೋಧಿಗಳು ಆಗಿದ್ದಂತಹ ಅಂದಿನ ಕಾಂಗ್ರೆಸ್ ನಾಯಕರುಗಳು ಸಹ ದಿಗ್ಭ್ರಮೆ ಹೊಂದಿ ಬಾಬಾ ಸಾಹೇಬರನ್ನು ಕೊಂಡಾಡಿದ್ದರು.

ಇಂತಹ ಪತ್ರಿಕೆಗಳು ಬಾಬಾ ಸಾಹೇಬರ ಬಗ್ಗೆ ಸಕಾರಾತ್ಮಕವಾಗಿ ಬರೆದದ್ದು ಇದೇ ಮೊದಲು.

ದುಂಡು ಮೇಜಿನ ಪರಿಷತ್ತಿನ ಬಗ್ಗೆ ಮಾತನಾಡಿದ ಅಂಬೇಡ್ಕರರು "ನಿಮ್ನ ವರ್ಗಗಳೂ ಸೇರಿದಂತೆ ಪರಿಷತ್ತಿಗೆ ಹೋಗುತ್ತಿರುವ ಎಲ್ಲರೂ ಸ್ವರಾಜ್ಯವನ್ನು ಪಡೆದುಕೊಳ್ಳುವುದೇ ಭಾರತದ ಗುರಿಯಾಗಿದೆ ಎಂಬುದನ್ನು ನಂಬಿದ್ದಾರೆ" ಎಂದು ಹೇಳಿ ಲಂಡನ್ನಿಗೆ ಹೊರಟರು.

ಲಂಡನ್ನಿನಲ್ಲಿ ನವೆಂಬರ್ 12, 1930ರಂದು ಒಂದನೇ ದುಂಡು ಮೇಜಿನ ಪರಿಷತ್ತು ಪ್ರಾರಂಭವಾಯಿತು. ಕಾಂಗ್ರೆಸ್‌ನಿಂದ ಗಾಂಧೀಜಿಯವರು ಭಾಗವಹಿಸಿರಲಿಲ್ಲ. ಬದಲಾಗಿ ಪರಿಷತ್ತಿಗೆ ಹೋಗುವವರೆಲ್ಲ ಬ್ರಿಟಿಷರ ಏಜೆಂಟರು ಎಂದಿದ್ದರು, ಆದರೆ ಈ ಮಾತು ಅಂಬೇಡ್ಕರರಿಗೆ ಬೇಜಾರು ತರಲಿಲ್ಲವಾದರೂ ಸುಭಾಷ್ ಚಂದ್ರ ಬೋಸರು ಸಹ ಕಾಂಗ್ರೆಸ್ಸಿನೊಡನೆ ಸೇರಿ "ಏಜೆಂಟ್" ಅಂದದ್ದು ಅತೀವ ನೋವನ್ನುಂಟು ಮಾಡಿತ್ತು.

ಈ ಪರಿಷತ್ತಿನ ಅಧ್ಯಕ್ಷತೆಯನ್ನು ರ್‍ಯಾಂಸೆ ಡೊನಾಲ್ಡವರು ವಹಿಸಿದ್ದರು. ಈ ಅಧಿವೇಶನದಲ್ಲಿ ಅಂಬೇಡ್ಕರರು ಭಾರತದಲ್ಲಿನ ಜಾತಿ ಪದ್ಧತಿ. ಅಸಮಾನತೆ, ಅಸ್ಪೃಶ್ಯತೆಯಂತಹ ಸಮಸ್ಸೆಗಳನ್ನು ತೀವ್ರವಾಗಿ ಖಂಡಿಸುತ್ತಲೇ ಭಾರತದಲ್ಲಿ ಬ್ರಿಟಿಷರ ಆಡಳಿತ ಕೊನೆಗೊಂಡು ಜನರಿಂದ, ಜನರಿಗಾಗಿ, ಜನರ ಆಡಳಿತ ಪ್ರಾರಂಭಗೊಳ್ಳುವ ಕನಸನ್ನು ಭಾರತದ ನಿಮ್ನ ವರ್ಗಗಳು ತಮ್ಮ ಕಣ್ಣುಗಳಲ್ಲಿ ತುಂಬಿಕೊಂಡಿದ್ದಾರೆ ಎಂದು ಘಂಟಾಘೋಷವಾಗಿ ಘೋಷಿಸಿದರು. ಬ್ರಿಟಿಷರ ನೆಲದಲ್ಲೆ ಬ್ರಿಟಿಷರ ವಿರುದ್ಧವೇ ಈ ಮಾತುಗಳನ್ನು ಆಡಿದಾಗ ಆ ಸಭೆಯಲ್ಲಿದ್ದ ಪ್ರತಿಯೊಬ್ಬರು ಕೂಡ ಆಶ್ಚರ್ಯ ಚಕಿತರಾದರು.

ಬಹಳ ಗಟ್ಟಿದನಿಯಲ್ಲಿ ಮಾತನಾಡಲು ಪ್ರಾರಂಭಿಸಿದ ಅವರು ಬ್ರಿಟಿಷರು ಭಾರತಕ್ಕೆ ಬರುವ ಮುಂಚೆ ನಿಮ್ನ ವರ್ಗಗಳು ಯಾವ ಸ್ಥಿತಿಯಲ್ಲಿ ಇದ್ದವೋ, ಬಹುತೇಕ ಅದೇ ಸ್ಥಿತಿಯಲ್ಲಿ ಬ್ರಿಟಿಷ್ ಆಡಳಿತದಲ್ಲೂ ಇವೆ. ಮೊದಲು ನಾವು ಸಾರ್ವಜನಿಕ ಸ್ಥಳದಲ್ಲಿ ನೀರು ತೆಗೆದುಕೊಳ್ಳಲು ಆಗುತ್ತಿರಲಿಲ್ಲ. ಈಗಲೂ ಸಹ ನೀರು ಸಿಗುತ್ತಿಲ್ಲ. ಈ ಸಣ್ಣ ಹಕ್ಕನ್ನಾದರೂ ಬ್ರಿಟಿಷರು ನಮಗೆ ಕೊಡಿಸಿದರೇ? ಮೊದಲು ನಮಗೆ ಮಂದಿರಗಳಲ್ಲಿ ಪ್ರವೇಶವಿರಲಿಲ್ಲ. ಈಗಲೂ ಸಿಗುತ್ತಿಲ್ಲ. ಪೊಲೀಸ್-ಮಿಲಿಟರಿ ಸೇವೆಯಿಂದ ಮೊದಲು ನಮ್ಮನ್ನು ದೂರವಿಡಲಾಗಿತ್ತು ಈಗಲೂ ಸಹ ನಮ್ಮನ್ನು ದೂರ ಇಡಲಾಗಿದೆ. ಆದ್ದರಿಂದ ಬ್ರಿಟಿಷರ ಆಳ್ವಿಕೆ ಕೊನೆಗೊಳ್ಳಲೇಬೇಕು ಎಂಬ ಅಂಬೇಡ್ಕರ್ ಪ್ರಶ್ನೆ ಅಲ್ಲಿದ್ದ ಎಲ್ಲಾ ಬ್ರಿಟಿಷರಿಗು ಆಳವಾಗಿ ಇರಿಯಿತು. ಬಹುಶಃ ಇನ್ನಾವುದೇ ಭಾರತೀಯ ಬ್ರಿಟಿಷರ ನಾಡಿನಲ್ಲಿ ಬ್ರಿಟಿಷರ ವಿರುದ್ಧವೇ ಅಲ್ಲಿವರೆಗೆ ಅಂತಹ ಮಾತನಾಡಿರಲಿಲ್ಲ ವೆನಿಸುತ್ತದೆ.

ಇನ್ನೂ ಕೆಲವು ಮಾತುಗಳಂತು ಬ್ರಿಟಿಷರ ಆತ್ಮಸಾಕ್ಷಿಯನ್ನೆ ಕೆದಕುತ್ತವೆ. ಅವುಗಳೆಂದರೆ "ಭಾರತೀಯರ ಮೇಲೆ ನಿರಂತರವಾಗಿ ಅಧಿಕಾರ ನಡೆಸಿಕೊಂಡು ಹೋಗುಬಹುದೆಂಬ ಎಣಿಕೆ ಬ್ರಿಟಿಷರ ಆತ್ಮಸಾಕ್ಷಿಯನ್ನೆ ಕೆದಕುತ್ತವೆ. ಅವುಗಳೆಂದರೆ "ಭಾರತೀಯರ ಮೇಲೆ ನಿರಂತರವಾಗಿ ಅಧಿಕಾರ ನಡೆಸಿಕೊಂಡು ಹೋಗಬಹುದೆಂಬ ಎಣಿಕೆ ಬ್ರಿಟಿಷರು ಆಯ್ಕೆ ಮಾಡಿದ್ದನ್ನು ಭಾರತ ಒಪ್ಪಕೊಳ್ಳುವ ಕಾಲ ಮುಗಿಯಿತು. ಈ ಹಂತಹದಲ್ಲಿ ನಿಮ್ನ ವರ್ಗಗಳು ಬಯಸುವುದು, ತಮ್ಮ ಜನರೂ ಭಾಗವಾಗುವಂತಹ ಒಂದು ಸ್ವತಂತ್ರ ಸರ್ಕಾರವನ್ನು, ಆದ್ದರಿಂದ ಬ್ರಿಟಿಷರ ಆಡಳಿತ ಅಂತ್ಯಗೊಳ್ಳಲೇಬೇಕು.

ಅಂಬೇಡ್ಕರರು ಭಾರತದಲ್ಲಿನ ಜಾತಿ ಪದ್ಧತಿ. ಅಸಮಾನತೆ, ಅಸ್ಪೃಶ್ಯತೆಯಂತಹ ಸಮಸ್ಸೆಗಳನ್ನು ತೀವ್ರವಾಗಿ ಖಂಡಿಸುತ್ತಲೇ ಭಾರತದಲ್ಲಿ ಬ್ರಿಟಿಷರ ಆಡಳಿತ ಕೊನೆಗೊಂಡು ಜನರಿಂದ, ಜನರಿಗಾಗಿ, ಜನರ ಆಡಳಿತ ಪ್ರಾರಂಭಗೊಳ್ಳುವ ಕನಸನ್ನು ಭಾರತದ ನಿಮ್ನ ವರ್ಗಗಳು ತಮ್ಮ ಕಣ್ಣುಗಳಲ್ಲಿ ತುಂಬಿಕೊಂಡಿದ್ದಾರೆ ಎಂದು ಘಂಟಾಘೋಷವಾಗಿ ಘೋಷಿಸಿದರು. ಬ್ರಿಟಿಷರ ನೆಲದಲ್ಲೆ ಬ್ರಿಟಿಷರ ವಿರುದ್ಧವೇ ಈ ಮಾತುಗಳನ್ನು ಆಡಿದಾಗ ಆ ಸಭೆಯಲ್ಲಿದ್ದ ಪ್ರತಿಯೊಬ್ಬರು ಕೂಡ ಆಶ್ಚರ್ಯ ಚಕಿತರಾದರು.

ಈ ರೀತಿಯಲ್ಲಿ ಬ್ರಟಿಷರ ವಿರುದ್ಧ ಸಿಡಿಲು ಬಡಿದಂತೆ ಮಾತನಾಡಿದ ಮಹಾನ್ ವ್ಯಕ್ತಿಯನ್ನು "ಬ್ರಿಟಿಷರ ಏಜೆಂಟ್" ಎಂದ ಮನುಷ್ಯರಿಗೆ ಪಶ್ಚತ್ತಾಪವಾಗಿರುವುದು ಖಂಡಿತ. ಈ ಪರಿಷತ್ತಿನಲ್ಲಿ ರಾರಾಜಿಸಿದ ಅಂಬೇಡ್ಕರರನ್ನು ಅವರ ಪಾತ್ರವನ್ನು "ದ ಇಂಡಿಯನ್ ಡೇಲಿ ಮೇಲ್" ಪತ್ರಿಕೆ ವರದಿ ಮಾಡಿತು. ಈ ರೀತಿ ಬಾಬಾ ಸಾಹೇಬರು ಇಬ್ಬರಿಂದ ಸ್ವತಂತ್ರಕ್ಕಾಗಿ ಹೋರಾಟ ನಡೆಸಿದ್ದರೆ. ಇಂತಹವರನ್ನು ನಾವುಗಳು ಕೇವಲ ದಲಿತ ಸೂರ್ಯ ಎಂದೇ ಬಿಂಬಿಸಿ ಬಿಟ್ಟಿದ್ದೇವೆ. ಆದರೆ ಅವರ ಅಂತರಾಳದಲ್ಲಿ ಇದ್ದ ಮಹಾನ್ ದೇಶಪ್ರೇಮಿಯನ್ನು ಸ್ವತಂತ್ರ ಸಿಕ್ಕು 52 ವರ್ಷಗಳಾಗಿದ್ದರೂ ಸಹ ಸ್ವಾತಂತ್ರ ಹೋರಾಟಗಾರನೆಂದು ಗುರುತಿಸದೇ ಇರುವುದು ನಮಗೆಲ್ಲರಿಗು ನಾಚಿಕೆಗೇಡು.

ಒಂದನೆ ದುಂಡು ಮೇಜಿನ ಪರಿಷತ್ತನ್ನು ಮುಗಿಸಿಕೊಂಡು ಭಾರತಕ್ಕೆ ಬಂದೊಡನೆ ಅವರಿಗೆ ಅದ್ದೂರಿ ಸ್ವಾಗತ ಸಿಕ್ಕಿತು. ಎಲ್ಲಾ ಪತ್ರಿಕೆಗಳಲ್ಲು ಅಂಬೇಡ್ಕರರದೇ ಗುಣಗಾನ, ಆದರೆ ಈ ವಿಷಯ ಇತಿಹಾಸದಲ್ಲಿ ಮರೆಯಾದುದು ಮಾತ್ರ ವಿಪರ್ಯಾಸ.

ಜೇರ್ನಲ್ ಫೈರಿಂಗ್ ಕೇಸಿನಲ್ಲಿಯೂ ಕೂಡ 47 ಜನ ಭಾರತೀಯರ ಪರವಾಗಿ ವಾದಿಸಿದ ಅಂಬೇಡ್ಕರರವರು ಕೋರ್ಟಿನಲ್ಲಿ ಬ್ರಿಟಿಷರನ್ನು ತೀವ್ರ ತರಾಟೆಗೆ ತೆಗೆದುಕೊಂಡು ತಮ್ಮ ನ್ಯಾಯ ನಿಷ್ಠೆಯನ್ನು ನಿರೂಪಿಸಿತ್ತಾರೆ. ಇಂತಹ ವ್ಯಕ್ತಿ ಬ್ರಿಟಿಷರ ಏಜೆಂಟೇ?

ಹೀಗೆ ನಡೆದ ಕೆಲವು ಘಟನೆಗಳನ್ನು ಮಾತ್ರ ನಾನಿಲ್ಲಿ ತಿಳಿಸಿದ್ದೇನೆ. ಅವರ ಜೀವನ ಚರಿತ್ರೆ ಓದಿದರೆ ಒಂದು ರೋಚಕ ಅನುಭವವಾಗುತ್ತದೆ. ಅವರು ಹೇಳಿದಂತೆ "ನನ್ನನ್ನು ಮುಂದೊಂದು ದಿನ ಈ ಜನತೆ ಅರ್ಥೈಸಿಕೊಳ್ಳುತ್ತದೆ. ಆಗ ನನ್ನ ದೇಶ ಪ್ರೇಮ ಅವರುಗಳಿಗೆ ಅರಿವಾಗುತ್ತದೆ." ಎಂಬ ಮಾತು ಸತ್ಯವಾಗಲು ಕಾಲ ಸನ್ನಿಹಿತವಾಗುತ್ತದೆ. 63 ವರ್ಷದ ಸ್ವತಂತ್ರ ದಿನಾಚರಣೆಯನ್ನು ಆಚರಿಸಿರುವ ಈ ಸಂದರ್ಭದಲ್ಲಿ ಭಾರತ ಕಂಡ ಮಹಾನ್ ದೇಶ ಪ್ರೇಮಿಯನ್ನು ಅತೀ ತಡವಾಗಿ ನಿಮಗೆ ಪರಿಚಯಿಸುತ್ತಿರುವುದಕ್ಕೆ ನನಗೆ ತುಂಬಾ ನಾಚಿಕೆ ಆಗುತ್ತಿದೆ. ಅಸಹ್ಯ ಹುಟ್ಟಿಸುತ್ತಿದೆ. ಇನ್ನೂ ನಿಮಗೆ??? □

ಮತದಾರನಿಗೂ ಒಂದು 'ದಿನ' !

(5ನೇ ಪುಟದಿಂದ)

ಯನ್ನು ಅಂಗೀಕರಿಸುವ ಮೂಲಕ ಹಿಂದಕ್ಕೆ ಕರೆಯಿಸಿಕೊಳ್ಳಬೇಕು. ಎರಡನೇಯ ಪ್ರಾತಿನಿಧ್ಯ ಮತಪಡೆದ ಅಭ್ಯರ್ಥಿಯನ್ನು ಉಳಿದ ಅವದಿಗೆ ಪ್ರತಿನಿಧಿಯೆಂದು ಘೋಷಿಸಬೇಕು. ಹೀಗೆ ಮಾಡುವದರಿಂದ ಮೊದಲ ಪ್ರಾಶಸ್ತ್ಯ ಮತಪಡೆದು ಆಯ್ಕೆಯಾದ ಅಭ್ಯರ್ಥಿ ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವ ಪ್ರತಿಸ್ಪರ್ಧಿಯಾಗಿ ಎರಡನೇಯ ಅಭ್ಯರ್ಥಿ ಸದಾ ಜಾಗೃತನಾಗಿರುತ್ತಾನೆ.

ಒಬ್ಬ ಗುಮಾಸ್ತನನ್ನು ಆಯ್ಕೆ ಮಾಡಬೇಕಾದರೆ ಕನಿಷ್ಠ ಪದವಿ ಶಿಕ್ಷಣವನ್ನು ಹೊಂದಿರಬೇಕೆಂದು ಬಯಸುವ ನಾವು ಒಬ್ಬ ಸಂಸದ, ಶಾಸಕನಿಗೆ ಯಾವ ಶೈಕ್ಷಣಿಕ, ನೈತಿಕ ಅರ್ಹತೆಯನ್ನು ನಿಗದಿ ಪಡಿಸಿಲ್ಲ. ಆದ್ದರಿಂದ ಜನತಾ ಪ್ರಾತಿನಿಧ್ಯ ಕಾಯ್ದೆಗೆ ತಿದ್ದುಪಡಿ ಮಾಡಿ ಕನಿಷ್ಠ ಅರ್ಹತೆಗಳನ್ನು ನಿಗದಿಪಡಿಸಬೇಕು.

ಚುನಾನಣಾ ಆಯೋಜನೆ ನಿಯಮ 1961ರ ಅಧಿನಿಯಮ 49ರ ಪ್ರಕಾರ ಇರುವ ನೆತ್ಯಾತ್ಮಕ ಮತದಾನ(Negative Voting) ಅವಕಾಶವನ್ನು ಇನ್ನಷ್ಟು ಸರಳೀಕರಣ ಗೋಳಿಸಬೇಕು. ಇದರಿಂದ ಅಯೋಗ್ಯ ಹಾಗೂ ಅಪರಾಧಿ ಹಿನ್ನೆಲೆಯಿರುವ ವ್ಯಕ್ತಿಗಳ ಆಯ್ಕೆಯನ್ನು ತಡೆಗಟ್ಟಬಹುದು.

ಚುನಾವಣೆಗಳು ಇಂದು cast and capital ಆಧಾರದ ಮೇಲೆ ನಡೆಯುತ್ತಿವೆ. ಆದರೆ cause and concern ಇಟ್ಟುಕೊಂಡು ನಡೆಯುವಂತಾಗಬೇಕು. ಸಚ್ಚಾರಿತ್ರ್ಯವಂತರು ಇಂದು ಚುನಾವಣೆಯಲ್ಲಿ ಸ್ಪರ್ಧಿಸುವ ಧೈರ್ಯವನ್ನು ಕಳೆದುಕೊಂಡಿದ್ದಾರೆ. ಕ್ರಿಮಿನಲ್‌ಗಳು ಜೈಲಿನಲ್ಲಿದ್ದರೂ ಆಯ್ಕೆಯಾಗುತ್ತಾರೆ. 14ನೇ ಲೋಕಸಭೆಯಲ್ಲಿ ಸುಮಾರು 100 ಜನ ಸಂಸದರ ವಿರುದ್ಧ ಕೊಲೆ, ಸುಲಿಗೆ, ಅತ್ಯಾಚಾರ, ಬೆದರಿಕೆಯಂತ ಗುರುತರ ಆರೋಪ ಗಳಿವೆ. ಅಂದರೆ, ಇಂತಹ ಕ್ರಿಮಿನಲ್ ಹಿನ್ನಲೆಯಿರುವ ಪ್ರತಿನಿಧಿಗಳಿಂದ ಜನರು ಸೇವೆಯನ್ನು ಅಪೇಕ್ಷಿಸಲು ಸಾಧ್ಯವೇ? ಇಂತಹ ಕ್ರಿಮಿನಲ್‌ಗಳನ್ನು, ಭ್ರಷ್ಟರನ್ನು ಆಯ್ಕೆ ಮಾಡುತ್ತಿದ್ದಾರಲ್ಲ! ಆ ಜನ ಎಂತಹ ಮನೋಭಾವ [illegible]ಬಹುದು? ನಾವು ನಮ್ಮನ್ನು ಹಣಕ್ಕಾಗಿ, ಹೆಂಡಕ್ಕಾಗಿ ಮಾರಿಕೊಳ್ಳಬಾರದು. ಅಥವಾ ಜಾತಿಯ ಲೆಕ್ಕಾಚಾರ ಹಿಡಿದು ಆಯ್ಕೆ ಮಾಡಬಾರದು. ಇಂತಹದಕ್ಕೆಲ್ಲ ಆಸ್ಪದ ನೀಡದಂತೆ ಚುನಾವಣೆಗಳನ್ನು ನಡೆಸುವ ಜವಾಬ್ದಾರಿ ಚುನಾವಣಾ ಆಯೋಗ - ಮತದಾರ ವರ್ಗದ ಮೇಲೆ ಇದೆ.

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ, ಅತಿ ಹೆಚ್ಚು ಮತದಾರರನ್ನು ಹೊಂದಿರುವ ದೇಶ ನಮ್ಮದು. 1950 ರಿಂದ ಇಲ್ಲಿಯವರೆಗೆ 15 ಲೋಕಸಭೆ ಚುನಾವಣೆಗಳು ಸೇರಿದಂತೆ 300ಕ್ಕಿಂತ ಹೆಚ್ಚು ಚುನಾವಣೆಗಳು ನಡೆದಿವೆ. ಇಲ್ಲಿ ನಡೆಯುವ ಚುನಾವಣೆಗಳು ಜಾಗತಿಕ ಮಟ್ಟದಲ್ಲಿ ಅತ್ಯಂತ ಕುತೂಹಲವನ್ನು ಉಂಟು ಮಾಡಿವೆ. ಅವು ರಾಷ್ಟ್ರೀಯ ಹಬ್ಬಗಳಂತೆ ನಡೆಯುತ್ತವೆ. ವಿದ್ಯುನ್ಮಾನ ಮತಯಂತ್ರ(Electronic Voting Machine) [illegible]ಬಳಸಿದ ಮೊಟ್ಟ ಮೊದಲ ದೇಶ ನಮ್ಮದು. ಈ ಎಲ್ಲ ದೇಶಾಭಿಮಾನದಿಂದ ಪ್ರತಿಯೊಬ್ಬ ಮತದಾರನು ಸುಭದ್ರ - ನ್ಯಾಯಸಮ್ಮತ ಸರಕಾರ ರಚನೆಗೆ ಮುಂದಾಗಬೇಕು.

ನಸುಗುನ್ನಿ: ಉತ್ತರ ಕರ್ನಾಟಕದ ಕಡೆ 'ದಿನ' ಎಂದರೆ 'ತಿಥಿ' ಅಥವಾ 'ಶ್ರಾದ್ಧ' ಎಂದು ಅರ್ಥ. ಎಷ್ಟೊಂದು ವಿಚಿತ್ರ ನೋಡಿ ರಾಜಕಾರಣಿಗಳು ಮತದಾರರ ದಿನ ಮಾಡಿ ಅಧಿಕಾರವೆಂಬ ವಡೆ-ಪಾಯಸ ತಿನ್ನುತ್ತಿದ್ದಾರೆ! □

ಅಂಬೇಡ್ಕರ್‌ವಾದಿಯ ಕಣ್ಣಲ್ಲಿ ಬಾಬಾಸಾಹೇಬ್

ಡಾ. ಎಚ್. ಎಸ್. ಅನುಪಮಾ

ಮಧ್ಯಪ್ರದೇಶದ ಸಾತಗಾಂವ್ ಎಂಬ ಹಳ್ಳಿಯ ಮಹಾರ್ ಕೇರಿಯಲ್ಲಿ 1920ನೇ ಇಸವಿಯ 'ಮಳೆಗಾಲದ ಯಾವುದೋ ಒಂದು ದಿನ' ಹುಟ್ಟಿದ ನಾಮದೇವನೆಂಬ ಹುಡುಗನೊಬ್ಬ, ತನ್ನ 14ನೇ ವರ್ಷಕ್ಕೆ ಶಾಲೆ ಸೇರಿ ಓದಿ, ಪದವೀಧರನಾಗಿ, ಅಮೆರಿಕದ ವಿಸ್ಕಾನ್ಸಿನ್ ವಿಶ್ವವಿದ್ಯಾಲಯಕ್ಕೆ ಉನ್ನತ ವಿದ್ಯಾಭ್ಯಾಸಕ್ಕಾಗಿ ಹೋಗಿ, ನಂತರ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ. ನಾಮದೇವ್ ನಿಮ್ಗಾಡೆಯಾಗಿ ಬೆಳೆದ ಕತೆಯೇ, 'ಇನ್ ದ ಟೈಗರ್ಸ್ ಶಾಡೋ.'

ಉಳಿದ ದಲಿತ ಆತ್ಮಕಥೆಗಳಲ್ಲಿರುವಂತೆಯೇ ಇಲ್ಲೂ ನಿಮ್ಗಾಡೆ ತಾವು ಎದುರಿಸಿದ ಅಸ್ಪೃಶ್ಯತೆಯ ಅವಮಾನ, ಜಾತೀಯತೆಯ ಕ್ರೌರ್ಯಗಳು, ಮಾನವೀಯ ಅನುಕಂಪದ ಸಹಾಯಗಳು ಇವನ್ನೆಲ್ಲ ನೆನೆದು ದಾಖಲಿಸುತ್ತಲೇ, ಅಂಬೇಡ್ಕರ್ ಅವರ ವ್ಯಕ್ತಿತ್ವ-ವೈಯುಕ್ತಿಕ ಜೀವನದ ಬಗೆಗೊಂದು ಆಪ್ತ ಮತ್ತು ಖಾಸಾ ಆದ ಫಸ್ಟ್‌ಹ್ಯಾಂಡ್ ನೋಟವೊಂದನ್ನು ಕೊಟ್ಟಿದ್ದಾರೆ. ಕಳೆದ ಶತಮಾನದ 40-50ರ ದಶಕವು ನಮ್ಮ ದೇಶದ ಮಟ್ಟಿಗೆ ಮಹಾಸಂಕ್ರಮಣದ ಕಾಲ. ಆ ದಿನಗಳಲ್ಲಿ ಅಂಬೇಡ್ಕರರೊಡನೆ ಹತ್ತಿರದಿಂದ ಒಡನಾಡಿದ ನಾಮದೇವ ನಿಮ್ಗಾಡೆ, ತಮ್ಮ ಗುರು-ಸ್ಪೂರ್ತಿ-ಸಲಹಾಕಾರ-ಆಪದ್ಬಾಂಧವ ಎಲ್ಲವೂ ಆಗಿದ್ದ ಬಾಬಾಸಾಹೇಬ್ ಅವರನ್ನು ಹೆಜ್ಜೆಹೆಜ್ಜೆಗೂ ನೆನಪಿಸಿಕೊಂಡಿದ್ದಾರೆ. ತಮ್ಮ ಯಶಸ್ಸಿನ ರೂವಾರಿ ಅವರೇ ಎಂದು ಆ ಹುಲಿ ನಡೆದ ಜಾಡಿನಲ್ಲಿ ನಡೆಯುತ್ತಾರೆ.



ಆ ಪುಸ್ತಕದ ಬಗೆಗೆ ಹೆಚ್ಚು ಬರೆಯುವುದಕ್ಕಿಂತ ಅದರ ಇಣುಕು ನೋಟವನ್ನು ಕೊಡುವುದು ಸೂಕ್ತ. ಅದರಲ್ಲೂ ಮತ್ತೆಮತ್ತೆ ಬರುವ ಅಂಬೇಡ್ಕರ್ ಕುರಿತಾದ ಘಟನೆಗಳ ಸಾರಸಂಗ್ರಹ ಇಲ್ಲಿದೆ.

'ಅಹಿಂಸೆಯೆಂಬ ತತ್ವವನ್ನು ಗಾಂಧಿ ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಆದರೆ ಬುದ್ಧನ ಅಹಿಂಸಾ ತತ್ವ ಪರಿಪೂರ್ಣ' ಎಂಬುದು ಅಂಬೇಡ್ಕರ್ ಅಭಿಪ್ರಾಯ. ಹೀಗೆ ಹೇಳುತ್ತಾ ಬುದ್ಧನ ಅಹಿಂಸಾ ಮಾರ್ಗದ ಒಂದು ಉಪದೇಶ ಉದಾಹರಿಸುತ್ತಾರೆ:

ಒಮ್ಮೆ ಸೇನಾ ದಂಡನಾಯಕನೊಬ್ಬ ಬುದ್ಧನ ಬಳಿ ಬಂದು ಕೇಳುತ್ತಾನೆ, 'ದೇವ, ನಾನೊಂದು ಪ್ರಬಲ ಸೇನೆಯ ನಾಯಕ. ನಮ್ಮ ನೆಲ ರಕ್ಷಿಸುತ್ತೇವೆಂದು ಪಣ ತೊಟ್ಟಿದ್ದೇವೆ. ಆದರೆ ನಾನೀಗ ಅಹಿಂಸೆಯ ವ್ರತದಲ್ಲಿ ನಂಬಿಕೆಯಿಟ್ಟು ತುಂಬ ಗೊಂದಲಗೊಂಡಿದ್ದೇನೆ. ನೆರೆ ರಾಜ್ಯದವರು ನಮ್ಮ ಮೇಲೆ ದಾಳಿ ಮಾಡಿದ್ದೇ ಆದರೆ ನಾನೇನು ಮಾಡಬೇಕು?' ಬುದ್ಧ ಉತ್ತರಿಸುತ್ತಾನೆ, 'ತಪ್ಪಿತಸ್ಥನನ್ನು ಶಿಕ್ಷಿಸುವುದು ಅಪರಾಧವಲ್ಲ. ನೀನು ನ್ಯಾಯವನ್ನು ಪಾಲಿಸುತ್ತಿದ್ದೀ ಅಷ್ಟೇ. ಮೊದಲು ಶಾಂತಿಯುತ ವಿಧಾನಗಳನ್ನು ಪರೀಕ್ಷಿಸು. ಅದು ಸಫಲವಾಗದಿದ್ದರೆ ನ್ಯಾಯದ ನಿಯಮಾವಳಿಯಂತೆ ನಡೆದುಕೋ. ಪ್ರಪಂಚದಲ್ಲಿ ಒಳ್ಳೆಯದು ತುಂಬ ಕಮ್ಮಿಯಿದೆ ಮತ್ತು ಕೆಟ್ಟದ್ದು ಹೇರಳವಾಗಿದೆ. ಒಳಿತಿನ ರಕ್ಷಣೆಗಾಗಿ ನಿನ್ನ ಬಳಿ ಸಾಧ್ಯವಿರುವ ಎಲ್ಲ ಉಪಾಯವನ್ನೂ ಬಳಸಿಕೊಳ್ಳಬೇಕು.'

ಇಂಥ ಅಹಿಂಸಾ ತತ್ವ ನಂಬಿದ್ದರಿಂದಲೇ ಅಂಬೇಡ್ಕರ್ ಅನ್ಯಾಯ ಸಹಿಸುತ್ತಿರಲಿಲ್ಲ. ಕೆಳಜಾತಿ ಹೆಣ್ಣುಮಕ್ಕಳ ಮೇಲೆ ಮೇಲ್ಜಾತಿಯವರಿಂದ ಅತ್ಯಾಚಾರವಾಗುತ್ತಿದೆ ಎಂಬ ವಿಷಯ ಕಿವಿಗೆ ಬಿದ್ದರೆ ಕೆಂಡಾಮಂಡಲವಾಗುತ್ತಿದ್ದರು. 'ನಾನೇನಾದರೂ ತರುಣನಾಗಿದ್ದರೆ ಅವರನ್ನೆಲ್ಲ ಬಂದೂಕಿನಿಂದ ಸುಟ್ಟು ಬರುತ್ತಿದ್ದೆ' ಎನ್ನುತ್ತಿದ್ದರು. ಒಮ್ಮೆ ಕೆಲವರು ತಮ್ಮ ಮೇಲಾದ ದೌರ್ಜನ್ಯದ ಬಗ್ಗೆ ಹೇಳಿಕೊಳ್ಳಲು ತುಂಬ ದೂರದಿಂದ ಅಂಬೇಡ್ಕರ್ ಬಳಿ ಬಂದರು. ಅವರು ಹೇಳಿದ್ದನ್ನೆಲ್ಲ ಕೇಳಿದ ಅಂಬೇಡ್ಕರ್, 'ನಿಮ್ಮ ಮೇಲೆ ಹಲ್ಲೆಯಾದರೆ ಹೇಡಿಗಳಂತೆ ನನ್ನ ಬಳಿ ಏಕೆ ಓಡಿಬಂದಿರಿ? ಡರೋಗೆ ತೋ ಮರೋಗೆ. ಅನ್ಯಾಯದ ವಿರುದ್ಧ ಅಲ್ಲೇ ಏಕೆ ಪ್ರತಿಭಟಿಸಲಿಲ್ಲ. ನೆನಪಿಡಿ, ಯಾವಾಗಲೂ ಕುರಿ ಮೇಕೆಗಳನ್ನು ಬಲಿ ಕೊಡಲಾಗುವುದೇ ಹೊರತು ಹುಲಿ ಸಿಂಹಗಳನ್ನಲ್ಲ. ನೀವು ಸಿಂಹಗಳಾಗಬೇಕು.'

ಅಂಬೇಡ್ಕರ್ ಭೇಟಿಗೆ ಒಬ್ಬರು ಬಂದಾಗ ನಡೆದ ಸಂಭಾಷಣೆ:

'ನಿಮ್ಮ ಹೆಸರೇನು?'

'ಮಿ. ಸಿಂಗ್'

'ಓಹ್, ಸಿಂಗ್ ಎಂದರೆ ಸಿಂಹ ಅಲ್ಲವೇ? ನನಗಂತೂ ಸಿಂಹವೆಂದರೆ ತುಂಬ ಹೆದರಿಕೆ. ಇರಲಿ, ಸಿಂಹ ನನ್ನನ್ನು ಹುಡುಕಿಕೊಂಡು ಬಂದ ಕಾರಣವೇನು?'

'ನಾನು ನಿಮ್ಮ ದರ್ಶನಕ್ಕೆ ಬಂದೆ.'

'ನಾನು ದರ್ಶನ ಕೊಡುವವನಲ್ಲ ಮಿ. ಸಿಂಗ್. ನಾನು ಸಾಮಾನ್ಯ ಮನುಷ್ಯ. ನನ್ನ ತಾಯ್ತಂದೆಯರೂ ಸಾಮಾನ್ಯ ಮನುಷ್ಯರೇ. ಹಾಗೆ ನೀವು ದರ್ಶನ ಮಾಡಬಯಸಿದರೆ ಆಶೀರ್ವದಿಸಲು ಕೈ ಮೇಲೆತ್ತಿ ಕುಳಿತ ಹಾಗೂ ನಮಸ್ಕಾರ ಸ್ವೀಕರಿಸಲು ಕಾಲು ಮುಂಚಾಚಿ ಕುಳಿತ ಬಹಳಷ್ಟು ರಾಜಕಾರಣಿಗಳಿದ್ದಾರೆ, ಅವರ ಬಳಿ ಹೋಗಿ. ದರ್ಶನಕ್ಕೆ ನನ್ನ ಬಳಿ ಬರಬೇಡಿ. ನನ್ನಿಂದ ನಿಮಗೇನಾಗಬೇಕು? ನನಗೇನಾದರೂ ಕೆಲಸವಿದೆಯೆ ಹೇಳಿ.'

ಸಂಸ್ಕೃತದಲ್ಲಿ ಆಳ ಪಾಂಡಿತ್ಯ ಹೊಂದಿದ್ದ, ಸಂಭಾಷಿ

ಅಂಬೇಡ್ಕರ್ ಅನ್ಯಾಯ ಸಹಿಸುತ್ತಿರಲಿಲ್ಲ. ಕೆಳಜಾತಿ ಹೆಣ್ಣು ಮಕ್ಕಳ ಮೇಲೆ ಮೇಲ್ಜಾತಿಯವರಿಂದ ಅತ್ಯಾಚಾರವಾಗುತ್ತಿದೆ ಎಂಬ ವಿಷಯ ಕಿವಿಗೆ ಬಿದ್ದರೆ ಕೆಂಡಾಮಂಡಲವಾಗುತ್ತಿದ್ದರು. 'ನಾನೇನಾದರೂ ತರುಣನಾಗಿದ್ದರೆ ಅವರನ್ನೆಲ್ಲ ಬಂದೂಕಿನಿಂದ ಸುಟ್ಟು ಬರುತ್ತಿದ್ದೆ' ಎನ್ನುತ್ತಿದ್ದರು. ಒಮ್ಮೆ ಕೆಲವರು ತಮ್ಮ ಮೇಲಾದ ದೌರ್ಜನ್ಯದ ಬಗ್ಗೆ ಹೇಳಿಕೊಳ್ಳಲು ಅಂಬೇಡ್ಕರ್ ಬಳಿ ಬಂದರು. ಅವರು ಹೇಳಿದ್ದನ್ನೆಲ್ಲ ಕೇಳಿದ ಅಂಬೇಡ್ಕರ್, 'ನಿಮ್ಮ ಮೇಲೆ ಹಲ್ಲೆಯಾದರೆ ಹೇಡಿಗಳಂತೆ ನನ್ನ ಬಳಿ ಏಕೆ ಓಡಿ ಬಂದಿರಿ? ಡರೋಗೆ ತೋ ಮರೋಗೆ. ಅನ್ಯಾಯದ ವಿರುದ್ಧ ಅಲ್ಲೇ ಏಕೆ ಪ್ರತಿಭಟಿಸಲಿಲ್ಲ. ನೆನಪಿಡಿ, ಯಾವಾಗಲೂ ಕುರಿ ಮೇಕೆಗಳನ್ನು ಬಲಿ ಕೊಡಲಾಗುವುದೇ ಹೊರತು ಹುಲಿ ಸಿಂಹಗಳನ್ನಲ್ಲ. ನೀವು ಸಿಂಹಗಳಾಗಬೇಕು.'

ಸಬಲ್ಲವರಾಗಿದ್ದ ಅಂಬೇಡ್ಕರ್ ಸಂಸ್ಕೃತ ರಾಷ್ಟ್ರಭಾಷೆಯಾಗಲಿ ಎಂದು ಸಂಸತ್ತಿನಲ್ಲಿ ಅನುಮೋದಿಸಿದ್ದರು. 'ಸಂಸ್ಕೃತ ಬಹುತೇಕ ಭಾರತೀಯ ಭಾಷೆಗಳ ತಾಯಿ. ಅದನ್ನು ಬ್ರಾಹ್ಮಣರು ತಾವೂ ಸರಿಯಾಗಿ ಬಳಸಿಕೊಳ್ಳಲಿಲ್ಲ. ಉಳಿದವರು ಬಳಸಲೂ ಅವಕಾಶ ಕೊಡಲಿಲ್ಲ. ಅದು ಸಾಹಿತ್ಯದ ಗಣಿ. ಸಂಸ್ಕೃತ ನಮ್ಮ ರಾಷ್ಟ್ರೀಯ ಭಾಷೆಯಾಗಲಿ.'

ಸಂಸತ್ತಿನಲ್ಲೊಮ್ಮೆ ಶೆಡ್ಯೂಲ್ ಕ್ಯಾಸ್ಟ್ ಕಮಿಷನ್ ರಿಪೋರ್ಟ್ ಸರಿಯಿಲ್ಲ ಎಂದ ಅಂಬೇಡ್ಕರರಿಗೆ, ನೆಹರೂ ಸಂಬಂಧಿಯಾಗಿದ್ದ ಗೃಹಮಂತ್ರಿ ಕೆ.ಎನ್. ಕುಟ್ಜು ಅವರು, 'ಡಾ. ಅಂಬೇಡ್ಕರ್ ಅದನ್ನು ಸರಿಯಾಗಿ ಓದಿರಲಿಕ್ಕಿಲ್ಲ. ಬರಿಯ ಕವರ್ ಪೇಜ್ ಮಾತ್ರ ನೋಡಿರಬೇಕು' ಎನ್ನುತ್ತಾರೆ. ಅದಕ್ಕೆ ಅಂಬೇಡ್ಕರ್, 'ಇದು ಕಮಿಷನ್ ರಿಪೋರ್ಟಿನಂತಿಲ್ಲ, ಯಾರೋ ನೌಕರ ಬರೆದ ರಿಪೋರ್ಟಿನಂತಿದೆ. ಕುಟ್ಜು ಅವರೇ, ನಾನು ಈ ರಿಪೋರ್ಟಿನ ಕವರ್ ಪೇಜನ್ನಷ್ಟೇ ಓದಿರಬೇಕು ಎಂದಿರಿ, ನಾನು ಕವರ್ ಟು ಕವರ್ ಓದಿರುವೆ. ನನ್ನ ಓದುವ ಹವ್ಯಾಸ ನಿಮಗೆ ತಿಳಿದಂತಿಲ್ಲ. ನಿಮ್ಮ ತಾತ ಮುತ್ತಾತಂದಿರು, ಮಕ್ಕಳು ಮೊಮ್ಮಕ್ಕಳು ಓದುವುದನ್ನೆಲ್ಲ ಸೇರಿಸಿದರೂ ನಾನು ಓದಿದಷ್ಟು ಆಗುವುದಿಲ್ಲ, ತಿಳಿದಿರಲಿ' ಎಂದುತ್ತರಿಸುತ್ತಾರೆ.

'ಮಿ. ಸಿಂಗ್, ನೀವು ನಮ್ಮ ರಿಪಬ್ಲಿಕನ್ ಪಾರ್ಟಿ ಸೇರುತ್ತಿರುವುದೇನೋ ತುಂಬ ಸಂತೋಷದ ವಿಷಯ. ಆದರೆ ಯಾವಾಗ ನಮಗೆ ಕೈಕೊಟ್ಟು ಹೋಗುತ್ತೀರಿ ಎಂದೂ ಮೊದಲೇ ತಿಳಿಸಿಬಿಟ್ಟರೆ ಒಳ್ಳೆಯದು.' ಇದು ಪಂಜಾಬಿನ ಒಬ್ಬರು ಅಂಬೇಡ್ಕರರ ರಿಪಬ್ಲಿಕನ್ ಪಕ್ಷ ಸೇರುತ್ತೇನೆಂದು ಕರೆ ಮಾಡಿ ತಿಳಿಸಿದಾಗ ಅವರು ಪ್ರತಿಕ್ರಿಯಿಸಿದ ರೀತಿ.

ಅಂಬೇಡ್ಕರರನ್ನು ಅಮೆರಿಕದ ಪತ್ರಕರ್ತನೊಬ್ಬ ಭೇಟಿಯಾಗಲು ಬಯಸುತ್ತಾನೆ. ಎಷ್ಟೊತ್ತಿಗೆ ಬರಲಿ ಎಂದು ಕೇಳಿದರೆ, 'ಎಷ್ಟೊತ್ತಿಗೆ ಬೇಕಾದರೂ ಬನ್ನಿ' ಎನ್ನುತ್ತಾರೆ. ಆತ ನಡುರಾತ್ರಿಯ ವೇಳೆ ಬಂದರೂ ಅವರ ಬಂಗಲೆಯ ದೀಪ ಉರಿಯುತ್ತಿರುತ್ತದೆ. 'ಈ ವೇಳೆಗೆ ಉಳಿದ ನಾಯಕರೆಲ್ಲ ಮಲಗಿರಬಹುದು ಡಾ. ಅಂಬೇಡ್ಕರ್, ನೀವು ಮಾತ್ರ ಇನ್ನೂ ಎಚ್ಚರವಾಗೇ ಇದ್ದೀರಲ್ಲ?' ಎಂಬ ಅವನ ಪ್ರಶ್ನೆಗೆ, 'ಆ ನಾಯಕರ ಅನುಯಾಯಿಗಳು ಎಚ್ಚೆತ್ತಿದ್ದಾರೆ. ಹಾಗಾಗಿ ಅವರು ಸುಖನಿದ್ರೆ ಮಾಡಬಹುದು. ಆದರೆ ನನ್ನ ಜನ ಇನ್ನೂ ನಿದ್ರಿಸುತ್ತಿದ್ದಾರೆ, ಆದ್ದರಿಂದ ನಾನು ಯಾವಾಗಲೂ ಎಚ್ಚರವಾಗಿರಬೇಕಾಗಿದೆ' ಎಂದು ಉತ್ತರಿಸುತ್ತಾರೆ.

ಅವರ ಮನೆ 'ರಾಜಗೃಹ' ಹೊರಗಿನಿಂದ ನೋಡಲು ಎಲ್ಲ ಉನ್ನತ ದರ್ಜೆಯ ಮಂತ್ರಿಗಳ ಬಂಗಲೆಯಂತೆ ಇದ್ದರೂ, ಒಳಗೆ ಹಲವು ವ್ಯತ್ಯಾಸಗಳು ಎದ್ದು ಕಾಣುತ್ತಿದ್ದವು. 'ರಾಜಗೃಹ' ಯಾವಾಗಲೂ ಸಹಾಯ ಕೇಳಿ ಬಂದ ದೀನದಲಿತರಿಂದ ತುಂಬಿರುತ್ತಿತ್ತು. ಇನ್ನೊಂದು ಎದ್ದುಕಾಣುವ ವ್ಯತ್ಯಾಸ ಪುಸ್ತಕಗಳು. ತನ್ನ ಬಂಗಲೆಯ ಹೆಚ್ಚೂಕಮ್ಮಿ ಎಲ್ಲಾ ಕೋಣೆಗಳ ಕಪಾಟುಗಳನ್ನೂ ಪುಸ್ತಕಗಳಿಂದ ತುಂಬಿಸಿದ್ದರು. ಕಪಾಟುಗಳ ಗಾಜಿನ ಬಾಗಿಲ ಮೇಲೆ ಸಂಖ್ಯೆಯ ಗುರುತುಗಳಿದ್ದವು. 33000 ಅಪರೂಪದ, ಅಮೂಲ್ಯ ಪುಸ್ತಕಗಳ ಒಡೆಯರಾಗಿದ್ದ ಅವರ ಬಹುಪಾಲು ಪುಸ್ತಕಗಳು ಮುಂಬಯಿಯಲ್ಲಿದ್ದರೆ, ಉಳಿದವು ದೆಹಲಿಯಲ್ಲಿದ್ದವು. ರಾಜಕಾರಣದಿಂದ ಕೋಳಿಸಾಕಣೆಯತನಕ, ಕಟ್ಟಡ ವಿನ್ಯಾಸದಿಂದ ಕೃಷಿ ಆರ್ಥಿಕತೆಯ ತನಕ, ಸಾಪೇಕ್ಷ ಸಿದ್ಧಾಂತದಿಂದ ಬೌದ್ಧ ಧರ್ಮದ ತನಕ, ಪರಮಾಣು ಶಕ್ತಿಯಿಂದ ಕಲ್ಲಿದ್ದಲು ಗಣಿಮಾಹಿತಿಯ ತನಕ – ಹೀಗೇ ಅವರ ಬಳಿಯ ಸಂಗ್ರಹದಲ್ಲಿ ಎಲ್ಲ ಪುಸ್ತಕಗಳಿಗೂ ಸ್ಥಾನವಿತ್ತು. ಅಲ್ಲದೇ ಅವನ್ನೆಲ್ಲ ಓದಿ, ನೆನಪಿನಲ್ಲಿಟ್ಟುಕೊಂಡು, ಬೇಕಾದಾಗ ಉಲ್ಲೇಖಿಸಿ, ಯಾವ ವಿಷಯದ ಬಗೆಗಾದರೂ ನಿರರ್ಗಳವಾಗಿ ಮಾತಾಡಬಲ್ಲ ಜ್ಞಾನ ಹೊಂದಿದ್ದರು. 'ಇಷ್ಟು ಬಿಡುವಿಲ್ಲದ ಓದಿನಿಂದ ಹೇಗೆ ರಿಲ್ಯಾಕ್ಸ್ ಮಾಡುವಿರಿ?' ಎಂದು ಕೇಳಿದರೆ, 'ಒಂದು ವಿಷಯದಿಂದ ಸಂಪೂರ್ಣ ಭಿನ್ನವಾದ ಇನ್ನೊಂದು ವಿಷಯದ ಬಗೆಗೆ ಓದು ಶುರುಮಾಡುವುದು ನಿಜವಾಗಿ ರಿಲ್ಯಾಕ್ಸ್ ಮಾಡಿದಂತೆ' ಎನ್ನುತ್ತಿದ್ದರು.

ಅಂಬೇಡ್ಕರರ ತಂದೆ ತುಂಬ ಧಾರ್ಮಿಕ ಮನುಷ್ಯ. ಅವರಿಂದ ಅಂಬೇಡ್ಕರ್ ಹಿಂದೂ ಪುರಾಣದ ಕತೆಗಳು, ಭಜನೆಗಳು, ನೀತಿಗಳನ್ನೆಲ್ಲ ಪೂರಾ ತಿಳಿದಿದ್ದರು. ಅಂಬೇಡ್ಕರರಿಗೆ ಮ್ಯಾಟ್ರಿಕ್ಯುಲೇಷನ್ ಪಾಸಾದ ದಲಿತ ಹುಡುಗ ಎಂದು ಸನ್ಮಾನ ಮಾಡುವವೆಂದು ಹೇಳಿದಾಗ ಅದೆಲ್ಲ ಬೇಡವೆಂದೇ ಅವರ ತಂದೆ ಹೇಳಿದ್ದರಂತೆ. ಕೊನೆಗೂ ಸನ್ಮಾನ ಸಮಾರಂಭ ಏರ್ಪಾಡಾಗುತ್ತದೆ. ಆಗ ಗುರುಗಳಾಗಿದ್ದ ಕೇಳುಸ್ಕರ್ ಅಂಬೇಡ್ಕರ್ ಅವರಿಗೆ ಗೌತಮ ಬುದ್ಧನ ಬಗೆಗಿನ ಪುಸ್ತಕ ನೀಡುತ್ತಾರೆ. ಅಲ್ಲಿಂದ ಅಂಬೇಡ್ಕರ್ ಅವರ ಬೌದ್ಧ ಧರ್ಮದೊಂದಿಗಿನ ಒಡನಾಟ ಶುರುವಾಗಿ ನಂತರ ಅದರಲ್ಲಿ ಆಸಕ್ತಿ ಬೆಳೆಯುತ್ತಲೇ ಹೋಯಿತು.

ಅವರ ಪ್ರಕಾರ. 'ಬುದ್ಧ ಒಬ್ಬ ವಿಜ್ಞಾನಿ. ತನ್ನ ಬಳಿ ಸಾಕ್ಷಿ ಪುರಾವೆ ಇಲ್ಲದ ವಿಷಯದ ಬಗೆಗೆ ಅವನು ಮಾತನಾಡಲಿಲ್ಲ. ಹಾಗಾಗಿಯೇ ಬುದ್ಧ 'ಇಷ್ಟು ದಿನಗಳಲ್ಲಿ ಈ ಪ್ರಪಂಚ ಸೃಷ್ಟಿಯಾಯಿತು' ಎಂಬಂತಹ ಸುಳ್ಳನ್ನು ಹೇಳಲಿಲ್ಲ. ಈ ಜಗತ್ತನ್ನು ಯಾರು ಸೃಷ್ಟಿಸಿದರು ಎಂಬ ಬಗ್ಗೆ ನಾನೇನೂ ಹೇಳಲಾರೆ ಎಂದೇ ಹೇಳಿದ. ಆತ್ಮ ಅಥವಾ ದೇವರು ಇದ್ದಾನೆಯೇ ಎಂಬುದೂ ಅವನಿಗೆ ಮುಖ್ಯ ಪ್ರಶ್ನೆಯಾಗಿರಲಿಲ್ಲ. ಅವೈಜ್ಞಾನಿಕವಾದದ್ದನ್ನು ಆತ ನಂಬಲಿಲ್ಲ.' ಈ ನಂಬಿಕೆ ಅಂಬೇಡ್ಕರ್ ಅವರಿಗೂ ಇತ್ತು. ಒಮ್ಮೆ ಸಂಸತ್ತಿನಲ್ಲಿ ಯಾರೋ 'ದೇವರು ನಿಮ್ಮ ಆತ್ಮವನ್ನು ಕಾಪಾಡಲಿ' ಎಂದರಂತೆ. ಅದಕ್ಕೆ ಅಂಬೇಡ್ಕರ್ 'ನಿಮಗೆ ಸ್ವಲ್ಪ ಕಷ್ಟವಿದೆ. ನನಗೆ ದೇವರು ಮತ್ತು ಆತ್ಮ ಎರಡರಲ್ಲೂ ನಂಬಿಕೆಯಿಲ್ಲವಲ್ಲ' ಎಂದರಂತೆ.

ಅಂಬೇಡ್ಕರರ ತಂದೆ ತುಂಬ ಧಾರ್ಮಿಕ ಮನುಷ್ಯ. ಅವರಿಂದ ಅಂಬೇಡ್ಕರ್ ಹಿಂದೂ ಪುರಾಣದ ಕತೆಗಳು, ಭಜನೆಗಳು, ನೀತಿಗಳನ್ನೆಲ್ಲ ಪೂರಾ ತಿಳಿದಿದ್ದರು. ಅಂಬೇಡ್ಕರರಿಗೆ ಮ್ಯಾಟ್ರಿಕ್ಯುಲೇಷನ್ ಪಾಸಾದ ದಲಿತ ಹುಡುಗ ಎಂದು ಸನ್ಮಾನ ಮಾಡುವವೆಂದು ಹೇಳಿದಾಗ ಅದೆಲ್ಲ ಬೇಡವೆಂದೇ ಅವರ ತಂದೆ ಹೇಳಿದ್ದರಂತೆ. ಕೊನೆಗೂ ಸನ್ಮಾನ ಸಮಾರಂಭ ಏರ್ಪಾಡಾಗುತ್ತದೆ. ಆಗ ಗುರುಗಳಾಗಿದ್ದ ಕೇಳುಸ್ಕರ್ ಅಂಬೇಡ್ಕರ್ ಅವರಿಗೆ ಗೌತಮ ಬುದ್ಧನ ಬಗೆಗಿನ ಪುಸ್ತಕ ನೀಡುತ್ತಾರೆ. ಅಲ್ಲಿಂದ ಅಂಬೇಡ್ಕರ್ ಅವರ ಬೌದ್ಧ ಧರ್ಮದೊಂದಿಗಿನ ಒಡನಾಟ ಶುರುವಾಗಿ ನಂತರ ಅದರಲ್ಲಿ ಆಸಕ್ತಿ ಬೆಳೆಯುತ್ತಲೇ ಹೋಯಿತು. ಅವರ ಪ್ರಕಾರ. 'ಬುದ್ಧ ಒಬ್ಬ ವಿಜ್ಞಾನಿ. ತನ್ನ ಬಳಿ ಸಾಕ್ಷಿ ಪುರಾವೆ ಇಲ್ಲದ ವಿಷಯದ ಬಗೆಗೆ ಅವನು ಮಾತನಾಡಲಿಲ್ಲ.

ಉನ್ನತ ವಿದ್ಯಾಭ್ಯಾಸಕ್ಕಾಗಿ ಅಮೆರಿಕಕ್ಕೆ ಹೊರಟು, ರಾಕಿಫೆಲ್ಲರ್ ಫೌಂಡೇಷನ್ನಿನ ಸ್ಕಾಲರ್‌ಶಿಪ್ ದೊರಕಿಸಿಕೊಂಡ ನಿಮ್ಗಾಡೆ ಒಂದು ಕ್ಯಾರೆಕ್ಟರ್ ಸರ್ಟಿಫಿಕೇಟ್ ಬೇಕೆಂದು ಅಂಬೇಡ್ಕರ್ ಬಳಿ ಕೇಳುತ್ತಾರೆ. ಆಗವರು 'ಅರೆ, ಮನುಷ್ಯನ ಕ್ಯಾರೆಕ್ಟರ್ ಆರು ತಿಂಗಳಿಗೊಮ್ಮೆ ಬದಲಾಗುತ್ತಿರುತ್ತದಂತಲ್ಲ?! ನಿನಗೆ ಕ್ಯಾರೆಕ್ಟರ್ ಸರ್ಟಿಫಿಕೇಟ್ ಹೇಗೆ ಕೊಡಲಿ? ನಾನದನ್ನು ಇನ್ನೂವರೆಗೂ ಯಾರಿಗೂ ಕೊಟ್ಟಿಲ್ಲ.' ಎಂದು ಗೇಲಿ ಮಾಡುತ್ತಾರೆ. ಕೊನೆಗೆ ಅಲ್ಲೇ ಸರಿದು ಹೋಗುತ್ತಿದ್ದ ಸವಿತಾ ಅಂಬೇಡ್ಕರ್, 'ನಿಮ್ಗಾಡೆ ಒಳ್ಳೆಯ ವಿದ್ಯಾರ್ಥಿಯಲ್ಲವೇ? ಅವರಿಗೆ ನೀವು ಕ್ಯಾರೆಕ್ಟರ್ ಸರ್ಟಿಫಿಕೇಟ್ ಕೊಡಬಹುದು' ಎಂದು ತಮಾಷೆಯಾಗಿ ಹೇಳುತ್ತಾರೆ. ಅಂತೂ ಇವರಿಗದು ಸಿಗುತ್ತದೆ. 'ಮಹಾರಾಷ್ಟ್ರದ ಗೌರವಾನ್ವಿತ ಮಹಾರ್ ಸಮುದಾಯದ ಸನ್ನಡತೆಯ ವ್ಯಕ್ತಿ ಇವರು' ಎಂದು ಅವರ ಸಹಿಹೊತ್ತ ಸರ್ಟಿಫಿಕೇಟ್ ಪುಸ್ತಕದಲ್ಲಿ ಅಚ್ಚಾಗಿದ್ದು ನೋಡಬಹುದು.

'ವಿಧಾನಸಭೆ ಸದಸ್ಯನಾಗುವುದು ತುಂಬ ಸಾಧಾರಣ ಸಂಗತಿ ನಿಮ್ಗಾಡೆ. ನೀನು ಇನ್ನೂ ಓದಬೇಕು, ನಮ್ಮ ಸಮುದಾಯಕ್ಕೆ ಮಾದರಿ ವಿಜ್ಞಾನಿಯಾಗಬೇಕು. ಸಾಮಾಜಿಕವಾಗಿ, ಆರ್ಥಿಕವಾಗಿ ದುರ್ಬಲರಾದ ನಾವು ಎಲ್ಲ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸಬೇಕು. ರಾಜಕಾರಣ ಮತ್ತು ಅಧಿಕಾರದ ಆಮಿಷಕ್ಕೆ ಬಲಿಯಾಗಬೇಡ. ಏನೋ ಸ್ವಲ್ಪ ಓದಿ, ಒಂದು ಸಣ್ಣ ಸಂಬಳದ ಉದ್ಯೋಗ ಪಡೆಯುವುದಕ್ಕೆ ತೃಪ್ತನಾಗದೇ, ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡು ಓದು. ಪದವಿ, ಸ್ನಾತಕೋತ್ತರ ಪದವಿ, ಪಿಎಚ್‌ಡಿ ಎಲ್ಲ ಮಾಡಬೇಕು ನೀನು. ಪದವಿಗಳು ನಮ್ಮ ಮೆಟ್ಟಿಲುಗಳು. ಆದರೆ ಸ್ವಲ್ಪ ಓದಿದ ಕೂಡಲೇ ಬಹಳ ಜನರು ಓದು, ತಮ್ಮ ಸಮಾಜ ಎಲ್ಲವನ್ನು ಮರೆತುಬಿಡುತ್ತಾರೆ. ನಾನೂ ಕೂಡಾ ಅವಿದ್ಯಾವಂತ, ಸಾಮಾನ್ಯ ಮನುಷ್ಯನಿಗಾಗಿ ಏನೂ ಮಾಡಲಿಲ್ಲವಲ್ಲ ಎಂದು ಈಗ ಅನಿಸುತ್ತಿದೆ. ನಾನು ಮತ್ತಷ್ಟು ಸಮಯವನ್ನು ಅಸ್ಪರಸ್ಥ ಅಸ್ಪೃಶ್ಯರಿಗಾಗಿ ಮೀಸಲಿಡಬೇಕಿತ್ತು.'

ಇದು ನಿಮ್ಗಾಡೆಯವರಿಗೆ ಅನಾಯಾಸವಾಗಿ ಮಹಾರಾಷ್ಟ್ರ ವಿಧಾನಸಭಾ ಸ್ಥಾನಕ್ಕೆ ಟಿಕೆಟ್ ದೊರಕುವ ಅವಕಾಶ ಬಂದು, ಅವರು ಬಾಬಾ ಬಳಿ ಸಲಹೆ ಕೇಳಿದಾಗ ಹೇಳಿದ ಮಾತು. ಇನ್ನೊಮ್ಮೆ ಅಂಬೇಡ್ಕರರು 1952ರ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾಗ ನಿಮ್ಗಾಡೆ ಅವರ ಪರವಾಗಿ ಚುನಾವಣಾ ಪ್ರಚಾರಕ್ಕೆ ಮುಂಬಯಿಗೆ ಹೋಗುವ ಇಚ್ಛೆ ವ್ಯಕ್ತಪಡಿಸುತ್ತಾರೆ. ಆಗ ಅದಕ್ಕೆ ಸುತರಾಂ ಒಪ್ಪದ ಅಂಬೇಡ್ಕರ್, 'ವಿದ್ಯಾರ್ಥಿಗಳ ಓದು – ಸಮಯ ಬಲಿಕೊಟ್ಟು ಚುನಾವಣೆ ಗೆಲ್ಲುವ ಆಸೆ ನನಗಿಲ್ಲ. ಉತ್ತಮ ವಿದ್ಯಾರ್ಥಿಗಳು ಇಂಥವಕ್ಕೆಲ್ಲ ಸಮಯ

ಹಾಳು ಮಾಡಬಾರದು' ಎನ್ನುತ್ತಾರೆ. 'ಹುಶಾರಾಗಿರು ಮತ್ತು ಕಠಿಣ ಶ್ರಮ ಪಡು. ನಿನ್ನ ಸ್ವಂತ ಸಂಶೋಧನಾ ಕೆಲಸಕ್ಕೆ ಸಾಕಷ್ಟು ಸಮಯ ಕಲ್ಪಿಸಿಕೋ. ಉಳಿದ ದಿನ ಸಮಯ ಸಿಗದಿದ್ದರೆ, ರಜಾದಿನಗಳಲ್ಲಾದರೂ ಕೆಲಸ ಮಾಡು. ಇನ್ನೂ ಹೆಚ್ಚಿನ ಪದವಿ ಗಳಿಸಬೇಕು. ನಿಧಾನವಾದರೂ ಪರವಾಗಿಲ್ಲ. ಆಳ ನೀರಿನಲ್ಲಿ ಮುಳುಗಿದ ಈಜುಗಾರನ ಹಾಗೆ ನಿಧಾನವಾಗಿಯಾದರೂ ಆಚೆ ತೀರದಲ್ಲಿ ಮೇಲೇಳಬೇಕು.' ಇದು ಶಿಕ್ಷಣವೆಂಬ ಶಕ್ತಿಯ ಬಗೆಗೆ ಅವರಿಗಿದ್ದ ಅಚಲ ವಿಶ್ವಾಸ.

'ನನಗೆಷ್ಟೇ ವೈಜ್ಞಾನಿಕ ದೃಷ್ಟಿಯಿದ್ದರೂ ಎರಡು ಕುರುಡು ನಂಬಿಕೆಗಳು ನನಗೂ ಇವೆ. ಮೊದಲನೆಯದು– ನನ್ನ ತಾಯ್ತಂದೆಯರ 2 ಚೇತನ ನನ್ನ ಮೇಲೆ ಸದಾ ಸುಳಿದಾಡುತ್ತಾ ಇರುತ್ತದೆ ಹಾಗೂ ಅದು ನನ್ನನ್ನು ಅಪಾಯದಿಂದ ಪಾರುಮಾಡುತ್ತದೆನ್ನುವುದು. ಎರಡನೆಯದು ಬುದ್ಧದೇವ ನನ್ನನ್ನು ರಕ್ಷಿಸುವನೆನ್ನುವುದು. ನನ್ನ ನಂಬಿಕೆ ಬುದ್ಧನನ್ನು ದೇವರೆಂದು ನಂಬುವಂತೆ ಮಾಡಿದೆ. ನಂಬಿಕೆಯೇ ಇಲ್ಲದೇ ಮಾನವ ಸರಿಯಾದ ದಾರಿ ಹೇಗೆ ಕಂಡುಕೊಳ್ಳಬಲ್ಲ? ದಾರಿ ತಿಳಿಯದವನ ಗತಿ ಕತ್ತಲಲ್ಲಿ ತಡವರಿಸುತ್ತ ನಡೆಯುತ್ತಿರುವಂತೆ.'

ತಮ್ಮ ಮೊದಲ ಮಗುವಿಗೆ ಭೀಮರಾವ್ ಎಂದು ಹೆಸರಿಡುವ ನಿಮ್ಗಾಡೆ ಮಗುವನ್ನು ಅಂಬೇಡ್ಕರ್ ಬಳಿಗೊಯ್ಯುತ್ತಾರೆ. ಅಂಬೇಡ್ಕರ್ 'ಹೆಸರಿನಲ್ಲೇನಿದೆ? ಇಲ್ಲಿ ಪಾತ್ರೆ ತಿಕ್ಕಲು ಲಕ್ಷ್ಮಿ ಬರುತ್ತಾಳೆ. ಸುಭಾಶ್ಚಂದ್ರ ಹೇರ್ ಕಟಿಂಗ್ ಸಲೂನ್ ಇದೆ. ಶಿವಾಜಿ ಬ್ರಾಂಡ್ ಬೀಡಿಯಿದೆ.'

'ನಾವು ಭಾರತೀಯರು ಮಕ್ಕಳು ಹುಟ್ಟಿದ ಮೇಲೆ ಅವರಿಗೆ ಬಟ್ಟೆ ಹೊಲಿಯುತ್ತೇವೆ. ವಿದೇಶದಲ್ಲಿ ಹಾಗಲ್ಲ, ಮಗು ಬರುವ ಮೊದಲೇ ಎಲ್ಲ ತಯಾರಿ ಮಾಡಿಕೊಂಡಿರುತ್ತಾರೆ. ನನ್ನ ಸ್ವಂತ ಅನುಭವವನ್ನೇ ಹೇಳಬೇಕೆಂದರೆ ವಿದೇಶದಿಂದ ಓದು ಮುಗಿಸಿ ವಾಪಸಾದ ಮೇಲೂ ಜಾತಿಯ ಕಾರಣದಿಂದ ಲಾಯರ್ ವೃತ್ತಿ ಕಷ್ಟವಾಯಿತು. ಬರಿಯ ನುಚ್ಚಿನ ಅನ್ನ ಉಂಡು ಬದುಕುತ್ತಿದ್ದೆವು. ನಾನೂ ದುರ್ಬಲನಾದೆ. ನನ್ನ ಮಗುವೊಂದು ಕಾಯಿಲೆ ಬಂದು ತೀರಿಕೊಂಡಿತು. ಅದರ ಅಂತ್ಯ ಸಂಸ್ಕಾರ ಮಾಡಲು ಹಣಕ್ಕೆ ಬಹಳ ತೊಂದರೆಯಾಯಿತು. ನಂತರ ಹೆಂಡತಿ ರಮಾ ತೀವ್ರ ಅಸ್ವಸ್ಥಗೊಂಡಳು. ವೈದ್ಯರು ಇನ್ನೊಂದು ಮಗುವಾದರೆ ಅವಳ ಜೀವಕ್ಕೆ ಅಪಾಯ ಎಂದರು. ನಾವು ಬ್ರಹ್ಮಚರ್ಯ ಪಾಲಿಸತೊಡಗಿದೆವು. ನನ್ನ ಬಳಿ ಸಾಧ್ಯವಾದ ಪ್ರಯತ್ನವನ್ನೆಲ್ಲ ಮಾಡಿದೆ. ಆದರೆ ನಮ್ಮೆಲ್ಲ ಪ್ರಯತ್ನ, ಚಿಕಿತ್ಸೆ ಫಲಿಸದೇ ಅವಳು ನನ್ನ ಬಿಟ್ಟೇ ಹೋದಳು.' ಇಷ್ಟು ಹೇಳೀಳುತ್ತ ಅಂಬೇಡ್ಕರ್ ಗದ್ಗದಿತರಾಗಿ ಕಣ್ಣೀರಿಡುತ್ತಾರೆ. ರಾಜಕೀಯ ವಿರೋಧಿಗಳನ್ನು ಸಿಂಹವಾಗಿ ಎದುರಿಸಿದ ಮನುಷ್ಯ ತನ್ನ ಗತಿಸಿದ ಹೆಂಡತಿಯ ನೆನಪಿನಲ್ಲಿ ಅಸಹಾಯಕರಾಗುತ್ತಾರೆ.

'ನನಗೀಗ ವಯಸ್ಸಾಗುತ್ತಿದೆ. ಸಲಹೆ ಕೊಡುವುದಕ್ಕಿಂತ ಹೆಚ್ಚೇನೂ ಮಾಡಲಾರೆ. ಆದರೆ ನನಗೆ ತೀರಿಸಬೇಕಾದ ದೊಡ್ಡ ಮೊತ್ತದ ಸಾಲ ಇದೆ ಎಂದರೆ ನೀನು ಅಚ್ಚರಿಗೊಳ್ಳಬಹುದು. ಹೌದು, ನನಗೆ 22 ಲಕ್ಷ ಸಾಲವಿದೆ. ಈ ಆರೋಗ್ಯ ಸುಧಾರಿಸಿದ ಮೇಲೆ ಮತ್ತೆ ಲಾ ಪ್ರಾಕ್ಟೀಸ್ ಶುರುಮಾಡಿ ಸಾಲ ತೀರಿಸಬೇಕು.'

ಅಂಬೇಡ್ಕರ್ ಹೀಗೆ ಹೇಳಿದಾಗ ತರುಣ ನಿಮ್ಗಾಡೆಗೆ ಬರುತ್ತಿದ್ದಿದ್ದು ಬರಿಯ 240 ರೂ. ಸಂಬಳ. ಅವರ ಸಾಲದ ಮೊತ್ತ ಕೇಳಿ ಕಂಗಾಲಾಗುತ್ತಾರೆ. ಮುಂಬಯಿಯ ಸಿದ್ದಾರ್ಥ ಕಾಲೇಜು, ಔರಂಗಾಬಾದಿನ ಮಿಲಿಂದ ಕಾಲೇಜಿನ ಸಂಸ್ಥಾಪಕರಾಗಿದ್ದ ಅಂಬೇಡ್ಕರ್ ಅವುಗಳಿಗಾಗಿ ಹಾಗೂ ಚುನಾವಣೆಗಳಿಗಾಗಿ ಹಣ ಖರ್ಚು ಮಾಡಿರುತ್ತಾರೆ. ಅಲ್ಲದೇ ದೊಡ್ಡ ಮೊತ್ತವನ್ನು ಪುಸ್ತಕಗಳಿಗಾಗಿ ಖರ್ಚುಮಾಡಿರುತ್ತಾರೆ. ಒಮ್ಮೆ ಮುಸ್ಲಿಮ್ ಜಮೀನ್ದಾರರ ಮನೆಗೆ ಹೋದಾಗ ಅಲ್ಲಿ ಬಂಗಾರದ ಅಕ್ಷರಗಳ ಕುರಾನ್ ನೋಡಿ ಅದನ್ನು ಎಷ್ಟು ಇಷ್ಟಪಡುತ್ತಾರೆಂದರೆ, ಆ ಪುಸ್ತಕಕ್ಕೆ 8000 ರೂ. ಕೊಟ್ಟು ಖರೀದಿಸಿಯೇಬಿಡುತ್ತಾರೆ!

ತನ್ನ ಸ್ವಭಾವದಂತೆಯೇ ಬುದ್ಧ ಧರ್ಮದ ಬಗೆಗೆ ಪೂರ್ಣ ತಿಳಿದುಕೊಳ್ಳುವವರೆಗೆ ಅವರು ಬೌದ್ಧರಾಗಲಿಲ್ಲ. ಅದರ ಬಗ್ಗೆ ಅಪಾರವಾಗಿ ಓದಿ, ಮಾಹಿತಿ ಸಂಗ್ರಹಿಸಿ, ವಿಸ್ತಾರವಾದ ಬೌದ್ಧ ಧರ್ಮದ ಸಾರವನ್ನೆಲ್ಲ ಸುಲಭ ಗ್ರಾಹ್ಯವಾಗುವಂತೆ ಸಂಗ್ರಹಿಸಿ, 'ಬುದ್ಧ ಮತ್ತು ಧಮ್ಮ' ಪುಸ್ತಕ ಬರೆದು, ಅಕಸ್ಮಾತ್ ತಾನು ಬದುಕಿಲ್ಲದಿದ್ದರೆ ಅದರ ಪ್ರಕಟಣೆಗೆ ಹಸ್ತಪ್ರತಿ ಎಲ್ಲಿದೆಯೆಂದು ಹೆಂಡತಿ ಸವಿತಾಗೆ ತಿಳಿಸಿ, ನಂತರವೇ ಮತಾಂತರ ಹೊಂದುತ್ತಾರೆ. ಅವರೇ ಹೇಳುವಂತೆ, 'ನಾನು ಟೆಂಟಿನ ಸೆಂಟ್ರಲ್ ಪೋಲ್ ಹಾಗೆ ನಿಂತಿದ್ದೇನೆ. ನಾನು ಇಲ್ಲವಾದದ್ದೇ ಟೆಂಟ್ ಬಿದ್ದುಹೋಗಬಾರದು. ಅದಕ್ಕಾಗಿ ಭವಿಷ್ಯದ ಜನಾಂಗವು ಸುರಕ್ಷಿತವಾಗಲು ಪರ್ಯಾಯವೊಂದನ್ನು ಕಂಡುಹಿಡಿದಿದ್ದೇನೆ. ನನ್ನ ಸ್ಥಾನದಲ್ಲಿ ಬೌದ್ಧ ಧರ್ಮ ನಿಲ್ಲಬೇಕು.'

ಉದಾತ್ತ ಆಶಯಗಳಿದ್ದರೂ ಭವಿಷ್ಯದ ದಾರಿ ಹೇಗಿರಬೇಕೆಂಬುದರ ಬಗ್ಗೆ ತನ್ನ ಅನುಯಾಯಿಗಳಲ್ಲಿ ತಲೆಯೆತ್ತಿದ್ದ ಭಿನ್ನಮತದ ಬಗೆಗೆ ಅರಿವಿದ್ದ ಅವರು 'ಟೆಂಟ್–ಸೆಂಟ್ರಲ್ ಪೋಲ್' ರೂಪಕವನ್ನು ಬಳಸಿ ಈ ಮಾತು ಹೇಳಿದ್ದರು.

ನಿಮ್ಗಾಡೆಯವರ ಈ ಪುಸ್ತಕವು ಹೇಳುವ ದೊಡ್ಡ ನೀತಿ: ಶಿಕ್ಷಣವೆಂಬುದು ಕೇವಲ 50 ವರ್ಷಗಳ ಅಂತರದಲ್ಲಿ, ಸಾವಿರಾರು ವರ್ಷಗಳಿಂದ ತರಲಾಗದ ಬದಲಾವಣೆಯನ್ನು ಹೇಗೆ ಸಾಧ್ಯಗೊಳಿಸಿತು ಎಂಬುದು. ಎರಡು ತಲೆಮಾರುಗಳ ಅಂತರದಲ್ಲಿ ಕುಟುಂಬವೊಂದರ ಆರ್ಥಿಕ–ಸಾಮಾಜಿಕ ಸ್ಥಾನಮಾನವನ್ನೇ ಬದಲಾಯಿಸಿದ್ದು ಶಿಕ್ಷಣ. ಕಿಟಕಿಯ ಹೊರಗಿನಿಂದಲೇ ಪಾಠ ಕೇಳಿಸಿಕೊಂಡು, ಪಾಸಾದ ಖುಷಿಗೆ ಮೇಷ್ಟ್ರ ಕಾಲು ಮುಟ್ಟಿ ನಮಸ್ಕರಿಸಲಾಗದ ಅಸ್ಪೃಶ್ಯ ಹುಡುಗನೊಬ್ಬ ವಿಜ್ಞಾನಿಯಾಗಿ ಹೊಮ್ಮಿದ್ದು ಶಿಕ್ಷಣವೆಂಬ ಮಾಯೆಯಿಂದಲೇ. ಅವರ ಮೂವರು ಮಕ್ಕಳು ಎಳವೆಯಲ್ಲೇ ಅಮೆರಿಕದ ಸ್ಕಾಲರ್‌ಶಿಪ್ ಗಳಿಸಿ ಶಿಕ್ಷಣ ಪಡೆದು ಈಗ ವಿಜ್ಞಾನಿ – ವೈದ್ಯರಾಗಿದ್ದಾರೆ. ಪೂರ್ವಿಕರು ಅನುಭವಿಸಿದ್ದ ಅವಮಾನ, ಕೀಳರಿಮೆಗಳೆಲ್ಲ ಇಂದು ಅವರಿಗೆ ಇತಿಹಾಸವಾಗಿದೆ.

ಶಿಕ್ಷಣವೇ ಶಕ್ತಿ ಎಂಬ ಮಾತು ಅಕ್ಷರಶಃ ನಿಜವಾದ ಈ ಜೀವಂತ ಉದಾಹರಣೆಯು, ತಳಸಮುದಾಯಗಳಲ್ಲಿ ಶಿಕ್ಷಣದ ಹಂಬಲ ಹುಟ್ಟಿಸಿದ್ದೇ ಆದಲ್ಲಿ ನಿಮ್ಗಾಡೆಯವರ ಬರಹದ ಶ್ರಮ ಸಾರ್ಥಕವಾದಂತೆಯೇ. ಸಾಮಾಜಿಕ ನ್ಯಾಯಕ್ಕಾಗಿ ಈ 60 ವರ್ಷಗಳಲ್ಲಿ ತೆಗೆದುಕೊಂಡ ಕ್ರಮಗಳ ಹೊರತಾಗಿಯೂ ದೊಡ್ಡ ಜನಸಮುದಾಯ ಇನ್ನೂ ಅವಕಾಶ ವಂಚಿತವಾಗಿರುವಾಗ ಅಂಬೇಡ್ಕರ್ ಹಾಗೂ ಅವರ ಚಿಂತನೆಗಳನ್ನು ಹೊಸ ದೃಷ್ಟಿಕೋನದಿಂದ ನೋಡುವ, ಹರಡುವ ಅವಶ್ಯಕತೆ ಇಂದು ಹಿಂದೆಂದಿಗಿಂತ ಹೆಚ್ಚಿದೆ. ಈ ನಿಟ್ಟಿನಲ್ಲಿ ಅಂಬೇಡ್ಕರ್ ವಿಚಾರಧಾರೆಯ ಪುನರಾವಲೋಕನಕ್ಕೆ ಇಂಥ ಅನುಭವ–ಆತ್ಮಕಥನಗಳು ಉಪಯುಕ್ತವಾಗುತ್ತವೆ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಹುಡುಕಾಟ

ಕಾವ್ಯ

ಹುಡುಕಿ ಹುಡುಕಿ ಹೆಕ್ಕುತ್ತಿದ್ದೇನೆ
ಕಳೆದು ಹೋದ ನನ್ನ ಕವನದ ಸಾಲುಗಳ
ಒಂದೊಂದು ಪದಕ್ಕಾಗಿ...
ಪದಗಳ ಅಕ್ಷರಗಳಿಗಾಗಿ....
ಮುಂಬೈ ನಗರಿಯಂತಹ ಸ್ಲಂಗಳಲ್ಲಿ
ಸ್ಲಂಗಳಲ್ಲಿನ ನಾರುವ ದೇಹಗಳ
ಭರವಸೆಯ ಕಣ್ಗಳಲ್ಲಿ....

ಅರಸುತ್ತಿದ್ದೇನೆ... ಚಿಂದಿ ಆಯುವ
ಮಕ್ಕಳ ಕೈಗಳಲ್ಲಿ ಜೀವ ತುಂಬುವ
ಪಾಟಿಯೊಂದನ್ನು.... ಬಳಪವನ್ನು....
ಸಿಂಬಳ ಮೆತ್ತಿರುವ ಆ ಮೊಗಗಳಲ್ಲಿ
ಶೋಧಿಸುತ್ತಿದ್ದೇನೆ, ವಿಶ್ವಾಸದ ಗಾಂಭಿರ್ಯ
ಬದಿಯಲ್ಲದ ರಸ್ತೆ ಇಕ್ಕೆಲಗಳಲ್ಲಿ
ಕೋಲ್ಮಿಂಚಿನಂತೆ ಓಡಾಡುವ ಹುಡುಗರಲ್ಲಿ...

ಕನವರಿಸುತ್ತಿದ್ದೇನೆ... ಹಣ್ಣು ಹಣ್ಣು
ಮುದುಕರಿಗೆ ಧೈರ್ಯ ತುಂಬುವ
ಊರುಗೋಲುಗಳಿಗಾಗಿ......
ಬತ್ತಿ ಹೋದ ಜೀಮೂತ ಜೀವಕಳೆಯ
ಜೊನ್ನ ಜೀವಂತಿಕೆಗಾಗಿ.....
ನಮ್ಮೂರ ಮನೆಮನೆಯ ಮೂಲೆ
ಸಂದುಗಳಲ್ಲಿ.... ನಿಬಿಡ ಸಂತೆಗಳಲ್ಲಿ......

ಕದ ತಟ್ಟಿ ಹುಡುಕುತ್ತಿದ್ದೇನೆ
ಮರೆತು ಹೋದ ಪ್ರೀತಿಸಿದ
ಹುಡುಗಿಯ ಮುಂಗುರುಳಿಗಾಗಿ.....
ನಕ್ಕಾಗ ಗುಳಿಯಿಡುವ ಆ ಕೆನ್ನೆಗಳಿಗಾಗಿ.....
ಕೆಂಪು ದೀಪದ ಬೀದಿಗಳಲ್ಲಿ
ನಿಹಿತ ಭಾವನೆಗಳನ್ನು ಹೊಸಕಿಕೊಂಡ
ನಿಸ್ತೇಜ ಲಲನೆಯರ ಅಂತಃಕರಣಗಳಲ್ಲಿ

○ ಮಣಜೂರು ಶಿವಕುಮಾರ್, ಕೊಡಗು

ಅಂಬೇಡ್ಕರ್ ಸಂವಿಧಾನ V/S ಭಾರತದ ಸಂವಿಧಾನ

ಶಿವಸುಂದರ್

ದೇಶ 61ನೇ ಗಣರಾಜ್ಯೋತ್ಸವಕ್ಕೆ ಸಜ್ಜಾಗುತ್ತಿದೆ. ಹಾಗೆಂದರೇನು? ಯಥಾ ಪ್ರಕಾರ ದೆಹಲಿಯಲ್ಲಿ ನಮ್ಮ ರಕ್ಷಣಾ ಪಡೆಗಳು ಅಮೆರಿಕ, ಇಸ್ರೇಲ್ ಮತ್ತಿತರ ದೇಶಗಳಿಂದ ಕೊಂಡುಕೊಂಡ ಶಸ್ತ್ರಾಸ್ತ್ರಗಳನ್ನು ಪ್ರದರ್ಶಿಸಿ ನೆರೆಹೊರೆಯ ದೇಶಗಳಿಗೆ ಭೀತಿ ಬಿತ್ತಲು ಮತ್ತು ರಾಜ್ಯದಲ್ಲಿ ಶಾಲಾ ಮಕ್ಕಳು ಬಾಲಿವುಡ್‌ನ ಪ್ಲಾಸ್ಟಿಕ್ ದೇಶಪ್ರೇಮದ ಹಾಡುಗಳಿಗೆ ಡ್ಯಾನ್ಸ್ ಮಾಡಲು ಹಾಗೂ ಟಿವಿ ಚಾನೆಲ್‌ಗಳು ಹಸಿ ಮತ್ತು ಹುಸಿ ದೇಶಪ್ರೇಮದ ಚಲನಚಿತ್ರಗಳನ್ನು ದಿನವಿಡೀ ಪ್ರದರ್ಶಿಸಲು ಸಜ್ಜಾಗುವುದು ಎಂದೇ ಅರ್ಥವಾಗಿಬಿಟ್ಟಿದೆ. ಈ ನಡುವೆ ಎಲ್ಲಾ ಕಡೆ ದೇಶದ ಬಾವುಟವನ್ನು ಹಾರಿಸಿದಾಗ ನಮ್ಮ ಪ್ರಜಾಪ್ರಭುತ್ವದ ಬಗ್ಗೆ ಮತ್ತು ನಮ್ಮ ಸಂವಿಧಾನದ ಬಗ್ಗೆ ಈ ದೇಶದ ಪ್ರಭುಗಳೆಲ್ಲಾ ಹಾಡಿ ಹೊಗಳಾಡುವುದು ವಾಡಿಕೆಯಾಗಿಬಿಟ್ಟಿದೆ. ಅದರ ಜೊತೆಜೊತೆಗೆ ಪ್ರಪಂಚದಲ್ಲಿ ಅತ್ಯುತ್ತಮ ಸಂವಿಧಾನವನ್ನು ನೀಡಿದ ಸಂವಿಧಾನ ಕರ್ತೃ ಬಾಬಾ ಸಾಹೇಬ್ ಅಂಬೇಡ್ಕರ್ ಎಂಬ ಮಾತನ್ನು ಸೇರಿಸಿ ಬಿಡಲಾಗುತ್ತಿದೆ.

ಕೇಳಲೇ ಬೇಕಾದ ಪ್ರಶ್ನೆಗಳು!

ಅಂಬೇಡ್ಕರ್ ಅವರ ಬದುಕಿನ ಆಶಯಗಳನ್ನು, ಅವರ ಹೋರಾಟಗಳನ್ನು ಹಾಗೂ ಈ ದೇಶದ ಎಲ್ಲಾ ಶೋಷಿತ ಮತ್ತು ದಮನಿತ ಜನತೆಯ ವಿಮೋಚನೆಗಾಗಿ-ಕೇವಲ ದಲಿತರ ವಿಮೋಚನೆಗಲ್ಲ-ಅವರು ನಡೆಸಿದ ಸತತ ಸಂಘರ್ಷವನ್ನು ಹಾಗೂ ಸಹಸ್ರಾರು ವರ್ಷ ಜಾತಿ-ವರ್ಗಗಳ ಶೋಷಣೆಯಿಂದ ಕಂಗೆಟ್ಟಿದ್ದ ಈ ದೇಶ ಸ್ವಾತಂತ್ರ್ಯ-ಸಮಾನತೆ-ಭ್ರಾತೃತ್ವಗಳ ನೆಲೆಗಟ್ಟಿನಲ್ಲಿ ಹೊಸ ದಾರಿಯಲ್ಲಿ ನಡೆಯಲು ಮಾರ್ಗವನ್ನರಿಸಿದ ದಾರ್ಶನಿಕ ಚಿಂತನೆಯನ್ನು ಅರ್ಥ ಮಾಡಿಕೊಂಡಿರುವ ಎಲ್ಲರಿಗೂ ಸಂವಿಧಾನದ ಜೊತೆ ಅಂಬೇಡ್ಕರ್ ಹೆಸರು ಜೋಡಿಸಿದೊಡನೆ ಸಂವಿಧಾನದ ಬಗ್ಗೆಯೂ ಅದೇ ರೀತಿಯ ಭಾವನೆಗಳು ಮೂಡುತ್ತವೆ.

ಅಂಬೇಡ್ಕರ್ ಅವರ ಬದುಕಿನ ಆಶಯಗಳನ್ನು, ಅವರ ಹೋರಾಟಗಳನ್ನು ಹಾಗೂ ಈ ದೇಶದ ಎಲ್ಲಾ ಶೋಷಿತ ಮತ್ತು ದಮನಿತ ಜನತೆಯ ವಿಮೋಚನೆಗಾಗಿ- ಕೇವಲ ದಲಿತರ ವಿಮೋಚನೆಗಲ್ಲ- ಅವರು ನಡೆಸಿದ ಸತತ ಸಂಘರ್ಷವನ್ನು ಹಾಗೂ ಸಹಸ್ರಾರು ವರ್ಷ ಜಾತಿ-ವರ್ಗಗಳ ಶೋಷಣೆಯಿಂದ ಕಂಗೆಟ್ಟಿದ್ದ ಈ ದೇಶ ಸ್ವಾತಂತ್ರ್ಯ-ಸಮಾನತೆ-ಭ್ರಾತೃತ್ವಗಳ ನೆಲೆಗಟ್ಟಿನಲ್ಲಿ ಹೊಸ ದಾರಿಯಲ್ಲಿ ನಡೆಯಲು ಮಾರ್ಗವನ್ನರಿಸಿದ ದಾರ್ಶನಿಕ ಚಿಂತನೆಯನ್ನು ಅರ್ಥ ಮಾಡಿಕೊಂಡಿರುವ ಎಲ್ಲರಿಗೂ ಸಂವಿಧಾನದ ಜೊತೆ ಅಂಬೇಡ್ಕರ್ ಹೆಸರು ಜೋಡಿಸಿದೊಡನೆ ಸಂವಿಧಾನದ ಬಗ್ಗೆಯೂ ಅದೇ ರೀತಿಯ ಭಾವನೆಗಳು ಮೂಡುತ್ತವೆ.

ಅದು ಸಹಜ. ಆದರೆ 63 ವರ್ಷಗಳ ನಂತರವೂ, ಒಂದು 'ಅತ್ಯುತ್ತಮ' ಸಂವಿಧಾನವನ್ನು ಈ ದೇಶ ಹೊಂದಿದ್ದರೂ ಈ ದೇಶದ ಶೋಷಿತರ ಪರಿಸ್ಥಿತಿ, ದಲಿತರ ದಮನ, ರೈತಾಪಿಗಳ ಸಂಕಷ್ಟ ದಿನೇ ದಿನೇ ಹೆಚ್ಚುತ್ತಲೇ ಇರುವುದು ಏಕೆ? 1947ಕ್ಕೇ ಹೋಲಿಸಿದರೂ ಈ ದೇಶದಲ್ಲಿ ಶೇ.60 ಜನರ ಆಹಾರ ಬಳಕೆ ಕಡಿಮೆಯೇ ಆಗುತ್ತಿರುವುದು ಏಕೆ? ದಲಿತರ ಮೇಲಿನ ದಮನ ಇನ್ನೂ ಹೊಸ ಹೊಸ ರೂಪಗಳನ್ನು ಪಡೆದುಕೊಂಡು ಭೀಕರ ರೂಪದಲ್ಲಿ ಮುಂದುವರೆಯುತ್ತಿರುವುದೇಕೆ? ನಮ್ಮ ಆರ್ಥಿಕ ನೀತಿಗಳು ಮತ್ತು ಸಾಮಾಜಿಕ ನೀತಿಗಳು ಈ ದೇಶದ ಯಾರನ್ನೂ ಜಾತಿ-ಲಿಂಗ-ವರ್ಗದ ಆಧಾರದಲ್ಲಿ ತಾರತಮ್ಯ ಮಾಡದೆ ಎಲ್ಲರನ್ನೂ ಒಳಗೊಳ್ಳುವ ನೀತಿಗಳನ್ನು ಅನುಸರಿಸಬೇಕೆಂದು ಅಂಬೇಡ್ಕರ್ ಅವರೇ ಖುದ್ದಾಗಿ ರಚಿಸಿದ ಸಂವಿಧಾನದ ನಿರ್ದೇಶನಾ ತತ್ವಗಳಲ್ಲಿ ಇದ್ದರೂ ಸಾಮಾಜಿಕವಾಗಿ ಶೂದ್ರ-ದಲಿತರನ್ನು ಹೊರಗಿಡುವ ಹಿಂದೂತ್ವ ಮತ್ತು ಆರ್ಥಿಕವಾಗಿ ಎಲ್ಲಾ ಬಡವರನ್ನು ಇನ್ನಷ್ಟು ಬಡತನದ ಕೂಪಕ್ಕೆ ತಳ್ಳುತ್ತಿರುವ ಜಾಗತೀಕರಣಗಳೇ ರಾಜ್ಯಭಾರ ಮಾಡಲು ಸಾಧ್ಯವಾದದ್ದು ಹೇಗೆ?

ಇವೆಲ್ಲವೂ ಕೇವಲ ಸಂವಿಧಾನದ ಅನುಷ್ಠಾನದಲ್ಲಿ ಇರುವ ಸಮಸ್ಯೆಯೋ? ಅಥವಾ ಸಂವಿಧಾನದ ರಚನೆಯಲ್ಲೇ ಇದ್ದ ಸಮಸ್ಯೆಯೋ? ಆದ್ದರಿಂದಲೇ ಅಂಬೇಡ್ಕರ್ ಅವರು ಕನಸಿದ ಸಂವಿಧಾನಕ್ಕೂ ಮತ್ತು ಅಂತಿಮವಾಗಿ ಸಂವಿಧಾನ ರಚನಾ ಸಭೆ ನೀಡಿದ ಸಂವಿಧಾನವೂ ಎರಡೂ ನಿಜಕ್ಕೂ ಒಂದೇ ಆಗಿದೆಯೇ ಎಂಬ ಪ್ರಶ್ನೆಯನ್ನು ಈಗಲಾದರೂ ಹಾಕಿಕೊಳ್ಳಬೇಕಾಗುತ್ತದೆ. ಅಲ್ಲವೇ?

ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ಪಡೆದುಕೊಳ್ಳಬೇಕೆಂದರೆ ಈ ದೇಶದ ಸಂವಿಧಾನವನ್ನು ರಚಿಸಿದ ಪ್ರಧಾನ ಶಕ್ತಿಗಳು ಯಾವುವು? ಮತ್ತು ಸಂವಿಧಾನ ರಚನಾ ಸಭೆಯಲ್ಲಿ ನಿಜಕ್ಕೂ ಅಂಬೇಡ್ಕರ್ ಕನಸಿದ ಸಮಾಜವಾದಿ ಆಶಯಗಳಿಗೂ ಮತ್ತು ರಚನಾ ಸಭೆಯಲ್ಲಿದ್ದ ಇತರ ಶಕ್ತಿಗಳಿಗೂ ನಡೆದ ವಾಗ್ವಾದಗಳೇನು? ಮತ್ತು ಅಂತಿಮವಾಗಿ ಅಂಬೇಡ್ಕರ್ ಈ ಸಂಘರ್ಷದಲ್ಲಿ ಈ ದೇಶದ ವರ್ಣಾಶ್ರಮ ವ್ಯವಸ್ಥೆಗೆ ಬಲಿಯಾಗಿ ಶೋಷಿತರು ಶತಶತಮಾನಗಳಿಂದ ಕನಸು ಕಾಣಲು ಸಾಧ್ಯವಾಗದೇ ಇದ್ದ ಕೆಲವು ಮೂಲಭೂತ ಹಕ್ಕುಗಳನ್ನು ಸಂಘರ್ಷದ ಮೂಲಕ ಗಳಿಸಿಕೊಟ್ಟಿದ್ದು ನಿಜವೇ ಆದರೂ ದಮನಿತ ಜನರ ಸಮಗ್ರ ವಿಮೋಚನೆಗೆ ಈ ಸಂವಿಧಾನ ನಿಜಕ್ಕೂ ಪೂರ

ಕವಾಗುತ್ತದೆ ಎಂದು ಭಾವಿಸಿದ್ದರೆ ಎಂಬ ಪ್ರಶ್ನೆ ಯನ್ನೂ ಹಾಕಿಕೊಳ್ಳಬೇಕಾಗುತ್ತದೆ.

ಸಂವಿಧಾನ ರಚನಾ ಸಭೆ-ಉಳ್ಳವರಿಂದ ಉಳ್ಳವರಿಗಾಗಿ

ಮೊದಲನೆಯದಾಗಿ ಈ ದೇಶಕ್ಕೆ "ಸ್ವಾತಂತ್ರ್ಯವನ್ನು ನೀಡಲು" ಬಂದ ಬ್ರಿಟನ್ನಿನ ಕ್ಯಾಬಿನೆಟ್ ಮಿಷನ್ನಿನ ಸಲಹೆಯ ಮೇರೆಗೆ ಈ ದೇಶದಲ್ಲಿ ಸಂವಿಧಾನ ರಚನಾ ಸಭೆಯೊಂದು ರೂಪುಗೊಂಡಿತು. ಆದರೆ ಈ ಸಂವಿಧಾನ ರಚನಾ ಸಭೆಯು ಆಯ್ಕೆಯಾಗುವುದು ಹೇಗೆ? ಅದಕ್ಕೆ ಬ್ರಿಟಿಷರೂ ಸೂಚಿಸಿದ ಮಾನದಂಡ ಮತ್ತು ಕಾಂಗ್ರೆಸ್ ನಾಯಕರು ಒಪ್ಪಿಕೊಂಡ ಮಾನದಂಡ ಎಂದರೆ ಪರೋಕ್ಷ ಮತಧಾನ. 1935ರಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ಕೆಳಗೆ ಬ್ರಿಟಿಷರೇ ರಚಿಸಿದ ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟ್‌ನಡಿ ಈ ದೇಶದಲ್ಲಿ ಪ್ರಾಂತೀಯ ಅಸೆಂಬ್ಲಿಗಳನ್ನು ರಚಿಸಲಾಗಿತ್ತು. ಅದು ಬಡವರು, ದಲಿತರು, ಅನಕ್ಷರಸ್ಥರು ಎಲ್ಲರೂ ಸೇರಿ ಮಾಡಿದ ಸಾರ್ವತ್ರಿಕ ಮತದಾನದ ಮೂಲಕ ಆಯ್ಕೆಯಾದ ಅಸೆಂಬ್ಲಿಗಳಲ್ಲ. ಬದಲಿಗೆ ಪದವೀಧರರು ಮತ್ತು ಆಸ್ತಿವಂತರಿಗೆ ಮಾತ್ರ ಮತದಾನದ ಹಕ್ಕಿದ್ದ ಮತಕ್ಷೇತ್ರಗಳ ಮೂಲಕ ಆಯ್ಕೆಯಾದ ಅಸೆಂಬ್ಲಿಗಳು. ಸಹಜವಾಗಿಯೇ ವಿದ್ಯೆ ಮತ್ತು ಆಸ್ತಿ ಎರಡು ಮೇಲ್ಜಾತಿ ಮತ್ತು ಮೇಲ್ವರ್ಗಗಳಿಗೆ ಮಾತ್ರ ಸೀಮಿತವಾಗಿದ್ದ ಈ ದೇಶದಲ್ಲಿ ಈ ಮೂಲಕ ಆಯ್ಕೆಯಾದ ಶೇ.90ರಷ್ಟು ಜನ ಮೇಲ್ವರ್ಗ ಮತ್ತು ಮೇಲ್ಜಾತಿಗಳಿಗೆ ಸೇರಿದ್ದವರು ಮಾತ್ರವಲ್ಲ. ಮೇಲ್ವರ್ಗ ಮತ್ತು ಮೇಲ್ಜಾತಿಗಳ ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶವುಳ್ಳವರೇ ಆಗಿದ್ದರು.

ಸಂವಿಧಾನ ರಚನಾ ಸಭೆ ಆಯ್ಕೆಯಾಗಿದ್ದು ಈ ಪ್ರಾಂತೀಯ ಸಭೆಗಳ ಸದಸ್ಯರಾಗಿದ್ದವರ ಮತದಾನದಿಂದ! ಅಂದರೆ ಒಂದು ಅಂದಾಜಿನ ಪ್ರಕಾರ ಈ ದೇಶದ ಶೇ. 17ರಷ್ಟು ಜನ ಮಾತ್ರ ಮಾಡಿದ ಮತದಾನದ ಮೂಲಕ.! ಹಾಗೆಯೇ ಸಂವಿಧಾನ ರಚನಾ ಸಭೆಗೆ ಪ್ರಧಾನವಾಗಿ ಆಯ್ಕೆಯಾದದ್ದು ಮೇಲ್ಜಾತಿ ಮತ್ತು ಮೇಲ್ವರ್ಗಗಳ ಹಿತಾಸಕ್ತಿಗಳೇ!!

ಅಂತಿಮವಾಗಿ 292 ಸದಸ್ಯರು ಈ ರೀತಿಯ ಪರೋಕ್ಷ ಮತದಾನದಿಂದ ಆಯ್ಕೆಯಾದರೆ ಇನ್ನೂ 93 ಸದಸ್ಯರನ್ನು ರಾಜಸಂಸ್ಥಾನಗಳು ಅಂದರೆ ಊಳಿಗಮಾನ್ಯ ದೊರೆಗಳು ತಮ್ಮ ಪ್ರತಿನಿಧಿಗಳನ್ನಾಗಿ ನೇಮಿಸಿದರು! ಇನ್ನು ನಾಲಕ್ಕು ಜನರನ್ನು ಚೀಫ್ ಕಮಿಷನರೇಟ್ ಅಡಿಯಲ್ಲಿದ್ದ ಪ್ರಾಂತ್ಯಗಳಿಂದ ನೇಮಿಸಲಾಯಿತು. ಹೀಗೆ ಒಟ್ಟು 389 ಸದಸ್ಯರ ಭಾರತದ ಸಂವಿಧಾನ ರಚನಾ ಸಭೆ ರೂಪುಗೊಂಡಿತು. ಆದರೆ 1947ರಲ್ಲಿ ದೇಶವಿಭಜನೆಯಾದ ನಂತರ ಒಟ್ಟು ಸಂವಿಧಾನ ರಚನಾ ಸಭೆಯ ಸದಸ್ಯರ ಸಂಖ್ಯೆ 299ಕ್ಕೆ ಕುಸಿಯಿತು.

ಇದೇ ಸಮಯದಲ್ಲಿ ಎರಡನೇ ಪ್ರಪಂಚ ಯುದ್ಧದ ನಂತರ ಫ್ಯಾಸಿಸ್ಟ್ ಆಳ್ವಿಕೆಯಿಂದ ವಿಮೋಚನೆಗೊಂಡ ಇಟಲಿಯನ್ನೂ ಒಳಗೊಂಡಂತೆ ಹಲವಾರು ನವ ವಿಮೋಚಿತ ಮತ್ತು ಬಡ ದೇಶಗಳ ಸಂವಿಧಾನ ರಚನಾ ಸಭೆ ಸಾರ್ವತ್ರಿಕ ಮತದಾನದ ಮೂಲಕವೇ ಆಯ್ಕೆಯಾಗಿದ್ದನ್ನು ಇಲ್ಲಿ ಗುರುತಿಸಲೇ ಬೇಕು. ಹೀಗೆ ಭಾರತದ ಪ್ರಜಾತಾಂತ್ರಿಕ ಸಂವಿಧಾನ ರಚನೆಯ ಬುನಾದಿಯೇ ಅಪ್ರಜಾತಾಂತ್ರಿಕವಾಗಿತ್ತು.

> **ಸ್ವಾತಂತ್ರ್ಯ ಹೋರಾಟದ ಉದ್ದಕ್ಕೂ ಕಾಂಗ್ರೆಸ್ ನಾಯಕತ್ವದ ಸ್ವತಂತ್ರ ಭಾರತದಲ್ಲಿ ಹಿಂದೂ ಸವರ್ಣೀಯರ ಭಾರತವಾಗುತ್ತದೆಯೇ ವಿನಃ ದಲಿತ ಭಾರತವಾಗುವುದಿಲ್ಲ ಎಂದು ಸ್ಪಷ್ಟವಾಗಿ ಮನಗಂಡು ದಲಿತರಿಗೆ ಸ್ವತಂತ್ರ ಭಾರತದಲ್ಲಿ ಗೌರವನೀಯ ಮತ್ತು ಪ್ರತ್ಯೇಕ ಸ್ಥಾನಮಾನಕ್ಕೆ ಪೂನಾ ಒಪ್ಪಂದದ (1932) ದಿನಗಳಿಂದಲೂ ಹೋರಾಡುತ್ತಿದ್ದ ಅಂಬೇಡ್ಕರ್ ಸಂವಿಧಾನ ರಚನಾ ಸಭೆಗೆ ಆಯ್ಕೆಯಾಗುವುದು ಕಾಂಗ್ರೆಸ್ಸಿಗರಿಗೆ ಬೇಡವಾಗಿತ್ತು. ಬ್ರಿಟನ್ನಿನ ಕ್ಯಾಬಿನೆಟ್ ಕಮಿಷನ್ ಭಾರತಕ್ಕೆ ಬಂದಾಗ ಕಾಂಗ್ರೆಸ್, ಮುಸ್ಲಿಂಲೀಗ್ ಮತ್ತು ಅಂಬೇಡ್ಕರ್ ನೇತೃತ್ವದ ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್- ಈ ಮೂರೂ ಶಕ್ತಿಗಳ ಒಡಂಬಡಿಕೆಯ ಆಧಾರದ ಮೇಲೆ ಹೊಸ ಸಂವಿಧಾನ ಮತ್ತು ಸ್ವತಂತ್ರ ಭಾರತದ ಸ್ವರೂಪ ರೂಪುಗೊಳ್ಳುವುದೆಂಬ ಅಭಿಪ್ರಾಯವನ್ನು ನೀಡಲಾಗಿತ್ತು.**

ಅಂಬೇಡ್ಕರರನ್ನು ಹೊರಗಿಡಲು ನಡೆದ ಹುನ್ನಾರಗಳು

ಇನ್ನು ಈ ಸಂವಿಧಾನ ಸಭೆಯ ಕರಡು ಸಮಿತಿಯ ಅಧ್ಯಕ್ಷರಾಗುವುದಿರಲಿ ಸದಸ್ಯರಾಗುವುದಕ್ಕೇ ಅಂಬೇಡ್ಕರ್ ಪಟ್ಟ ಪಾಡು ಈ ಸಂವಿಧಾನ ರಚನಾ ಸಭೆಯ ಅಪ್ರಜಾತಾಂತ್ರಿಕ ನೆಲೆಗಳನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ.

ಸ್ವಾತಂತ್ರ್ಯ ಹೋರಾಟದ ಉದ್ದಕ್ಕೂ ಕಾಂಗ್ರೆಸ್ ನಾಯಕತ್ವದ ಸ್ವತಂತ್ರ ಭಾರತದಲ್ಲಿ ಹಿಂದೂ ಸವರ್ಣೀಯರ ಭಾರತವಾಗುತ್ತದೆಯೇ ವಿನಃ ದಲಿತ ಭಾರತವಾಗುವುದಿಲ್ಲ ಎಂದು ಸ್ಪಷ್ಟವಾಗಿ ಮನಗಂಡು ದಲಿತರಿಗೆ ಸ್ವತಂತ್ರ ಭಾರತದಲ್ಲಿ ಗೌರವನೀಯ ಮತ್ತು ಪ್ರತ್ಯೇಕ ಸ್ಥಾನಮಾನಕ್ಕೆ ಪೂನಾ ಒಪ್ಪಂದದ (1932) ದಿನಗಳಿಂದಲೂ ಹೋರಾಡುತ್ತಿದ್ದ ಅಂಬೇಡ್ಕರ್ ಸಂವಿಧಾನ ರಚನಾ ಸಭೆಗೆ ಆಯ್ಕೆಯಾಗುವುದು ಕಾಂಗ್ರೆಸ್ಸಿಗರಿಗೆ ಬೇಡವಾಗಿತ್ತು. ಬ್ರಿಟನ್ನಿನ ಕ್ಯಾಬಿನೆಟ್ ಕಮಿಷನ್ ಭಾರತಕ್ಕೆ ಬಂದಾಗ ಕಾಂಗ್ರೆಸ್, ಮುಸ್ಲಿಂಲೀಗ್ ಮತ್ತು ಅಂಬೇಡ್ಕರ್ ನೇತೃತ್ವದ ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್- ಈ ಮೂರೂ ಶಕ್ತಿಗಳ ಒಡಂಬಡಿಕೆಯ ಆಧಾರದ ಮೇಲೆ ಹೊಸ ಸಂವಿಧಾನ ಮತ್ತು ಸ್ವತಂತ್ರ ಭಾರತದ ಸ್ವರೂಪ ರೂಪುಗೊಳ್ಳುವುದೆಂಬ ಅಭಿಪ್ರಾಯವನ್ನು ನೀಡಲಾಗಿತ್ತು.

ಆದರೆ ಕಾಂಗ್ರೆಸ್‌ನ ಕುತಂತ್ರದಿಂದಾಗಿ 1946ರಲ್ಲಿ ನಡೆದ ಪ್ರಾಂತೀಯ ಅಸೆಂಬ್ಲಿ ಚುನಾವಣೆಗಳಲ್ಲಿ ಬಾಂಬೆ ಪ್ರಾಂತ್ಯದಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್ ಸೋಲನ್ನಪ್ಪಿತ್ತು. ಈ ಅಸೆಂಬ್ಲಿ ಸದಸ್ಯರೇ ಸಂವಿಧಾನ ರಚನಾ ಸಭೆಯನ್ನು ಆಯ್ಕೆ ಮಾಡಬೇಕಾದ್ದರಿಂದ ಅಂಬೇಡ್ಕರ್‌ರವರ ಸೋಲು ಪೂರ್ವನಿಶ್ಚಿತವೇ ಆಗಿಬಿಟ್ಟಿತು. ಇದು ಪೂನಾ ಒಪ್ಪಂದದಲ್ಲಿ ದಲಿತರಿಗೆ ಪ್ರತ್ಯೇಕ ಮತಕ್ಷೇತ್ರ ಮತ್ತು ಮತದಾನ ನೀಡದೆ ಕೆಲವು ಸವರ್ಣೀಯರು ಮತ್ತು ದಲಿತರು ಇಬ್ಬರೂ ಓಟು ಹಾಕಿ ದಲಿತ ಅಭ್ಯರ್ಥಿಯನ್ನು ಗೆಲ್ಲಿಸುವ ಇಂದು ಜಾರಿಯಲ್ಲಿರುವ ಮತದಾನ ಪದ್ಧತಿಯ ಸಹಜ ಪರಿಣಾಮವೇ ಆಗಿತ್ತು. ದಲಿತನೇ ಗೆದ್ದು ಬಂದರೂ ಮೇಲ್ಜಾತಿ ಹಂಗಿನಲ್ಲಿರುವ ದಲಿತ ಮಾತ್ರ ಗೆದ್ದು ಬರುವಂಥ ವ್ಯವಸ್ಥೆಯಲ್ಲಿ ಅಂಬೇಡ್ಕರ್ ಮತ್ತವರ ಫೆಡರೇಷನ್ ಗೆದ್ದು ಬರುವುದು ಕಷ್ಟವೇ ಆಗಿತ್ತು. ಆದ್ದರಿಂದಲೇ ಹಿರಿಯ ಅಂಬೇಡ್ಕರ್‌ವಾದಿ ಚಿಂತಕ ಭಗವಾನ್ ದಾಸ್‌ರವರು ಪೂನಾ ಒಪ್ಪಂದದ ಪರಿಣಾಮವನ್ನು ವಿಶ್ಲೇಷಿಸುತ್ತಾ "ದಲಿತರಿಗೆ ಹೆಚ್ಚಿನ ಸೀಟುಗಳು ಸಿಕ್ಕವು. ಆದರೆ ಹಕ್ಕುಗಳು ಸಿಕ್ಕಿದ್ದು ಕೆಲವು. ಅಧಿಕಾರವಂತೂ ಸಿಗಲೇ ಇಲ್ಲ" ಎಂದು ಮಾರ್ಮಿಕವಾಗಿ ವಿಶ್ಲೇಷಣೆ ಮಾಡುತಾರೆ.

ಸಂವಿಧಾನ ರಚನಾ ಸಭೆಯಲ್ಲಿ 30 ದಲಿತರು ಆಯ್ಕೆಯಾದರು. ಆದರೆ ಅಂಬೇಡ್ಕರ್ ಆಯ್ಕೆಯಾಗಲಿಲ್ಲ. ಆದರೆ ಬಂಗಾಳ ಪ್ರಾಂತ್ಯದಿಂದ ಆಯ್ಕೆಯಾಗಿದ್ದ ಮತ್ತೊಬ್ಬ ದಲಿತ ನಾಯಕ ಜೋಗೇಂದ್ರನಾಥ್ ಮಂಡಲ್‌ರವರು ಬಂಗಾಳ ಪ್ರಾಂತ್ಯದಿಂದ ಅಂಬೇಡ್ಕರ್ ಗೆದ್ದು ಸಂವಿಧಾನ ರಚನಾ ಸಭೆ ಪ್ರವೇಶಿಸುವಂತೆ ಮಾಡುವಲ್ಲಿ ಯಶಸ್ವಿಯಾದರು. ಆದರೆ 1947ರಲ್ಲಿ ದೇಶ ವಿಭಜನೆಯಾಗಿ ಬಂಗಾಳವೂ ವಿಭಜನೆಯಾದ ನಂತರ ಮತ್ತೆ ಅಂಬೇಡ್ಕರ್ ಸಂವಿಧಾನ ಸಭೆಯಿಂದ ಹೊರಗುಳಿಯಬೇಕಾಯಿತು. ಆದರೆ ಅಂಬೇಡ್ಕರ್‌ರವರು ಆ ವೇಳೆಗಾಗಲೇ ದೇಶದ ಮತ್ತು ಶೋಷಿತ ಜನರ ಪ್ರಶ್ನಾತೀತ ನಾಯಕರಾಗಿದ್ದರಿಂದ ಕಾಂಗ್ರೆಸ್‌ಗೆ ಅಂಬೇಡ್ಕರ್ ನುಂಗಲಾರದ ಬಿಸಿತುಪ್ಪವೇ ಆಗಿದ್ದರು. ಆದರೇ ಸವರ್ಣೀಯ ಸಮಾಜದ ಔದಾರ್ಯ ರೂಪದ ಹಂಗಿನ ಕುತಂತ್ರವನ್ನು ಅರ್ಥಮಾಡಿಕೊಂಡಿದ್ದ ಏಕೈಕ ನಾಯಕರಾಗಿದ್ದ ಅಂಬೇಡ್ಕರ್‌ರವರನ್ನು ಹೊರಗಿಡುವುದು ತಮಗೇ ಅಪಾಯಕಾರಿ ಎಂದು ಅರ್ಥಮಾಡಿಕೊಂಡಿದ್ದ ಕಾಂಗ್ರೆಸ್ ನಾಯಕತ್ವ ಅವರನ್ನೂ ಸಹ ರಚನಾ ಸಮಿತಿಯ ಸದಸ್ಯರನ್ನಾಗಿಸಿಕೊಂಡಿತು.

ತಮ್ಮ ರಾಜಕೀಯ ಹೋರಾಟದ ಉದ್ದಕ್ಕೂ ಕಾಂಗ್ರೆಸ್ಸನ್ನು ಎದುರಾಗುತ್ತಲೇ ಬಂದಿದ್ದ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯನ್ನೂ ಒಂದು ಸಂಘರ್ಷದ ಕಣವಾಗಿ ಪರಿಗಣಿಸಿ ಅದರ ಭಾಗವಾಗಲು ಒಪ್ಪಿದರು ಮತ್ತೊಂದು ಕಡೆ ಮುಸ್ಲಿಂ ಭೂಮಾಲೀಕ ಹಾಗೂ ಶ್ರೀಮಂತರ ಪಕ್ಷವಾಗಿದ್ದ ಮುಸ್ಲಿಂ ಲೀಗ್ ತಾನು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲೆಲ್ಲಾ ಗೆದ್ದಿತು. ಇಲ್ಲಿಯೂ ಮುಸ್ಲಿಮ್ ಬಡವರ ಅಥವಾ ಕೆಳಜಾತಿ ಅಜ್ಲಫ್ ಮತು ಅಲ್ಝಾರ್ ಮುಸ್ಲಿಮರ ಪ್ರಾತಿನಿಧ್ಯ ಇಲ್ಲವೆನ್ನುವಷ್ಟು ಕಡಿಮೆ ಯಿತ್ತು. ಕಾಂಗ್ರೆಸ್ಸಿನೊಳಗೆ ಆಚಾರ್ಯ ಕೃಪಲಾನಿ ಯಂತ ಕಾಂಗ್ರೆಸ್ಸನ್ನು ಒಳಗಿನಿಂದ ಸಮಾಜಮುಖಿ ಮಾಡಲು ಪ್ರಯತ್ನಿಸುತ್ತಿದ್ದ ಕಾಂಗ್ರೆಸ್‌ನ ಕಾಂಗ್ರೆಸ್ ಸೋಷಿಯಲಿಸ್ಟ್ ಬಣದವರು ಆಯ್ಕೆಯಾದದ್ದು ಸಹ ಅಪವಾದವೇ ಹೊರತು ನಿಯಮವಾಗಿರಲಿಲ್ಲ. ಇನ್ನು ಕಮ್ಯುನಿಸ್ಟ್ ಪಕ್ಷದ ಸೋಮನಾಥ್ ಲಾಹರಿ ಎಂಬುವರು ಬಂಗಾಳ ಪ್ರಾಂತ್ಯದಿಂದ ಆಯ್ಕೆಯಾದರೂ ದೇಶ ವಿಭಜನೆಯ ನಂತರ ಅವರು ಪೂರ್ವ ಪಾಕಿಸ್ತಾನದ ಭಾಗವಾದ್ದರಿಂದ ಭಾರತದ ಸಂವಿಧಾನ ಸಭೆಯಿಂದ ಹೊರಬಿದ್ದರು.

ಹೀಗೆ ಸಂವಿಧಾನದ ಕರ್ತೃ ಎಂದೇ ಕರೆಸಿಕೊಳ್ಳಲ್ಪಡುವ ಅಂಬೇಡ್ಕರ್ ಸಂವಿಧಾನ ರಚನಾ ಸಭೆಯ ಸದಸ್ಯರಾಗುವುದೇ ಕಷ್ಟವಾಗಿದ್ದ ಸಂದರ್ಭದಲ್ಲಿ ಕಾಂಗ್ರೆಸ್ಸಿಗರೇ ಅಂದರೆ ಮೇಲ್ಜಾತಿ ಮತ್ತು ಮೇಲ್ವರ್ಗದ ಜನ ಅಥವಾ ಅವರ ಹಿತಾಸಕ್ತಿಯನ್ನು ಪ್ರಶ್ನಿಸಿದ ಜನರೇ ಮೆಜಾರಿಟಿಯಲ್ಲಿದ್ದ ಸಂವಿಧಾನ ರಚನಾ ಸಭೆ ಎಷ್ಟರ ಮಟ್ಟಿಗೆ ಅಂಬೇಡ್ಕರ್ ಅವರ ನೀತಿ ನಿಲುವುಗಳನ್ನು ಒಪ್ಪಿಕೊಂಡಿರಲು ಸಾಧ್ಯ?

ಸಂವಿಧಾನ ರಚನಾ ಸಭೆಯ ಮೊದಲ ಹಂಗಾಮಿ ಅಧ್ಯಕ್ಷರಾಗಿದ್ದದ್ದು ಡಾ. ಸಚ್ಚಿದಾನಂದ ಸಿನ್ಹಾ ಎಂಬ ಬ್ರಿಟಿಷ್ ಸೇವಾಸಕ್ತರು. ನಂತರದಲ್ಲಿ ಸಂವಿಧಾನ ಸಭೆಯ ಶಾಶ್ವತ ಅಧ್ಯಕ್ಷರಾಗಿ ನಂತರ ಭಾರತದ ಪ್ರಥಮ ರಾಷ್ಟ್ರಪತಿಯಾದವರು ಬಾಬು ರಾಜೇಂದ್ರ ಪ್ರಸಾದರು. ಈ ಮಹಾಶಯರು ತಾವು ರಾಷ್ಟ್ರಪತಿಯಾದ ನಂತರ ನೂರು ಜನ ಬ್ರಾಹ್ಮಣರ ಪಾದವನ್ನು ತೊಳೆದು ತಮ್ಮ ನಿಷ್ಠೆ ಎಲ್ಲಿದೆ ಎಂದು ತೋರಿದವರು. ಇವರ ಈ ಕ್ರಮವನ್ನು ತೀವ್ರವಾಗಿ ಖಂಡಿಸಿದ್ದ ಸಮಾಜವಾದಿ ನಾಯಕ ರಾಮ ಮನೋಹರ ಲೋಹಿಯಾರವರು "ಯಾರ ಕೈಗಳು ಬ್ರಾಹ್ಮಣರ ಪಾದವನ್ನು ತೊಳೆಯುತ್ತದೋ ಅದು ಶೂದ್ರರನ್ನು ಒದೆಯುವ ಕಾಲುಗಳನ್ನೂ ಹೊಂದಿರುತ್ತದೆ" ಎಂದು ಆಗಲೇ ಭಾರತಕ್ಕೆ ಎಚ್ಚರಿಕೆ ನೀಡಿದ್ದರು.

ಈ ಸಂವಿಧಾನ ರಚನಾ ಸಭೆ ನಿಯಮ, ನಡವಳಿ, ಹಣಕಾಸು, ರಾಜ್ಯದ ಹಕ್ಕು, ಕೇಂದ್ರದ ಅಧಿಕಾರ, ಅಲ್ಪಸಂಖ್ಯಾತರ ಹಕ್ಕು, ಹಣಕಾಸು ಇನ್ನಿತರ ವಿಷಯಗಳ ಬಗ್ಗೆ ಹಲವಾರು ಉಪಸಮಿತಿಯನ್ನು ರಚಿಸಿತು. ಅದರಲ್ಲಿ ಈ ಎಲ್ಲಾ ವಿಷಯಗಳ ಬಗ್ಗೆ ನಡೆಯುವ ಚರ್ಚೆಯನ್ನು ಸಂಗ್ರಹಿಸಿ ಸಂವಿಧಾನದ ಕರಡನ್ನು ರಚಿಸುವ ಮತ್ತೊಂದು ಪ್ರಧಾನ ಜವಾಬ್ದಾರಿಯುತ ಸಮಿತಿಯಾದ ಕರಡು ರಚನಾ ಸಮಿತಿಗೆ ಅಂಬೇಡ್ಕರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಹೀಗೆ ಅಂಬೇಡ್ಕರ್ ಒಬ್ಬ ಸದಸ್ಯರಾಗಿ ಉದ್ದಕ್ಕೂ ಶೋಷಿತ-ದಲಿತರ ಆಸಕ್ತಿಗಳನ್ನು ಪ್ರತಿನಿಧಿಸುತ್ತಾ ಅವರ ಪರವಾಗಿ ಹೋರಾಡುತ್ತಾ ಬಂದರಾದರೂ ಅವರ ದನಿ ಸಂವಿಧಾನ ರಚನಾ ಸಭೆಯಲ್ಲಿ ಹಲವಾರು ಬಾರಿ ಬಹುಮತವನ್ನು ಪಡೆದುಕೊಳ್ಳಲಾಗಲಿಲ್ಲ. ಇಷ್ಟರ ನಡುವೆಯೂ ಅಂಬೇಡ್ಕರ್ ಕೆಲವು ಶೋಷಿತ ಜನರ ಪರವಾದ ಹಕ್ಕುಗಳನ್ನು ಅಂಗೀಕಾರ ಮಾಡುವಂತೆ ಯಶಸ್ವಿಯಾದರು.

ಆದರೂ ಅಂಬೇಡ್ಕರ್‌ರವರೇ ಸಂವಿಧಾನ ಸಭೆಯ ಅಂತಿಮ ಭಾಷಣದಲ್ಲಿ ಮತ್ತು 1956ರರಲ್ಲಿ ನಿಧನರಾಗುವ ತನಕ ಮಾಡಿದ ಹೋರಾಟಗಳಲ್ಲಿ, ಈ ಸಂವಿಧಾನ ಸಂಪೂರ್ಣವಾಗಿ ಶೋಷಿತರ ವಿಮೋಚನೆಗೆ ಪೂರಕವಾಗುವುದಿಲ್ಲ ಎಂಬ ಮೂಲಭೂತ ಅನುಮಾನವನ್ನು ಮತ್ತು ಆಕ್ರೋಶವನ್ನು ಸ್ಪಷ್ಟವಾಗಿಯೇ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಅಂತಿಮವಾಗಿ ಹೊರಬಂದ ಸಂವಿಧಾನವನ್ನು ಅಂಬೇಡ್ಕರ್ ರಚಿಸಿದ ಸಂವಿಧಾನ ಎಂದು ಕರೆಯುವ ಮೂಲಕ ಅಂಬೇಡ್ಕರ್‌ವರ ಹೋರಾಟದ ಬಗ್ಗೆ ತಪ್ಪು ಚಿತ್ರಣವನ್ನೇ ಕೊಟ್ಟಂತಾಗುತ್ತದೆ. ಏಕೆಂದರೆ ಇಂದು 63 ವರ್ಷಗಳ ಸಂವಿಧಾನಬದ್ಧ ಆಡಳಿತದ ನಂತರವೂ ಈ ದೇಶದ ಶೋಷಿತರ ಬದುಕು ಇನ್ನಷ್ಟು ಅಧಃಪತನವಾಗಲು ಕಾರಣವಿರುವುದು ಸಂವಿಧಾನದ ಅನುಷ್ಠಾನದ ವೈಫಲ್ಯದಲ್ಲಲ್ಲ. ಬದಲಿಗೆ ಸಂವಿಧಾನದಲ್ಲೇ ಆ ಮೂಲಭೂತ ಲೋಪವಿದೆ.

ಅಂಬೇಡ್ಕರ್ ಅವರು ಕನಸಿದ ನಿಜವಾದ ಸಂವಿಧಾನದ ರೂಪುರೇಷೆಗಳೇನೆಂಬುದನ್ನು ಅರ್ಥಮಾಡಿಕೊಂಡರೆ 1950ರ ಜವರಿ 28ರಂದು ಈ ದೇಶಕ್ಕೆ ನೀಡಲಾದ ಸಂವಿಧಾನದ ಮೂಲಕ ಈ ದೇಶದ ಪಟ್ಟಭದ್ರ ಹಿತಾಸಕ್ತಿಗಳು-ಬಂಡವಾಳಶಾಹಿಗಳು, ಭೂಮಾಲೀಕರು ಮತ್ತು ಬ್ರಾಹ್ಮಣವಾದಿಗಳು – ಮೂಲಭೂತವಾಗಿಯೇ ಹೇಗೆ ಈ ದೇಶದ ಜನರಿಗೆ ದ್ರೋಹ ಮಾಡಿದರೆಂಬುದು ಅರ್ಥವಾಗುತ್ತದೆ.

ಅಂಬೇಡ್ಕರ್ ರಚಿಸಿದ ಸಂವಿಧಾನ ಇದು!

1947ರಲ್ಲಿ ದೇಶ ವಿಭಜನೆಯಾಗಿ ಅಂಬೇಡ್ಕರ್ ಆಯ್ಕೆಯಾಗಿದ್ದ ಬಂಗಾಳ ಪ್ರಾಂತ್ಯದಿಂದ ಸಂವಿಧಾನ ರಚನಾ ಸಭೆಗೆ ಆಯ್ಕೆಯಾಗಿದ್ದ ಅಂಬೇಡ್ಕರರ ಸದಸ್ಯತ್ವ ರದ್ದುಗೊಂಡಿದ್ದ ಸಂದರ್ಭದಲ್ಲಿ ಅಂಬೇಡ್ಕರ್‌ರವರು ಈ ದೇಶದ ಭವಿಷ್ಯದ ಸಂವಿಧಾನ ಹೇಗಿರಬೇಕೆಂಬ ಬಗ್ಗೆ 1947ರ ಮಾರ್ಚ್‌ನಲ್ಲಿ ಸಂವಿಧಾನ ರಚನಾ ಸಭೆಯನ್ನು ಉದ್ದೇಶಿಸಿ-'States and Minorities: What are Their Rights and How to Secure them in the Constitution of Free India' "ರಾಜ್ಯಗಳು ಮತ್ತು ಅಲ್ಪಸಂಖ್ಯಾತರು: ಅವರ ಹಕ್ಕುಗಳೇನು ಮತ್ತು ಅದನ್ನು ಸ್ವತಂತ್ರ ಭಾರತದ ಸಂವಿಧಾನದ ಮೂಲಕ ಪಡೆದುಕೊಳ್ಳುವ ಬಗೆ ಹೇಗೆ"ಎಂಬ ಮನವಿಯೊಂದನ್ನು ಸಿದ್ಧಪಡಿಸಿದರು. (ಇಲ್ಲಿ ಅಲ್ಪಸಂಖ್ಯಾತರು ಎಂದು ಕರೆದಿರುವುದು ಕೇವಲ ಧಾರ್ಮಿಕ ಅಲ್ಪಸಂಖ್ಯಾತರನ್ನು ಉದ್ದೇಶಿಸಿ ಮಾತ್ರವಲ್ಲ.) ಇದನ್ನು ಅಂಬೇಡ್ಕರ ಕನಸಿದ 'Constitution of the United States of India' ಎಂದೂ ಬಣ್ಣಿಸಲಾಗುತ್ತದೆ. ಹೀಗಾಗಿ ಇಲ್ಲಿ ಪ್ರಸ್ತಾಪಿತವಾಗಿರುವ ಸ್ವತಂತ್ರ ಭಾರತದ ರೂಪುರೇಷೆ ಮತ್ತು ಅದನ್ನು ಆಗುಮಾಡುವ ಶಾಸನಬದ್ಧ ಪರಿಗಳನ್ನು 1950ರ ಜನವರಿ 26ರಂದು ದೇಶಕ್ಕೆ ಕೊಡಮಾಡಲಾದ ಸಂವಿಧಾನವನ್ನೂ ಹೋಲಿಸಿ ನೋಡಿದಲ್ಲಿ ಅಂಬೇಡ್ಕರ್ ಅವರ ಸಂವಿಧಾನಕ್ಕೂ ಈ ದೇಶದ ಸಂವಿಧಾನಕ್ಕೂ ಇರುವ ಮೂಲಭೂತ ವ್ಯತ್ಯಾಸಗಳೂ ಗೊತ್ತಾಗುತ್ತದೆ.

ಸಂವಿಧಾನ ರಚನಾ ಸಭೆಯ ಮೊದಲ ಹಂಗಾಮಿ ಅಧ್ಯಕ್ಷರಾಗಿದ್ದದ್ದು ಡಾ. ಸಚ್ಚಿದಾನಂದ ಸಿನ್ಹಾ ಎಂಬ ಬ್ರಿಟಿಷ್ ಸೇವಾಸಕ್ತರು. ನಂತರದಲ್ಲಿ ಸಂವಿಧಾನ ಸಭೆಯ ಶಾಶ್ವತ ಅಧ್ಯಕ್ಷರಾಗಿ ನಂತರ ಭಾರತದ ಪ್ರಥಮ ರಾಷ್ಟ್ರಪತಿಯಾದವರು ಬಾಬು ರಾಜೇಂದ್ರ ಪ್ರಸಾದರು. ಈ ಮಹಾಶಯರು ತಾವು ರಾಷ್ಟ್ರಪತಿ ಯಾದ ನಂತರ ನೂರು ಜನರ ಬ್ರಾಹ್ಮಣರ ಪಾದವನ್ನು ತೊಳೆದು ತಮ್ಮ ನಿಷ್ಠೆ ಎಲ್ಲಿದೆ ಎಂದು ತೋರಿದವರು. ಇವರ ಈ ಕ್ರಮವನ್ನು ತೀವ್ರವಾಗಿ ಖಂಡಿಸಿದ್ದ ಸಮಾಜವಾದಿ ನಾಯಕ ರಾಮ ಮನೋಹರ ಲೋಹಿಯಾರವರು "ಯಾರ ಕೈಗಳು ಬ್ರಾಹ್ಮಣರ ಪಾದವನ್ನು ತೊಳೆಯುತ್ತದೋ ಅದು ಶೂದ್ರರನ್ನು ಒದೆಯುವ ಕಾಲುಗಳನ್ನೂ ಹೊಂದಿರುತ್ತದೆ" ಎಂದು ಆಗಲೇ ಭಾರತಕ್ಕೆ ಎಚ್ಚರಿಕೆ ನೀಡಿದ್ದರು.

"ಸ್ಟೇಟ್ಸ್ ಅಂಡ್ ಮೈನಾರಿಟೀಸ್"ನಲ್ಲಿ ಅಂಬೇಡ್ಕರ್‌ರವರು ಇಂದು ಐರೋಪ್ಯ ಮಾದರಿಯ ಪಾರ್ಲಿಮೆಂಟರಿ ಪ್ರಜಾತಂತ್ರ ಯೂರೋಪಿನಲ್ಲೂ ಅಲ್ಲಿನ ಜನರನ್ನು ಬಿಡುಗಡೆ ಮಾಡಿಲ್ಲ. ಭಾರತದಂತ ದೇಶದಲ್ಲಂತೂ ಕೇವಲ ಪಾರ್ಲಿಮೆಂಟರಿ ಪ್ರಜಾತಂತ್ರದಿಂದ ಈ ದೇಶದ ಜನರ ವಿಮೋಚನೆ ಸಾಧ್ಯವೇ ಇಲ್ಲವೆಂದು ಅಭಿಪ್ರಾಯಪಡುತ್ತಾರೆ. ಒಂದು ಪಾಲಿಮೆಂಟರಿ ಪ್ರಜಾತಂತ್ರಕ್ಕೆ ಸ್ವಾತಂತ್ರ್ಯ-ಲಿಬರ್ಟಿ ಮಾತ್ರ ಹೆಚ್ಚು ಪ್ರಿಯ ಮತ್ತು ಆದ್ಯತೆಯದ್ದು. ಆ ನಂತರವೇ ಸಮಾನತೆ ಅಥವಾ ಭ್ರಾತೃತ್ವ. ಆದರೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪರಂಪರಾನುಗತ ಅಸಮಾನತೆಯುಳ್ಳ ದೇಶವೊಂದರಲ್ಲಿ ಕೇವಲ ಸ್ವಾತಂತ್ರ್ಯ ಅಥವಾ ಕೇವಲ ಶಾಸನಬದ್ಧ ರಾಜಕೀಯ ಸಮಾನತೆ ಶೋಷಕ ವರ್ಗಗಳಿಗೆ ಮಾತ್ರ ಇನ್ನೂ ಹೆಚ್ಚು ಸ್ವಾತಂತ್ರ್ಯವನ್ನು ಕೊಡುತ್ತದೆ. ಅದು ಹೇಗೆಂದೂ ಕೂಡಾ ಅಂಬೇಡ್ಕರ್‌ರವರು ಸ್ಪಷ್ಟವಾಗಿ ವಿವರಿಸುತ್ತಾರೆ.

ಅಂಬೇಡ್ಕರ್ ಹೇಳುವಂತೆ ಇಲ್ಲಿ ಸ್ವಾತಂತ್ರ್ಯವೆಂದರೆ ಆರ್ಥಿಕ ಕ್ಷೇತ್ರದಲ್ಲಿ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸರ್ಕಾರದ ಮಧ್ಯಪ್ರವೇಶದಿಂದ ಸ್ವಾತಂತ್ರ್ಯ ಎಂದರ್ಥ. ಅಂದರೆ ಒಬ್ಬ ಭೂಮಾಲಿಕ ಗೇಣಿದಾರನಿಗೆ ಹೆಚ್ಚು ತೆರಿಗೆ ಅಥವಾ ಪಾಲು ಕೊಡಬೇಕೆಂದು ಜುಲುಮೆ ಮಾಡುವ ಸ್ವಾತಂತ್ರ್ಯ ಅಥವಾ ಒಬ್ಬ ಬಂಡವಾಳಿಗನಿಗೆ ಕೆಲಸದ ಅವಧಿಯನ್ನು ಹೆಚ್ಚಿಸಲು ಮತ್ತು ಕಡಿಮೆ ಕೂಲಿಯನ್ನು ಕೊಡಲು ಸ್ವಾತಂತ್ರ್ಯ ಇದೇ ಈ ಸ್ವಾತಂತ್ರ್ಯಕ್ಕೆ ಅರ್ಥ. ಏಕೆಂದರೆ ಸ್ವಾತಂತ್ರ್ಯ-ಲಿಬರ್ಟಿಯ ಅರ್ಥವೇ ಸರ್ಕಾರದ ಮಧ್ಯಪ್ರವೇಶ ಕಡಿಮೆಯಾದಾಗ ಏನು ಉಳಿಯುತ್ತದೋ ಅದು ಎಂದು. ಆದರೆ ಒಂದು ಸಮಾಜ ಅಥವಾ ಕಾರ್ಖಾನೆ ನಡೆಯಲು ಯಾವುದಾದರೂ ಒಂದು ನಿಯಮ ಇರಲೇ ಬೇಕಾಗುತ್ತದೆ.

ಸರ್ಕಾರ ಆ ನಿಯಮ ಮಾಡದಿದ್ದರೆ ಬಂಡವಾಳಿಗರು ಅಥವಾ ಭೂಮಾಲೀಕರೇ ಆ ಕಾನೂನು ಮಾಡುತ್ತಾರೆ. ಹೀಗಾಗಿ ಒಂದು ಅಸಮಾನ ಸಮಾಜದಲ್ಲಿ ಕೇವಲ 'ಲಿಬರ್ಟಿ'ಯೆಂಬುದು ಶೋಷಕ ವರ್ಗಗಳ ಸರ್ವಾಧಿಕಾರವೆಂದೇ ಅರ್ಥ ಎನ್ನುತ್ತಾರೆ ಅಂಬೇಡ್ಕರ್. ಇಂಥಾ ಸಂದರ್ಭದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಗಳಿಸಿಕೊಳ್ಳುವ ಸಮಾನತೆ ಸಾರಾಂಶದಲ್ಲಿ ಜನರ ಬದುಕಿನಲ್ಲಿ ಯಾವ ಅರ್ಥವನ್ನೂ ನೀಡುವುದಿಲ್ಲ. ಹೀಗಾಗಿ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲೂ ಸಮಾನತೆಯನ್ನು ಸಾಧಿಸಿಕೊಡುವಂಥಹ ಸಂವಿಧಾನ ಅತ್ಯಗತ್ಯ.

ಆದರೆ ಪ್ರಪಂಚದೆಲ್ಲೆಡೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಗಳು ರಾಜಕೀಯ ಸಮಾನತೆಯನ್ನು ಮಾತ್ರ ಸಂವಿಧಾನಾತ್ಮಕ ಶಾಸನಗೊಳಿಸಿ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಶಾಸನ ಸಭೆಗಳ ಮರ್ಜಿಗೆ ಬಿಟ್ಟಿವೆ. ಆದರೆ ಚುನಾವಣಾ ಪದ್ಧತಿಯಲ್ಲಿ ಪ್ರಬಲರೇ ಆರಿಸಿ ಬರುತ್ತಿರುವುದು ಎಲ್ಲಾ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಗಳ ಕಥೆಯೇ ಆಗಿರುವುದರಿಂದ ಯಾವ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಗಳಲ್ಲೂ ಆರ್ಥಿಕ ಮತ್ತು ಸಾಮಾ

ಜಿಕ ಸಮಾನತೆ ಜಾರಿಗೆ ಬಂದಿಲ್ಲ ಎಂದು ಅಂಬೇಡ್ಕರ್ ಎಚ್ಚರಿಸುತ್ತಾರೆ. ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯಿಲ್ಲದ ದೇಶಗಳಲ್ಲಿ "ಒಬ್ಬ ಮನುಷ್ಯನಿಗೆ ಒಂದು ಓಟು" ಎಂಬ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮೂಲಭೂತ ರಾಜಕೀಯ ಆಶಯ "ಒಂದು ಓಟು ಒಂದು ಮೌಲ್ಯವಾಗಿ ಪರಿವರ್ತನೆಯಾಗುವುದೇ ಇಲ್ಲ ಎಂದು "ಸ್ಟೇಟ್ಸ್ ಅಂಡ್ ಮೈನಾರಿಟೀಸ್"ನ ನಾಲ್ಕನೇ ಅಂಶಕ್ಕೆ ನೀಡಿರುವ ವಿವರಣಾ ಟಿಪ್ಪಣಿಯಲ್ಲಿ ಸ್ಪಷ್ಟಪಡಿಸುತ್ತಾರೆ. ಮತ್ತು ಅದಕ್ಕೆ ಕಾರಣ ಐರೋಪ್ಯ ದೇಶಗಳ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಒಬ್ಬರಿಗೆ ಒಂದು ಓಟು ಮತ್ತು ಸಾರ್ವತ್ರಿಕ ಮತದಾನವೆಂಬ ರಾಜಕೀಯ ಮೌಲ್ಯಗಳನ್ನು ದಾಟಿ ಮುಂದಕ್ಕೆ ಹೋಗದೇ ಇರುವುದೇ ಕಾರಣವೆಂದೂ ವಿವರಿಸುತ್ತಾರೆ.

ಹಾಗಾದರೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ರಾಜಕೀಯ ಸಮಾನತೆಯ ಜೊತೆಗೆ ಈಡೇರಿಸಿಕೊಳ್ಳುವ ಬಗೆ ಹೇಗೆ ಎಂಬ ಪ್ರಶ್ನೆಗೆ ಅಂಬೇಡ್ಕರ್ ಅದಕ್ಕೆ ಇರುವ ಒಂದೇ ಉತ್ತರ ಡಿಕ್ಟೇಟರ್‌ಶಿಪ್-ನಿರಂಕುಶತ್ವ ಅಥವಾ ಪ್ರಭುತ್ವ ಸಮಾಜವಾದ- ಸ್ಟೇಟ್ ಸೋಷಿಯಲಿಸಂ- ಮೂಲಕ ಮಾತ್ರ ರಾಜಕೀಯ ಸಮಾನತೆಯನ್ನು ತರಲು ಸಾಧ್ಯ ಎಂದು ಉತ್ತರಿಸುತ್ತಾರೆ. ಆದರೆ ಯಾವ ಸ್ವಾತಂತ್ರ್ಯ ಪ್ರೇಮಿಯೂ ನಿರಂಕುಶತ್ವವನ್ನೂ ಒಪ್ಪಲಾರ. ಅದೇರೀತಿ ಸಮಾಜವಾದದ ಬಗೆಗೆ ಒಲವಿರುವ ಯಾವ ಪಾರ್ಲಿಮೆಂಟರಿ ಪ್ರಜಾತಂತ್ರವಾದಿಯೂ ನಿರಂಕುಶತ್ವಕ್ಕೆ ಒಪ್ಪಲಾರ ಎಂದು ಕೂಡಲೇ ವಿವರಿಸುವ ಅಂಬೇಡ್ಕರ್ ಹಾಗಿದ್ದಲ್ಲಿ ಏಕಕಾಲದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವೂ, ಸ್ವಾತಂತ್ರ್ಯವೂ ಉಳಿದುಕೊಂಡು ಪ್ರಭುತ್ವ ಸಮಾಜವಾದ ಜಾರಿಗೆ ಬರಬೇಕೆಂದರೆ ಮೂಲಭೂತ ಹಕ್ಕುಗಳ ಭಾಗವಾಗಿಯೇ ಸಂವಿಧಾನಾತ್ಮಕ ಶಾಸನವಾಗಿ ಸಾಮಾಜಿಕ-ಆರ್ಥಿಕ ಸಮಾನತೆಯೂ ಜಾರಿಗೆ ಬರುವಂತ ಸಂವಿಧಾನ ರಚನೆಯಾಗಬೇಕೆಂದೂ ಆಗ್ರಹಿಸುತ್ತಾರೆ.

ಅಂದರೆ ಓಟು ಹಾಕುವ ಹಕ್ಕಿನಂತೆ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯ ಹಕ್ಕೂ ಸಹ ಮೂಲಭೂತ ಹಕ್ಕಾಗುವುದು ಇದರ ಹಿಂದಿನ ಆಶಯ. ಇದು ಮೂಲಭೂತ ಹಕ್ಕಾಗಿಸದೆ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯನ್ನು ಸಾಧಿಸುವ ಗುರಿಯನ್ನು ಸಂಸತ್ತಿನ ಶಾಸನಾತ್ಮಕ ಅಧಿಕಾರಕ್ಕೆ ಬಿಟ್ಟುಬಿಟ್ಟರೆ ಸಮಾನತೆ ಸಾಧ್ಯವೇ ಇಲ್ಲವೆಂದು ಅಂಬೇಡ್ಕರ್ ಖಚಿತವಾಗಿ ಹೇಳುತ್ತಾರೆ. ಏಕೆಂದರೆ ಅಸಮಾನತೆಯೇ ಉಸಿರಾಗಿರುವ ದೇಶದಲ್ಲಿ ಮೊದಲನೆಯದಾಗಿ ಸಮಾನತೆಯ ಆಶಯವುಳ್ಳ ಜನರಿಗೆ ಅಧಿಕಾರ ಸಿಗುವುದು ಕಷ್ಟ. ಹಾಗೊಮ್ಮೆ ಸಿಕ್ಕರೂ ಅವರೇ ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತಾರೆ ಎಂಬುದಕ್ಕೆ ಪ್ರಪಂಚದ ಯಾವುದೇ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ಪುರಾವೆಯಿಲ್ಲ. ಹೀಗಾಗಿ ಒಮ್ಮೆ ಪ್ರಭುತ್ವ ಸಮಾಜವಾದ ಪರವಾಗಿ ಅಧಿಕಾರಕ್ಕೆ ಬರುವ ಪಕ್ಷ ಮಾಡುವ ಶಾಸನವನ್ನು ಅದಕ್ಕೆ ತದ್ವಿರುದ್ಧವಾದ ಆಶಯಗಳನ್ನು ಇಟ್ಟುಕೊಂಡ ಪಕ್ಷ ಅಧಿಕಾರಕ್ಕೆ ಬಂದಾಗ ರದ್ದುಗೊಳಿಸಬಹುದು.

ಆದರೆ ಅದು ಸಂವಿಧಾನಾತ್ಮ ಶಾಸನವಾದರೆ. ಯಾವ ಸರ್ಕಾರಗಳೂ ಕಿತ್ತುಕೊಳ್ಳದ ಮೂಲಭೂತ ಹಕ್ಕಾದರೆ ಮಾತ್ರ ಅಂಥಾ ಪ್ರಜಾಪ್ರಭುತ್ವ ಜನರಲ್ಲಿ ಸಮಾನತೆಯನ್ನು ತರಲು ಸಾಧ್ಯವಾಗಬಹುದು. ಆದ್ದರಿಂದಲೇ

ಪ್ರಜಾಪ್ರಭುತ್ವಗಳಲ್ಲೂ ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಜಾರಿಗೆ ಬಂದಿಲ್ಲ ಎಂದು ಅಂಬೇಡ್ಕರ್ ಎಚ್ಚರಿಸುತ್ತಾರೆ. ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯಿಲ್ಲದ ದೇಶಗಳಲ್ಲಿ "ಒಬ್ಬ ಮನುಷ್ಯನಿಗೆ ಒಂದು ಓಟು" ಎಂಬ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮೂಲಭೂತ ರಾಜಕೀಯ ಆಶಯ "ಒಂದು ಓಟು ಒಂದು ಮೌಲ್ಯವಾಗಿ ಪರಿವರ್ತನೆಯಾಗುವುದೇ ಇಲ್ಲ ಎಂದು "ಸ್ಟೇಟ್ಸ್ ಅಂಡ್ ಮೈನಾರಿಟೀಸ್"ನ ನಾಲ್ಕನೇ ಅಂಶಕ್ಕೆ ನೀಡಿರುವ ವಿವರಣಾ ಟಿಪ್ಪಣಿಯಲ್ಲಿ ಸ್ಪಷ್ಟಪಡಿಸುತ್ತಾರೆ. ಮತ್ತು ಅದಕ್ಕೆ ಕಾರಣ ಐರೋಪ್ಯ ದೇಶಗಳ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಒಬ್ಬರಿಗೆ ಒಂದು ಓಟು ಮತ್ತು ಸಾರ್ವತ್ರಿಕ ಮತದಾನವೆಂಬ ರಾಜಕೀಯ ಮೌಲ್ಯಗಳನ್ನು ದಾಟಿ ಮುಂದಕ್ಕೆ ಹೋಗದೇ ಇರುವುದೇ ಕಾರಣವೆಂದೂ ವಿವರಿಸುತ್ತಾರೆ.

ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಹಕ್ಕೂ ಸಹ ಮೂಲಭೂತ ಹಕ್ಕಾಗಬೇಕೆಂದೂ ಸಂವಿಧಾನಾತ್ಮಕ ಕಾನೂನಾಗಬೇಕೆಂದೂ ಆಗ್ರಹಿಸುತ್ತಾರೆ. ಹಾಗೂ ಇಂದು ಭಾರತದಲ್ಲಿ ಸಂವಿಧಾನ ಸಭೆಯಲ್ಲಿ ರಚಿತವಾಗುತ್ತಿರುವ ಸಂವಿಧಾನದಿಂದ ಈ ಗುರಿಗಳು ಈಡೇರಲು ಖಂಡಿತಾ ಸಾಧ್ಯವಿಲ್ಲವೆಂದು ಸಾಕಷ್ಟು ಸ್ಪಷ್ಟವಾಗಿಯೇ ಹೇಳುತ್ತಾರೆ.

ಆದ್ದರಿಂದ ತಮ್ಮ "ಸ್ಟೇಟ್ಸ್ ಅಂಡ್ ಮೈನಾರಿಟೀಸ್" ಕ್ಲಾಸ್ 4ರಲ್ಲಿ ರಾಜಕೀಯ ಸಮಾನತೆಯ ಜೊತೆಜೊತೆಗೆ ಹೇಗೆ ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ತರಬೇಕೆಂಬುದರ ಬಗ್ಗೆ ಸಾಂವಿಧಾನಿಕ ಕಲಮುಗಳನ್ನು ರೂಪಿಸುತ್ತಾರೆ.

"ಸ್ಟೇಟ್ಸ್ ಅಂಡ್ ಮೈನಾರಿಟೀಸ್" ನ ಕಲಂ 4ರ ಕೆಲವು ಮುಖ್ಯಾಂಶಗಳು ಹೀಗಿವೆ:

1. ಎಲ್ಲಾ ಕೀಲಕ ಕೈಗಾರಿಕೆಗಳ ಮತ್ತು ವಿಮೆ ಉದ್ಯಮಗಳ ಸಂಪೂರ್ಣ ಒಡೆತನ ಪ್ರಭುತ್ವದ್ದೇ ಆಗಿರಬೇಕು ಹಾಗೂ ಎಲ್ಲಾ ಶ್ರಮಜೀವಿಗಳಿಗೂ ಕಡ್ಡಾಯವಾಗಿ ಸರ್ಕಾರ ವಿಮೆ ಮಾಡಿಸಬೇಕು

2. ಕೃಷಿಯ ರಾಷ್ಟ್ರೀಕರಣವಾಗಿ ಅದನ್ನು ಸರ್ಕಾರವೇ ಸಂಪೂರ್ಣವಾಗಿ ವಹಿಸಿಕೊಳ್ಳಬೇಕು.

3. ಖಾಸಗಿ ವ್ಯಕ್ತಿಗಳ ಬಳಿ ಇರುವ ಎಲ್ಲಾ ಜಮೀನನ್ನೂ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು. ಅದಕ್ಕೆ ಅವರಿಗೆ ಕೊಡುವ ಪರಿಹಾರವನ್ನು ಸರ್ಕಾರದ ಹಣದ ರೂಪದಲ್ಲಲ್ಲದೇ ಡಿಬೆಂಚರ್ ರೂಪದಲ್ಲಿ ಕೊಡಬೇಕು. ಆ ಡಿಬೆಂಚರ್ (ಅಂದರೆ ಮುಂದೆ ಒಂದು ನಿಗದಿತ ಮೊತ್ತದ ಹಣ ಪಾವತಿ ಮಾಡುವುದಾಗಿ ನೀಡುವ ಪ್ರಮಾಣ ಪತ್ರ) ಅನ್ನು ಯಾವಾಗ ನಗದಾಗಿ ಕೊಡಬೇಕೆಂಬ ತೀರ್ಮಾನ ಸರ್ಕಾರವೇ ಮಾಡಬೇಕು.

4. ಎಲ್ಲಾ ಕೃಷಿ ಜಮೀನನ್ನು ಸರ್ಕಾರವೆ ವಶಪಡಿಸಿಕೊಂಡು ಅದನ್ನು ಉಳುಮೆ ಮಾಡಲು ಹಳ್ಳಿಯ ರೈತರಿಗೆ ಉಳುಮೆ ಮಾಡಲು ಗೇಣಿಗೆ ಬಿಟ್ಟುಕೊಡುತ್ತದೆ.

5. ಕೃಷಿ ಭೂಮಿ ಹಂಚಿಕೆ ಮಾಡುವಾಗ ಜಾತಿ-ಮತಗಳ ಬೇಧವಿಲ್ಲದೆ ಮತ್ತು ಭೂಮಾಲೀಕ, ಭೂ ಹೀನ ಕಾರ್ಮಿಕವೆನ್ನುವ ವರ್ಗಗಳು ಹುಟ್ಟದ ರೀತಿ ಹಂಚಿಕೆ ಯಾಗಬೇಕು.

6. ಕೃಷಿಗೆ ಬೇಕಾದ ಸಲಕರಣೆಗಳು ಇತ್ಯಾದಿ ಸಹಾಯವನ್ನು ಸರ್ಕಾರವೇ ಮಾಡಬೇಕು.

7. ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಈ ಎಲ್ಲಾ ಯೋಜನೆಗಳನ್ನು ಸಂವಿಧಾನ ಜಾರಿಗೆ ಬಂದ ನಂತರ ತ್ವರಿತವಾಗಿ ಮತ್ತು ಹೆಚ್ಚೆಂದರೆ ಹತ್ತು ವರ್ಷದೊಳಗೆ ಜಾರಿಗೆ ತರಲೇಬೇಕು.

ಇದು ಅಂಬೇಡ್ಕರ್ ಕಂಡಿದ್ದ ಕನಸಿನ ಸಂವಿಧಾನ..ಇದೇ ನಿಜಕ್ಕೂ ಸಾಕಾರಗೊಂಡಿದ್ದರೆ...ರೆ!!!???

ಇದರ ಜೊತೆಗೆ ಭಾರತದ ಬಹುಧರ್ಮೀಯ ಮತ್ತು ಬಹುಸಮುದಾಯವುಳ್ಳ ಸಮಾಜದಲ್ಲಿ ಒಂದು ಕ್ಷೇತ್ರದಲ್ಲಿ ಇತರರಿಗಿಂತ ಹೆಚ್ಚು ಓಟು ಪಡೆಯುವವರು ಮಾತ್ರ ಗೆಲ್ಲುವ ಚುನಾವಣೆ ವ್ಯವಸ್ಥೆ ಅಲ್ಪಸಂಖ್ಯಾತರಿಗೆ ಅನ್ಯಾಯವನ್ನೇ ಮಾಡುತ್ತದೆ ಮತ್ತು ಬಹುಸಂಖ್ಯಾತರ ಮತ್ತು ಪ್ರಬಲರ ರಾಜ್ಯಭಾರವನ್ನೇ ಮುಂದುವರೆಸುತ್ತದೆ ಎಂಬುದು ಅಂಬೇಡ್ಕರ್ ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಹೀಗಾಗಿ ಬಹುಸಂಖ್ಯಾತರ ಸೀಟುಗಳು ಶೇ.40ರಷ್ಟನ್ನು ದಾಟದಂತೆ ಶಾಸನವಾಗಬೇಕೆಂಬುದೂ ಅವರ ಆಗ್ರಹವಾಗಿತ್ತು. ಅಲ್ಪಸಂಖ್ಯಾತರಿಗೆ ಅದರಲ್ಲೂ ಅತಿ ಅಲ್ಪಸಂಖ್ಯಾತರಿಗೆ ಅವರ ಜನಸಂಖ್ಯಾ ಪ್ರಮಾಣಕ್ಕಿಂತ ಹೆಚ್ಚಿನ ಸೀಟುಗಳು ದೊರಕುವುದನ್ನು ಶಾಸನಬದ್ಧಗೊಳಿಸದಿದ್ದರೆ ಈ ದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರ ಶೋಷಣೆ ಅವ್ಯಾಹತವಾಗಿ ಮುಂದುವರೆಯುತ್ತದೆ ಎಂಬುದೂ ಅವರ ನಿಲುವಾಗಿತ್ತು.

ಅದೇರೀತಿ ಚುನಾವಣಾ ಪದ್ಧತಿಯಲ್ಲಿ ಈಗಿನ ಒಂದು ಕ್ಷೇತ್ರದಲ್ಲಿ ಇತರರಿಗಿಂತ ಹೆಚ್ಚು ಮತ ಪಡೆಯುವವರು ಗೆಲ್ಲುವ First-Past-The-Post (FPTP) ಪದ್ಧತಿಗೆ ಬದಲಾಗಿ ಒಟ್ಟು ಪಡೆದ ಓಟುಗಳಾಧಾರದ ಸೀಟು ಪದ್ಧತಿ (proportionate election system) ಹೆಚ್ಚು ಸೂಕ್ತವೆಂಬುದೂ ಅಂಬೇಡ್ಕರ್ ಅವರ ನಿಲುವಾಗಿತ್ತು. ಹಾಗೆಯೇ Single Trnsferable Vote (STV) ಪದ್ಧತಿಯ ಪ್ರಕಾರ ಮತದಾರರು ಸ್ಪರ್ಧಿಸಿದ ಅಭ್ಯರ್ಥಿಗಳಿಗೆ ಆದ್ಯತೆಯ ಪ್ರಕಾರ ರ್‍ಯಾಂಕ್ ನೀಡುವ ಮತ್ತು ನಿರ್ದಿಷ್ಟ ಮೊತ್ತದಷ್ಟು ರ್‍ಯಾಂಕಿಂಗನ್ನು ಪಡೆದವರು ಮಾತ್ರ ಗೆದ್ದವರೆಂದು ಘೋಷಿಸುವ ಪದ್ಧತಿಯನ್ನೂ ಹಾಗೆಯೇ ದಲಿತರಿಗೆ ತಮ್ಮೊಳಗೆ ದಲಿತರೊಬ್ಬರನ್ನು ಪ್ರತ್ಯೇಕವಾಗಿ ಆಯ್ಕೆ ಮಾಡಿಕೊಳ್ಳುವ ಮತ್ತು ಸವರ್ಣೀಯರಲ್ಲೂ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವ ದ್ವಿ ಮತದಾನದ ಹಕ್ಕೂ ದೊರಕಬೇಕೆಂಬ ಈ ದೇಶದ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವವಾಗಿಸುವ ಪ್ರಸ್ತಾಪಗಳು ಅಂಬೇಡ್ಕರ್ ಕಂಡ ಕನಸಿನ ಸಂವಿಧಾನದಲ್ಲಿತ್ತು.

ಆದರೆ 1950ರ ಜನವರಿ 26ರಂದು ಈ ದೇಶಕ್ಕೆ ನೀಡಲಾದ ಸಂವಿಧಾನ ಈ ಆಶಯಗಳಿಗೆ ಮೂಲ ಭೂತವಾಗಿಯೇ ದ್ರೋಹ ಬಗೆದಿರಲಿಲ್ಲವೇ?

1950ರ ಸಂವಿಧಾನದಲ್ಲಿ ಅಂಬೇಡ್ಕರ್ ಎಲ್ಲಿದ್ದಾರೆ?

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಎಲ್ಲಾ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿದ್ದಂತೆ ನಮ್ಮ ದೇಶದಲ್ಲಿ ಸಂವಿಧಾನದಲ್ಲೂ ಘೋಷಿತವಾಗಿದೆ. ಆದರೆ ರಾಜಕೀಯ ಸಮಾನತೆ ಅರ್ಥಾತ್ ಒಬ್ಬರಿಗೆ ಒಂದು ಓಟು ಎಂಬ ರಾಜಕೀಯ ಹಕ್ಕು ಮೂಲಭೂತ ಹಕ್ಕಾಯಿತೇ ವಿನಃ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಹಕ್ಕುಗಳು ಮೂಲಭೂತ ಹಕ್ಕುಗಳ ಪರಿಧಿಯನ್ನು ಸೇರಲೇ ಇಲ್ಲ.

ನಮ್ಮ ಸಂವಿಧಾನದ ಅನುಚ್ಛೇಧ 39 (ಬಿ) "ಈ ದೇಶದ ಭೌತಿಕ ಸಂಪನ್ಮೂಲಗಳು ಎಲ್ಲಾ ಸಾರ್ವಜನಿಕರ ಹಿತವನ್ನು ಕಾಯುವಂತೆ ಹಂಚಿಕೆಯಾಗಬೇಕು" ಎಂದೂ ಅನುಚ್ಛೇಧ 39 (ಸಿ) "ಪ್ರಭುತ್ವದ ಆರ್ಥಿಕ ನೀತಿಗಳು ಸಂಪನ್ಮೂಲಗಳು ಒಂದು ಕಡೆ ಕೇಂದ್ರೀಕೃತವಾಗದಂತೆ ನೋಡಿಕೊಳ್ಳಬೇಕೆಂದೂ", ಅನುಚ್ಛೇಧ 41 "ಪ್ರಭುತ್ವವು ಎಲ್ಲರಿಗೂ ದುಡಿಯುವ ಮತ್ತು ಶಿಕ್ಷಣದ ಹಕ್ಕನ್ನು ಮತ್ತು ದುರ್ಬಲರಿಗೆ, ವೃದ್ಧರಿಗೆ ಸರ್ಕಾರದಿಂದ ಸಹಾಯ ದೊರೆಯುವಂತೆಯೂ" ನೋಡಿಕೊಳ್ಳಬೇಕೆಂದೂ, (ಆದರೆ "ಸರ್ಕಾರದ ಆರ್ಥಿಕ ಸಾಮರ್ಥ್ಯಕ್ಕೆ ಒಳಪಟ್ಟು ಎಂಬ ಶರತ್ತೂ ಸೇರಿಸಲ್ಪಟ್ಟಿದೆ!), ಅನುಚ್ಛೇಧ 43 "ಎಲ್ಲ ದುಡಿಯುವ ವರ್ಗಗಳಿಗೂ ಜೀವಿಸಲು ಸಾಧ್ಯವಾಗುವಷ್ಟು ವೇತನವನ್ನು ಒದಗಿಸುವಂತೆ ನೋಡಿಕೊಳ್ಳುವ", "ಗಂಡಸು ಮತ್ತು ಹೆಂಗಸರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಒದಗಿಸುವ", ಅನುಚ್ಛೇಧ 46 "ದಲಿತ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಪುರೋಭಿವೃದ್ಧಿಯನ್ನು ಖಾತರಿಪಡಿಸುವ" ನೀತಿಗಳನ್ನು ಮಾಡಬೇಕೆಂದೂ ಪ್ರಭುತ್ವಕ್ಕೆ ಸಂವಿಧಾನ ಮಾರ್ಗದರ್ಶನ ಮಾಡುತ್ತದೆ.

ಆದರೆ ಈ ಎಲ್ಲಾ ಮಾರ್ಗದರ್ಶನಗಳು ಕೇವಲ ಮಾರ್ಗದರ್ಶನಗಳಷ್ಟೆ. ಏಕೆಂದರೆ ಈ ಎಲ್ಲಾ ಪುರೋಗಾಮೀ ನೀತಿಗಳು ಸರ್ಕಾರಕ್ಕೆ ತನ್ನ ನೀತಿಗಳನ್ನು ರೂಪಿಸುವಾಗ ಗಮನಿಸಬೇಕಾದ ಅಂಶಗಳೇ ವಿನಃ ಅದಕ್ಕೆ ಶಾಸನಾತ್ಮಕ ನಿರ್ದೇಶನವಿಲ್ಲವೆಂದೂ ಅದನ್ನು ಯಾವುದೇ ನ್ಯಾಯಾಲಯಗಳು ಊರ್ಜಿತಕ್ಕೆ ತರಬೇಕೆಂದೂ ನಿರ್ದೇಶನ ನೀಡುವ ಹಾಗಿಲ್ಲವೆಂದೂ ಈ ಎಲ್ಲಾ ಅನುಚ್ಛೇದಗಳನ್ನು ಪ್ರಸ್ತಾಪ ಮಾಡುವ ಮುಂಚೆಯೇ ಅನುಚ್ಛೇಧ 37ರಲ್ಲಿ "The provisions contained in this Part shall not be enforced by any court, but the principles therein laid down are nevertheless fundamental in the governance of the country and it shall be the duty of the State to apply these principles in making laws. "ರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅಂಬೇಡ್ಕರ್ ಸ್ಪಷ್ಟವಾಗಿ ವಿರೋಧಿಸಿದ್ದು ಈ ಸಾಧ್ಯತೆಯನ್ನೇ! ಎಲ್ಲಿಯತನಕ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಳು ಮೂಲಭೂತ ಹಕ್ಕಾಗದೇ ಅಧಿಕಾರಸ್ಥರ ಮರ್ಜಿಗೆ ಬಿಡಲಾಗುತ್ತದೆಯೋ ಅಲ್ಲಿಯನತಕ ಈ ದೇಶದಲ್ಲಿ ಒಂದು ಓಟು ಒಂದು ಮೌಲ್ಯವಾಗಲು ಸಾಧ್ಯವೇ ಇಲ್ಲವೆಂಬುದು ಅಂಬೇಡ್ಕರ್ ಅವರ ಅಭಿಪ್ರಾಯವಾಗಿತ್ತು.

> **ಈ ದೇಶದ ಸಾಮಾಜಿಕ ಅಸಮಾನತೆಗೆ ರಾಜಕೀಯ ನೆಲೆಯನ್ನು ಒದಗಿಸಿಕೊಡುವ ರಾಜಕೀಯ, ಆರ್ಥಿಕ ಅಸಮಾನತೆಯನ್ನು ಶಾಶ್ವತಗೊಳಿಸುವಂತ ಆಸ್ತಿ ಹಕ್ಕು ಮಾಡುತ್ತಲೇ ಇರುವ ಹಕ್ಕುಗಳು, ಮತ್ತು ರಾಜಕೀಯವಾಗಿಯೂ ಬಡವರು-ಧಾರ್ಮಿಕ ಅಲ್ಪ ಸಂಖ್ಯಾತರು ಎಂದೆಂದಿಗೂ ಬಹುಸಂಖ್ಯಾತರ ಭಯದಲ್ಲೇ ಬದುಕುವಂತೆ ಮಾಡುವ ರಾಜಕೀಯ ಸಂಸ್ಥೆಗಳನ್ನೇ ಈ ಸಂವಿಧಾನ ನೀಡಿದೆ. "ಅಂಬೇಡ್ಕರ್ ಬರೆದ ಸಂವಿಧಾನ "ಎಂದು ಜನರನ್ನು ನಂಬಿಸುವ ಸರ್ಕಾರಗಳು ಅಂಬೇಡ್ಕರ್‌ಗಾಗಿರುವ ಈ ಮೂಲಭೂತ ದ್ರೋಹಗಳನ್ನು ಹೇಳುವುದೇ ಇಲ್ಲ.**

ಅದೇರೀತಿ ಕೃಷಿ ಭೂಮಿಯ ರಾಷ್ಟ್ರೀಕರಣ ಮತ್ತು ಜಮೀನಿನ ಮೇಲೆ ಜಾತಿ ಬೇಧಗಳಿಲ್ಲದ ಸಾಮೂಹಿಕ ಒಡೆತನ ಹಾಗೂ ಸಾಮೂಹಿಕ ದುಡಿಮೆ ಭೂಮಾಲೀಕ-ಜೀತಗಾರ ಮತ್ತು ಅಸ್ಪೃಶ್ಯತೆ ಹಾಗೂ ಜಾತೀಯತೆಗಳು ನಿವಾರಣೆಯಾಗಲು ಅತ್ಯಗತ್ಯ ಆರ್ಥಿಕ ಕಾರ್ಯಕ್ರಮಗಳೆಂಬುದು ಅಂಬೇಡ್ಕರ್‌ರವರ ದೂರಗಾಮೀ ಆಲೋಚನೆಯಾಗಿತ್ತು. ಆದರೆ ನಮ್ಮ ಸಂವಿಧಾನವಾಗಲೀ ಮತ್ತು ಸಂಸತ್ತಾಗಲೀ ಅದರ ಬಗ್ಗೆ ಚಕಾರವೆತ್ತಿಲ್ಲ. ಅದೇ ರೀತಿ ಚುನಾವಣಾ ಪದ್ಧತಿಗಳಲ್ಲಿ ತರಬೇಕಾದ ಮೂಲಭೂತ ಬದಲಾವಣೆಯೂ ಸಹ ಅಂಬೇಡ್ಕರ್ ಯೋಜನೆಯ ಪ್ರಮುಖ ಧಾತುವಾಗಿತ್ತು. ಆದರೆ ಅಂಬೇಡ್ಕರ್ ಹೋರಾಡಿದ ಈ ಯಾವುದೇ ಕ್ರಮಗಳು ಮತ್ತು ಯೋಜನೆಗಳು ಸಂವಿಧಾನದ ಭಾಗವಾಗಲೇ ಇಲ್ಲ.

ಬದಲಿಗೆ ಈ ದೇಶದ ಸಾಮಾಜಿಕ ಅಸಮಾನತೆಗೆ ರಾಜಕೀಯ ನೆಲೆಯನ್ನು ಒದಗಿಸಿಕೊಡುವ ರಾಜಕೀಯ, ಆರ್ಥಿಕ ಅಸಮಾನತೆಯನ್ನು ಶಾಶ್ವತಗೊಳಿಸುವಂತ ಆಸ್ತಿ ಹಕ್ಕು ಮಾಡುತ್ತಲೇ ಇರುವ ಹಕ್ಕುಗಳು, ಮತ್ತು ರಾಜಕೀಯವಾಗಿಯೂ ಬಡವರು ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರು ಎಂದೆಂದಿಗೂ ಬಹುಸಂಖ್ಯಾತರ ಭಯದಲ್ಲೇ ಬದುಕುವಂತೆ ಮಾಡುವ ರಾಜಕೀಯ ಸಂಸ್ಥೆಗಳನ್ನೇ ಈ ಸಂವಿಧಾನ ನೀಡಿದೆ. "ಅಂಬೇಡ್ಕರ್ ಬರೆದ ಸಂವಿಧಾನ "ಎಂದು ಜನರನ್ನು ನಂಬಿಸುವ ಸರ್ಕಾರಗಳು ಅಂಬೇಡ್ಕರ್‌ಗಾಗಿರುವ ಈ ಮೂಲಭೂತ ದ್ರೋಹಗಳನ್ನು ಹೇಳುವುದೇ ಇಲ್ಲ. (ಬಹಳಷ್ಟು ದಲಿತ ನಾಯಕರೂ ಈ ದ್ರೋಹದ ಬಗ್ಗೆ ಚಕಾರವೆತ್ತುವುದೇ ಇಲ್ಲ)

ಬದಲಿಗೆ ಸಂವಿಧಾನದ ಬಗ್ಗೆ ವಿಮರ್ಶೆ ಮಾಡಿದರೆ ಅಂಬೇಡ್ಕರ್ ಬಗ್ಗೆ ಮಾಡಿದ ವಿಮರ್ಶೆಯೆಂಬಂತೆ ಮತ್ತು ಪ್ರಜಾತಂತ್ರದ ಬಗ್ಗೆ ಮಾಡಿದ ವಿಮರ್ಶೆಯೆಂಬಂತೆ ಭಾವಾವೇಶದಲ್ಲಿ ಮಾತಾಡುತ್ತಾರೆ. ವಾಸ್ತವ ನೆಲೆಗಟ್ಟಿನಲ್ಲಿ ಚಿಂತಿಸದೆ, ಅಂಬೇಡ್ಕರ್ ಚಿಂತನೆಯನ್ನೂ ಅರ್ಥಮಾಡಿಕೊಳ್ಳದೆ ಅಂಬೇಡ್ಕರ್‌ರವರನ್ನು ಕೇವಲ ಪ್ರತಿಮೆಯನ್ನಾಗಿ ಮಾಡಿಕೊಂಡು ಭಾವಾವೇಶಕ್ಕೆ ಬಲಿಯಾಗಿರುವುದೂ ಸಹ ಇಂದಿನ ಒಟ್ಟಾರೆ ದುರಂತಕ್ಕೆ ಒಂದು ಪ್ರಮುಖ ಕಾರಣ!)

ಇಂದು ಸಂಪನ್ಮೂಲಗಳ ಅಪಾರ ಪ್ರಮಾಣದ ಕೇಂದ್ರೀಕರಣ ನಡೆಯುತ್ತಿದೆ. ಅದರಲ್ಲೂ 1991ರ ನಂತರ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳು ಜಾರಿಯಾದ ಮೇಲೆ ಒಂದೆಡೆ ಲಕ್ಷ ಕೋಟಿ ಆಸ್ತಿಗೆ ಅಧಿಪತಿಗಳಾಗಿರುವ ಕೆಲವೇ ಬಿಲಿಯನಾಧೀಶ್ವರರೂ ಮತ್ತೊಂದೆಡೆ ದಿನಕ್ಕೆ 20ರೂ ಸಹ ಸಂಪಾದಿಸಲಾಗದ ಕೋಟ್ಯಾಂತರ ಜನರು ಸೃಷ್ಟಿಯಾಗುತ್ತಿದ್ದಾರೆ. ಜಾತಿ ರಾಜಕಾರಣವು ಮತ್ತು ಬ್ರಾಹ್ಮಣವಾದಿ ಶಕ್ತಿಗಳ ಸಾಮಾಜಿಕ ಅಧಿಕಾರ ಗಟ್ಟಿಯಾಗುತ್ತಾ ಈ ದೇಶದ ದಲಿತ ಮತ್ತು ಶೋಷಿತ ಜನತೆಯಮೇಲಿನ ಶೋಷಣೆ ಹೆಚ್ಚಾಗುತ್ತಿದೆ. ರೈತಾಪಿ ದೇಶದಲ್ಲಿ 2 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. 20 ನಿಮಿಷಕ್ಕೊಮ್ಮೆ ದಲಿತರ ಮೇಲೆ ಅತ್ಯಾಚಾರ ಮತ್ತು ಹತ್ತು ನಿಮಿಷಕ್ಕೊಮ್ಮೆ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವೂ ನಡೆಯುತ್ತಿದೆ. ಶೇ. 50 ರಷ್ಟು ಮಕ್ಕಳು ಪೌಷ್ಟಿಕಾಂಶದ ಕೊರತೆಯಿಂದ ನರಳುತ್ತಿದ್ದಾರೆ ಅಥವಾ ಸಾಯುತ್ತಿದ್ದಾರೆ. ಈ ದೇಶದ ಚುನಾವಣಾ ಪದ್ಧತಿಯ ಮೂಲಕವೇ ಅಧಿಕಾರ ಹಿಡಿದಿರುವ ಮಾರುಕಟ್ಟೆ ಶಕ್ತಿಗಳು ಮತ್ತು ಬ್ರಾಹ್ಮಣವಾದಿ ಹಿಂದೂತ್ವವಾದಿಗಳು ಆರ್ಥಿಕ ಅಸಮಾನತೆಯನ್ನು ಮತ್ತು ಸಾಮಾಜಿಕ ಸಮಾನತೆಯನ್ನು ಗಟ್ಟಿಗೊಳಿಸುತ್ತಿದ್ದಾರೆ.

ಇದು "ಅತ್ಯುತ್ತಮ ಸಂವಿಧಾನ"ದ ಅನುಷ್ಠಾನದಿಂದ ಉಂಟಾಗಿರುವ ಸಮಸ್ಯೆ ಇಲ್ಲ. ಸಂವಿಧಾನ ರಚನೆಯಲ್ಲಿ ಮೂಲಭೂತವಾಗಿ ಅಂಬೇಡ್ಕರ್ ಅಶಯಗಳನ್ನು ಹೊರಗಿಟ್ಟು ಉಳ್ಳವರ ಹಿತಾಸಕ್ತಿಗೆ ಅನುಗುಣವಾಗಿ ರಚಿಸಿದ ಸಂವಿಧಾನದಲ್ಲೇ ಇವತ್ತಿನ ಬವಣೆಯ ಮತ್ತು ಬಿಕ್ಕಟ್ಟಿನ ಬೀಜಗಳಿವೆ.

ಅಂಬೇಡ್ಕರ್ ಕನಸಿದ ಸಂವಿಧಾನಕ್ಕೆ ಮತ್ತೊಂದು ಸ್ವಾತಂತ್ರ್ಯ ಹೋರಾಟ!

ಇದನ್ನು ನಾವು ಈಗ ಕಾಣುತ್ತಿರಬಹುದು. ಆದರೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಸಂವಿಧಾನಾತ್ಮಕ ಕಾನೂನು ಮಾಡದ, ಮೂಲಭೂತ ಹಕ್ಕನ್ನಾಗಿ ಮಾಡದ ಈ ಸಂವಿಧಾನ ಖಂಡಿತವಾಗಿ ಇದೇ ಪರಿಣಾಮಗಳನ್ನು ಉಂಟು ಮಾಡುತ್ತದೆ ಎಂದು ಅಂಬೇಡ್ಕರ್ ರವರು 1949ರಲ್ಲೇ ಎಚ್ಚರಿಸಿದ್ದರು. 1949ರ ನವಂಬರ್ 26ರಂದು ಸಂವಿಧಾನ ರಚನಾ ಸಭೆಯ ಅಂತಿಮ ಸಭೆಯಲ್ಲಿ ಭಾಷಣ ಮಾಡುತ್ತಾ ಈ ಅಂಶಗಳನ್ನು ಮತ್ತು ಎಚ್ಚರಿಕೆಯನ್ನು ಭಾರತದ ಜನತೆಗೆ ಮತ್ತು ಹೊಸದಾಗಿ ರೂಪಿತವಾದ ಭಾರತದ ಗಣತಂತ್ರಕ್ಕೆ ನೀಡಿದರು:

"ಕೇವಲ ರಾಜಕೀಯ ಪ್ರಜಾತಂತ್ರದಿಂದ ನಾವು ಸಮಾಧಾನಗೊಳ್ಳಬಾರದು. ನಾವು ನಮ್ಮ ರಾಜಕೀಯ ಪ್ರಜಾತಂತ್ರವನ್ನು ಸಾಮಾಜಿಕ ಪ್ರಜಾತಂತ್ರವನ್ನಾಗಿ ಮಾಡಬೇಕು. ಸಾಮಾಜಿಕ ಪ್ರಜಾತಂತ್ರವಿಲ್ಲದೆ ರಾಜಕೀಯ ಪ್ರಜಾತಂತ್ರ ಉಳಿಯಲಾರದು......ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಒಟ್ಟು ಒಂದೇ ಮೌಲ್ಯವಾಗಿದ್ದು ಒಂದನ್ನು ಮತ್ತೊಂದರಿಂದ ಬೇರ್ಪಡಿಸುವುದು ಪ್ರಜಾಪ್ರಭುತ್ವದ ಆಶಯವನ್ನೇ ವಿಫಲಗೊಳಿಸುತ್ತದೆ. ಸಮಾನತೆ ಇಲ್ಲದ ಸ್ವಾತಂತ್ರ್ಯ ಹಲವರ ಮೇಲೆ ಕೆಲವರ ಅಧಿಪತ್ಯವನ್ನು ಖಾಯಂಗೊಳಿಸುತ್ತದೆ. ಸ್ವಾತಂತ್ರ್ಯವಿಲ್ಲದ ಸಮಾನತೆ ವ್ಯಕ್ತಿಗಳ ಕಾರ್ಯೋತ್ಸಾಹವನ್ನೇ ಕೊಲ್ಲುತ್ತದೆ. ಭ್ರಾತೃ

ತ್ವವಿಲ್ಲದೆ ಸಮಾನತೆ ಮತ್ತು ಸ್ವಾತಂತ್ರ್ಯಗಳು ಸಹಜ ವಿದ್ಯಮಾನವಾಗಲು ಸಾಧ್ಯವಿಲ್ಲ...ನಮ್ಮ ಸಮಾಜದಲ್ಲಿ ಎರಡು ಸಂಗತಿಗಳು ಗೈರುಹಾಜರಾಗಿರುವುದನ್ನು ನಾವು ಪರಿಗಣಿಸಬೇಕು. ಅದರಲ್ಲಿ ಮುಖ್ಯವಾದದ್ದು ಸಮಾನತೆಯೆಂಬ ಮೌಲ್ಯವೇ ಗೈರುಹಾಜರಾಗಿರುವುದು. ಸಾಮಾಜಿಕ ಸ್ಥರದಲ್ಲಿ ಕೆಲವರು ಮಾತ್ರ ಮೇಲ್ ಸ್ಥರದಲ್ಲಿ ಉಳಿದವರು ನೀಚಾತಿನೀಚ ಸ್ಥರದಲ್ಲಿ ಉಳಿಸುವ ಸಾಮಾಜಿಕ ಸಮಾನತೆ. ಅದೇ ರೀತಿ ಆರ್ಥಿಕವಾಗಿ ನಮ್ಮಲ್ಲಿ ಕೆಲವರು ಅಪಾರ ಅಸ್ತಿಯನ್ನು ಸಂಗ್ರಹಿಸಿಕೊಂಡಿದ್ದರೆ ಉಳಿದವರು ಅಸಹನೀಯ ಬಡತನದಲ್ಲಿ ಬದುಕಿದ್ದಾರೆ.

1950ರ ಜನವರಿ 26ರಂದು ನಾವು ವೈರುಧ್ಯಗಳಿಂದ ಕೂಡಿದ ಬದುಕಿಗೆ ಪ್ರವೇಶಿಸುತ್ತಿದ್ದೇವೆ. ರಾಜಕೀಯದಲ್ಲಿ ನಾವು ಸಮಾನತೆಯನ್ನು ಪಡೆದಿರುತ್ತೇವೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಸಮಾನತೆ ಮುಂದುವರೆದಿರುತ್ತದೆ. ರಾಜಕೀಯದಲ್ಲಿ ನಾವು ಒಂದು ಒಬ್ಬರಿಗೆ ಒಂದು ಓಟು ಮತ್ತು ಒಂದು ಓಟಿಗೆ ಒಂದು ಮೌಲ್ಯವನ್ನು ಪರಿಗಣಿಸಿರುತ್ತೇವೆ. ಆದರೆ ನಮ್ಮ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಕಾರಣದಿಂದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಒಬ್ಬ ಮನುಷ್ಯನಿಗೆ ಒಂದು ಮೌಲ್ಯವೆಂಬ ತತ್ವವನ್ನು ನಿರಾಕರಿಸುತ್ತಿರುತ್ತೇವೆ.

ಈ ವೈರುಧ್ಯಗಳಿಂದ ಕೂಡಿದ ಸಾಮಾಜಿಕ ಬದುಕನ್ನು ಎಷ್ಟು ಕಾಲ ಮುಂದುವರೆಸಲು ಸಾಧ್ಯ? ಎಷ್ಟು ಕಾಲ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಸಮಾನತೆಯನ್ನು ನಿರಾಕರಿಸಲು ಸಾಧ್ಯ? ಇನ್ನೂ ಇದೇ ಬಗೆಯ ನಿರಾಕರಣೆಯನ್ನು ಮುಂದುವರೆಸುತ್ತಾ ಹೋದರೆ ನಮ್ಮ ರಾಜಕೀಯ ಪ್ರಜಾಸತ್ತೆಗೆ ಆಪತ್ತು ಬರುತ್ತದೆ. ನಾವು ಆದಷ್ಟು ಬೇಗ ಈ ವೈರುಧ್ಯಗಳನ್ನು ನಿರ್ಮೂಲನೆ ಮಾಡದಿದ್ದರೆ ಅಸಮಾನತೆಯಿಂದ ನೊಂದ ಜನ ನಾವು ಕಷ್ಟಪಟ್ಟು ಕಟ್ಟಿರುವ ರಾಜಕೀಯ ಪ್ರಜಾಸತ್ತೆಯ ರಚನೆಯನ್ನೇ ಸ್ಫೋಟ ಮಾಡುತ್ತಾರೆ"

ಇದು ನಿಜವಾದ ಪ್ರಜಾತಂತ್ರವಾದಿಯ ನೋವಿನ ಮಾತೂ ಹೌದು. ದಾರ್ಶನಿಕ ಎಚ್ಚರಿಕೆಯೂ ಹೌದು. ಕಳೆದ 62 ವರ್ಷಗಳ ಸಾಂವಿಧಾನಿಕ ಬದುಕು ಅಂಬೇಡ್ಕರ್ ಹೇಳಿದಂತೆ ಸಾಮಾಜಿಕ ಅಸಮಾನತೆಯನ್ನು ಮತ್ತು ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುತ್ತಾ ರಾಜಕೀಯ ಅಸಮಾನತೆಯನ್ನು ಮತ್ತು ನಮ್ಮ ರಾಜಕೀಯ ಪ್ರಜಾಸತ್ತೆಯನ್ನು ಅವಹೇಳನ ಮಾಡುತ್ತಿದೆ.

ಬಂಡವಾಳವಾದ ಮತ್ತು ಬ್ರಾಹ್ಮಣವಾದ ಈ ದೇಶದ ಜನರ ಶತ್ರುಗಳು ಎಂದು ಅಂಬೇಡ್ಕರ್ ಸಷ್ಟವಾಗಿ ಹೇಳಿದ್ದರು. ಅವರು ಕನಸು ಕಂಡ ಸಂವಿಧಾನ ಈ ಎರಡು ಶತ್ರುಗಳನ್ನು ಸೋಲಿಸಲು ನೈಜ ಯೋಜನೆಗಳನ್ನು ಹೊಂದಿದ್ದವು. ಆದರೆ 1950ರಲ್ಲಿ ದತ್ತವಾದ ಸಂವಿಧಾನ ಪ್ರಧಾನವಾಗಿ ಇದೇ ಶಕ್ತಿಗಳಿಗೆ ಪೂರಕವಾಗಿತ್ತೆಂಬುದನ್ನು ಇಂದು ಸಂವಿಧಾನದ ಹೆಸರಲ್ಲಿ ನಮ್ಮನ್ನು ಆಳುತ್ತಿರುವ ಜಾಗತೀಕರಣ ಮತ್ತು ಹಿಂದೂತ್ವವೆಂಬ ಅವಳೀ ಶತ್ರುಗಳು ರುಜುವಾತು ಮಾಡಿವೆ.

ಇಂದು 1950ಕ್ಕಿಂತಲೂ ದೊಡ್ಡ ಬಿಕ್ಕಟ್ಟನ್ನು ಎದುರಿಸುತ್ತಿದ್ದೇವೆ. ಈಗ ಅಂಬೇಡ್ಕರ್ ಕನಸು ಕಂಡ ಸಮಾಜವಾದಿ ಸಂವಿಧಾನವನ್ನು ಸಾಕಾರ ಮಾಡಲು ಮತ್ತೊಂದು ನೈಜ ಸ್ವಾತಂತ್ರ್ಯ ಹೋರಾಟವನ್ನು ಪ್ರಾರಂಭಿಸದೇ ಬೇರೇ ದಾರಿಯೇನಿದೆ? □

ಅಂಬೇಡ್ಕರ್ ಮತ್ತು ನಾವು

ಅವರು ಜಾತಿ ನಾಶಕ್ಕಾಗಿ ಸಿಡಿದೆದ್ದರು
ನಾವು ಅವರನ್ನೇ ಜಾತಿಯಲ್ಲಿ ಬಂದಿಸಿಟ್ಟೆವು !
ಅವರು ಶಿಕ್ಷಣಕ್ಕೆ ಮಹತ್ವ ಕೊಟ್ಟರು
ನಾವು ಶಿಕ್ಷಣವನ್ನೇ ಮೂಲೆಗಿಟ್ಟೆವು !
ಅವರು ಒಗ್ಗಟ್ಟನ್ನು ಬೋಧಿಸಿದರು
ನಾವು ಒಡೆದೊಡೆದು ಛಿದ್ರವಾದೆವು !

ಅವರು ಹೋರಾಟಕ್ಕೆ ಕರೆ ಕೊಟ್ಟರು
ನಾವು–ನಾವೇ ಹೊಡೆದಾಡಲು ಸಿದ್ದರಾದೆವು !
ಅವರು ಸಮಾನತೆಗಾಗಿ ಶ್ರಮಿಸಿದರು
ನಾವು ಅಸಮಾನತೆಯನ್ನೇ ಅಪ್ಪಿಕೊಂಡೆವು !
ಅವರು ಮೌಢ್ಯಗಳ ವಿರುದ್ಧ ಸಮರ ಸಾರಿದರು
ನಾವು ಮೌಢ್ಯಗಳನ್ನೇ ಮೈಗೂಡಿಸಿಕೊಂಡೆವು !
ಅವರು ದೇವರುಗಳನ್ನು ಕಿತ್ತೊಗೆದರು
ನಾವಿನ್ನೂ ತಲೆಯಲ್ಲಿಯೇ ತುಂಬಿಕೊಂಡಿದ್ದೇವೆ !
ಅವರು ಮೂರ್ತಿಪೂಜೆ ವಿರೋಧಿಸಿದರು
ನಾವು ಅವರನ್ನೇ ಮೂರ್ತಿಯನ್ನಾಗಿಸಿದೆವು !

○ ಮಡಿವಾಳಪ್ಪ. ಎಸ್. ಕೆ.

ಮತಾಂತರ ನಿಲ್ಲಿಸಿ, ಜಾತ್ಯಾಂತರ ಬೆಂಬಲಿಸಿ!?

ಎಚ್. ಕೆ. ಕೃಷ್ಣ ಅರಕೆರೆ

ಇತ್ತೀಚಿನ ದಿನಗಳಲ್ಲಿ ಮತಾಂತರ ಒಂದು ಮಹತ್ವದ ಚರ್ಚಾ ವಿಷಯವಾಗುತ್ತಿದೆ, ಮತಾಂತರ ಕುರಿತಾದ ಅನೇಕ ವಿಚಾರ ಸಂಕಿರಣಗಳು, ಸೆಮಿನಾರುಗಳು ನಡೆಯುವುದರ ಜೊತೆಗೆ ಪತ್ರಿಕೆ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ಬಿರುಸಿನ ಚರ್ಚೆ ನಡೆಯುತ್ತಿವೆ, ಪುಸ್ತುತ ಸನ್ನಿವೇಶದಲ್ಲಿ ಇದನ್ನ ಕೇವಲ ಪ್ರಚಾರದ ದೃಷ್ಟಿಯಿಂದ ನೋಡದೆ ಮತಾಂತರ ಕುರಿತು ಆರೋಗ್ಯಕರ ರೀತಿಯಲ್ಲಿ ಚರ್ಚಿಸುವ ಅನಿವಾರ್ಯತೆ ಇದೆ.

ಮತಾಂತರಕ್ಕೆ ಸಂಬಂಧಿಸಿದಂತೆ ಮೊದಲಿನಿಂದಲೂ ಪರ, ವಿರೋಧ ಭಿನ್ನಾಭಿಪ್ರಾಯಗಳಿವೆ. ಅವುಗಳೇನೆ ಇರಲಿ ಯಾವುದೇ ಒಬ್ಬ ವ್ಯಕ್ತಿ ತನಗೆ ಇಷ್ಟವಾದಂಥ ಯಾವುದೇ ಧರ್ಮವನ್ನ ಸ್ವೀಕರಿಸಲು ನಮ್ಮ ಘನ ಸಂವಿಧಾನದಲ್ಲಿ ಮುಕ್ತ ಅವಕಾಶಗಳಿವೆ. ಆದರೆ ಯಾವುದೇ ಧರ್ಮದಲ್ಲಿಯಾಗಲಿ ಇಂತಹ ಮತಾಂತರ ಕ್ರಿಯೆ ಬಲವಂತದಿಂದಾಗಲೀ, ಆಮೀಷದಿಂದಾಗಲೀ ಕೂಡಿರಬಾರದು ಅಷ್ಟೆ. ಮತಾಂತರ ಕುರಿತು ಅನೇಕರು ತಮ್ಮ ಮೂಗಿನ ನೇರಕ್ಕೆ ಮಾತನಾಡುತ್ತಾರೆ. ಆದರೆ ಅದು ಸುಲಭವಾಗಿ ವಿರೋಧಿಸುವ ಅಥವಾ ಒಪ್ಪುವ ವಿಷಯವಲ್ಲ. ಅದು ತುಂಬ ಸೂಕ್ಷ್ಮವಾದದ್ದು ಮತಾಂತರ ತುಂಬ ಗಂಭೀರವಾದಂತಹ ಸಾಮಾಜಿಕ ಚಲನೆ.

ಮತಾಂತರದಂತಹ ಪ್ರಮುಖ ವಿಷಯ ಬಂದಾಗ ನಮ್ಮ ಮುಂದೆ ಅನೇಕ ಮೂಲಭೂತ ಪ್ರಶ್ನೆಗಳು ಬಂದು ನಿಲ್ಲುತ್ತವೆ.

1. ಮತಾಂತರಗೊಳ್ಳುವುದರ ಉದ್ದೇಶವೇನು?
2. ಮತಾಂತರಗೊಳ್ಳುವ ಅವಶ್ಯಕತೆ ಇದೆಯೇ? ಮತಾಂತರಗೊಳ್ಳುವ ಧರ್ಮ ಯಾವುದು?
3. ಮತಾಂತರದಿಂದಾಗುವ ಲಾಭವೇನು?
4. ಮತಾಂತರವು ಹೆಚ್ಚು ದಲಿತ ಸಮುದಾಯದಲ್ಲಿಯೇ ನಡೆಯಲು ಕಾರಣವೇನು?
5. ಮತಾಂತರವನ್ನ ತಡೆಯುವುದು ಸಾಧ್ಯವೇ? ಸೂಕ್ತವೇ?
6. ಮತಾಂತರವನ್ನ ತಡೆಯಲು ಅನುಸರಿಸಬೇಕಾದ ಮಾರ್ಗ ಯಾವುದು?

ಇಂತಹ ನೂರಾರು ಸಹಜ ಪ್ರಶ್ನೆಗಳು ನಮ್ಮನ್ನ ಕಾಡದೆ ಇರಲಾರವು. ಇದನ್ನ ನಾವು (ಪ್ರಜ್ಞಾವಂತ, ಬುದ್ದಿಜೀವಿ, ವಿದ್ಯಾವಂತ ಸ್ನೇಹಿತರು) ಪೂರ್ವಾಗ್ರಹ ಪೀಡಿತರಾಗದೆ ಚರ್ಚಿಸುವುದು ಒಂದು ಅತ್ಯುತ್ತಮ ಕೆಲಸ. ಮನುಕುಲದ ಒಳಿತಿಗಾಗಿ ಪ್ರತಿಯೊಬ್ಬನು ಮಾಡಲೇಬೇಕಾದ ಕರ್ತವ್ಯ.

ಮತಾಂತರವನ್ನ ವಿರೋಧಿಸುವವರ ಮುಂದಿನ ಸಾಲಿನಲ್ಲಿ ಪೇಜಾವರ ಶ್ರೀಗಳು, ಡಾ॥ ಚಿದಾನಂದಮೂರ್ತಿಗಳು ಪ್ರಮುಖರೆನ್ನಿಸುತ್ತಿದೆ. ಮತಾಂತರವನ್ನ ಕಾನೂನು ಮಾಡುವುದರ ಮೂಲಕ ನಿಷೇಧಿಸಬೇಕು, ಮತಾಂತರದಿಂದ ನಮ್ಮ ಸಂಸ್ಕೃತಿ (ಹಿಂದೂ ಸಂಸ್ಕೃತಿ) ನಾಶವಾಗುತ್ತಿದೆ (ಹಾಳಾಗುತ್ತಿದೆ) ಎಂದು ಪತ್ರಿಕೆಗಳಲ್ಲಿ ಹೇಳಿಕೆಗಳನ್ನ ನೀಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರ ಚಿಂತನೆಯೇ ಒಂದು ಅಪಾಯಕಾರಿ ಅನ್ನಿಸುತ್ತಿದೆ. ಅವರಿಗೆ ಸಮಾಜದ ಬಗ್ಗೆಯಾಗಲಿ, ಧರ್ಮದ ಬಗ್ಗೆಯಾಗಲಿ ನಿಜವಾದ ಕಾಳಜಿ ಇದ್ದಿದ್ದರೆ, ಮಾನವೀಯತೆ ಬಗ್ಗೆ ನಂಬಿಕೆ ಇದ್ದವರಾಗಿದ್ದರೆ ಮೊದಲು ಮತಾಂತರ ಕುರಿತ ಸಮಗ್ರ ಮಾಹಿತಿಯನ್ನ ಸಂಗ್ರಹಿಸುತ್ತಿದ್ದರು. ಹಿಂದೂ ಧರ್ಮವನ್ನ ತ್ಯಜಿಸುವುದಕ್ಕೆ ಸಿದ್ದವಿರುವ ಸಮುದಾಯದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಗಳೇನು, ಭಾರತದಲ್ಲಿಯೇ ಅತಿ ಹೆಚ್ಚು ಅದರಲ್ಲಿಯು ದಲಿತ ಸಮುದಾಯದಲ್ಲಿಯೇ ಮತಾಂತರ ನಡೆಯುವುದಕ್ಕೆ ಮೂಲ ಕಾರಣಗಳೇನು.? ಎಂಬುದರ ಬಗ್ಗೆ ಅಧ್ಯಯನ ನಡೆಸಿ ಅದಕ್ಕೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಬೇಕಿತ್ತು. ಮಠ, ಮಂದಿರ, ಪತ್ರಿಕೆ, ಎಲೆಕ್ಟ್ರಾನಿಕ್ ಪ್ರಚಾರ ಮಾಧ್ಯಮದ ಮುಂದೆ ಕುಳಿತು ಮತಾಂತರದಿಂದ ನಮ್ಮ ಸಂಸ್ಕೃತಿ ನಾಶವಾಗುತ್ತೆ ಎಂದು ಅಂಡುಸುಟ್ಟ ಬೆಕ್ಕಿನಂತೆ ಅರಚಾಡುವ ಬದಲು ನಮ್ಮ ಮೂಲಭೂತವಾದಿಗಳು ಸನಾತನ ಹಿಂದೂ ಧರ್ಮದ ಅಮಾನವೀಯವಾದಂತಹ ಸಾಮಾಜಿಕ ಪದ್ಧತಿಯಿಂದ ಈ ದೇಶದ ಅಸಂಖ್ಯಾತ ದಲಿತರ ಬದುಕು ನಾಶವಾಗಿದೆ ಎಂಬುದನ್ನ ಅರ್ಥಮಾಡಿಕೊಳ್ಳಬೇಕಾಗಿದೆ. ಈ ಜನ ಅದರ ಕರಳಾತೆಗೆ ಸಿಕ್ಕು ನಲುಗಿ ಹೋಗಿದ್ದಾರೆ. ಕಂಬಾಲಪಲ್ಲಿಯಲ್ಲಿ ಏಳು ಜನ ದಲಿತರನ್ನ ಅಮಾನವೀಯವಾಗಿ ಸಜೀವ ದಹನ ಮಾಡಿದಾಗ, ಈ ಘಟನೆಗೆ ಕಾರಣರಾದವರನ್ನ ನಿರಪರಾಧಿಗಳೆಂದು ನ್ಯಾಯಾಲಯ ಹೇಳಿದಾಗ ಪೇಜಾವರ, ಚಿದಾನಂದಮೂರ್ತಿ, ಹಿಂದೂಪರ ಸಂಘಟನೆಗಳು ನಿದ್ದೆ ಮಾಡುತ್ತಿದ್ದವೇ? ಮಾನವೀಯ ದೃಷ್ಟಿಯಿಂದಲಾದರೂ ಇಂತಹ ನೀಚ ಘಟನೆಯನ್ನ ಖಂಡಿಸಿ ಪ್ರತಿಭಟಿಸಬೇಕಿತ್ತಲ್ಲವೇ?

ಹಿಂದೂಗಳು ಎಂದು ಹೇಳುವ ನಮ್ಮ ಮೇಲೆ ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರ ನಡೆಸಿದಾಗ ಅವರು ಮೌನವಾಗಲು ಕಾರಣವೇನು? ಇದೇ ತಾನೆ ಇವರ ಸಾಮಾಜಿಕ ಕಾಳಜಿ, ಧರ್ಮಾಭಿಮಾನ. ಎಂದೋ ಒಂದು ದಿನ ದಲಿತ ಕೇರಿಗಳಲ್ಲಿ ಕಸ ಗುಡಿಸಿದ ಮಾತ್ರಕ್ಕೆ, ಅವರ ಕೇರಿಗಳಲ್ಲಿ ನಡೆದಾಡಿದ ಮಾತ್ರಕ್ಕೆ ಅವರ ಬದುಕು ಹಸನಾಗುವುದಿಲ್ಲ. ಇವರ ಹಿಂದೂ ಸಂಸ್ಕೃತಿ ಎಂದರೆ ಯಾವುದು ಐದು ವರ್ಣ, ಆರು ಸಾವಿರ ಜಾತಿ, ಉಪ ಜಾತಿಗಳೇ? ಹಿಂದೂ ಸಾಮಾಜಿಕ ಜಾತಿ ವ್ಯವಸ್ಥೆಯಲ್ಲಿ ಮೇಲ್ಪಂಕ್ತಿಯಲ್ಲಿರುವ ಜಾತಿಗಳು ಕೆಳಜಾತಿಗಳನ್ನ ಶೋಷಣೆ ಮಾಡುವುದು ಇವರ ಹಿಂದೂ ಸಂಸ್ಕೃತಿಯೇ? ಪೆಜಾವರನಾಗಿರ ಬಹುದು ಅಥವಾ ಇನ್ಯಾವುದೇ ಮತಾಂದ ಕೋಮುವಾದಿಯಾಗಿರಬಹುದು ಅವರು ಹೇಳುವಂಥ ಭೂತದ ಕತೆಯನ್ನು ಕೇಳಿ ತೆಲೆದೂಗುವಂತಹ ಸ್ಥಿತಿ ದಲಿತ ಸಮುದಾಯಗಳಲ್ಲಿ ಇಲ್ಲ ಎಂಬುದನ್ನ ಸ್ಪಷ್ಟಪಡಿಸಿಕೊಳ್ಳಬೇಕು.

ಇವರ ಇನ್ನೊಂದು ಅಪಾಯಕಾರಿಯಾದ ಹೇಳಿಕೆ-ಬಗ್ಗೆ ನಾವು ಗಂಭೀರವಾಗಿ ಯೋಚಿಸಬೇಕಾಗಿದೆ. ಅದೇನೆಂದರೆ ಹಿಂದೂ ಧರ್ಮ ಪುರಾತನವಾದ್ದು ಅದಕ್ಕಾಗಿ ದಲಿತರು ಹಿಂದೂ ಧರ್ಮವನ್ನ ತ್ಯಜಿಸಬಾರದು. ಯಾಕೆಂದರೆ ಹಿಂದೂ ಧರ್ಮವನ್ನು ತೊರೆದು ಅವರು ಸೇರಬಯಸುತ್ತಿರುವ ಬೌದ್ಧ ಧರ್ಮವೂ ಸಹ ಹಿಂದೂ ಧರ್ಮದ ಒಂದು ಭಾಗ. ಅದಕ್ಕಾಗಿ ಅವರು ಹಿಂದೂ ಧರ್ಮದಲ್ಲಿಯೇ ಉಳಿದುಕೊಳ್ಳಬೇಕು. ಇವರ ವಿಷಕಾರಿಯಾದ ಆಲೋಚನೆಗೆ ನಮ್ಮ ಅನೇಕ ಸ್ನೇಹಿತರು ತುಂಬ ಅರ್ಥಗರ್ಬಿತವಾದಂಥ ಉತ್ತರವನ್ನ ನೀಡಿದ್ದಾರೆ. ಚಂದ್ರಶೇಖರ ಪಾಟೀಲರು (ಚಂಪ) ನವೆಂಬರ್-6-2009ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಸ್ವಾರಸ್ಯಕರ ಚರ್ಚೆಯನ್ನ ಮಂಡಿಸಿದ್ದರು. ನಾವು ಯಾವ ಕಾರಣಕ್ಕಾಗಿ ಹಿಂದೂ ಧರ್ಮದಲ್ಲಿರಬೇಕು? ಅದು ಪುರಾತನವಾದ ಧರ್ಮ ಎನ್ನುವ ಕಾರಣಕ್ಕಾಗಿ ಒಪ್ಪಿಕೊಳ್ಳಬೇಕೆ? ಹಾಗಾದರೆ ಬೆತ್ತಲೆ ಬದುಕುತ್ತಿದ್ದುದು ನಮ್ಮ ಪುರಾತನ ಜೀವನಕ್ರಮ ಇವರ ದೃಷ್ಠಿಯಲ್ಲಿ ಅದೇ ರೀತಿ ಬದುಕುವುದು ಸರಿಯಾದುದೇ? ಸ್ನೇಹಿತರೆ ನಮಗೆ ಬೇಕಾಗಿರುವುದು ಕೇವಲ ಪುರಾತತ್ವ ಅಲ್ಲ, ಮಾನವೀಯತ್ವ ಅದು ನಿಮ್ಮಲ್ಲಿ ನಿಮ್ಮ ಸನಾತನ ಹಿಂದೂ ಧರ್ಮದಲ್ಲಿದೆಯೆ?

ಮನುಷ್ಯ ಚಿಂತನಶೀಲ ಜೀವಿ. ಅವನು ಪ್ರತಿನಿತ್ಯ ಹೊಸದರ ಹುಡುಕಾಟದಲ್ಲಿ ಕ್ರಿಯಾಶೀಲನಾಗಿರುತ್ತಾನೆ. ಅವನು ವಿಜ್ಞಾನದ ಜೊತೆ ತನ್ನ ಪರಿಸ್ಥಿತಿಯನ್ನ ಬದಲಾಯಿಸಿಕೊಳ್ಳುತ್ತ ಪ್ರಗತಿಯನ್ನ ಸಾಧಿಸುತ್ತಿದ್ದಾನೆ. ಇಂತಹ ಸನ್ನಿವೇಶದಲ್ಲಿ ವಿಜ್ಞಾನಕ್ಕೆ ಹತ್ತಿರವಿರುವ ಧರ್ಮವೊಂದನ್ನ ಒಪ್ಪಿಕೊಳ್ಳುವ ಅನಿವಾರ್ಯತೆ ಅವನ ಮುಂದಿರುವ ಬಹು

ಕಂಬಾಲಪಲ್ಲಿಯಲ್ಲಿ ಏಳುಜನ ದಲಿತರನ್ನ ಅಮಾನವೀಯವಾಗಿ ಸಜೀವ ದಹನ ಮಾಡಿದಾಗ, ಈ ಘಟನೆಗೆ ಕಾರಣರಾದವರನ್ನ ನಿರಪರಾಧಿಗಳೆಂದು ನ್ಯಾಯಾಲಯ ಹೇಳಿದಾಗ ಪೇಜಾವರ, ಚಿದಾನಂದಮೂರ್ತಿ ಹಿಂದೂಪರ ಸಂಘಟನೆಗಳು ನಿದ್ದೆ ಮಾಡುತ್ತಿದ್ದವೇ? ಮಾನವೀಯ ದೃಷ್ಟಿಯಿಂದಲಾದರೂ ಇಂತಹ ನೀಚ ಘಟನೆಯನ್ನ ಖಂಡಿಸಿ ಪ್ರತಿಭಟಿಸಬೇಕಿತ್ತಲ್ಲವೇ? ಹಿಂದೂಗಳು ಎಂದು ಹೇಳುವ ನಮ್ಮ ಮೇಲೆ ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರ ನಡೆಸಿದಾಗ ಅವರು ಮೌನವಾಗಲು ಕಾರಣವೇನು? ಇದೇ ತಾನೆ ಇವರ ಸಾಮಾಜಿಕ ಕಾಳಜಿ, ಧರ್ಮಾಭಿಮಾನ, ಎಂದೋ ಒಂದು ದಿನ ದಲಿತ ಕೇರಿಗಳಲ್ಲಿ ಕಸ ಗುಡಿಸಿದ ಮಾತ್ರಕ್ಕೆ ಅವರ ಕೇರಿಗಳಲ್ಲಿ ನಡೆದಾಡಿದ ಮಾತ್ರಕ್ಕೆ ಅವರ ಬದುಕು ಹಸನಾಗುವುದಿಲ್ಲ.

ದೊಡ್ಡ ಸವಾಲು, ಬದಲಾದ ಕಾಲಕ್ಕೆ ಹೊಂದಿಕೊಳ್ಳಲು ಅಸಮರ್ಥನಾದವನು ಕಾಲದಲ್ಲಿ ಕಳೆದು ಹೋಗುತ್ತಾನೆ. ಇಂದು ಹಿಂದೂ ಧರ್ಮದ ಸ್ಥಿತಿಯು ಇದೇ ಆಗಿದೆ.

ನಾವು ಸೂರ್ಯ ಚಂದ್ರಾದಿ ಗ್ರಹಗಳನ್ನೆ ದೇವರುಗಳೆಂದು ಅವರಿಗೆ ರಥ, ಕುದುರೆ, ಹೆಂಡತಿ ಮಕ್ಕಳ ಸುಂದರವಾದ ಕತೆ ಕಟ್ಟಿ ಅದೇ ಪರಮ ಸತ್ಯ, ಅವರ ರಾಸಲೀಲೆಯ ಚರಿತ್ರೆಯನ್ನ ಕೇಳುವುದೇ ಮಹಾಪುಣ್ಯ ಎಂದು ಬದುಕುತ್ತಿದ್ದ ಕಾಲ ಪುರಾತನವಾದದ್ದು. ಇಂದು ಅದೆಲ್ಲ ಸುಳ್ಳಾಗಿದೆ. ಸೂರ್ಯ ಚಂದ್ರಾದಿ ಗ್ರಹಗಳೆಲ್ಲ ನಭೋಮಂಡಲದಲ್ಲಿನ ಗ್ರಹಗಳು ಎನ್ನುವಂಥ ಸತ್ಯದ ಅರಿವಾಗಿದೆ. ಹಗಲು ರಾತ್ರಿಗಳೆಲ್ಲ ಪ್ರಕೃತಿಯ ವಿಸ್ಮಯಗಳು, ದೇವರೆಂದು ಭಕ್ತಿಯಿಂದ ಪೂಜಿಸಿದ ಚಂದ್ರನ ಮೇಲೆ ಮನುಷ್ಯ ನಡೆದಾಡುತ್ತಿದ್ದಾನೆ. ಇದು ವಿಜ್ಞಾನದಲ್ಲಾದ ಕ್ರಾಂತಿ. ಅದೇ ರೀತಿ ಈ ನೆಲದಲ್ಲಿ ಅನೇಕ ಧಾರ್ಮಿಕ ಕ್ರಾಂತಿಗಳು ಸಹ ನಡೆದಿವೆ. ಯಾವುದೇ ಒಂದು ಬದಲಾವಣೆ (ಸಾಮಾಜಿಕ) ನಡೆದಾಗ ಅಲ್ಲಿ ಸಾಮಾಜಿಕ ಚಲನೆಯನ್ನ ಗಮನಿಸಬೇಕು.

ಯಾವುದೇ ಒಂದು ಹೊಸದಾಗಿ ರೂಪಗೊಳ್ಳುವ ತತ್ವ, ಧರ್ಮ, ಸಿದ್ಧಾಂತಗಳೆಲ್ಲವೂ ಮೂಲ ಸಾಮಾಜಿಕ ಧಾರ್ಮಿಕ ವ್ಯವಸ್ಥೆಯ ವಿರುದ್ಧ ನಡೆದ ಪ್ರತಿಭಟನೆ. ಎಲ್ಲಿ ಕತ್ತಲಿರುತ್ತದೆಯೋ ಅಲ್ಲಿ ಬೆಳಕಿಗಾಗಿ ಹುಡುಕಾಟ ನಡೆಯುತ್ತದೆ. ಎಲ್ಲಿ ಅಸತ್ಯವಿರುತ್ತದೋ ಅಲ್ಲಿ ಸತ್ಯದ ಶೋಧ ನಡೆಯುತ್ತದೆ. ಎಲ್ಲಿ ಅಮಾನವೀಯತೆ ನೆಲಸಿರುತ್ತದೆಯೋ ಅಲ್ಲಿ ಮಾನವೀಯ ನೆಲೆಗಾಗಿ ಹೋರಾಟ ನಡೆಯುತ್ತದೆ. ಇದು ಪ್ರಕೃತಿಯ ನಿಯಮ, ಸಾಮಾಜಿಕ ಚಲನೆ. ನಮ್ಮ ಹಿಂದೂಪರ ಸ್ನೇಹಿತರ ಅಭಿಮತದಂತೆ ಹಿಂದೂ ಧರ್ಮವೇ ಕೆಲವು ಧರ್ಮಗಳ ಮೂಲ ಎಂದಿಟ್ಟುಕೊಂಡರೆ ಹಿಂದೂ ಧರ್ಮದಿಂದ ಉದಯಿಸಿದ (ಬೇರ್ಪಟ್ಟ) ಎಲ್ಲಾ ಧಮನ ಗಳು ಬೆಳಕಿಗಾಗಿ ನಡೆಸಿದ ಹುಡುಕಾಟ, ಸತ್ಯಕ್ಕಾಗಿ ನಡೆಸಿದ ಶೋಧ, ಮಾನವೀಯ ನೆಲೆಗಾಗಿ ನಡೆಸಿದ ಹೋರಾಟ ಅಲ್ಲದೆ ಮತ್ತೇನು? ಹಿಂದೂಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅಮಾನವೀಯ ಆಚರಣೆ ಅದರ ಧಮನಕಾರಿ ನೀತಿಯ ವಿರುದ್ಧ ನಡೆದ ಕ್ರಾಂತಿಗಳೇ ಬೌದ್ಧ ಹಾಗೂ ಭಾರತದ ಇತರೆ ಧರ್ಮಗಳ ಉಗಮ ಎನ್ನಬಹುದು.

ಪ್ರಪಂಚದ ಯಾವುದೇ ಧಾರ್ಮಿಕ ಇತಿಹಾಸವನ್ನ ನೋಡಿದರೆ ಅವುಗಳು ಒಬ್ಬ ಮೂಲ ಪುರುಷನಿಂದ ಸ್ಥಾಪಿಸಲ್ಪಟ್ಟವುಗಳಾಗಿವೆ. ಆದರೆ ದೇವರುಗಳಿಂದ ಸೃಷ್ಟಿಯಾದ ಹಾಗೂ ಕೋಟ್ಯಾನು ಕೋಟಿ ದೇವರುಗಳ ಸಾಮ್ರಾಜ್ಯ ದಂತಿರುವ ಏಕೈಕ ಧರ್ಮವೆಂದರೆ ಹಿಂದೂ ಧರ್ಮ ಮಾತ್ರ. ಇದು ಮನುಷ್ಯರ ಧರ್ಮವಾಗದೆ ದೇವರುಗಳ ಧರ್ಮವಾಗಿದೆ. ಪುರಾಣ ಕತೆಗಳೆ ಇದಕ್ಕೆ ಇತಿಹಾಸ. ಹಿಂದೂ ಸೃಷ್ಟಿಕರ್ತನಿಗೆ (ಸ್ವಯಂಭವು) ಏನನ್ನಾದರು ಸೃಷ್ಟಿಸಬೇಕು ಅನ್ನಿಸಿತು. ಭೂಮಿಯನ್ನ ಸೃಷ್ಟಿಸಿದ, ಹೆಣ್ಣನ್ನ ಸೃಷ್ಟಿಸಿದ, ಪಾಪ, ಪುಣ್ಯ, ನೀರು, ಗಾಳಿ, ಗಿಡ ಮರ ಕ್ರಿಮಿಕೀಟ (ಇಂದು ಮನುಷ್ಯನಿಗೆ ಬರುತ್ತಿರುವ ಸಾಂಕ್ರಾಮಿಕ-ರೋಗ, HIV ಸೋಂಕು, ಚಿಕನ್‌ಗುನ್ಯ, ಹಂದಿಜ್ವರ, ಕ್ಯಾನ್ಸರ್ ಇತ್ಯಾದಿಗಳೆಲ್ಲವೂ ಸೃಷ್ಟಿಕರ್ತನ ಸೃಷ್ಟಿಯೇ ಇರಬೇಕು) ಸೃಷ್ಟಿಕರ್ತ ಸ್ವಯಂಭುವು ತನ್ನ ಸೃಷ್ಟಿಕ್ರಿಯೆಯನ್ನ ಕೇವಲ ಭಾರತಕ್ಕಷ್ಟೆ ಯಾಕೆ ಸೀಮಿತಗೊಳಿಸಿದ. ಅಮೇರಿಕನ್ನರನ್ನ, ಆಫ್ರಿಕನ್ನರನ್ನ, ಬ್ರಿಟನ್‌ಗಳನ್ನ, ಅರಬ್ಬಿಯರನ್ನ, ಪ್ರಪಂಚದ ಎಲ್ಲಾ ಮಾನವರನ್ನ ಯಾಕೆ ಸೃಷ್ಟಿಸಲಿಲ್ಲ?

ಸೂರ್ಯ ಚಂದ್ರಾದಿ ಗ್ರಹಗಳನ್ನೆ ದೇವರುಗಳೆಂದು ಅವರಿಗೆ ರಥ, ಕುದುರೆ, ಹೆಂಡತಿ ಮಕ್ಕಳ ಸುಂದರವಾದ ಕತೆ ಕಟ್ಟಿ ಅದೇ ಪರಮ ಸತ್ಯ, ಅವರ ರಾಸಲೀಲೆಯ ಚರಿತ್ರೆಯನ್ನ ಕೇಳುವುದೇ ಮಹಾಪುಣ್ಯ ಎಂದು ಬದುಕುತ್ತಿದ್ದ ಕಾಲ ಪುರಾತನವಾದದ್ದು. ಇಂದು ಅದೆಲ್ಲ ಸುಳ್ಳಾಗಿದೆ. ಸೂರ್ಯ ಚಂದ್ರಾದಿ ಗ್ರಹಗಳೆಲ್ಲ ನಭೋಮಂಡಲದಲ್ಲಿನ ಗ್ರಹಗಳು ಎನ್ನುವಂಥ ಸತ್ಯದ ಅರಿವಾಗಿದೆ. ಹಗಲು ರಾತ್ರಿಗಳೆಲ್ಲ ಪ್ರಕೃತಿಯ ವಿಸ್ಮಯಗಳು, ದೇವರೆಂದು ಭಕ್ತಿಯಿಂದ ಪೂಜಿಸಿದ ಚಂದ್ರನ ಮೇಲೆ ಮನುಷ್ಯ ನಡೆದಾಡುತ್ತಿದ್ದಾನೆ. ಇದು ವಿಜ್ಞಾನದಲ್ಲಾದ ಕ್ರಾಂತಿ. ಅದೇ ರೀತಿ ಈ ನೆಲದಲ್ಲಿ ಅನೇಕ ಧಾರ್ಮಿಕ ಕ್ರಾಂತಿಗಳು ಸಹ ನಡೆದಿವೆ. ಯಾವುದೇ ಒಂದು ಬದಲಾವಣೆ (ಸಾಮಾಜಿಕ) ನಡೆದಾಗ ಅಲ್ಲಿ ಸಾಮಾಜಿಕ ಚಲನೆಯನ್ನ ಗಮನಿಸಬೇಕು.

ಒಂದು ವೇಳೆ ಅವರೆಲ್ಲರನ್ನೂ ಅವನೇ ಸೃಷ್ಟಿಸಿದ್ದಾನೆ ಎಂಬುದಾದರೆ ಅವರಿಗೇಕೆ ಹಿಂದೂ ಧರ್ಮವನ್ನ ಭೋಧಿಸಲಿಲ್ಲ? ಜಗತ್ತನ್ನೆ ಸೃಷ್ಟಿಸಿದ ಅವನಿಗೆ ಭಾರತವನ್ನ ಬಿಟ್ಟು ಇತರೆ ದೇಶಿಯರಿಗೆ ಹಿಂದೂ ಧರ್ಮವನ್ನ ಭೋಧಿಸಲು ಸಾಧ್ಯವಾಗಲಿಲ್ಲವೇಕೆ? ತನ್ನ ಸೃಷ್ಟಿಕ್ರಿಯೆ ಮುಗಿದು ಭಾರತೀಯರಿಗೆ ಹಿಂದೂ ಧರ್ಮವನ್ನ ಭೋದಿಸಿದ ನಂತರ ಅವನ ಶಕ್ತಿ ಕುಗ್ಗಿ ಇತರೇ ದೇಶದ ಜನಾಂಗದ ಮೇಲೆ ನಿಯಂತ್ರಣವನ್ನ ಕಳೆದುಕೊಂಡನೆ? ಕೇವಲ ಹಿಂದೂ ಧರ್ಮದಲ್ಲಿ ಮಾತ್ರ ಆರು ಸಾವಿರ ಜಾತಿ ಉಪಜಾತಿಗಳನ್ನ ಸೃಷ್ಟಿಸಿದ ಅವರ ಉದ್ದೇಶವಾದರೂ ಏನು?

ಒಂದು ನಾಗರೀಕ ಸಮಾಜದಲ್ಲಿ ಒಬ್ಬ ವ್ಯಭಿಚಾರಿಯನ್ನ, ಸುಳ್ಳುಗಾರ; ಮೋಸಗಾರ, ಕೊಲೆಗಾರರನ್ನ ಕೀಳಾಗಿ ಕಾಣುತ್ತೇವೆ. ಆದರೆ ಹಿಂದೂ ಸಮಾಜದಲ್ಲಿ ಕೇವಲ ಜಾತಿಯ ಕಾರಣಕ್ಕಾಗಿ ಕೀಳಾಗಿ ಕಾಣಲಾಗುತ್ತದೆ. ಯಾವ ದೇವರುಗಳಿಂದ, ಯಾವ ಧರ್ಮದ ಹೆಸರಿನಿಂದ ಸಹಸ್ರಾರು ಜನಸಮೂಹ ನಿಕೃಷ್ಟ ಸ್ಥಿತಿಯಲ್ಲಿ ಅವಮಾನಕರ ರೀತಿಯಲ್ಲಿ ಬದುಕುತ್ತಿದೆಯೋ ಅಂತಹ ಅನಿಷ್ಟಗಳಿಗೆ ಕಾರಣವಾದ ದೇವರುಗಳಿಗೆ, ಧರ್ಮಕ್ಕೆ ನಮ್ಮ ಧಿಕ್ಕಾರವಿದ್ದರೆ ತಪ್ಪೇನು? ಹಿಂದೂ ಧರ್ಮದ ಬಗ್ಗೆ ಹೆಮ್ಮೆಯಿಂದ ಮಾತನಾಡುವ, ಮತಾಂತರವನ್ನು ವಿರೋಧಿಸುವ ಸ್ನೇಹಿತರು, ಹಿಂದೂ ಧರ್ಮವನ್ನ ನಿಯಂತ್ರಿಸಬಲ್ಲ ಮಠಾಧೀಶರುಗಳು ಇದಕ್ಕೆ ಉತ್ತರಿಸಬೇಕಾಗಿದೆ.

'ಹಿಂದೂ'ವಲ್ಲದಿರುವ ಸ್ನೇಹಿತರು ಹಿಂದೂ ಧರ್ಮದಲ್ಲಿ ಜಾತಿ ತಾರತಮ್ಯವಿದೆ ಮೂಢನಂಬಿಕೆ ಕಂದಚಾರಗಳಂಥ ಅನಿಷ್ಟಗಳಿವೆ ಎಂದು ದೂರಿದರೆ, ಹಿಂದೂಪರ ಸ್ನೇಹಿತರು ಕ್ರೈಸ್ತ, ಇಸ್ಲಾಂ ಧರ್ಮಗಳಲ್ಲಿಯು ತಾರತಮ್ಯವಿದೆ, ಮೂಢನಂಬಿಕೆ, ಕಂದಚಾರಗಳಿವೆ ಎಂದು ಉರಿದು ಬೀಳುತ್ತಾರೆ. ನಾವು ಈ ಎರಡು ಕಡೆಯವರ ವಾದಗಳನ್ನ ಒಪ್ಪಲೇ ಬೇಕಾಗಿದೆ. ಹಿಂದೂ, ಇಸ್ಲಾಂ, ಕ್ರೈಸ್ತರ ಮಧ್ಯೆ ಅನೇಕ ವ್ಯತ್ಯಾಸಗಳಿದ್ದರೂ ಈ ಮೂರು ಧರ್ಮಿಯರು ಮೂಢನಂಬಿಕೆ, ಕಂದಚಾರದಂತಹ ಸಾಮಾಜಿಕ ಅನಿಷ್ಟಗಳ ತಳಹದಿಯ ಮೇಲೆ ನಿಂತಿವೆ ಎಂಬುದು ವಾಸ್ತವ ಸತ್ಯ.

ಕ್ರೈಸ್ತ, ಇಸ್ಲಾಮಿಗಳು ಏಕದೇವತಾ ಆರಾಧಕರಾದರೆ, ಹಿಂದೂಗಳು ಬಹುದೇವತಾ ಆರಾಧಕರು. ಕ್ರೈಸ್ತ, ಇಸ್ಲಾಂ ಧರ್ಮಿಯರು ಮಾನವನಿಗೆ ಧರ್ಮ (ನೀತಿ)ವನ್ನ ಭೋಧಿಸಿದವರನ್ನ ಆರಾಧಿಸಿದರೆ ಹಿಂದೂಗಳು ಆರಾಧಿಸುವ ದೇವರುಗಳಿಗೆ ಧರ್ಮವೆ ಇಲ್ಲ. ಹಿಂದೂ ದೇವರುಗಳ ಚರಿತ್ರೆಯನ್ನ ನೋಡಿದರೆ ಯಾವ ನೀತಿವಂತ ಮನುಷ್ಯನು ಪಾಲಿಸಲು ಯೋಗ್ಯವಲ್ಲದ ಚರಿತ್ರೆಗಳೆ ಆಗಿವೆ. ಯಾವ ದೇವರುಗಳಲ್ಲಿ ಮಾನವೀಯ ಗುಣಗಳಿವೆ? ಯಾವ ದೇವರುಗಳಲ್ಲಿ ಧರ್ಮವಿದೆ? ನಾವು ಅವುಗಳ ಚರಿತ್ರೆ (ಪುರಾಣ)ಗಳಲ್ಲಿ ಅಧ್ಯಯನ ಮಾಡುತ್ತಾ ಹೋದರೆ ಬಹುತೇಕ ದೇವರುಗಳು ನೀತಿಗೆಟ್ಟವುಗಳಾಗಿವೆ.ಯಾವ ದೇವರುಗಳಲ್ಲಿಯು ಒಬ್ಬ ಉತ್ತಮ ಪುರುಷ (ಮನುಷ್ಯ) ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವಂಥ ಉತ್ಕೃಷ್ಟ ಗುಣಗಳಿಲ್ಲ (ಹಿಂದೂ ಧರ್ಮ ದೇವರುಗಳ ತಳ ಹದಿ ಮೇಲೆ ನಿಂತಿರುವುದರಿಂದ ದೇವರುಗಳ ಬಗ್ಗೆ ಚರ್ಚೆಸೂಕ್ತವಾದರೂ ಈ ಸಂದರ್ಭಕ್ಕೆ ಇಷ್ಟು ಸಾಕು. ಅವುಗಳ ಕಲ್ಯಾಣ ಗುಣಗಳನ್ನು ಇನ್ನೊಂದು ಸಂದರ್ಭದಲ್ಲಿ ಚರ್ಚಿಸೋಣ) ಕ್ರೈಸ್ತ, ಇಸ್ಲಾಂರಲ್ಲಿ ಒಳಪಂಗಡಗಳಿದ್ದು ಅವುಗಳ ಮಧ್ಯೆ ಯಾವುದೇ ಕೀಳುಭಾವನೆಗಳಲ್ಲ. ಸಮಾಜದಲ್ಲಿ ಅವರೆಲ್ಲ ಕ್ರೈಸ್ತ, ಇಸ್ಲಾಮಿಗಳಾಗಿರುತ್ತಾರೆ. ಆದರೆ ಹಿಂದೂ ಧರ್ಮದಲ್ಲಿ ಒಬ್ಬ ವ್ಯಕ್ತಿ ಒಂದು ಧರ್ಮವನ್ನ ಪ್ರತಿ ಬಿಂಬಿಸುವ ಮೊದಲು ಒಂದು ಜಾತಿಯಾಗಿ ಗೋಚರಿಸುತ್ತಾನೆ, ಒಂದು ಜಾತಿಯಿಂದ ಗುರುತಿಸಿದ ವ್ಯಕ್ತಿಯನ್ನ ಉಪಜಾತಿಯಿಂದ ವಿಂಗಡಿಸಲಾಗುತ್ತೆ.

ಈ ರೀತಿಯಾಗಿ ಗುರುತಿಸಿಕೊಂಡ ವ್ಯಕ್ತಿ ಎಷ್ಟೆ ಉತ್ತಮ ಗುಣಗಳನ್ನ ಸಂಪಾದಿಸಿಕೊಂಡಿದ್ದರೂ ಎಷ್ಟೆ ಉನ್ನತ ಮಟ್ಟದಲ್ಲಿದ್ದರೂ ಅವನಿಗೆ ತನ್ನ ಜಾತಿ(ಯಿಂದ) ಕಾರಣಕ್ಕೆ ಅಂಟಿಕೊಂಡ ಕೀಳು ಅಸಮಾನತೆಯಿಂದ ಬಿಡುಗಡೆಯಿಲ್ಲ. ಇಂತಹ ಕೀಳು ಪದ್ಧತಿಯಿಂದ ಹೊರಬರಲು ಸಮಾಜದಲ್ಲಿ ಗೌರವದ ಬದುಕನ್ನ ನಡೆಸಲು ಅವನಿಗೆ ಇರುವ ದಾರಿ ಎಂದರೆ ಅದು ಹಿಂದೂ ಧರ್ಮವನ್ನ ತ್ಯಜಿಸುವುದೇ ಆಗಿದೆ. (ಮತಾಂತರ ಕ್ರಿಯೆ ದಲಿತ ಸಮುದಾಯಗಳಲ್ಲಿ ಇನ್ನೂ ಮಂದಗತಿಯಲ್ಲಿ ಸಾಗುತಿದೆ. ಇದೊಂದು ಆಂದೋಲನವಾಗಿ ನಡೆಯಬೇಕಿದೆ. ಇಂದು ಮತಾಂತರವನ್ನ ಒಂದು ಪ್ರತಿಭಟನೆಯ ಅಸ್ತ್ರವನ್ನಾಗಿ ಮಾಡಿಕೊಂಡ ದಲಿತ) ಸಮುದಾಯ ಬೇಕಾಬಿಟ್ಟಿಯಾಗಿ ಮತಾಂತರಗೊಳ್ಳುತ್ತಿರುವುದು ವಿಷಾದನೀಯ ಸಂಗತಿ. ಅದು ಮುಂದೊಂದು ದಿನ ಅಪಾಯಕಾರಿಯು ಹೌದು. ನಮ್ಮ ವಿಮೋಚನೆಗೆ ಮತಾಂತರಗೊಳ್ಳುವ ಧರ್ಮ ಬೆಂಕಿಯಿಂದ ಬಾಣಲೆಗೆ ಎಂಬಂತಾಗಬಾರದು. ನಾವು ಅಮಾನವೀಯವಾದಂತಹ ಸನಾತನ ಹಿಂದೂ ಧರ್ಮವನ್ನ ತೊರೆಯುವುದು ಎಷ್ಟು ಅನಿವಾರ್ಯವೋ ಅದೇ ರೀತಿ ನಾವು ಮತಾಂತರಗೊಳ್ಳುವುದಕ್ಕೆ ಆಯ್ಕೆ ಮಾಡಿಕೊಳ್ಳುವ ಧರ್ಮವೂ ಅಷ್ಟೆ ಮುಖ್ಯವಾದದ್ದು. ಅದಕ್ಕಾಗಿ ನಮ್ಮ ವಿಚಾ

ರವಂತ ದಲಿತ ಸ್ನೇಹಿತರು ಧರ್ಮದ ಬಗ್ಗೆ ಅಧ್ಯಯನ ನಡೆಸಿ ತಮ್ಮ ಸಮಾಜದಲ್ಲಿ ಪ್ರಜ್ಞೆ ಮೂಡಿಸಿ ಮುಂದೊಂದು ದಿನ ಆಗುವ ಅಪಾಯವನ್ನ ತಡೆಯಬೇಕಿದೆ.

ಇತ್ತಿಚೆಗೆ ಮತಾಂತರ ಹೆಚ್ಚಾಗುತ್ತಿದ್ದಂತೆ ಒಂದು ನಾಟಕೀಯ ವಿದ್ಯಾಮಾನ ನಡೆಯಿತು. ಅದೇನೆಂದರೆ ಅಮೇರಿಕದ ಕ್ಯಾಥೋಲಿಕ್ ಕುಟುಂಬದ ಒಬ್ಬ ಕ್ರೈಸ್ತ ಡೇವಿಡ್ ಫ್ರಾಲಿ ಎಂಬುವವನು ತನ್ನ ಮಾತೃ ಧರ್ಮ ತೊರೆದು ಹಿಂದೂ ಧರ್ಮವನ್ನ ಸ್ವೀಕರಿಸಿದ್ದಾನೆ. ವಿಜಯ ಕರ್ನಾಟಕ ಪತ್ರಿಕೆಯ ವಿದ್ಯಾಸಾಗರ ಶರ್ಮ ಎಂಬ ಒಬ್ಬ ವರದಿಗಾರ ಅಮೇರಿಕಕ್ಕೆ ಹೋಗಿ ಅವನ ಸಂದರ್ಶನ ನಡೆಸಿ ಅದರ ಪೂರ್ಣ ಪಾಠವನ್ನ ಪತ್ರಿಕೆಯಲ್ಲಿ ನವೆಂಬರ್-14-2009ರಂದು ಪ್ರಕಟಿಸಿ ಹಿಂದೂ ಧರ್ಮವನ್ನ ರಕ್ಷಿಸಿದ್ದೇವೆ ಎನ್ನುವಂತೆ ನಿಟ್ಟುಸಿರು ಬಿಟ್ಟದ್ದಾರೆ. ಹಿಂದೂ ಧರ್ಮವನ್ನ ವಾಮನ ಶಾಸ್ತ್ರೀಯಾಗಿ ಸ್ವೀಕರಿಸಿರುವ ಡೇವಿಡ್ ಫ್ರಾಲಿ ಸಂದರ್ಶನದಲ್ಲಿ ಹಿಂದೂ ಧರ್ಮದ ಶ್ರೇಷ್ಠತೆ ಬಗ್ಗೆ ಹೋಳುತ್ತಾ, ಅದು ಮಿಕ್ಕೆಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾದದ್ದು ಎಂದು ಹೇಳಿಕೊಂಡಿದ್ದಾನೆ ಇದು ಅವನ ವಯುಕ್ತಿಕ ಅಭಿಪ್ರಾಯ. ಅದೇನೆ ಇರಲಿ. ಜಾತಿ ಶ್ರೇಣಿಕೃತ ವ್ಯವಸ್ಥೆಯಲ್ಲಿ ಮೇಲ್ಪಂಕ್ತಿಯ ವಾಮನ ಶಾಸ್ತ್ರಿಯಾಗಿ ಹಿಂದೂಧರ್ಮವನ್ನ ಸ್ವೀಕರಿಸಿದ ಡೇವಿಡ್ ಫ್ರಾಲಿ ಅದೇ ಹಿಂದೂಧರ್ಮದ ಅಡಿಯಲ್ಲಿ ಬದುಕುತ್ತಿರುವ ದಲಿತರಾದ ಮಾದರ ಚನ್ನನಾಗಿ, ವಡ್ಡರ ಮಾರನಾಗಿ, ತಳವಾರ ಹನುಮನಾಗಿ, ಕುರುಬರ ಬೀರನಾಗಿ, ಚಲುವಾದಿ ಸಂಕನಾಗಿ ಹಿಂದೂ ಧರ್ಮವನ್ನ ಸ್ವೀಕರಿಸಿದ್ದರೆ ಅವರು ಈ ರೀತಿ ಮಾತನಾಡಲು ಸಾಧ್ಯವಿರಲಿಲ್ಲ.

ಯಾಕೆಂದರೆ ಹಿಂದೂ ಧರ್ಮದ ಕರಾಳ ಚರಿತ್ರೆ ಇರುವುದು, ಅದರ ರುದ್ರನರ್ತನದ ವಿರಾಟ ಸ್ವರೂಪವಿರುವುದು ವಾಮನ ಶಾಸ್ತ್ರಿಯಲ್ಲಲ್ಲ, ಈ ದೇಶದ ಮೂಲ ನಿವಾಸಿ. ಬಹುಸಂಖ್ಯಾತ ದಲಿತ ಸಮುದಾಯಗಳಲ್ಲೂ ಡೇವಿಡ್ ಫ್ರಾಲಿಯಂತಹ ಯಾವುದೇ ಒಬ್ಬ ವ್ಯಕ್ತಿ ಹಿಂದೂ ಧರ್ಮಕ್ಕೆ ಮತಾಂತರಗೊಂಡ ಮಾತ್ರಕ್ಕೆ ಅದು ಒಂದು ಮಹತ್ತರವಾದ ಐತಿಹಾಸಿಕ ಬದಲಾವಣೆಯಲ್ಲ. (ಎಲ್ಲಾ ಧರ್ಮಗಳ ಲ್ಲಿಯು ಡೇವಿಡ್ ಫ್ರಾಲಿಯಂಥ ಧಾರ್ಮಿಕ, ಅತೃಪ್ತರು ಕೆಲವು ಜನ ಇರುತ್ತಾರೆ) ಇದರ ಹಿನ್ನಲೆಯಲ್ಲಿ ಹಿಂದೂ ಧರ್ಮ ಸರ್ವಶ್ರೇಷ್ಠ ಎನ್ನುವಂಥ ವಾತಾವರಣವನ್ನ ಸಮಾಜದಲ್ಲಿ ಸೃಷ್ಟಿಸಲು ಪ್ರಯತ್ನಿಸುವುದು ಒಂದು ಮೂರ್ಖ ಚಿಂತನೆಯಾಗುತ್ತದೆ. ಇಂತಹ ಯಾವುದೆ ಪ್ರಯತ್ನದಿಂದ ಕೊಳೆತು ನಾರುತ್ತಿರುವ ವ್ಯವಸ್ಥೆಯನ್ನ ಮರೆಮಾಚಲು ಸಾಧ್ಯವಿಲ್ಲ. ಛಿದ್ರಗೊಂಡಿರುವ ಈ ವ್ಯವಸ್ಥೆಯನ್ನ ತೇಪೆ ಹಚ್ಚುವುದಕ್ಕೂ ಸಾಧ್ಯವಿಲ್ಲ. ಯಾಕೆಂದರೆ ಹಿಂದೂ ಧರ್ಮದಲ್ಲಿರುವುದು ಆರು ಸಾವಿರ ಜಾತಿ ಉಪಜಾತಿಗಳ ಮದ್ಯೆ ಇರುವ ಶ್ರೇಷ್ಠತೆಯ ಕಲ್ಪನೆ, ಕನಿಷ್ಟತೆಯ ಕೀಳು ಭಾವನೆ.

ಮತಾಂತರ ಇಂದು ನಿನ್ನೆಯ ಸಮಸ್ಸೆಯಲ್ಲ ಅದಕ್ಕೆ ಶತಶತಮಾನಗಳ ಇತಿಹಾಸವಿದೆ. ಮುಸ್ಲಿಂ ದೊರೆಗಳ ಆಳ್ವಿಕೆಯಲ್ಲಿ ಮತಾಂತರ ಅನೇಕ ಅನೀತಿ ಅಕ್ರಮಗ ಳಿಂದ ನಡೆಯುತ್ತಿತ್ತು. ಬಲವಂತದಿಂದ ಮತಾಂತರಗೊಳಿಸುತ್ತಿದ್ದು ಇದಕ್ಕೆ ಒಪ್ಪದವರನ್ನ ಅನೇಕ ರೀತಿಯಾಗಿ ಹಿಂಸಿಸತೊಡಗಿದರು. ಜಿಜಿಯಾ ಎನ್ನುವಂತ ತೆರಿಗೆ (ಹಿಂದೂಗಳಿಗೆ ಮಾತ್ರ) ವಿದಿಸುತ್ತಿದ್ದರು. ಅನೇಕರು ತೆರಿಗೆಯನ್ನ ಕಟ್ಟಲು ಸಾಧ್ಯವಾಗದೆ ಇಸ್ಲಂ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದರು. (ಈ ಸಂದರ್ಭದಲ್ಲಿ ಹಿಂದೂ ಧರ್ಮದ ಅಮಾನವೀಯ ನೀತಿಯಿಂದ ಸ್ವಪ್ರೇರಿತರಾಗಿ ಮತಾಂತರಗೊಂಡವರ ಸಂಖ್ಯೆ ತುಂಬ ವಿರಳ ಎಂದೇ ಹೇಳಬಹುದು) ನಂತರದ ದಿನಗಳಲ್ಲಿ ಮುಸ್ಲಿಂ ಆಳ್ವಿಕೆ ಕಡಿಮೆಯಾದಂತೆ ಮತ್ತು ಕೆಲವು ಸರ್ವಧರ್ಮವನ್ನ ಗೌರವಿಸುವ ಮುಸ್ಲಿಂ ದೊರೆಗಳ ಕಾಲದಲ್ಲಿ ಅಹಿಂದೂ ಮುಸ್ಲಿಂ ದೇವರುಗಳನ್ನ (ದರ್ಗಾಗಳಲ್ಲಿ ಅಹಿಂದೂ ದೇವರುಗಳನ್ನ) ಒಂದೇ ಜಾಗದಲ್ಲಿ ಪ್ರತಿಷ್ಠಾಪಿಸುವುದರ ಮೂಲಕ ಹಿಂದೂಗಳನ್ನ ಆಕರ್ಷಿಸತೊಡಗಿದರು. ದರ್ಗಾದಲ್ಲಿ ಅಹಿಂದೂ ದೇವರುಗಳಿಗೆ (ಚೌಡೇಶ್ವರಿ, ಭೂತೇಶ್ವರ) ನಡೆದು ಕೊಂಡ ದಲಿತರು ಮುಸ್ಲಿಂ ಹೆಸರುಗಳನ್ನ ಇಟ್ಟುಕೊಂಡಿರುವುದು ನಮ್ಮ ಸುತ್ತ ಮುತ್ತಲ ಪರಿಸರದಲ್ಲಿ ಕಾಣಬಹುದು) ಇವರ ನಂತರ ಬಂದ ಕ್ರೈಸ್ತರು, ದಲಿತರಿಗೆ ಶಿಕ್ಷಣ ನೀಡುವುದರ ಮೂಲಕ ಸ್ವಲ್ಪಮಟ್ಟಿನ ಸಮಾನತೆ ತೋರಿಸುವುದರ ಮೂಲಕ ಮತಾಂತರಕ್ಕೆ ಪ್ರಯತ್ನಿಸಿದರು. ಆದರೆ ಇವರುಗಳ ಮೂಲ ಉದ್ದೇಶವಿದ್ದುದು ಹಿಂದೂ ಧರ್ಮದಲ್ಲಿ ನರಳುತ್ತಿದ್ದ ದಲಿತರಿಗೆ ವಿಮೊಚನೆ ನೀಡುವುದಲ್ಲ. ತಮ್ಮ ಧರ್ಮದ ವಿಸ್ತರಣೆ. ಹಿಂದೂ ಧರ್ಮದಲ್ಲಿನ ಅಸಮಾನತೆಯನ್ನ ತಮ್ಮ ಧರ್ಮ ವಿಸ್ತರಣೆಗೆ ಬಳಸಿಕೊಂಡರೆ ಹೊರತು, ದಲಿತರಿಗೆ ವಿಮೋಚನೆ ನೀಡುವ ಉದ್ದೇಶದಿಂದಲ್ಲ. ಅದಕ್ಕಾಗಿ ಈ ಧರ್ಮಗಳು ಮನುಷ್ಯನಲ್ಲಿ ಅಡಗಿದ್ದ ಸ್ವಾರ್ಥ, ಅನ್ಯಾಯ, ಸಂಕುಚಿತ ಭಾವನೆ, ದುಃಖ ದುಮ್ಮಾನಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಸಮಸ್ತ ಜನ ಸಮೂಹಗಳನ್ನ ಬಿಟ್ಟು ಕೊಳಗೇರಿಯ (ದಲಿತರ) ಮಕ್ಕಳನ್ನ ಆಯ್ಕೆ ಮಾಡಿಕೊಂಡರು. ಇವರ ಸಮಸ್ಸೆಗೆ ಧರ್ಮದ ಮೂಲಕ ಪರಿಹಾರ ಹುಡುಕದೆ ದೇವರುಗಳ ಸುತ್ತ ಗಿರಕಿ ಹೊಡೆಯ ತೊಡಗಿದವು. ಇಂತಹ ಅವೈಜ್ಞಾನಿಕ ಚಿಂತನೆಯಿಂದ ಮನುಷ್ಯ ಸಮಾಜವನ್ನ ಕತ್ತಲೆಯುಗಕ್ಕೆ ನೂಕುತ್ತಿದ್ದ ಸಂದರ್ಭದಲ್ಲಿ ವೈಜ್ಞಾನಿಕ ಚಿಂತನೆಯ ತಳಹದಿಯಲ್ಲಿ ಸೃಷ್ಟಿ ಸಿದ್ಧಾಂತವನ್ನು ಧಿಕ್ಕರಿಸಿದ ಗೌತಮ ಬುದ್ಧನ ವಿಕಾಸವಾದದ ಸಿದ್ಧಾಂತದ ಫಲವೇ ಬೌದ್ಧ ಧರ್ಮದ ಉಗಮ. ಕತ್ತಲೆಯಲ್ಲಿ ಮಿಂಚಿನಂತೆ ಸಂಚರಿಸಿದ ಬುದ್ಧನ ಕಾಲವನ್ನ ಬೆಳಕಿನ ಯುಗ ಎನ್ನಲಾಗುತ್ತದೆ.

ಮುಸ್ಲಿಂ ದೊರೆಗಳ. ಆಳ್ವಿಕೆಯಲ್ಲಿ ಮತಾಂತರ ಅನೇಕ ಅನೀತಿ ಅಕ್ರಮಗ ಳಿಂದ ನಡೆಯುತ್ತಿತ್ತು. ಬಲವಂತದಿಂದ ಮತಾಂತರಗೊಳಿಸುತ್ತಿದ್ದು ಇದಕ್ಕೆ ಒಪ್ಪದವರನ್ನ ಅನೇಕ ರೀತಿಯಾಗಿ ಹಿಂಸಿಸತೊಡಗಿದರು. ಜಿಜಿಯಾ ಎನ್ನುವಂತ ತೆರಿಗೆ (ಹಿಂದೂಗಳಿಗೆ ಮಾತ್ರ) ವಿದಿಸುತ್ತಿದ್ದರು. ಅನೇಕರು ತೆರಿಗೆಯನ್ನ ಕಟ್ಟಲು ಸಾಧ್ಯವಾಗದೆ ಇಸ್ಲಂ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದರು. (ಈ ಸಂದರ್ಭದಲ್ಲಿ ಹಿಂದೂ ಧರ್ಮದ ಅಮಾನವೀಯ ನೀತಿಯಿಂದ ಸ್ವಪ್ರೇರಿತರಾಗಿ ಮತಾಂತರಗೊಂಡವರ ಸಂಖ್ಯೆ ತುಂಬ ವಿರಳ ಎಂದೇ ಹೇಳಬಹುದು) ನಂತರದ ದಿನಗಳಲ್ಲಿ ಮುಸ್ಲಿಂ ಆಳ್ವಿಕೆ ಕಡಿಮೆಯಾದಂತೆ ಮತ್ತು ಕೆಲವು ಸರ್ವಧರ್ಮವನ್ನ ಗೌರವಿಸುವ ಮುಸ್ಲಿಂ ದೊರೆಗಳ ಕಾಲದಲ್ಲಿ ಅಹಿಂದೂ ಮುಸ್ಲಿಂ ದೇವರುಗಳನ್ನ (ದರ್ಗಾಗಳಲ್ಲಿ ಅಹಿಂದೂ ದೇವರುಗಳನ್ನ) ಒಂದೇ ಜಾಗದಲ್ಲಿ ಪ್ರತಿಷ್ಠಾಪಿಸುವುದರ ಮೂಲಕ ಹಿಂದೂಗಳನ್ನ ಆಕರ್ಷಿಸತೊಡಗಿದರು.

ಹಿಂದೂ ಧರ್ಮದ ದೇವರುಗಳು (ಸೃಷ್ಟಿಕರ್ತ) ಇಸ್ಲಾಂ, ಕ್ರೈಸ್ತ ಧರ್ಮಗಳ ಪ್ರವಾದಿಗಳು ಧರ್ಮದ ಬಗ್ಗೆ, ಪ್ರಕೃತಿಯಲ್ಲಿನ ಅದ್ಭುತಗಳ ಬಗ್ಗೆ ತಮ್ಮದೆಯಾದ ವ್ಯಾಖ್ಯಾನವನ್ನು ನೀಡಿದ್ದಾರೆ. ಅವುಗಳು ಮನುಷ್ಯನನ್ನ ಧಾರ್ಮಿಕ ಅಂದಶ್ರದ್ಧೆಯಲ್ಲಿ ಕಟ್ಟು ಬೀಳುವಂತೆ ಪ್ರೇರೆಪಿಸಿದ್ದಾರೆ.

ಇಸ್ಲಾಂಧರ್ಮ ಮಹಮ್ಮೊದ್ ಪೈಂಗಂಬರ್‌ನೇ ದೇವರ ಪ್ರವಾದಿ ಎಂದು ಒಪ್ಪಿಕೊಂಡರೆ ಮಾತ್ರ ಮುಸ್ಲಿಮರಿಗೆ ಮುಕ್ತಿ. ಮುಸ್ಲಿಂರನ್ನು ಹೊರತುಪಡಿಸಿ ಉಳಿದ ಯಾವುದೇ ಜೀವಿಗೂ ಭೂಮಿಯ ಮೇಲೆ ಮುಕ್ತಿಯಿಲ್ಲ ಎಂದು ಹೇಳಿದೆ.

ಕ್ರೈಸ್ತರು 'ಯೇಸುಕ್ರಿಸ್ತನ' ದೇವರ ಪುತ್ರ ಎಂಬುದನ್ನ ಒಪ್ಪಿಕೊಳ್ಳದೆ ಹೊರತು ಮನುಷ್ಯನಿಗೆ ಮುಕ್ತಿ ಇಲ್ಲ. ಮನುಷ್ಯನ ಒಳಿತು ಕೆಡುಕುಗಳಿಗೆ ಯೇಸುವೆ ಕಾರಣ. ಮನುಷ್ಯನ ಮುಕ್ತಿ ಯೇಸುವಿನಿಂದ ಮಾತ್ರ ಸಾಧ್ಯ. ಯೇಸುವೇ ಅಂತಿಮ ಎಂದು ಹೇಳಿ ಮನುಷ್ಯನನ್ನ ಕೇವಲ ಯಂತ್ರವನ್ನಾಗಿಸಿದವು.

ಹಿಂದೂ ಧರ್ಮ ಇವೆಲ್ಲಕ್ಕಿಂತ ಭಿನ್ನ ಸಿದ್ಧಾಂತವನ್ನ ಹೊಂದಿದೆ. ದ್ವಾಪರಯುಗದಲ್ಲಿ ಶ್ರೀಕೃಷ್ಣ (ಮಹಾವಿಷ್ಣುವಿನ ದಶಾವತಾರಗಳಲ್ಲಿ ಒಂದು) ಭಗವಗ್ಗೀತೆಯಲ್ಲಿ ಸ್ವತಃ ತಾನೆ ದೇವರೆಂದು ಹೇಳಿಕೊಂಡು ಭಗವದ್ಗೀತೆ ನನ್ನ ಸ್ವಂತ ವಾಣಿ ಎಂದು ಘೋಷಿಸಿ, ಅದಕ್ಕಾಗಿಯೇ ಸಂಭವಾಮಿ ಯುಗೇ ಯುಗೇ ಎಂದು ಸಾರಿದ್ದಾನೆ. ಕೃತಯುಗ, ತೇತ್ರಾಯುಗ, ದ್ವಾಪರಯುಗ, ಕಲಿಯುಗ (ಇಂದು ದಶಾವತಾರಿ ಮಹಾವಿಷ್ಣು ಧರ್ಮ ರಕ್ಷಣೆಗಾಗಿ ಮತಾಂತರ ಪಡೆಯಲು ವಾಜಪೇಯಿ, ಲಾಲ್‌ಕೃಷ್ಣ ಅಡ್ವಾನಿ, ನರೇಂದ್ರ ಮೋದಿಯಾಗಿ, ಪ್ರಮೋದ್ ಮುತಾಲಿಕ್ ಆಗಿ ಬಂದಿದ್ದರೆ ಯಾರು ಆಶ್ಚರ್ಯ ಪಡಬೇಕಿಲ್ಲ. ಇವರ ಪಾತ್ರಗಳಿಗೆ ಮಹಿಳಾ ಪಾತ್ರದಾರಿಗಳಾದ ಸಿತೆ, ರಾಧೆ, ದ್ರೌಪದಿ ಇತ್ಯಾದಿ ಯಾರ್‍ಯಾರು ಇದ್ದಾರೆ ಎಂಬುದು ನಿಮಗೆ ಬಿಟ್ಟದ್ದು) ಸೇರಿದಂತೆ ಒಟ್ಟು ನಾಲ್ಕು ಯುಗಗಳಲ್ಲಿ ಮಹಾವಿಷ್ಣು ಹತ್ತು ಅವತಾರಗಳನ್ನು ಎತ್ತಿದ್ದಾನೆ. ಅಧರ್ಮ, ಅನೀತಿ ಹೆಚ್ಚಿದಾಗ ದುಷ್ಟರನ್ನ ಸಂಹರಿಸಲು ಹುಟ್ಟಿಬರುತ್ತೇನೆ ಎಂದು ಗೀತೆಯಲ್ಲಿ ಹೇಳಿದ್ದಾನೆ. (ಅದಕ್ಕಾಗಿ ನಮ್ಮ ಕಾನೂನು ಪುಸ್ತಕಗಳನ್ನ ಸುಟ್ಟು, ಪೊಲೀಸ್ ವ್ಯವಸ್ಥೆಯನ್ನ ತಗೆದುಹಾಕಿ ನ್ಯಾಯಾಲಯಗಳನ್ನ ಮುಚ್ಚಿ ನಮ್ಮ ರಕ್ಷಣೆಗೆ ಮಹಾವಿಷ್ಣು ಬರುವುದನ್ನ ಕಾಯೋಣ)

ಹಿಂದೂ, ಇಸ್ಲಾಂ, ಕ್ರೈಸ್ತ ಧರ್ಮಗಳ ಮಹಾಪುರುಷರುಸ್ವತಹ ದೇವರುಗಳು, ದೇವರುಗಳ ಅವತಾರ ಜಗತ್ತಿನ ಎಲ್ಲಾ ಸೃಷ್ಟಿಗೆ ಕಾರಣರು ಎಂದು ಸಾರುತ್ತಾ, ಅವರ

ಹೆಸರಿನಲ್ಲಿ ಪವಾಡಗಳನ್ನ ನಡೆಸುತ್ತಾ ದೆವ್ವ, ಭೂತ, ಮಾಟ ಮಂತ್ರ ದಂಥ ಕಂದಾಚಾರಗಳನ್ನ ಅವೈಜ್ಞಾನಿಕ ಚಿಂತನೆಗಳನ್ನ ಸಮಾಜದಲ್ಲಿ ಬಿತ್ತುತ್ತ ಸಾಗಿದರು. ಆದರೆ ಬೌದ್ಧ ಧರ್ಮ ಸ್ಥಾಪಕ ಬುದ್ಧ (ಸಿದ್ಧಾರ್ಥ ಗೌತಮ) ಮಾತ್ರ ವಿಭಿನ್ನ ಚಿಂತನೆಯಿಂದ, ವೈಜ್ಞಾನಿಕ ಚಿಂತನೆಗಳನ್ನ ಸಮಾ ಜದಲ್ಲಿ ಬಿತ್ತುತ್ತ ಸಾಗಿದರು.

ದೇವರನ್ನ ಪ್ರಶ್ನಿಸಿದ ಬುದ್ಧ ಧರ್ಮದ ಕೇಂದ್ರ ದೇವರೊಂದಿಗಿನ ಮನುಷ್ಯರ ಸಂಬಂಧದಲ್ಲಿಲ್ಲ ಅದು ಮನುಷ್ಯರ ನಡುವಿನ ಸಂಬಂಧದಲ್ಲಿದೆ. ಎಲ್ಲರೂ ಸುಖವಾಗಿರುವಂತೆ ಮನುಷ್ಯ ಮನುಷ್ಯರೊಂದಿಗೆ ಹೇಗೆ ವರ್ತಿಸಬೇಕು ಎಂಬುದನ್ನ ಅವನಿಗೆ ಭೋಧಿಸುವುದೇ ಧರ್ಮದ ಉದ್ದೇಶ. ಧರ್ಮ ಎಂದರೆ ಜೀವನದ ಎಲ್ಲ ಕ್ಷೇತ್ರಗಳಲ್ಲಿಯು ಮನುಷ್ಯ ಮನುಷ್ಯನ ನಡುವೆ ಸರಿಯಾಗಿ ಸಂಬಂಧಗಳಿರುವುದು, ಧರ್ಮವು ಪ್ರಜ್ಞೆ ಮತ್ತು ಕರುಣೆಗಳ ನಡುವೆ ಸರಿಯಾದ ಸಂಬಂಧಗಳಿರುವುದು, ಧರ್ಮವು ಪ್ರಜ್ಞೆ ಮತ್ತು ಕರುಣೆಗಳ ಸಂಗಮ ಎಂಬ ವಿಭಿನ್ನ ಸಿದ್ಧಾಂತವನ್ನ ಸಾರಿದ ಬುದ್ಧ ಜಗತ್ತು ಸೃಷ್ಟಿಯಿಂದ ನಡೆದಿದೆ ಎಂಬುದನ್ನ ವಿರೋಧಿಸಿ ವಿಕಾಸವಾದವನ್ನ ಪ್ರತಿಪಾದಿಸಿದ. (ಇದು ಸಂಶೋಧನೆಗಳಿಂದಲೂ ಸಾಬೀತಾಗಿದೆ. ಡಾರ್ವಿನ್ನನ ವಿಕಾಸವಾದ ಸಿದ್ಧಾಂತ ಹೆಚ್ಚು ಮಹತ್ವ ಪಡೆಯಿತು. ಅಂದಿನ ಕಾಲದಲ್ಲಿಯೇ ಬುದ್ಧ ಅನೇಕ ವೈಜ್ಞಾನಿಕ-ಚಿಂತನೆ ಹೊಂದಿದ್ದನು ಎನ್ನುವುದಕ್ಕೆ ಇದೊಂದು ಸೂಕ್ತ ಉದಾಹರಣೆ)

ಮನುಷ್ಯನನ್ನ ಕಾಡುತ್ತಿದ್ದ ಅನೇಕ ಸಾಮಾಜಿಕ ಪಿಡುಗುಗಳಿಗೆ ಪರಿಹಾರವನ್ನ ಸೂಚಿಸಿದ ಬುದ್ಧ ತಾನು ಎಲ್ಲಿಯು ಸಹ ದೇವರೆಂದಾಗಲಿ, ಅಥವಾ ದೇವರ ಅವತಾರ ಪುರುಷನೆಂದಾಗಲಿ ಹೇಳಲಿಲ್ಲ. ಹಿಂದೂ, ಕ್ರೈಸ್ತಾ, ಇಸ್ಲಾಂಮಿನಂತೆ ನನ್ನ ಸಿದ್ಧಾಂತ (ತತ್ವ)ವೇ ಸರ್ವ ಶ್ರೇಷ್ಠ ಅದೇ ಅಂತಿಮ ಸತ್ಯ ಎಂಬುದಾಗಿ ಎಲ್ಲಿಯು ಹೇಳಲಿಲ್ಲ. (ಆ ರೀತಿ ಪ್ರಚಾರ ಪಡಿಸದಂತೆ ತನ್ನ ಅನುಯಾಯಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿದ್ದ) ಯಾವುದೇ ರೀತಿಯ ಪವಾಡಗಳನ್ನ ನಡೆಸದೆ, ನನ್ನ ಅನುಭವಗಳನ್ನ ನಿಮ್ಮ ಮುಂದಿಟ್ಟಿದ್ದೇನೆ. ಅದನ್ನ ವಿಮರ್ಶೆಗೆ ಒಳಪಡಿಸಿ ಸತ್ಯ ಎಂಬುದಾದರೆ ಸ್ವೀಕರಿಸಿ ಇಲ್ಲ ಎಂದಾದರೆ ಅದರಾಚೆಗಿನ ಸತ್ಯಕ್ಕಾಗಿ ಹುಡುಕಾಟ ನಡೆಸಿ. ಯಾಕೆಂದರೆ ಯಾವುದೂ ಅಂತಿಮ ಸತ್ಯ ಎಂದು ಹೇಳಲಾಗದ್ದು ಎಂದು ಹೇಳಿ ಮನುಷ್ಯನ ಚಿಂತನಶೀಲತೆಯನ್ನ ಬೆಂಬಲಿಸಿದನು. ಮೊಟ್ಟ ಮೊದಲಿಗೆ ಹಿಂದೂಧರ್ಮದ ಬೇರನ್ನ ಕತ್ತರಿಸಿದ ಬುದ್ಧ ಜಗತ್ತಿಗೆ ಬೆಳಕಾದನು. "ಬುದ್ಧನ ಕಾಲಕ್ಕಿಂತ ಹಿಂದಿನ ಯುಗ ಭಾರತದ ಚರಿತ್ರೆಯಲ್ಲಿ ಕತ್ತಲೆ ಯುಗ" ಎಂಬುದಾಗಿ ಪ್ರೊ. ಎಸ್. ಎಸ್. ರಾಘವಚಾರ್ ಅಭಿಪ್ರಾಯ ಪಟ್ಟಿದ್ದಾರೆ.

ಬುದ್ಧನ ನಂತರದಲ್ಲಿಯು ಅನೇಕ ಧಾರ್ಮಿಕ ಚಿಂತಕರು ಸಾಮಾಜಿಕ ಸುಧಾರಕರು ತಮ್ಮದೇಯಾದ ರೀತಿಯಲ್ಲಿ ಹಿಂದೂ ಧರ್ಮದ ಮಾನವ ವಿರೋಧಿ ನೀತಿಯ ವಿರುದ್ಧವಾಗಿ ಚಳುವಳಿಗಳನ್ನ ನಡೆಸಿದ್ದಾರೆ ಅವುಗಳಲ್ಲಿ ಅನೇಕರು ಹಿಂದು ಧರ್ಮದ ಚೌಕಟ್ಟಿನಲ್ಲಿ ಹೋರಾಟವನ್ನ ನಡೆಸಿದರೆ, ಇನ್ನ ಕೆಲವರು ಹಿಂದೂ ಧರ್ಮವನ್ನ ಧಿಕ್ಕರಿಸಿ ಅದರಿಂದ ಹೊರಬಂದು ಹೋರಾಟ ನಡೆಸಿದ್ದಾರೆ. ಅಂತಹ ಕ್ರಾಂತಿಕಾರಿ ಚಳುವಳಿಗಳಲ್ಲಿ 12ನೇ ಶತಮಾನದ ಬಸವಾದಿ ಶರಣರ ವಚನ ಚಳುವಳಿ ಪ್ರಮುಖವಾದದ್ದು. ತಮ್ಮ ಮೊನಚಾದ ಬರಹದ ಮೂಲಕ ಸನಾತನ ಹಿಂದೂ ಧರ್ಮಕ್ಕೆ ಚಾಟಿ ಏಟನ್ನ ನೀಡಿದರು.

ದಲಿತರ ಸಾಮಾಜಿಕ ಪರಿಸ್ಥಿತಿ ಹಿಂದೂ ಧರ್ಮದ ಆಕ್ರಮಣದಿಂದ ದಯನೀಯ ಸ್ಥಿತಿಯಲ್ಲಿದ್ದು ಅದೆಂದೂ ದಲಿತರಿಗೆ ಮಾತೃಧರ್ಮವಾಗಲು ಸಾಧ್ಯವಿಲ್ಲ. ಆದುದರಿಂದ ಅವರು ಹಿಂದೂ ಧರ್ಮವನ್ನ ತ್ಯಜಿಸುವುದು ಒಂದು ಅನಿವಾರ್ಯ ಕ್ರಿಯೆಯಾಗಿದೆ. ಹಿಂದೂ ಧರ್ಮದ ಗುಲಾಮಗಿರಿ ವ್ಯವಸ್ಥೆಯಿಂದ ಹೊರ ಬಂದು ಗೌರವದಿಂದ ಬದುಕಬೇಕಾದರೆ ಅದು ಮತಾಂತರದಿಂದ ಮಾತ್ರ ಸಾಧ್ಯವಾಗಿದೆ.

ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸುವುದರ ಮೂಲಕ ದಲಿತರಿಗೆ ಲಿಂಗಧಾರಣೆ ಮಾಡಿಸಿ ವೀರ ಶೈವ ಧರ್ಮಕ್ಕೆ ಮತಾಂತರಗೊಳಿಸಿದರು. ಅಂದಿನ ಕಾಲದಲ್ಲಿಯೇ ಅಂತರ್‌ಜಾತಿ ವಿವಾಹ ಮಾಡಿಸಿ ಹಿಂದೂ ಧರ್ಮ ವ್ಯವಸ್ಥೆಯನ್ನ ಮೆಟ್ಟಿನಿಂತರು. ಆದರೆ ಬಸವಣ್ಣನವರ ನಂತರ ಯಾರೂ ಅವರ ದಾರಿಯಲ್ಲಿ ನಡೆದು ವೀರ ಶೈವ ಧರ್ಮವನ್ನ ವಿಶ್ವಮಟ್ಟಕ್ಕೆ ಕೊಂಡೊಯ್ಯುವ ಪ್ರಯತ್ನವನ್ನ-ಮಾಡಲಿಲ್ಲ, ಅವರ ಆಶಯಗಳನ್ನ ಪೂರ್ಣಗೊಳಿಸುವ ಕೆಲಸ ನಡೆಯದೆ ಅದೊಂದು ಪ್ರಾದೇಶಿಕ ಧರ್ಮವಾಗಿ ಉಳಿಯಬೇಕಾಯಿತು. ನಂತರದ ದಿನಗಳಲ್ಲಿ ಹಿಂದೂ ಧರ್ಮದ ಜೊತೆ ರಾಜಿಮಾಡಿಕೊಂಡು ಹಿಂದೂ ಧರ್ಮದಲ್ಲಿ ಒಂದು ಪ್ರಮುಖ ಜಾತಿಯಾಗಿ ಸ್ಥಾನ ಪಡೆದುಕೊಂಡಿತು. (ಕರ್ನಾಟಕದಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಸುತ್ತಿರುವುದು ಹೆಚ್ಚಿನ ಪ್ರಮಾಣದಲ್ಲಿ ಆ ಜಾತಿಯಿಂದಲೆ.)

ಇಂದು ದಲಿತರ ಸಾಮಾಜಿಕ ಪರಿಸ್ಥಿತಿ ಹಿಂದೂ ಧರ್ಮದ ಆಕ್ರಮಣದಿಂದ ದಯನೀಯ ಸ್ಥಿತಿಯಲ್ಲಿದ್ದು ಅದೆಂದೂ ದಲಿತರಿಗೆ ಮಾತೃಧರ್ಮವಾಗಲು ಸಾಧ್ಯವಿಲ್ಲ. ಆದುದರಿಂದ ಅವರು ಹಿಂದೂ ಧರ್ಮವನ್ನ ತ್ಯಜಿಸುವುದು ಒಂದು ಅನಿವಾರ್ಯ ಕ್ರಿಯೆಯಾಗಿದೆ. ಹಿಂದೂ ಧರ್ಮದ ಗುಲಾಮಗಿರಿ ವ್ಯವಸ್ಥೆಯಿಂದ ಹೊರಬಂದು ಗೌರವದಿಂದ ಬದುಕಬೇಕಾದರೆ ಅದು ಮತಾಂತರದಿಂದ ಮಾತ್ರ ಸಾಧ್ಯವಾಗಿದೆ. ಕ್ರೈಸ್ತ, ಇಸ್ಲಾಂ ಧರ್ಮಗಳು ಅವೈಜ್ಞಾನಿಕ ಚಿಂತನೆಯನ್ನ ಹೊಂದಿದ್ದು ಅವುಗಳೆಂದೂ ದಲಿತರಿಗೆ ಹತ್ತಿರವಾಗಲಾರವು. ಅದಕ್ಕಾಗಿ ವೈಜ್ಞಾನಿಕ ಚಿಂತನೆಯಿಂದ ಸಮಾಜದ ಎಲ್ಲಾ ವರ್ಗದ ಜನರಿಗೆ ಹತ್ತಿರವಾಗಿರುವ ಬೌದ್ಧ ಧರ್ಮವನ್ನ ಭವಿಷ್ಯದ ದೃಷ್ಟಿಯಿಂದ ದಲಿತರು ಮತಾಂತರಗೊಳ್ಳುವುದಕ್ಕೆ ಆಯ್ಕೆ ಮಾಡಿಕೊಳ್ಳುವುದು ಸೂಕ್ತವಾಗಿದೆ. ಅದಕ್ಕಾಗಿ ಡಾ|| ಅಂಬೇಡ್ಕರ್‌ರವರು ಧರ್ಮಗಳ ಆಳವಾದ ಅಧ್ಯಯನ ನಡೆಸಿ ದಲಿತರು ಬೌದ್ಧ ಧರ್ಮವನ್ನ ಸ್ವೀಕರಿಸಲು ಕರೆ ಕೊಟ್ಟಿದ್ದರು. ಇಂದು ನಾವುಗಳು ಅವರ ದಾರಿಯಲ್ಲಿ ನಡೆಯುವುದು ನಮ್ಮ ಕರ್ತವ್ಯವಾಗಬೇಕಿದೆ.

ಈ ಎಲ್ಲಾ ವಾಸ್ತವ ಚರ್ಚೆಗಳ ನೆಲೆಯಲ್ಲಿ ಮತಾಂತರವನ್ನ ಕಾಯ್ದೆ ಮೂಲಕ ತಡೆಯಬೇಕು ಧರ್ಮ ರಕ್ಷಣೆ ಮಾಡಲೇಬೇಕು ಎನ್ನುವಂತಹ ಸ್ನೇಹಿತರಿಗಾಗಿ ಒಂದು ಮಾತನ್ನ ಹೇಳಲೇಬೇಕಾಗಿದೆ. ಅದನ್ನ ಹೇಳದಿದ್ದರೆ ನನ್ನ ಬರಹ ಪೂರ್ಣವಾಗುವುದಿಲ್ಲ. ತಲೆಬರಹಕ್ಕೆ ಅರ್ಥವೂ ಇರುವುದಿಲ್ಲ. ಮತಾಂತರವನ್ನು ಕಾಯ್ದೆ ಕಾನೂನುಗಳನ್ನ ಮಾಡುವುದರ ಮೂಲಕ ನಿಷೇಧಿಸುವುದು ಸಂವಿಧಾನ ವಿರೋಧಿ ನಿಲುವು. (ಅಂತಹ ಕಾನೂನು ಜಾರಿಗೆ ಬಂದರೆ ತಾಲಿಬಾನಿಗಳಿಗೂ ಭಾರತಕ್ಕೂ ಯಾವುದೇ ವ್ಯತ್ಯಾಸವಿರುವುದಿಲ್ಲ) ಯಾವುದೇ ಒಬ್ಬ ವ್ಯಕ್ತಿ ತನಗೆ ಇಷ್ಟವಾದಂಥ ಧರ್ಮವನ್ನ ಆಯ್ಕೆ ಮಾಡಿಕೊಂಡು ಧಾರ್ಮಿಕ ಆಚರಣೆ ಮಾಡಿಕೊಂಡು (ಕೆಲವು ಧಾರ್ಮಿಕ ಆಚರಣೆಗಳನ್ನ ಕಾನೂನಿನ ಮೂಲಕ ನಿಷೇಧಿಸಲಾಗಿದೆ) ಬೇರೆಯವರ ನಂಬಿಕೆಗೆ ಧಕ್ಕೆ ಬರದಂತೆ ಬದುಕುವುದಕ್ಕೆ ನಮ್ಮ ಸಂವಿಧಾನದಲ್ಲಿ ಅವಕಾಶವಿದೆ. ಮತಾಂತರ ನಿಷೇಧ ಕಾಯ್ದೆಯಿಂದ ವ್ಯಕ್ತಿ ಸ್ವತಂತ್ರ್ಯವನ್ನ ಮೊಟಕುಗೊಳಿಸಿದಂತೆ ಆಗುತ್ತದೆ. ಅವನ ಮೂಲಭೂತ ಹಕ್ಕಿಗೆ ಧಕ್ಕೆ ಬರುತ್ತದೆ. ಅವನ ಧಾರ್ಮಿಕ ನಂಬಿಕೆಯನ್ನು ಬಂಧಿಸಿದಂತಾಗುತ್ತದೆ. ಹಿಂದೂ ಧರ್ಮ ಅಸಮಾನತೆ ಮೂಢನಂಬಿಕೆಯಂಥ ಕಂದಾಚಾರಗಳಲ್ಲಿ ಮುಳುಗಿ ಕೊಳೆತು ಹೋಗುತ್ತಿದೆ. ಇಂಥ ಕೊಳೆತ ಸ್ಥಿತಿಯಲ್ಲಿರುವುದಕ್ಕೆ ಯಾವ ಸ್ವಾಭಿಮಾನಿ ದಲಿತನಿಂದಲೂ ಸಾಧ್ಯವಿಲ್ಲ.

ಮತಾಂತರಕ್ಕೆ ಕಾನೂನಿನ ಮೂಲಕ ಕಡಿವಾಣ ಹಾಕುವ ಬದಲು ಹಿಂದೂ ಧರ್ಮವನ್ನ ಎಲ್ಲರೂ ಪ್ರೀತಿಸುವಂತೆ ಪಾಲಿಸಲು ಮುಂದೆ ಬರುವಂತೆ ಶುದ್ಧಗೊಳಿಸಬೇಕಾಗಿದೆ. ಇದನ್ನ ಮಾಡಲು ಕಾನೂನು ಬೇಕಾಗಿಲ್ಲ, ಕಾನೂನಿನಿಂದ ಅದು ಸಾಧ್ಯವಿಲ್ಲ. ಮನಸುಗಳು ಪರಿವರ್ತನೆಗೊಳ್ಳಬೇಕು ಅಷ್ಟೆ. ಹಿಂದೂ ಧರ್ಮವನ್ನ ರಕ್ಷಿಸುವ ನಿಜವಾದ ಉದ್ದೇಶ ನಿಮ್ಮದಾಗಿದ್ದರೆ ಅದಕ್ಕಿರುವುದು ಒಂದೇ ಮಾರ್ಗ ಅದು ಮತಾಂತರ ನಿಷೇಧ ಕಾಯ್ದೆ ಅಲ್ಲ, ದಲಿತರಿಗೆ ಜಾತ್ಯಾಂತರ ಗೋಳ್ಳುವುದಕ್ಕೆ ಮುಕ್ತ ಅವಕಾಶ. (ಇದರಿಂದ ಪೂರ್ಣಪ್ರಮಾಣದಲ್ಲಿ ದಲಿತರನ್ನ ಮತಾಂತರಗೊಳ್ಳದಂತೆ ತಡೆಯುವುದಕ್ಕೆ ಸಾಧ್ಯವಾಗದಿದ್ದರೂ, ಪೂರ್ಣ ಪ್ರಮಾಣದಲ್ಲಿ ದಲಿತರು ಧರ್ಮವನ್ನ ತ್ಯಜಿಸದಂತೆ ನೋಡಿಕೊಳ್ಳಬಹುದು.)

ಹಿಂದೂ ಧರ್ಮ ರಕ್ಷಣೆಗಾಗಿ ಉಳಿದಿರುವ ಇಂತಹ ಮಾರ್ಗ ಬಿಟ್ಟರೆ ನಿಮ್ಮ ಎಲ್ಲಾ ಮಾರ್ಗಗಳು ಅಸ್ತಿತ್ವವನ್ನ ಕಳೆದುಕೊಂಡಿವೆ. ಒಬ್ಬ ದಲಿತ ಬ್ರಾಹ್ಮಣನಾಗಿ, ಲಿಂಗಾಯ್ತುನಾಗಿ ಹಿಂದೂ ಧರ್ಮದ ಯಾವುದೇ ಜಾತಿಯನ್ನ ಮುಕ್ತವಾಗಿ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡದೆ ಹಿಂದೂಧರ್ಮದಿಂದ ಬಿಡುಗಡೆ ಬಯಸಿ ಹೊರ ನಡೆಯುತ್ತಿರುವ ದಲಿತರನ್ನ ತಡೆಯುವುದಕ್ಕೆ ನಿಮ್ಮ ಯಾವುದೇ ಕಾನೂನಿನಿಂದ ಸಾಧ್ಯವಿಲ್ಲ. ಒಂದನ್ನ ಪಡೆಯಬೇಕಾದರೆ ಮತ್ತೊಂದನ್ನ ಕಳೆದುಕೊಳ್ಳಬೇಕು. ಇದು ಪ್ರಕೃತಿ ನಿಯಮ. ನಾವು ಸ್ವತಂತ್ರ್ಯ, ಸಮಾನತೆ, ಸ್ವಾಭಿಮಾನದ ಗೌರವದ ಬದುಕಿಗಾಗಿ ನಮ್ಮ ಸಾಕಿದ ಮಲತಾಯಿಯ ಅಪ್ಪುಗೆಯಿಂದ ಬಿಡಿಸಿಕೊಂಡು ಪ್ರೀತಿಯ ಸೆಲೆಯನ್ನ ಹುಡುಕಿಕೊಂಡು ಹೋಗಲು ಸಿದ್ಧವಿದ್ದೇವೆ, ನೀವು ನಿಮ್ಮ ಧರ್ಮವನ್ನ ರಕ್ಷಿಸಿಕೊಳ್ಳಲು ಶತಶತಮಾನದಿಂದ ಕಟ್ಟಿಕೊಂಡು ಬಂದಿದ್ದ ಗೊಡ್ಡು ಸಂಪ್ರದಾಯಗಳ ಬೇಲಿಯನ್ನ ಕಿತ್ತೊಗೆಯಲು ಸಿದ್ಧರಿದ್ದೀರಾ? ಜಾತ್ಯಾಂತರಕ್ಕೆ ನಿಮ್ಮ ಮನಸುಗಳು ಮುಕ್ತವಾಗಿದ್ದರೆ ನಿಮ್ಮ ಮಠ, ಮಂದಿರ, ಮನೆ, ಮನಸುಗಳಿಗೆ ನಮ್ಮನ್ನ ಸ್ವಾಗತಿಸಿ. □

ಬಾಬಾ ಸಾಹೇಬರು.. ಅಕ್ಷರ, ಅನ್ನ, ಭಯ..

ಹುಲಿಕುಂಟೆ ಮೂರ್ತಿ

ಕಳೆದ ಎಂಟತ್ತು ವರುಷಗಳಿಂದ ಒಂದು ಪ್ರಶ್ನೆ ನನ್ನನ್ನು ಬಾಧಿಸುತ್ತಿದೆ ಅದು.. ಅಕ್ಷರ ಅನ್ನವಾಗಬಲ್ಲುದೇ..? ಎಂಬುದು. ಇದು ಬಹಳ ಹಳೆಯ ಪ್ರಶ್ನೆಯಾದರೂ ಈಗಲೂ ನನ್ನಂಥ ಬಹಳ ಜನರನ್ನು ಭಾದಿಸುತ್ತಿದೆ. ಈ ಪ್ರಶ್ನೆಯ ಹಿಂದಿನ ತಾತ್ವಿಕತೆ ಕುರಿತು ನನಗೆ ಹೆಚ್ಚು ಅರ್ಥವಾದದ್ದೂ ನಾನು ಹೆಚ್ಚು ಅಕ್ಷರಸಖ್ಯ ಪಡೆದಮೇಲೆಯೇ..

ಅಂಬೇಡ್ಕರರ ಬದುಕನ್ನು ನಾವು ಈ ಅರ್ಥದಲ್ಲಿ ಅರ್ಥೈಸಿಕೊಳ್ಳುವಾಗ ಒಂದು ವೇಳೆ ಅವರು ಅಕ್ಷರ ಕಲಿಯದಿದ್ದರೆ..? ಎಂಬ ಪ್ರಶ್ನೆ ಬಂದು ಭಯ ಹುಟ್ಟುತ್ತದೆ. ಈ ಭಯದ ಆಧಾರದ ಮೇಲೆಯೇ ನಾವು 'ಅಕ್ಷರ ಮತ್ತು ಗ್ರಾಮ' ಅಥವಾ 'ಅಕ್ಷರ ಮತ್ತು ಸಮುದಾಯಗಳು' ಎಂಬ ಜಿಜ್ಞಾಸೆಗೆ ತೊಡಗಿಕೊಂಡರೆ ನಮ್ಮ ನಿಲ್ದಾಣಗಳನ್ನು ನಾವು ಸ್ಪಷ್ಟಪಡಿಸಿಕೊಳ್ಳಬಹುದೇನೋ. ಈ ಚರ್ಚೆ ಜಾಗತೀಕರಣ ಮತ್ತು ದಲಿತರಿಗಿಂತ ಕೊಂಚ ಭಿನ್ನ ದಾರಿಯಲ್ಲಿ ನಡೆಯುವ ಅಗತ್ಯವಿದೆ.

ಅಕ್ಷರ ಪುಳಕ ಮತ್ತು ಗಾಯದ ಬೀಜ

ಭಾರತದಂಥ ದೇಶದಲ್ಲಿ ಅಕ್ಷರವು ವಿಮೋಚನೆಯ ಅಸ್ತ್ರವಾಗಿ ಬಳಕೆಯಾದದ್ದು, ಆಗುತ್ತಿರುವುದು ಜಾಗತಿಕ ಬದಲಾವಣೆಯ ದೃಷ್ಟಿಯಲ್ಲಿ ಮಹತ್ತರವಾದದ್ದು. ಜಗತ್ತಿನ ಎಲ್ಲ ಸಮುದಾಯಗಳು ಇಂಥ 'ಅಕ್ಷರ ಪುಳಕ'ವನ್ನು ಅನುಭವಿಸುತ್ತಿವೆ. ಅಂದರೆ, ನಾವು ರೋಮ್ಯಾಂಟಿಕ್ ಆಗಿ ಮಾತನಾಡುವ 'ಗ್ರಾಮ ವ್ಯವಸ್ಥೆ' ತಮ್ಮೊಳಗೆ ಮಾಡಿರುವ ಗಾಯದ ಗುರುತುಗಳನ್ನು ಈ ಅಕ್ಷರ ಅಳಿಸಬಲ್ಲುದು ಎಂಬ ತಿಳಿವು ಆ ಎಲ್ಲಾ ಸಮುದಾಯಗಳಿಗಿದ್ದಂತಿದೆ. ಅದನ್ನು 'ತಿಳಿವು' ಎಂದು ಕರೆದದ್ದು ಅಂಬೇಡ್ಕರ್‌ರಂಥವರೇ ಆಗಿರುವುದರಿಂದ ಆ ಬಗ್ಗೆ ಹೆಚ್ಚು ಅನುಮಾನವಿರಬೇಕಿಲ್ಲ; ಆದರೆ, ಗಾಯ ಮಾಯುವ ಸ್ಥಿತಿ ಎಂಬುದು ಜೀವಕೋಶಗಳೊಳಗಿನ 'ಗಾಯದ ಬೀಜ'ವನ್ನೇ ಮಾಯಿಸಬಲ್ಲುದೇ ಎಂದು ಪರಿಶೀಲಿಸಲು ಹೊರಟವರಿಗೆ ಆ ದಾರಿಯಲ್ಲಿ ಅಂಬೇಡ್ಕರ್ ಕೂಡಾ ಜತೆಗೂಡುತ್ತಾರೆ. ಈ ಜಿಜ್ಞಾಸೆಯನ್ನು ಅರ್ಥ ಮಾಡಿಕೊಳ್ಳಲು ನಾವು ಭಾರತದ ದಲಿತರಿಗೆ ಅಕ್ಷರ ಏನೆಲ್ಲಾ ಆಗಿದೆ ಎಂಬುದನ್ನು ನೋಡಿಕೊಳ್ಳಬೇಕಿದೆ.

ಶತಮಾನಗಳಿಂದ ದುಡಿಯುವ ಜನರಿಗೆ ಅಕ್ಷರಗಳನ್ನು ಬಚ್ಚಿಟ್ಟು ದ್ರೋಹ ಮಾಡಿದ ಶೋಷಕರು ಅಂಬೇಡ್ಕರ್ ಪ್ರಣೀತ ಅಕ್ಷರ ಆಂದೋಲನದಿಂದ ಅವರ ಬಾಯಲ್ಲಿ ಅಕ್ಷರಗಳು ನಲಿಯುವುದನ್ನು ಕಂಡು ಬೆಚ್ಚಿದ್ದು ಸಹಜ. ಕಳೆದ ನೂರು ವರ್ಷಗಳಲ್ಲಿ ಭಾರತ ಇಂತಹ ಎಷ್ಟೋ ಬೆಚ್ಚುಗಳಿಗೆ ಸಾಕ್ಷಿಯಾಗಿದೆ. ಇಲ್ಲಿ ಶೋಷಕ ಎಂದರೆ, ಮನುವಾದಿ ಸಂಸ್ಕೃತಿಯ ಸಕಲ ಸೌಲಭ್ಯವನ್ನು ಅನುಭವಿಸಿ ಅದರ ಎಲ್ಲ ಮಲವನ್ನು ತಳ ಸಮುದಾಯದ ಗೋವಿನಂತಹ ಜನರ ಮೇಲೆ ಹೊರಿಸಿದವರು. ಇತ್ತೀಚೆಗೆ ಅವರ ಸಾಲಿಗೆ ಸಣ್ಣ ಪುಟ್ಟ ಸಮುದಾಯಗಳು ಪೈಪೋಟಿಯ ಮೇಲೆ ಸೇರಿಕೊಂಡಿವೆ.

ನಮ್ಮ ಪ್ರಶ್ನೆಗಳಿಗೆ ಅರ್ಥವಿಲ್ಲವೇ..?

ಅಂಬೇಡ್ಕರರ ಕನಸಿನ ಹಾಗೆ ಅಕ್ಷರ ಕಲಿಕೆಯ ಉದ್ದೇಶ ಈಡೇರಿದೆಯೇ..? ಅದು ಹಸಿದ ಹೊಟ್ಟೆ-ಮನಸ್ಸುಗಳಿಗೆ ಅನ್ನವಾಗಿದೆಯೇ..? ಶತಮಾನಗಳ ಮಾಯದ ಗಾಯಗಳಿಗೆ ಮುಲಾಮಾಗಿದೆಯೇ..? ಅಥವಾ ಜೀವಕೋಶಗಳಲ್ಲಿ ಇನ್ನೆಂದೂ ಕರಗಲಾರದ ಅಹಂಕಾರವಾಗಿ ಮಾರ್ಪಟ್ಟು ಕಲಿತ ವ್ಯಕ್ತಿ ಮತ್ತು ಆ ಮೂಲಕ ಸಮುದಾಯಗಳನ್ನು ಒಳಗೇ ತಿಂದು ಮುಗಿಸುವ ಕೀಟವಾಗಿ ಪರಿಣಮಿಸಿದೆಯೇ..? ಅಕ್ಷರ ಕಲಿತ ಕಾರಣಕ್ಕೆ ಗ್ರಾಮ ವ್ಯವಸ್ಥೆಯಲ್ಲಿ ನಮ್ಮ ಪಾಲುದಾರಿಕೆಯನ್ನು ಕಳೆದುಕೊಂಡು ಇನ್ಯಾವ ನಿಲ್ದಾಣಗಳಿಗಾಗಿ ತಡಕಾಡುತ್ತಿದ್ದೇವೆ..? ಅಕ್ಷರ ಕಲಿತ ಕಾರಣಕ್ಕೆ ನಮ್ಮ ನೆಲಮೂಲದಿಂದ ಬೇರು ಕಿತ್ತುಕೊಂಡು ಸರಿಯಾದ ತಾವು ಸಿಗದೆ ಒದ್ದಾಡಬೇಕೆ..? ನಾವು ನಮ್ಮ ಗಾಯಗಳನ್ನು ತೊಳೆದುಕೊಳ್ಳಲು ಅಕ್ಷರವನ್ನವಲಂಭಿಸಿದ ಹಾಗೆ ಗಾಯಗಳನ್ನು ಮಾಡಿದ ಸಮುದಾಯಗಳು ಅವರ 'ಗಾಯವನ್ನು ಸೃಷ್ಟಿಸುವ' ರೋಗಗಳನ್ನು ಗುಣಪಡಿಸಿಕೊಳ್ಳಲು ಯಾಕೆ ಅದೇ ಅಕ್ಷರಗಳನ್ನು ಬಳಸಿಕೊಳ್ಳುತ್ತಿಲ್ಲ..? ಆ ಅಕ್ಷರಗಳಿಗೆ ಈ ಎರಡೂ ಗುಣಗಳಿಲ್ಲವೇ..? ನಮ್ಮ ಈ ಥರದ ಪ್ರಶ್ನೆಗಳು ಕೇವಲ ಭಾವನಾತ್ಮಕ ಬಿಕ್ಕುಗಳು ಮಾತ್ರವೇ..? ಈ ಪ್ರಶ್ನೆಗಳನ್ನು ಅಕ್ಷರದಿಂದಲೇ ಬದುಕುತ್ತಿರುವ, ಇನ್ನೂ ವಾಸಿಯಾಗದ ಗಾಯಗಳಿಂದ ನರಳುತ್ತಿರುವ ನಮ್ಮಂತವರು ಕೇಳಿಕೊಳ್ಳುವುದರಲ್ಲಿ ಯಾವುದೇ ಅರ್ಥಗಳಿಲ್ಲವೇ? ಇವೆಲ್ಲಾ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾದವರು ಯಾರು?

ಖೈರ್ಲಾಂಜಿಯ ದಾರಿ

ಈ ಪ್ರಶ್ನೆಗಳು ಅಕ್ಷರಮುಖಿ ಆಲೋಚನೆಯ ಭಾಗವಾಗಿಯೇ ಇದ್ದಾವೆಂಬ ಅರಿವು ಆ ಪ್ರಶ್ನೆಗಳು ಹುಟ್ಟುವ ಮೂಲದಲ್ಲೂ ಇದೆ ಎಂಬುದನ್ನರಿತು ನಾವು ಮುಂದುವರಿಯ ಬೇಕಿದೆ. ಖೈರ್ಲಾಂಜಿ ಮತ್ತು ಕಂಬಾಲಪಲ್ಲಿ ಘಟನೆಗಳು ನಡೆಯಲು ಮೂಲ ಕಾರಣ ಅಕ್ಷರವೇ ಎಂಬುದನ್ನು ನಾವು ಯಾವ ಅರ್ಥದಲ್ಲಿ ನೋಡಬೇಕು..? ಈ ಕಾರಣವನ್ನು ನಾವು ಅರ್ಥ ಮಾಡಿಕೊಂಡರೆ ಅಕ್ಷರ ಜಗತ್ತು ಈ ದೇಶದ ಶೋಷಿತರಿಗೆ ಕಾಣಿಸಿರುವ ಹಾಗು ಕಾಣಿಸಬಹುದಾದ ಕಾಣ್ಕೆ ಎಂಥ ಹದ್ದು ಎಂದು ನೆನೆದು ಭಯವಾಗುತ್ತದೆ. ನಾನು ಅಕ್ಷರವನ್ನು ಬದುಕಿನ ಮೂಲ ಧಾತುವನ್ನಾಗಿ ಮಾಡಿಕೊಂಡ ಕಾರಣಕ್ಕೆ ನನ್ನ ಜೀವಬೇರಿನ ತವರಾದ ನನ್ನ ಊರು ನನ್ನನ್ನು ಅನುಮಾನದಿಂದ ಕಾಣುತ್ತಿದೆ;

ಭಾರತದಂಥ ದೇಶದಲ್ಲಿ ಅಕ್ಷರವು ವಿಮೋಚನೆಯ ಅಸ್ತ್ರವಾಗಿ ಬಳಕೆಯಾದದ್ದು, ಆಗುತ್ತಿರುವುದು ಜಾಗತಿಕ ಬದಲಾವಣೆಯ ದೃಷ್ಟಿಯಲ್ಲಿ ಮಹತ್ತರವಾದದ್ದು. ಜಗತ್ತಿನ ಎಲ್ಲ ಸಮುದಾಯಗಳು ಇಂಥ 'ಅಕ್ಷರ ಪುಳಕ' ವನ್ನು ಅನುಭವಿಸುತ್ತಿವೆ. ಅಂದರೆ, ನಾವು ರೋಮ್ಯಾಂಟಿಕ್ ಆಗಿ ಮಾತನಾಡುವ 'ಗ್ರಾಮ ವ್ಯವಸ್ಥೆ' ತಮ್ಮೊಳಗೆ ಮಾಡಿರುವ ಗಾಯದ ಗುರುತುಗಳನ್ನು ಈ ಅಕ್ಷರ ಅಳಿಸಬಲ್ಲುದು ಎಂಬ ತಿಳಿವು ಆ ಎಲ್ಲಾ ಸಮುದಾಯಗ ಳಿಗಿದ್ದಂತಿದೆ. ಅದನ್ನು 'ತಿಳಿವು' ಎಂದು ಕರೆದದ್ದು ಅಂಬೇಡ್ಕರ್‌ರಂಥವರೇ ಆಗಿರುವುದರಿಂದ ಆ ಬಗ್ಗೆ ಹೆಚ್ಚು ಅನುಮಾನ ವಿರಬೇಕಿಲ್ಲ;

ನಂಬಲು ಹಿಂಜರಿಯುತ್ತದೆ ಹಾಗೂ ನಿಜಕ್ಕೂ ಅಸ್ಪೃಷ್ಯನಂತೆ ಕಾಣುತ್ತಿದೆ. ನಾವು ಅಕ್ಷರದಿಂದ ಬಯಸಿದ್ದು ಇದನ್ನೇನಾ..? ಇಂಥಾದ್ದರಿಂದ ಬಿಡಿಸಿಕೊಳ್ಳಲಲ್ಲವೇ ನಾವು ನಮ್ಮಂತವರು ಅಕ್ಷರಗಳ ಮೊರೆ ಹೋಗಿದ್ದು..? ಹಾಗಾದರೆ ಭಾರತಕ್ಕೆ ನಮ್ಮಿಂದ ನಿಜಕ್ಕೂ ಏನು ಬೇಕಾಗಿದೆ..?

ಈ ನಡಿಗೆಯಲ್ಲಿ ಎರಡು ರೀತಿಯ ಅಂಶಗಳಿವೆ; ಒಂದು ನಾವು ಅಕ್ಷರ ಕಲಿತ ಕಾರಣಕ್ಕೆ ನಮ್ಮಲ್ಲಿ ಹುಟ್ಟುವ ಧೈರ್ಯ ನಾವು ಬದುಕಬೇಕಾದ ಸಮಾಜದಿಂದ ನಮ್ಮನ್ನು ಬೇರ್ಪಡಿಸಿ ನಮ್ಮ ನೋವುಗಳಿಗೆ ನಾಗರಿಕ ಸಮಾಜದಲ್ಲಿ ಅಂಗಡಿಯೊಂದನ್ನು ಹಾಕಿಕೊಡುತ್ತದೆ. ಎರಡನೆಯದ್ದು, ಅಕ್ಷರ ಕಲಿತ ಕಾರಣಕ್ಕೆ ನಾವು ಬದುಕಿದ ಶ್ರೇಣೀಕೃತ ಸಮಾಜ ನಮ್ಮನ್ನು ಭಯದಿಂದಲ್ಲದೆ, ಅಸೂಯೆಯಿಂದ ದೂರವಿಡಲು ಪ್ರಯತ್ನಿಸುವುದೂ ಅದು ನಂಬಿಕೊಂಡು ಬಂದಿರುವ ತುಳಿಯುವ ಸಿದ್ಧಾಂತದ್ದೇ ಆಗಿದೆ. ಅಂದರೆ, ನಾವು ನಮ್ಮ ಅಕ್ಷರಗಳನ್ನು ದೀವಿಗೆಗಳನ್ನಾಗಿ ಮಾಡಿಕೊಂಡು ಯಾವ ಅಂಧಕಾರದ ಸಮಾಜದಲ್ಲಿ ಬದುಕಲು ಹವಣಿಸುತ್ತೇವೆಯೋ ಆ ಸಮಾಜ ದೀವಿಗೆ ಹಿಡಿದ ಕಾರಣಕ್ಕೇ ನಮ್ಮನ್ನು ಹೊರಗೆ ತಳ್ಳಿ ಬಾಗಿಲು ಹಾಕಿಕೊಳ್ಳುತ್ತದೆ ಅಥವಾ ಖೈರ್ಲಾಂಜಿಯ ಶೋಷಕರ ದಾರಿಯನ್ನು ಹಿಡಿಯುತ್ತದೆ. ಇನ್ನು ನಮಗೆ ಅಕ್ಷರಮುಖಿ ಸಂಕಥನಗಳು ಹೇಳಿಕೊಟ್ಟಿರುವ ಗ್ರಾಮ ಸಂಸ್ಕೃತಿಯ ಅನನ್ಯತೆಯನ್ನು ನಾವು ಯಾವ ಕಣ್ಣುಗಳಿಂದ ನೋಡಬೇಕಿದೆ..?

ನಿಜಕ್ಕೂ ನಮ್ಮ ಜೇನುಕಲ್ಲು ಗುಡ್ಡ ಯಾವುದು..?

ಮೇಲಿನ ಚರ್ಚೆ ನಮಗೆ ಅಕ್ಷರದಿಂದ ಸಿಗುವ ಅರಿವೆಂಬುದು ಮತ್ತದೇ ದಾಸ್ಯದ ಹಂಗಿಗೆ ಅಥವಾ ಅದಕ್ಕಿಂತಲೂ ಘೋರವಾದ ಸ್ಥಿತಿಯೊಂದಕ್ಕೆ ದೂಡುತ್ತದೆ ಎಂಬರ್ಥ ಬಂದು ಹಾಗಾದರೆ ನಾವು ಅಕ್ಷರ ಕಲಿಯುವುದನ್ನು ನಿಲ್ಲಿಸಿಬಿಡಬೇಕೆ ಎಂಬ ಪ್ರಶ್ನೆಯನ್ನು ಸೃಷ್ಟಿಸಬಹುದು. ಆದರೆ, ಅಂಬೇಡ್ಕರರನ್ನು ನಂಬಿಸಿ ಅವರಿಂದ ಜಿಗತ್ತಿನಲ್ಲೇ ಶ್ರೇಷ್ಠವಾದ ಸಂವಿಧಾನವನ್ನು ಬರೆಸಿಕೊಂಡು ಅವರು ಹೋದ ನಂತರ ಅವರನ್ನು ಮರೆತಂತೆ ನಟಿಸುತ್ತಿದೆ ಭಾರತದ ಸಮಾಜ. ಅಕ್ಷರ ಅಂಬೇಡ್ಕರರಿಗೆ ತೋರಿಸಿದ ದಾರಿಯನ್ನು ಅವರಂತೆಯೆ ಈ ದೇಶದ ಜಾತಿಯ ತಿಪ್ಪೆಗಳಿಂದ ಎದ್ದು ಬಂದ ಎಲ್ಲರಿಗೂ ತೋರಿಸಬೇಕೆಂಬ ಆಸೆಯಿಂದ ಅವರು ಈ ದೇಶಕ್ಕೆ ಸಂವಿಧಾನ ಬರೆದುಕೊಟ್ಟರು. ಅದು ಆಗದೇನೋ ಎಂಬ ಬಾಧೆ ಸಾಯುವವರೆಗೂ ಅವರನ್ನು ಬಿಟ್ಟಿರಲಿಲ್ಲ. ಈ ಬಾಧೆಯಿಂದ ಬಿಡಿಸಿಕೊಳ್ಳಲೆಂಬಂತೆ ಅವರು ಬೌದ್ಧ ಧರ್ಮವನ್ನು ಪ್ರವೇಶ ಮಾಡಿದರು ಎಂದು ನಂಬಿದರೆ, ನಮಗೂ ಆ ದಾರಿ ಇಂದು ಸುಲಭದ್ದಾಗಿದೆಯೇ..? ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಅಂಬೇಡ್ಕರ್ ಘೋಷಿಸಿದ 'ಶಿಕ್ಷಣ, ಸಂಘಟನೆ, ಹೋರಾಟ'ದ ನುಡಿಗಟ್ಟುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾಗದೆ, ಅವರು ಕನಸಿದ ಅಕ್ಷರ ಆಂದೋಲನವನ್ನು ಒಗ್ಗಿಸಿಕೊಳ್ಳಲಾಗದ ನಾವು ಅರ್ಧ ದಾರಿಯಲ್ಲಿ ಅವ್ವ ಬಿಟ್ಟು ಹೋದ ಕೂಸಿನಂತೆ ಕಂಗಾಲಾಗಿದ್ದೇವೆ. 'ಕುರಿ ಕೋಳಿಗಳನ್ನು ಬಲಿ ಕೊಡುತ್ತಾರೆಯೇ ಹೊರತು, ಹುಲಿ ಸಿಂಹಗಳನ್ನಲ್ಲಾ..' ಎಂದು ಬಾಬಾ ಸಾಹೇಬರು ಹೇಳಿದಾಗ ನಾವು ಯಾವ ಸ್ಥಿತಿಯಲ್ಲಿ ಬಲಿಗಂಬದ ಹತ್ತಿರವೇ ನಿಂತಿದ್ದೆವೋ ಆ ಸ್ಥಿತಿಯಿಂದ ಚೂರೂ ಕದಲಲಿಲ್ಲ; ಬದಲಾಗಿ 'ಬಲಿ'ಯ ಅರ್ಥಗಳನ್ನು ಬದಲಾಯಿಸುವ ಹುಚ್ಚಾಟದಲ್ಲಿದ್ದೇವೆ. ಈ ನಡುವೆ ಅಕ್ಷರ ಕಲಿತು ಸಮುದಾಯದ ಕಾಲುದಾರಿಗಳನ್ನು ಹಿಗ್ಗಿಸಿ ಮುಖ್ಯವಾಹಿನಿಗೆ ರಹದಾರಿ ಕಲ್ಪಿಸಬೇಕಾದ ಮಂದಿ ಯಾರೋ ಮಾಟ ಮಾಡಿಸಿದಂತೆ ನಮ್ಮನ್ನೆಲ್ಲಾ ಮರೆತಂತೆ ನಟಿಸುತ್ತಿದ್ದಾರೆ. ಅದರೊಟ್ಟಿಗೆ ಅವರು ಗಳಿಸಿರುವ ರಹದಾರಿಗಳು ನಮ್ಮ ಸಮುದಾಯಗಳಿಂದ ಗಲೀಜಾಗಬಹುದೆಂಬ ಹೆದರಿಕೆ ಅವರದ್ದು. ಈ ಕಾರಣಕ್ಕೇ ದಲಿತನೊಬ್ಬ ಗೃಹಮಂತ್ರಿಯಾಗಿದ್ದಾಗಲೇ ಕಂಬಾಲಪಲ್ಲಿ ಘಟನೆ ನಡೆದು ಇನ್ನುಳಿದ ಬದುಕುಗಳನ್ನು ಅಣಕಿಸುತ್ತದೆ. ಈ ಅಣಕದಿಂದ ಆ ಮಂತ್ರಿ ಮತ್ತು ಅಂಥದ್ದೇ ದಾರಿಯಲ್ಲಿರುವ ಅಕ್ಷರ ಕಲಿತ ಅಸ್ಪೃಶ್ಯರಿಗೆ ಯಾವುದೇ ರೀತಿಯ ಮುಜುಗರವಾಗದಿರುವುದು ಸೋಜಿಗ ತರುವುದಿಲ್ಲ; ಬದಲಿಗೆ ಅವರ ಕರುಳುಗಳು ಮೈಮೇಲೆ ಕಾಣಿಸುವಷ್ಟು ಊದಿಕೊಂಡುಬಿಟ್ಟಿವೆ.

ಸಮುದಾಯಗಳ ಗಾಯಗಳನ್ನು ಮಾಯಿಸುವ ಹಟಕ್ಕೆ ಬಿದ್ದು ಮದ್ದು ಕಂಡುಹಿಡಿದು ಜೋಪಡಿಗಳಲ್ಲಿ ಹಣತೆ ಹಚ್ಚಿಟ್ಟವರು ಮತ್ತವರು ಸೃಷ್ಟಿಸಿದ ದಾರಿಗಳು ಕೇವಲ ಮೂರ್‍ನಾಲ್ಕು ದಶಕಗಳಲ್ಲಿ ಮಸುಕಾಗಿಬಿಟ್ಟಿವೆ. ಅದರಿಂದ ಅನ್ನ ಉಂಡವರು ಇಂದೂ ಕೂಡ ಆ ನೆನಪಿನಲ್ಲೇ ತಮ್ಮ ಮೈ ಹಿಗ್ಗಿಸಿಕೊಂಡು ನಗೆಪಾಟಲಿಗೀಡಾಗಿದ್ದಾರೆ. ಇಂಥ ಸಂದರ್ಭದಲ್ಲಿ ಗಾಯಗಳು ಹೆಪ್ಪುಗಟ್ಟಿ ಕೀವು ಒಸರುವ ಸಮುದಾಯಗಳಿಂದೆದ್ದು ಬಂದ ನಮ್ಮಂಥ ಯುವಜನರು ಅಂಬೇಡ್ಕರರ ಜೇನುಕಲ್ಲುಗುಡ್ಡದ ದಾರಿ ಕಾಣದೆ ಕಂಗಾಲಾಗಿದ್ದೇವೆ.. 'ದಯವಿಟ್ಟು ಆ ದಾರಿಯನ್ನು ತೋರಿಸಿ ಸ್ವಾಮಿ' ಎಂದು ಯಾರನ್ನು ಅಂಗಲಾಚಿದರೂ ಅವರೆಲ್ಲಾ ತೋರುವ ದಾರಿಗಳು ನಮ್ಮ ನಡಿಗೆಗೆ ಸ್ಪಂದಿಸುತ್ತಲೇ ಇಲ್ಲ; ಬದಲಾಗಿ ಎಲ್ಲೆಂದರಲ್ಲಿ ಕಂಬಾಲಪಲ್ಲಿ, ಖೈರ್ಲಾಂಜಿಗಳೆದ್ದು ದಿಗಿಲು ಹುಟ್ಟಿಸುತ್ತಿವೆ. ನಾವು ಕಲಿತ ಅಕ್ಷರಗಳು ಕವಿ ಎನ್ ಕೆ ಹನುಮಂತಯ್ಯ ಬರೆದ ಹಾಗೆ ಯಾರದೋ ಕೇರಿಯಲ್ಲಿ ನಮಗೆ ಹಾಕಿಕೊಟ್ಟ ಕಣ್ಣೀರಿನ ಅಂಗಡಿಗಳ ಸರಕುಗಳಾಗಿಬಿಟ್ಟಿವೆ. ಇದರ ನಡುವೆ ಕೆಲವರು 'ಭಾರತೀಯ ಅಡುಗೆಯಲ್ಲಿ ಇಂಗಿನ ಉಪಯೋಗ' ಎನ್ನುವ ಪುಸ್ತಕ ಬರೆದಷ್ಟೇ ಸಲೀಸಾಗಿ 'ಅಂಬೇಡ್ಕರರ ಜೀವನ ಚರಿತ್ರೆ' ಬರೆದು ಕಾಸು ಮಾಡಿಕೊಳ್ಳುತ್ತಾರೆ. ಇಲ್ಲೆಲ್ಲೂ ನಮ್ಮ ಅಕ್ಷರಗಳು ನಮ್ಮವು ಅನ್ನಿಸುವುದೇ ಇಲ್ಲ..

ಅಕ್ಷರ ಅನ್ನವಾಗಿದೆ ಎಂದು ನಂಬಲೇಬೇಕೇನೋ...

ನಾವು ಸದಾ ಎಡತಾಕುವ ಬೇಂದ್ರೆ, ಅಡಿಗ, ಬೋದಿಲೇರನ ಕಾವ್ಯ, ವೈನು, ಬಾಡು, ಸೆಮಿನಾರು, ಪ್ರತಿಭಟನೆ, ಪತ್ರಿಕೆ, ಲೇಖನ, ಬ್ಲಾಗು, ನಾಟಕ ಈ ಯಾವುವೂ ಹಂಗರಳ್ಳಿ, ಅಂಕನಹಳ್ಳಿಗಳ ಘಟನೆಗಳು ಮರುಕಳಿಸದಂತೆ ಮಾಡುವ ಪವಾಡಗಳನ್ನು ನಮಗೆ ಹೇಳಿಕೊಡುವುದೇ ಇಲ್ಲ. ಬದಲಾಗಿ ನಾವು ಅಂಥವುಗಳು ನಡೆದಾಗ ವಿಚಲಿತರಾಗದೆ ಹೇಗೆ ಮತ್ತೆ ನಮ್ಮ ದೈನಿಕದೊಳಗೆ ಔಸಿಟ್ಟುಕೊಳ್ಳಬೇಕು ಎಂಬುದನ್ನು ನಾಜೂಕಾಗಿ ಕಲಿಸಿಕೊಡುತ್ತವೆ.

ನಾವು ಕಲಿತ ಅಕ್ಷರಗಳನ್ನೇ ಬಳಸಿಕೊಂಡು ನಮ್ಮವೇ ಸಮುದಾಯಗಳನ್ನು ತಲೆಹಿಡಿದು ಬದುಕುತ್ತಿದ್ದೇವೇನೋ ಎಂಬ ಹೆದರಿಕೆ ನಮ್ಮನ್ನು ಬಹಳ ಕಾಲ ಬದುಕಲು ಬಿಡುವುದಿಲ್ಲವೇನೋ ಎಂಬ ಭಯ ಕಾಡುತ್ತಿದೆ. ಈ ಭಯದಿಂದ ಬಿಡಿಸಿಕೊಳ್ಳಲಾದರೂ ಅಕ್ಷರ ಅನ್ನವಾಗಿದೆ ಎಂದು ನಂಬಲೇಬೇಕೇನೋ... □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

'ಹಿಂದೂ' ಎಂಬ ಕೇಂದ್ರವೂ, ಹೊಲೆಯ ಎಂಬ ಪರಿಧಿಯೂ

ಪ್ರೊ|| ಟಿ. ಯಲ್ಲಪ್ಪ

ಮೊನ್ನೆ ಪತ್ರಿಕೆಯಲ್ಲಿ ಜನಪ್ರತಿನಿಧಿಯಾದ ಶಾಸಕ ಮಹಾಶಯರೊಬ್ಬರು 'ಗೋಮಾತೆ'ಯಾದ ಹಸುವನ್ನು ತಿನ್ನೋ ಜನರನ್ನು ನಿಂದಿಸಿ, ಹೀನಾಯಮಾಡಿ ಒಂದು ಬಹಿರಂಗ ಪತ್ರ ಬರೆದಿದ್ದರು. 'ಹಿಂದೂ' ಆದ ಯಾವನೂ ಕೂಡಾ ಆಹಾರಕ್ಕೆ ಅಂತ ಹಸುಗಳನ್ನು ವಧೆ ಮಾಡುವುದಾಗಲಿ, ತಿನ್ನೋದಾಗಲಿ ಮಹಾ ಪಾಪ ಅಂತಲೂ ವಾದಿಸಿದ್ದರು.

ಈ ಕ್ಷಣಕ್ಕೆ ಈ ಹೇಳಿಕೆಯಿಂದ ನಮ್ಮ ನಾಡಿನ ಮಡಿವಂತ ಹಿಂದೂಗಳ ಮನಸ್ಸು ಹೇಗೆಲ್ಲಾ ಆಲೋಚನೆ ಮಾಡ್ತಾ ಇದೆ ಅಂತ ನಿಮಗೆಲ್ಲಾ ಗೊತ್ತೇ ಇರಬಹುದು ಅಥವಾ ಅದೆಲ್ಲಾ 'ಹಿಂದೂ'ಗಳಿಗೆ ಸಂಬಂಧಿಸಿದ ವಿಷಯ ಅದ್ಕೊಂಡು ಹಿಂದೂ ಅಲ್ಲದವರು ಇದರ ಬಗ್ಗೆ ಯೋಚ್ನೆ ಮಾಡೋದನ್ನೇ ನಿಲ್ಲಿಸಿ ಬಿಟ್ಟಿರಲೂ ಬಹುದು. ಅದೆಲ್ಲಾ ಒತ್ತಟ್ಟಿಗಿರಲಿ. ಕ್ಯಾಸ್ಟ ಸರ್ಟಿಫಿಕೇಟಿನಲ್ಲಿ ಈಗಲೂ ಧರ್ಮದ ಪ್ರಶ್ನೆ ಬಂದಾಗೆಲ್ಲಾ ನಾನೂ ಕೂಡಾ, ಇಂದು-ಮುಂದು ನೋಡದೆ 'ಹಿಂದೂ' ಅಂತಾನೇ ಬರೀತಾನೇ ಬಂದಿದೀನಿ ಅನ್ನೋದರ ಬಗ್ಗೆ ಯೋಚನೆ ಮಾಡೋಕೆ ಶುರುಮಾಡಿದೆ ಅಂದ್ರೇನೆ ಸಾಕು ನಂಗೆ ತಲೇನೇ ಕೆಟ್ ಗೊಬ್ರ ಆಗೋಗುತ್ತೆ.

ಈವೊತ್‌ಗೂ ನಮ್ಮ ಅಪ್ಪಂಗೆ, ಅಮ್ಮನಿಗೆ ನಾವು ಹೊಲೇರು, ಮಾದಿಗ್ರು ಅಂದ್ರೆ ಅರ್ಥ ಆಗುತ್ತೆ 'ಏಕೆ'ಗಳು ಅಂದ್ರೆ, ಅರ್ಥ ಆಗುತ್ತೆ, ನಾವೂ ಕೂಡಾ ಹಿಂದೂಗಳಮ್ಮಾ' ಅಂದ್ರೆ "ಸುಮ್ನೆ ಇರೋ ಗಬ್ ನನ್‌ಮಗ್ನೆ ಅದ್ಯಾವ್ದೋ ಜಾತಿಗೆಟ್ಟೋರ್ ಜಾತೀನಾ ನಮ್ದು ಅಂತ ಹೇಳ್‌ಬ್ಯಾಡ. ನಮ್ ಮನೆದ್ಯಾವರ್ಕ ಕ್ವಾಪ ಬಂದ್ರೆ ಆಮೇಲೆ ಆಗ್ ಬಾರ್ದು ಆದೀತು. ಅನಿಷ್ಟದ ಮಾತ್‌ಗಳ್ಣ ಆಡ್‌ಬ್ಯಾಡ, ತಪ್ಪಾಯ್ತು ಅಂತ ಮನೆದ್ಯಾವರ್ಕ ಮಿಸಲೆತ್ತಿ ಕಟ್ಟೋಗು" ಅಂತಾಳೆ.

ಈವೊತ್‌ಗೂ ನಮ್ಮ ಅಪ್ಪಂಗೆ, ಅಮ್ಮನಿಗೆ ನಾವು ಹೊಲೇರು, ಮಾದಿಗ್ರು ಅಂದ್ರೆ ಅರ್ಥ ಆಗುತ್ತೆ 'ಏಕೆ'ಗಳು ಅಂದ್ರೆ, ಅರ್ಥ ಆಗುತ್ತೆ, ನಾವೂ ಕೂಡಾ ಹಿಂದೂಗಳಮ್ಮಾ' ಅಂದ್ರೆ "ಸುಮ್ನೆ ಇರೋ ಗಬ್ ನನ್ ಮಗ್ನೆ ಅದ್ಯಾವ್ದೋ ಜಾತಿಗೆಟ್ಟೋರ್ ಜಾತೀನಾ ನಮ್ದು ಅಂತ ಹೇಳ್‌ಬ್ಯಾಡ. ನಮ್ ಮನೆದ್ಯಾವರ್ಕ ಕ್ವಾಪ ಬಂದ್ರೆ ಆಮೇಲೆ ಆಗ್ ಬಾರ್ದು ಆದೀತು. ಅನಿಷ್ಟದ ಮಾತ್‌ಗಳ್ಣ ಆಡ್‌ಬ್ಯಾಡ, ತಪ್ಪಾಯ್ತು ಅಂತ ಮನೆದ್ಯಾವರ್ಕ ಮಿಸಲೆತ್ತಿ ಕಟ್ಟೋಗು" ಅಂತಾಳೆ.

ಇನ್ನು ನಮ್ಮ ಅಪ್ಪನ ವಿಷಯ ನಿಮಗೆ ತಿಳಿದೇ ಐಯ್ತಲ್ಲ. ಹೋಗೋ ನಿಮ್ಮಮ್ನು. ಹಿಂದೂಗಳ್ಣಾ ಅಂತ ಶುರು ಅಚ್ಕೋತಾನೆ. ಹಂಗಾದರೆ ನನಗೆ ಜನ್ಮ ಕೊಟ್ಟ ತಂದೆ (ಎಷ್ಟು ಅಸಂಬದ್ಧ ವಾಕ್ಯ ಅಲ್ವಾ? ಅದೆಲ್ಲಾದ್ರೂ ಹಾಳಾಗ್ ಹೋಗ್ಲಿ, ಅಮ್ಮನಾದವಳು ಕಷ್ಟ ಪಟ್ಟು ಮಗುವನ್ನು ಹೆತ್ತರೂ, ಯಾವೊತ್ತಿಗೂ ಹೆರೋಕೇ ಆಗ್ದೇ ಇರೂ ತಂದೆಗೆ "ಜನ್ಮ ಕೊಟ್ಟ ತಂದೆ' ಅನ್ನೊ ಪಟ್ಟ ಕಟ್ಟಿ ಹೊಗಳೋದೆ ಪುರುಷ ಪ್ರಧಾನ ಮನಸಿನ ರಾಜಕಾರಣ ಅಂತ ನಿಮಗಾದರೂ ಅನ್ನಿಸೋಲ್ವೆ?) ತಾಯಿಗಳಿಗೇ ಅರ್ಥವಾಗದ, ಬೇಡವಾದ, ಈ 'ಹಿಂದೂ' ಅನ್ನೂ ಪಟ್ಟ ನನಗೆ ಮಾತ್ರ ಯಾಕೆ ಬೇಕು? ಕೇವಲ 'ನಾನು' ಅನ್ನೋ ಐಡೆಂಟಿಟಿಗೆ ಈ ಧರ್ಮ ಮೂಲವಾದ ಪಟ್ಟ ಬೇಕಾ? ನಾನು ಈ ದೇಶದ ಪ್ರಜೆ ಅಥವಾ ಈ ದೇಶದ ಪೌರತ್ವವನ್ನು ಉಳಿಸಿಕೊಳ್ಳೋದಕ್ಕೆ ಮಾತ್ರ ಈ 'ಹಿಂದೂ' ಅನ್ನೋ ಅರ್ಥವಾಗದೇ ಇರೋ ಲೇಬಲ್ ಅನ್ನು ಅಂಟಿಸಿಕೊಂಡು ತಿರುಗಬೇಕಾ?

ನಮಗ್ಯಾರಿಗೂ ಒಂದ್ ಸಲ ಕೂಡಾ (ಇಲ್ಲಿ ನಮಗೆ ಅಂದ ತಕ್ಷಣ ಸೇರಿಕೊಳ್ಳುವ ಅಥವಾ ಸೇರಿಕೊಳ್ಳದ ಯಾವ ಗುಂಪಿನವರು ತಾವು ಅನ್ನೊದನ್ನು ತೀರ್ಮಾನಿಸಿಕೊಳ್ಳುವ ನಿರ್ಧಾರ ಅವರವರಿಗೇ ಬಿಟ್ಟದ್ದು) ಯಾವುದೇ ರೀತಿಯ ರೋಮಾಂಚನ, ಉಂಟು ಮಾಡದ ನಮ್ಮ ಭಾವಕೋಶದಲ್ಲಿ ಯಾವುದೇ ರೀತಿಯ ಸಂವೇದನೆಯನ್ನೂ ಕಿಂಚಿತ್ತೂ ಬಡಿದೆಬ್ಬಿಸದ ಈ 'ಪದಕಿರೀಟ'ವನ್ನು ಜೀವನ ಪೂರ್ತಿ ಹೊತ್ಕೊಂಡು ತಿರುಗಬೇಕಾ? ಅಂತ ನನಗೆ ತುಂಬಾ ಸಲ ಅನ್ನಿಸಿದೆ.

ನಿಮಗೆ ಈ ಕ್ಷಣಕ್ಕೆ ನನ್ನ ಬಗ್ಗೆ ಅನ್ನಿಸ್ತಾ ಇರಬಹುದು ಇದೆಂತಹ ಶೂದ್ರ ಮುಂಡೇ ಗಂಡನ ದಾಷ್ಟ್ಯ ಅಂತ! ಏನೋ ನಾಲ್ಕಕ್ಷರ ಕಲಿತ ಮಾತ್ರಕ್ಕೆ ಐಯ್ಯೋ ಇವನ ಧಿಮಾಕೇ ಅಂತ! ಏನಾದ್ರೂ ಅಂದ್ಕೊಳಿ ಪರವಾಗಿಲ್ಲ. ನಾನು ನಿಮಗೊಂದು ನಿಜಾ ಹೇಳ್ಲಾ? ನನ್ನನ್ನು ಯಾರಾದ್ರೂ 'ಹೊಲೆಯಾ' ಅಂದಾಗ, 'ಮಾದಿಗ' ಅಂದಾಗ, 'ಏಕೆ' ಅಂದಾಗ, ಬೇಸರವೋ, ಕೋಪವೋ, ದುಃಖವೋ, ಸಂತೋಷವೋ ಯಾವುದೋ ಒಂದ್ ಭಾವನೆ, ನನ್ನ ಸಂವೇದನೆಗೆ ಬರುತ್ತಲ್ಲಾ, ಅದರಿಂದ ನನಗೆ ನಾನೂ ಒಂದ್ ಮನುಷ್ಯಾ, ನಂಗೂ ಒಂದ್ ಮನಸಿದೆ, ಅದಕ್ಕೂ ಕೋಪ-ತಾಪ, ಎಲ್ಲಾ ಆತದೆ, ಅದಕ್ಕೂ ಕೀವೂ-ರಕುತ ಎಲ್ಲಾ ಇದೆ, ಅದ್ಕೆ ಹಿಂಗೆಲ್ಲಾ ಆತದೆ ಅನ್ನೊ ವಿಷಯ ಅರಿವಿಗೆ ಬರ್ತದೆ.

ಆದ್ರೆ ನಿಜವಾಗ್ಲೂ ಹೇಳತೀನಿ ಕಣ್ರಪ್ಪೋ ನನ್ನನ್ನು ಯಾರಾದ್ರೂ ಈ 'ಹಿಂದೂಗಳ' ಒಟ್ಟಿಗೆ ಸೇರಿಸ್ಕೊಂಡು ನೀನು 'ಹಿಂದೂ'ವೇಯಾ ಅಂದ್‌ಬುಟ್ರೆ, ಯಾವೊತ್ತೂ ಯಾವುದಕ್ಕೂ ಮನೆ ಬಾಗಿಲಿಗೆ, ದೇವಸ್ಥಾನಕ್ಕೆ, ಕುಡಿಯುವ ನೀರ ಬಾವಿಯ ಬಳಿಗೆ, ಕೆರೆಯ ಹತ್ತಿರಕ್ಕೆ, ಅದೆಲ್ಲಾದ್ರೂ ಹೋಗಲಿ ಕನಿಷ್ಟ ಪಕ್ಷ ಹಿಂದೂ ಜನಗಳ ನೆರಳು ಬೀಳೋ ಜಾಗಕ್ಕು ಕೂಡಾ ಸೇರಿಸಿಕೊಳ್ಳೋ ಮನಸು ಮಾಡದ ಈ ಜನಗಳು ಈಗ ಮಾತ್ರ ಅದೇನಪ್ಪಾ ಅಂಥಾ ಒಳ್ಳೇ ಬುದ್ಧೀ ಬಂದ್‌ಬಿಟ್ಟಿರೋದು? ಇದ್‌ಕ್ಕಿದ್ದಂಗೆ ನೀವೂ ಕೂಡಾ ಸೇರಿಕೊಂಡು ನಾವೆಲ್ಲಾ ಹಿಂದೂಗಳು ಅಂತ, ಸಮುಚ್ಚಯ ಸಂಬಂಧಿತವಾದ ಪದಗಳನ್ನ ಬಳಸುತಾ ಅವರಲ್ಲ ಅಂತ ಡೌಟು ಬರೋಕೆ ಶುರುವಾಗೋಯ್ತು!

ಇದೆಂಗದೆ ಅಂದ್ರೆ ಅದೆ ಈ ರಾಜಕೀಯ ಪಾರ್ಟಿನಾಗೆ ಆಡಳಿತ ಪಕ್ಷ ಬಿದ್ದೋದಾಗ, ಮತ್ತೆ ತಮ್ಮ ಬಲಾ ಸಾಬೀತು ಪಡಿಸಿ ಸರ್ಕಾರ ರಚನೆ ಮಾಡೋದಕ್ಕೆ ರಾಜ್ಯಪಾಲರು ಮತ್ತೊಂದು ಅವಕಾಶ ಮಾಡಿಕೊಟ್ಟು, ಆದೇಶ ಹೊರಡಿಸ್ತಾರಲ್ಲ. ಆಗ ಕೊನೆಗಳಿಗೆಯಲ್ಲಿ ಕಾರ್ಯವಾಸೀ ಕತ್ತೆ ಕಾಲಾದ್ರೂ ಹಿಡಿ ಅಂತಾರಲ್ಲ ಹಂಗೆ, ಪಕ್ಷೇತರ, ಮೀಸಲು ಅಭ್ಯರ್ಥಿಗಳಿಗೆಲ್ಲಾ ದುಂಬಾಲು ಬಿದ್ದು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಬಹುಮತ ಸಾಬೀತುಪಡಿಸಿ ಕೊನೆಗೂ ಸರ್ಕಾರ ರಚನೆ ಮಾಡ್ಕೋತಾರಲ್ಲ ಇದೂ ಅಂಗೇಯಾ ಅನ್ನಿಸ್ತದೆ. ಈ ಧರ್ಮ ರಾಜಕಾರಣ ದಾಗೆ ತಮ್ಮ ಧರ್ಮದ ಮೆಜಾರಿಟಿಯನ್ನು ಸಾಬೀತುಪಡಿಸೋ ಸಂದರ್ಭದಲ್ಲಿ ಮಾತ್ರ, ನಮ್ಮನ್ನು "ನೀವೂ ಕೂಡಾ 'ಹಿಂದೂ'ಗಳೇಯಾ ಬನ್ನಿ, ನಮ್ ಜೊತೆ ಸೇರ್ಕಳಿ" ಅಂತ ಔದಾರ್ಯಾ ತೋರಿಸ್ಕೋಳೋದಕ್ಕೇನೆ ನಮ್ಮನ್ನು 'ಹಿಂದೂ'ಗಳು ಅಂತ ಕರೀತಾರೆ ಅಂತ ನಂಗೆ ಗೋತ್ತಾಗ್‌ಬಿಡುತ್ತೆ.

ಇದೆಲ್ಲಾ ಗೊತ್ತಾದ್ ಮೇಲೆ ಅನ್ನಿಸುತ್ತೆ. ಥೂ ಅಕ್ಷರ ಕಲೀಬಾರ್ದಾಗಿತ್ತು. ನಾನೂ ಯಾವುದಾದ್ರೂ ಗೌಡರ ಮನೇಲೋ ರೆಡ್ಡಿಗಳ ಮನೇಲೋ ಜೀತಕ್ಕೊ ಕೂಲಿಗೋ ಸೆರ್ಕೊಂಡು ದುಡ್ಕೊಂಡು ಇದ್‌ಬಿಟ್ಟಿದ್ರೆ, ಈ ಯಾವ ಸಂಕಟಾನೂ ನನ್ನ ಬಾದಿಸ್ತಾ ಇರಲಿಲ್ಲ ಅಂತ ಅನ್ನಿಸುತ್ತೆ.

ನಂಗೆ ಈಗ ಅರ್ಥ ಆಗ್ತದೆ, ಯಾಕೆ ಆ ಅಂಬೇಡ್ಕರ್ ಅಷ್ಟೆಲ್ಲಾ ಓದ್ಕೊಂಡು ಅಷ್ಟೊಂದ್ ಪದವಿಗಳನ್ನೆಲ್ಲಾ ಪಡ್ಕೊಂಡು, ಸಂವಿಧಾನ ಶಿಲ್ಪಿ' ಆಗಿದ್ರೂ ಕೂಡಾ ಹಿಂದೂ ಧರ್ಮವನ್ನ ಬಿಟ್‌ಬಿಟ್ಟು ಬೌದ್ಧ ಧರ್ಮವನ್ನು ಸೆರ್ಕೊಂಡ್ರು ಅಂತ; ಮತಾಂತರ ಒಂದರಿಂದಲೇ ಹರಿಜನರಿಗೆ ಹಿಂದೂ ಧರ್ಮರಾಜಕಾರಣದ ಶೋಷಣೆಯಿಂದ ಪಾರಾಗೋದಕ್ಕೆ, ಆತ್ಮಗೌರವದಿಂದ ಬದುಕೋದಕ್ಕೆ ಸಾಧ್ಯ! ಅದೊಂದೇ ನಿಮಗಿರುವ 'ಹೊರದಾರಿ' ಅಂತ ಹೇಳಿದ್ದು ಎಷ್ಟು ನಿಜಾ ಅಂತ ಅನ್ನಿಸುತ್ತೆ!

ನಾವೆಲ್ರೂ (ಓದುತ್ತಾ ಇರೋ ನಿಮ್ಮನ್ನೂ ಸೇರಿಸ್ಕೊಂಡು) ಒಂದಲ್ಲಾ ಒಂದ್ ಜಾತಿಗೆ, ಒಂದ್ ಧರ್ಮಕ್ಕೆ ಸೇರಿದವರೇ ಆಗಿರ್ತೀವಿ ನಿಜಾ ಅಲ್ವೆ? ನೀವ್ ಒಪ್ಕೋತೀರೋ ಬಿಡ್ತೀರೋ ನಂಗಂತೂ ಗೊತ್ತಿಲ್ಲ. ನಾವು ಯಾವಾಗ ಏನಾಗಿರ್ತೀವೋ ಇಲ್ವೋ ಅದು ಬೇರೆಯ ಮಾತು!

ಆದ್ರೆ ನಾವೆಲ್ಲಾ ಒಂದ್ ಸಾಹಿತ್ಯ ಕೃತೀನ ಒದೋವಾಗಿನ ನಮ್ಮ ಮನಸಿನ ಭಾವ ಸಂದರ್ಭ ಮಾತ್ರ ಈ ಧರ್ಮ, ಜಾತಿ, ಭಾಷೆ, ಇತ್ಯಾದಿ ಉಪಾದಿಗಳಿಂದ ದೂರ ಸರಿದು, ಒಂದು ವಿಶ್ವಾತ್ಮಕವಾದ ಪರಿಭಾವನೆಯಿಂದ ಪರಿಪುಷ್ಟವಾಗಿರುತ್ತೆ ಅಲ್ವಾ? ಈಗ ನೀವು ಬರೇ ಓದುಗರು, ನಾನು ಬರೇ ಒಬ್ಬ ಆತ್ಮನಿವೇದಕ ಮಾತ್ರ ಆಗಿರುವ ಭಾವ ಸಂದರ್ಭದಲ್ಲಿ ಮಾತ್ರ ಇದೆಲ್ಲಾ ಸರಿ ಅಂತ ಕಾಣುತ್ತೆ ಅಲ್ವಾ? ಉಳಿದಂತೆ ನೀವಿದನ್ನು ಒಪ್ಪದೆಯೂ ಇರಬಹುದು ಅಂತಾದರೆ, ಮತ್ತೆ ನೀವು ಅದೇ 'ಹಿಂದೂಗಳು' ನಾನು ಅದೇ ಹಳೇ ಹೊಲೆಯ ಆಗಿಬಿಟ್ರೆ ಈ ಸಾಹಿತ್ಯ ಗೀಹಿತ್ಯ, ಆತ್ಮಸಾಕ್ಷಿ ಮಣ್ಣು ಮಸಿ ಎಲ್ಲಾ ಯಾಕೆ? ಅಂತ ಅನ್ನಿಸೋಕೆ ಶುರು ಆಗಿಬಿಡುತ್ತೆ ನನಗೆ.!

ನಾನು ಹಿಂದೂ ಹೌದು ಅನ್ನೋದಾದರೆ, ನನ್ನ ಐಡೆಂಟಿಟಿ ಏನು? ನಾ ಕ್ರಿಶ್ಚಿಯನ್ ಆಗಿದ್ರೆ ನಾನು ಶಿಲುಬೆಯನ್ನು ಧರಿಸಬೇಕಿತ್ತು. ನಾನು ಬೌದ್ಧನಲ್ಲ, ಸಿಖ್ ಅಲ್ಲ, ಮುಸ್ಲೀಮ್ ಅಲ್ಲ, ಜೊರಾಸ್ಟರ್ ಅಲ್ಲ ನಾನೂ ಇದ್ಯಾವುದೂ ಆಗಿಲ್ಲದೇ ಇರೋದೇ ನಾನು 'ಹಿಂದೂ' ಅನ್ನುವುದರ ಮಾನದಂಡವಾ? ಈ ಎಲ್ಲಾ ಧರ್ಮದವರಿಗೂ ಆ ಧರ್ಮದ್ದೇ ಆದ ಲಾಂಛನಗಳಿವೆ. ನಿಗಧಿತವಾದ ಧರ್ಮಗುರು, ಧರ್ಮಗ್ರಂಥಗಳಿದ್ದಾವೆ, ಆದರೆ ನಾನು 'ಹಿಂದೂ' ಅನ್ನೋದಕ್ಕೆ ಪ್ರತ್ಯೇಕವಾದ ಯಾವ ಒಂದು ಏಯೆತ್ಮಕವಾದ ಲಾಂಛನ, ಗುರು, ಧರ್ಮಗ್ರಂಥ ಇದೆಯೆ?

ನೀವು ಕೇಳಬಹುದು ಹೊಲೆಯರು, ಮಾದಿಗರೂ, ಶೂದ್ರಾತೀ ಶೂದ್ರರೂ ಎಲ್ಲರೂ ಹಿಂದೂಗಳೇ ಅಲ್ಲವೆ? ಹಿಂದೂ ಧರ್ಮದ ಅವಿಭಾಜ್ಯ ಅಂಗಗಳೇ ನೀವಲ್ಲವೆ? ಅಂತ ಅಥವಾ ಹಿಂದೂ ತಾಯಿ ಬೇರಿರುವ ಮರ, ನೀವೆಲ್ಲಾ ಶೋದ್ರರೂ ಆ ತಾಯಿ ಬೇರಿನಲ್ಲೇ ಟಿಸಿಲೊಡೆದ ತಂತು ಬೇರುಗಳು ಅಂತ, ಹೌದಾ? ಬಹಳ ಸಂತೋಷ ಹಾಗಾದರೇ ಒಂದೇ ಬೇರಿನ ಸತ್ವ ಹೀರಿ ಬೆಳೆದ ನಾವೇಕೆ ಈ ಪುರಾತನ ವಟ ವೃಕ್ಷದಿಂದ ಆಚೆಗೆ ಎಸೆಯಲ್ಪಟ್ಟಿದ್ದೇವೆ?

ನಾನು ಸಂಸ್ಕೃತಿ' ಮೂಲದಿಂದಲಾದರೂ ಹಿಂದೂ ಧರ್ಮಕ್ಕೆ ಹತ್ತಿರದವನಾದ ಸಂಸ್ಕೃತಿಯಲ್ಲಿ ಗುರುತಿಸಿಕೊಳ್ಳೋಣವೆಂದರೆ ನನ್ನದು ಶೂದ್ರ ಸಂಸ್ಕೃತಿಯಂತೆ. ಹಿಂದೂ ಧರ್ಮದ ಗುತ್ತಿಗೆ ತೆಗೆದುಕೊಂಡ ಆರ್ಯ ಸಂಸ್ಕೃತಿ ಅಂತ ಕರೆಯಲ್ಪಡುವ ಯಾವ ದೇವರನ್ನಾಗಲೀ ಪೂಜಿಸುವ ಆಗಿಲ್ಲ ಆಚರಣೆಯನ್ನಾಗಲಿ ಪಾಲಿಸುವಂತಿಲ್ಲ. ಹಿಂದೂ ಧರ್ಮದವರನ್ನು ಮದುವೆ ಆಗುವ ಆಗಿಲ್ಲ. ಹೋಗಲಿ ಪ್ರೀತಿಸುವ ಹಾಗೂ ಇಲ್ಲ. ಹಾಗಾದರೆ ನಾನು 'ಹಿಂದೂ' ಹೇಗಾಗುತ್ತೇನೆ?

ನೀವು ಕೇಳಬಹುದು ಹೊಲೆಯರು, ಮಾದಿಗರೂ, ಶೂದ್ರಾತೀ ಶೂದ್ರರೂ ಎಲ್ಲರೂ ಹಿಂದೂಗಳೇ ಅಲ್ಲವೆ? ಹಿಂದೂಧರ್ಮದ ಅವಿಭಾಜ್ಯ ಅಂಗಗಳೇ ನೀವಲ್ಲವೆ? ಅಂತ ಅಥವಾ ಹಿಂದೂ ತಾಯಿ ಬೇರಿರುವ ಮರ, ನೀವೆಲ್ಲಾ ಶೋದ್ರರೂ ಆ ತಾಯಿ ಬೇರಿನಲ್ಲೇ ಟಿಸಿಲೊಡೆದ ತಂತು ಬೇರುಗಳು ಅಂತ, ಹೌದಾ? ಬಹಳ ಸಂತೋಷ ಹಾಗಾದರೇ ಒಂದೇ ಬೇರಿನ ಸತ್ವ ಹೀರಿ ಬೆಳೆದ ನಾವೇಕೆ ಈ ಪುರಾತನ ವಟ ವೃಕ್ಷದಿಂದ ಆಚೆಗೆ ಎಸೆಯಲ್ಪಟ್ಟಿದ್ದೇವೆ? ಅಂತ ಮತ್ತೆ ನಾನು ನಿಮ್ಮನ್ನು ಕೇಳುವುದು ಅದಕ್ಕೆ ಉತ್ತರವಾಗಿ ನೀವು ನಮಗೆ ಹಿಂದೆಂದೂ ಅರ್ಥವಾಗದೇ ಅನ್ವಯವಾಗದೆ ಇರುವ ಉಪಮೆಯ ಮೂಲಕವೋ ಅಥವಾ ರೂಪಕದ ಮೂಲಕವೋ ಬಾಯಿ ಮುಚ್ಚಿಸುವ ಕಸರತ್ತು ನಡೆಸುವುದು ಇದೆಲ್ಲಾ ಮುಂದಕ್ಕೆ ನಡೆದೇ ತೀರುವ ಕಸರತ್ತುಗಳು ಎಂಬುದು ಗೊತ್ತಿ ಇದ್ದೂ ಇದರ ಬಗ್ಗೆ ಚೆರ್ಚೆ ಮಾಡುವುದು ಎಂಥಾ ವ್ಯರ್ಥದ ಕೆಲಸ ಅಂತ ನನಗೆ ವ್ಯಥೆ ಆಗುತ್ತೆ. ಈ ರೀತಿ ಬೇಸರ ಆದಾಗೆಲ್ಲಾ ನನಗೆ ತತ್‌ಕ್ಷಣಕ್ಕೆ ಹೊಳೆಯುತ್ತಿದ್ದ, ನನ್ನ ಸುತ್ತಮುತ್ತಲೂ ವಿಜೃಂಭಿಸುತ್ತಿದ್ದ ಒಂದು ಹೊರದಾರಿಯಾಗಿ ಗೋಚರಿಸುತ್ತಿದ್ದ ಸಂಗತಿಯೆಂದರೆ ಕ್ರಿಶ್ಚಿಯನ್ ಧರ್ಮ. ಈ ಕುರಿತಾಗಿ ನಾನು ಅಪ್ಪನ ಎದಿರು ಆಗಾಗ ಪ್ರಾಸ್ತಾಪಿಸಿದ್ದೆ.

ಅಪ್ಪಾ, ನಾವು ಕೂಡಾ ಕ್ರಿಶ್ಚಿಯನ್ ಜಾತಿಗೆ ಸೇರ್ಕೋಬುಡಾನ, ಆವಾಗ ಊರೊಳಗೆ ನಮಗೆ ಎಲ್ಲಿ ಬೇಕಾದರೂ ಬಾಡಿಗೆಗೆ ಮನೆ ಸಿಕ್ತದೆ. ನಾವೂ ಕೂಡಾ ಊರೊಳಗೇ ಇರ್‌ಬೌದು. ನಿಮ್ ಜಾತಿ ಯಾವ್ದು ಅಂತಾಗಲಿ, ನಿಮ್ ಜಾತೊರಿಗೆ ಊರೊಳಗೆ ಮನೆ ಬಾಡಿಗೆಗೆ ಕೊಡಲ್ಲ ಅಂತಾಗಲಿ ಅನ್ನಿಸ್ಕೋಳೋದಾಗಲಿ ಯಾವ್ದೂ ಇರೂಲ್ಲ. ಅಷ್ಟೇ ಅಲ್ಲ, ನಾವೂ ಕೂಡಾ ಪ್ರತೀ ಆಯ್ತವಾರ ಬಂದ್ರೆ ಬಿಳಿ ಬಟ್ಟೆ ಹಾಕ್ಕೊಂಡು, ಕೈಯಲ್ಲಿ ಬೈಬಲ್ ಹಿಡ್ಕೊಂಡು, ಕ್ಯಾಂಡಲ್ ತಗೊಂಡು, ರೋಸಾ ಹೂ ತಗೊಂಡು ಚರ್ಚಿಗೆ ಹೋಗ್‌ಬೌದು. ಎಲ್ರೊಟ್ಟಿಗೆ ಕೂತ್ಕೊಂಡು ಪಾರ್ಥನೆ ಮಾಡ್‌ಬೌದು. ಯಾರೂ ನಮ್ಮನ್ನ ದೇವಸ್ಥಾನದ ಹತ್ರ ಹೋದ ನಾಯಿಗೆ ಮಾಡ್ತಾರಲ್ಲ ಹೇ ಥೂ, ಛೀ! ದೂರ ನಿಂತ್ಕೊ' ಅಂತ ಮುಖಾ ಸಿಂಡರಿಸಿ ಕೊಳ್ಳಲ್ಲ. ಪ್ರಾರ್ಥನೆ ಆದ್‌ಮೇಲೆ ಒಬ್ಬರನೊಬ್ಬರು ತಬ್ಲಾಡ್ ಕೊಂಡು, ಎದೆಗೆ ಎದೆ ಆನಿಸಿಕೊಂಡು ಬರ್‍ತಾರಲ್ಲ ಎಷ್ಟ್ ಚೆಂದಾಗಿರ್‍ತದೆ.! ನಮ್ಮನ್ನು ಯಾರಾದರೂ ನಿಮ್ ಕ್ಯಾಸ್ಟ್ ಯಾವ್ದು? ಅಂದ್ರೆ, ಹೇಳ್ಕೋಳೋಕೂ ಮೊದಲೇ ಪಾತಾಳಕ್ಕೆ ಊತು ಹೋದ್ದೋರ್‌ಥರಾ, 'ಶೆಡ್ಯೂಲ್ ಕ್ಯಾಸ್ಟು' ಅಂತ್ಲೋ, ಹೊಲೇರು ಅಂತ್ಲೋ ಹೇಳೋ ಅನಿಷ್ಟದಿಂದ ತಪ್ಪಿಸಿಕೊಂಡು ಕ್ರಿಶ್ಚಿಯನ್ ಅಂತ ಹೇಳ್ಕೋಬೌದಲ್ಲ.

ಕಿಶ್ಚಿಯನ್ ಆದ್ಮೇಲೆ, ದನಾನಾರ ತಿಂದ್ಕೋ ಕ್ವಾಣಾನಾದ್ರೂ ತಿಂದ್ಕೋ, ಯಾರ್ಗೂ ಡೌಟೇ ಬರಲ್ಲ. ನಾವ್ ತಿಂತೀರಿ ಅಂತ ಬಾಯ್ ಬಿಟ್ಟು ಹೇಳಿದ್ರೂ ಯಾರೂ ನಂಬೊಲ್ಲ. ನಾವು ಕ್ರಿಸ್ತಾನ್‌ದೋರ್ ಆಗಿಬಿಟ್ರೆ ಗೌಡ್ರೂ, ಬ್ರಾಂಬ್ರು ಎಲ್ರೂ ನಮ್ಮನ್ನು ಮನೇಕ್ ಬುಟ್‌ಕೋತಾರೆ, ಆ ಅಮೇರಿಕಾದ ಅಧ್ಯಕ್ಷರ ಮಗಳನ್ನ ಬೇಕಾದ್ರೂ 'ನಾನೂ ಕೂಡಾ ನಿಮ್ ಜ್ಯಾತೋನೇ ಹೆಣ್ ಕೊಡಪ್ಪಣ್ಣಿ ಅಂತ ಕೊಳ್‌ಪಟ್ಟಿ ಹಿಡ್ಕೊಂಡು ಹೆಣ್‌ಕೇಳೋ ಅಷ್ಟು ಅಧಿಕಾರ ಬಂದ್‌ಬುಡ್ತದೆ. ನಮ್ಕೇನು ಯೇಗ್ತೆ ಇಲ್ಲಿದ್ರೂ ಪರವಾಗಿಲ್ಲ ಬುಡು, ಅವರ ಜಾತ್ಯೋರು ನಾವು ಅಂತ ಗೋತ್ತಾದ್ರೂ ಸಾಕು ಅವರಿಗಿರೋ ಮಾನ, ಮರ್‍ವಾದೆ ಎಲ್ಲಾದ್ರಾಗೂ ನಮ್ಗೂ ಸಮಪಾಲು ಕೊಡ್ತಾರೆ," ಅಂತ ನಂಗೇ ಆಟೇನ್ ಗೊತ್ತಿತ್ತೋ ಅದ್ನೆಲ್ಲಾವ್‌ನೂ ಅಂಬೇಡ್ಕರ್ ಒಂದ್ ಸಲ ಲಕ್ಷಾಂತರ ಸಂಖ್ಯೆಯಲ್ಲಿ ಮಹಾರ್ ಜನಾಂಗದ ಸಮ್ಮೇಳನವನ್ನು ಉದ್ದೇಶಿಸಿ 1936ರಲ್ಲಿ ಮಾಡಿದ್ರಲ್ಲ ಒಂದು ಚಾರಿತ್ರಿಕವಾದ 'ನಮಗೆ ಮತಾಂತರ ಯಾಕೆ ಬೇಕು? ಅಂತ ಆ ಥರದ ಉತ್ಸಾಹ ಉಮ್ಮಸಿನಲ್ಲಿ ಮಾತಾಡಿದೆ ನೋಡಿ, ನಮ್ಮಪ್ಪನ ಹತ್ರ, ಅದಕ್ಕೆ ಅವಯ್ಯಾ ಅದೇನಂದಿರಬಹುದು ಅಂತ ಕುತೂಹಲ ನಿಮಗೂ ಇರ್‌ಬೌದೇನೋ.

ನನ್ನ ಇಂತಹ ಪರಿಣಾಮಕಾರಿಯಾದ ಭಾಷಣ ಕೇಳಿದ್ ಮೇಲೆ ನಮ್ಮಪ್ಪ ಒಪ್ಕೊಳ್ದೆ ಇದ್ದಾನಾ? ಅಂತ ಕುತೂಹಲದಿಂದ ಏನಂತಾನೋ ಅಂದ್ಕೊಂಡ್ರೆ, ಎತ್ತೋ ನಿಮ್ಮಮ್ಮು, ಕ್ರಿಸ್ತಾನ್‌ದೋರ್ನ.... ಅಂದ್‌ಬುಟ್ಟು, ಮುಖಾ ಮೂತಿ ಇಲ್ದೇ ಇರೋ ಎಳ್ಡು ಅಡ್ ಗೀಟ್‌ಗಳ್ನ ನೇತಾಕ್ಕೊಂಡ್‌ಬುಟ್ಟು ಲಬ್ ಲಬಾ ಅಂತ ಬಾಯ್ ಬಡ್ಕೋಳೋ ಜನರು ಪೂಜೆ ಮಾಡೋ ದ್ಯಾವರ್ಕ ಕೈ ಮುಗಿಯೋ ಜಾತೀಕ್ ಸೇರ್ಕೋಬೇಕು ಅಂತೀಯೇನೋ ಬಾಡ್ಕೊ, ನಮ್ ತಾತ ಮುತ್ತಾಂದ್ರಿ ಕಾಲ್ದಿಂದ ಕೈ ಮುಕ್ಕೊಂಡ್ ಬಂದಿರೋ ದ್ಯಾವರ್ನ ಬುಟ್‌ಬುಟ್ಟು ಕ್ರಿಸ್ಥಾನ್

(30ನೇ ಪುಟಕ್ಕೆ)

ದಲಿತರು ಹಿಂದೂಗಳೇ?

ವೈ. ಮರಿಸ್ವಾಮಿ

"ದಲಿತರಿಗೆ ಒಂದು ಉನ್ನತ ಸಂಸ್ಕೃತಿಯಿಲ್ಲ, ಸಂಸ್ಕಾರವಿಲ್ಲ. ಆದುದರಿಂದ ಅವರಿಗೆ ಹಿಂದೂ ಧರ್ಮದ ವೈಷ್ಣವ ಪರಂಪರೆಯ ಧೀಕ್ಷೆ ಕೊಡುವುದರ ಮೂಲಕ ಹಿಂದೂ ಸಮಾಜದ ಮುಖ್ಯವಾಹಿನಿಗೆ ತಂದು, ಹಿಂದೂಗಳಲ್ಲಿ ಒಗ್ಗಟ್ಟು ಮೂಡಿಸುತ್ತೇನೆ. ಈ ಕಾರ್ಯಕ್ಕಾಗಿ ದಲಿತ ಕೇರಿಗಳಿಗೆ ಹೋಗುತ್ತೇನೆ." ಎಂದು ಹುಯಿಲೆಬ್ಬಿಸುವುದರ ಮೂಲಕ ಪೇಜಾವರ ಶ್ರೀಗಳು ಸುದ್ದಿಯಲ್ಲಿದ್ದಾರೆ. ತನ್ಮೂಲಕ ಹರಪ್ಪಾ ಮಹಂಜದಾರೂ ನಾಗರೀಕತೆಯ ವಾರಸುದಾರರ ಪರಂಪರೆಗೆ, ದ್ರಾವಿಡ ಸಂಸ್ಕೃತಿಯ ಮೂಲನಿವಾಸಿಗಳಿಗೆ ಮತ್ತು ಮಾನವೀಯ ಮೌಲ್ಯಗಳನ್ನೇ ಉಸಿರಾಗಿರಿಸಿಕೊಂಡಿರುವ ತಾಯಿಕರುಳಿನ ದಲಿತ ಸಮುದಾಯದ ಚರಿತ್ರೆಗೆ ಅಪಮಾನವೆಸಗುತ್ತಿದ್ದಾರೆ. ಈ ದೇಶದ ವೈಧಿಕೇತರ ಬಹುಸಂಖ್ಯಾತ ಸಮುದಾಯಗಳ ಮೇಲೆ ಬ್ರಾಹ್ಮಣದ ಹತಾರದಿಂದ ಹಲ್ಲೆ ನಡೆಸುತ್ತಿದ್ದಾರೆ.

ಪೇಜಾವರರು ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ದ್ರೋಣಾಚಾರ್ಯರಿದ್ದಂತೆ. ಈ ನೆಲದ ಸಂವಿಧಾನ–ಕಾನೂನಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡದ ವಿಶ್ವ ಹಿಂದೂ ಪರಿಷತ್‌ನ ರಾಷ್ಟ್ರೀಯ ಮುಖಂಡರೂ ಆಗಿರುವ ಅವರಿಗೆ ಸಮಾಜದ ಮುಖ್ಯವಾಹಿನಿ ಎಂದರೆ –ಮನು ಪ್ರಣೀತ ಶ್ರೇಣೀಕೃತ ಜಾತಿವ್ಯವಸ್ಥೆ, ಹಿಂದೂ ಸಮಾಜದ ಮುಖ್ಯ ಸಂಸ್ಕೃತಿ ಎಂದರೆ ವೈಧಿಕ ಸಂಸ್ಕೃತಿ. ರಾಜ್ಯದಲ್ಲಿ ತಮ್ಮದೇ ಸಿದ್ಧಾಂತದ ಬಿಜೆಪಿ ಸರ್ಕಾರದ ತುಘಲಕ್ ದರ್ಬಾರ್ ಇರುವುದರಿಂದ ಮತ್ತಷ್ಟು ಪುಳಕಿತರಾಗಿ, ಹಿಂದೂಗಳಲ್ಲಿ ಐಕ್ಯತೆ ತರುವ ಮಂತ್ರವನ್ನು ಪಠಿಸುತ್ತಾ, ಗೋಹತ್ಯೆ ನಿಷೇಧದ ಕುಚೇಷ್ಟೆಗೆ ಬೆಂಬಲಿಸುತ್ತಾ, ದಲಿತರಿಗೆ ವೈಷ್ಣವ ಸಂಸ್ಕಾರದ ಪ್ರಕಾರ ಧೀಕ್ಷೆಯನ್ನು ಬೋಧಿಸಿ, ಮುಸಲ್ಮಾನರ ಮತ್ತು ಕ್ರೈಸ್ತರ ವಿರುದ್ಧ ಅವರನ್ನು ಜಾಗೃತಗೊಳಿಸಲು ಹೊರಟಿದ್ದಾರೆ! ಇದೇ ಸಂದರ್ಭದಲ್ಲಿ ಬೌದ್ಧ ಮತದಲ್ಲಿಯೂ ಹಲವಾರು ಲೋಪಗಳಿರುವುದನ್ನು ಪತ್ತೆಹಚ್ಚಿ, ದಲಿತರು ಯಾವುದೇ ಕಾರಣಕ್ಕೂ ಹಿಂದೂ ಧರ್ಮವನ್ನು ಧಿಕ್ಕರಿಸಿ, ಇತರೆ ಧರ್ಮಗಳನ್ನು ಅಂಗೀಕರಿಸಬಾರದೆಂದು ಫರ್ಮಾನು ಹೊರಡಿಸಿದ್ದಾರೆ!

ಅಂಬೇಡ್ಕರರ ಪ್ರಕಾರ, ಪ್ರಾಂತೀಯ ಅರ್ಥದಲ್ಲಿ ಮತ್ತು ಧಾರ್ಮಿಕ ಅರ್ಥದಲ್ಲಿ ಹಿಂದೂ ಪದವನ್ನು ಬಳಸಲಾಗುತ್ತಿದೆ. ಪ್ರಾಂತೀಯ ಅರ್ಥದಲ್ಲಿ ಹೇಳುವುದಾದರೆ, ಹಿಂದೂ ಸ್ಥಾನದಲ್ಲಿ ವಾಸಿಸುವ ಪ್ರತಿಯೋರ್ವನೂ ಹಿಂದೂ ಈ ಹಿನ್ನಲೆಯಲ್ಲಿ ನೋಡಿದಾಗ, ಅಸ್ಪೃಶ್ಯರೆಲ್ಲರೂ ಖಂಡಿತವಾಗಿಯೂ ಹಿಂದೂಗಳೇ ಆಗುತ್ತಾರೆ. ಅವರಂತೆಯೇ ಮುಸಲ್ಮಾನರು, ಕ್ರೈಸ್ತರು, ಸಿಖ್ಖರು, ಜ್ಯೂಗಳೂ, ಪ್ಯಾರ್ಸಿಗಳೂ ಸಹ ಹಿಂದೂಗಳೇ ಆಗುತ್ತಾರೆ. ಧಾರ್ಮಿಕ ಅರ್ಥದಲ್ಲಿ, ಹಿಂದೂ ಸಿದ್ಧಾಂತವಾದ ಜಾತಿ ಮತ್ತು ಅಸ್ಪೃಶ್ಯತೆಯ ಮೂಲಕ ಅಸ್ಪೃಶ್ಯರು ಹಿಂದೂಗಳೇ ಎಂದು ನಿರ್ಣಯಿಸುವುದಾದರೆ, ಪ್ರತಿ ಅಸ್ಪೃಶ್ಯನೂ ಹಿಂದೂ ಧರ್ಮವನ್ನು ತಿರಸ್ಕರಿಸುತ್ತಾನೆ.

ದಲಿತರು ಹಿಂದೂಗಳೇ?

ದಲಿತರು ತಾವು ಹಿಂದೂ ಸಮಾಜದಿಂದ ಪ್ರತ್ಯೇಕವಾಗಿದ್ದೇವೆ ಎಂದು ಭಾವಿಸಬಾರದು. ದಲಿತರು ಕೂಡ ಹಿಂದೂಗಳೇ, ಸವರ್ಣಿಯರೇ ಶ್ರೇಷ್ಠ ಕನಿಷ್ಠ ಎನ್ನುವುದು ಹಿಂದೂ ಧರ್ಮದಿಂದ ಬಂದಿಲ್ಲ ಎಂದು ಪೇಜಾವರರು ಎಲ್ಲೆಡೆ ವಾದ ಮಂಡಿಸುತ್ತಿದ್ದಾರೆ.

ಡಾ. ಬಾಬಾಸಾಹೇಬ್ ಅಂಬೇಡ್ಕರರ ಪ್ರಕಾರ, ಪ್ರಾಂತೀಯ ಅರ್ಥದಲ್ಲಿ ಮತ್ತು ಧಾರ್ಮಿಕ ಅರ್ಥದಲ್ಲಿ ಹಿಂದೂ ಪದವನ್ನು ಬಳಸಲಾಗುತ್ತಿದೆ. ಪ್ರಾಂತೀಯ ಅರ್ಥದಲ್ಲಿ ಹೇಳುವುದಾದರೆ, ಹಿಂದೂ ಸ್ಥಾನದಲ್ಲಿ ವಾಸಿಸುವ ಪ್ರತಿಯೋರ್ವನೂ ಹಿಂದೂ ಈ ಹಿನ್ನಲೆಯಲ್ಲಿ ನೋಡಿದಾಗ, ಅಸ್ಪೃಶ್ಯರೆಲ್ಲರೂ ಖಂಡಿತವಾಗಿಯೂ ಹಿಂದೂಗಳೇ ಆಗುತ್ತಾರೆ. ಅವರಂತೆಯೇ ಮುಸಲ್ಮಾನರು, ಕ್ರೈಸ್ತರು, ಸಿಖ್ಖರು, ಜ್ಯೂಗಳೂ, ಪ್ಯಾರ್ಸಿಗಳೂ ಸಹ ಹಿಂದೂಗಳೇ ಆಗುತ್ತಾರೆ.

ಧಾರ್ಮಿಕ ಅರ್ಥದಲ್ಲಿ, ಹಿಂದೂ ಸಿದ್ಧಾಂತವಾದ ಜಾತಿ ಮತ್ತು ಅಸ್ಪೃಶ್ಯತೆಯ ಮೂಲಕ ಅಸ್ಪೃಶ್ಯರು ಹಿಂದೂಗಳೇ ಎಂದು ನಿರ್ಣಯಿಸುವುದಾದರೆ, ಪ್ರತಿ ಅಸ್ಪೃಶ್ಯನೂ ಹಿಂದೂ ಧರ್ಮವನ್ನು ತಿರಸ್ಕರಿಸುತ್ತಾನೆ. ಮತ್ತು ತಾನು ಹಿಂದೂ ಎನ್ನುವುದನ್ನು ಅಲ್ಲಗಳೆಯುತ್ತಾನೆ. ಹಿಂದೂ ಧರ್ಮವೆಂದರೆ ಜಾತೀಯತೆ ಹಾಗೂ ಅಸ್ಪೃಶ್ಯತೆ. ಹಿಂದೂಗಳು ಮತ್ತು ಅಸ್ಪೃಶ್ಯನೂ ನಡೆಸುವ ಧಾರ್ಮಿಕ ಉಪಾಸನ ಕ್ರಮಗಳಲ್ಲಿನ ಭಿನ್ನತೆಯಿಂದಾಗಿ ಅವರೀರ್ವರೂ ಪರಸ್ಪರ ಸಂಪೂರ್ಣವಾಗಿ ಪರಕೀಯರಾಗಿದ್ದಾರೆ.

ಅಸ್ಪೃಶ್ಯನೊಬ್ಬನನ್ನು ಹಿಂದೂ ಸಮಾಜದ ಅಂಗವೆಂದು ಪರಿಗಣಿಸಲು ಸಾಧ್ಯವೇ?. ಆತನನ್ನು ಇತರರೊಡನೆ ಬೆಸೆಯುವಂತಹ ಯಾವುದೇ ಮಾನವೀಯ ಸಂಬಂಧಗಳಿರುವುದೇ? ಅಂತಹದ್ದು ಯಾವುದೂ ಇಲ್ಲ. ಅಲ್ಲಿ ವೈವಾಹಿಕ ಸಂಬಂಧಗಳೂ ಇಲ್ಲ, ಸಹ ಪಂಕ್ತಿ ಭೋಜನ ಪದ್ಧತಿಯೂ ಇಲ್ಲ. (ಸ್ವತಹ ಪೇಜಾವರರೇ ಈ ಎರಡೂ ಪದ್ಧತಿಗಳನ್ನು ಸಮರ್ಥಿಸಿಕೊಳ್ಳುತ್ತಾರೆ.) ಅಷ್ಟೇ ಏಕೆ, ಅಲ್ಲಿ ಮುಟ್ಟುವ ಸ್ವಾತಂತ್ರ್ಯವೂ ಇಲ್ಲ. ಸಹಜೀವನವಂತೂ ಇಲ್ಲವೇ ಇಲ್ಲ. ಅಸ್ಪೃಶ್ಯನು ಒಬ್ಬ ಹಿಂದೂವನ್ನು ಮುಟ್ಟಿದ ಕೂಡಲೇ ಮೈಲಿಗೆಯಾಗುತ್ತದೆ. ಅಸ್ಪೃಶ್ಯನನ್ನು ಪ್ರತ್ಯೇಕವಾಗಿ ಗುರುತಿಸುವುದು ಮತ್ತು ಆ ಪ್ರತ್ಯೇಕತೆಯನ್ನೇ ಸತ್ಯವೆಂದು ಒತ್ತಿ ಹೇಳುವುದೇ ಹಿಂದೂ ಸಂಪ್ರದಾಯವಾಗಿದೆ.

ಹಿಂದೂಗಳನ್ನು ಹಾಗೂ ಅಸ್ಪೃಶ್ಯರನ್ನು ಬೇರ್ಪಡಿಸಿ ನೋಡಲು ಉಪಯೋಗಿಸುವ ಸಾಂಪ್ರದಾಯಿಕ ಪರಿಭಾಷೆಯ ಪ್ರಕಾರ, ಹಿಂದೂಗಳನ್ನು 'ಸವರ್ಣಿಯರು' ಎಂದೂ ಅಸ್ಪೃಶ್ಯರನ್ನು 'ಅವರ್ಣಿಯರು' ಎಂದು ಕರೆಯಲಾಗಿದೆ. ಹಿಂದೂಗಳನ್ನು 'ಚತುವರ್ಣಿಕರು' ಎಂದೂ ಅಸ್ಪೃಶ್ಯರನ್ನು 'ಪಂಚಮ'ರೆಂದೂ ಕರೆಯಲಾಗಿದೆ.

ದಲಿತರು ಹಿಂದೂಗಳಾದ ಮಾತ್ರಕ್ಕೆ ಬರುವ ಲಾಭವೇನು?

ದಲಿತರು ತಮ್ಮ ಮೂಲ Identityಯನ್ನು ಬದಿಗೊತ್ತಿ, ಹಿಂದೂಗಳಾಗಿ ಗುರುತಿಸಿಕೊಳ್ಳುವುದರಿಂದ ಸಾಮಾಜಿಕ

ಬಹಿಷ್ಕಾರ, ಅಸ್ಪೃಶ್ಯತೆಯ ಆಚರಣೆ, ಜೀತಮುಕ್ತಿ, ಮಲ ಹೊರುವ ಪದ್ಧತಿಯಿಂದ ಬಿಡಗಡೆ, ದೇವದಾಸಿ ಪದ್ಧತಿ ಯಂತಹ ಅನಿಷ್ಟ ಸಂಪ್ರದಾಯದ ನಿರ್ಮೂಲನೆ ಸಾಧ್ಯವೇ? ಕಂಬಾಲಪಲ್ಲಿ-ನಾಗಲಾಪಲ್ಲಿಯಂತಹ ನರ ಮೇಧಗಳು ನಿಲ್ಲುತ್ತವೆಯೇ? ದಲಿತರಿಗೆ ಹಿಂದೂತ್ವದ ದೀಕ್ಷೆ ಕೊಡಲು ಹೊರಟಿರುವ ಪೇಜಾವರರ ಬತ್ತಳಿಕೆಯಲ್ಲಾಗಲೀ, ಅವರ ಹಿಂಬಾಲಕರ ಬಾಯಲ್ಲಾಗಲೀ, ಈ ಪ್ರಶ್ನೆಗಳಿಗೆ ಉತ್ತರವಿಲ್ಲ.

ದಲಿತರನ್ನು ಹಿಂದೂಗಳೆಂದು ಪರಿಗಣಿಸಿದ ಮಾತ್ರಕ್ಕೆ ಬರುವ ಲಾಭವೇನು? ಎನ್ನುವ ಪ್ರಶ್ನೆಯನ್ನು ಹಾಕಿಕೊಳ್ಳುವ ಅಂಬೇಡ್ಕರರು, "ಹಿಂದೂಗಳಂತೆ ಅಸ್ಪೃಶ್ಯರೂ ವೈದಿಕ ದೇವ ದೇವತೆಗಳನ್ನು ಪೂಜಿಸುವುದು, ಅವರು ಹೋಗುವ ಯಾತ್ರ ಸ್ಥಳಗಳಿಗೆ ಹೋಗುವುದು, ಒಂದೇ ಬಗೆಯ ಮೂಢನಂಬಿಕೆಗಳನ್ನು ಹೊಂದುವುದು, ಅವರಂತೆಯೇ ಕಲ್ಲು, ಮರ, ಬೆಟ್ಟ, ಗುಡ್ಡಗಳನ್ನು ಪವಿತ್ರವೆಂದು ತಿಳಿಯುವುದು-ಇವಿಷ್ಟೆ ಸಾಕೇ? ಒಂದೇ ಬಗೆಯ ಧಾರ್ಮಿಕ ನಂಬಿಕೆ ಮತ್ತು ಪೂಜಾ ವಿಧಾನಗಳಿಂದ ವಿಭಿನ್ನ ಸಮುದಾಯಗಳಲ್ಲಿ ಐಕ್ಯತೆ ಸಾಧ್ಯವೇ? ಸಾಧ್ಯವಿಲ್ಲ" ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಆದುದರಿಂದ, ಪೇಜಾವರರ ವೈಷ್ಣವ ಧೀಕ್ಷೆಯಿಂದ ದಲಿತ ಸಮುದಾಯದಲ್ಲಿ ಕೆಲವು ಅವಿವೇಕಿ ನಾಮಧಾರಿಗಳು ಗೋಚರಿಸಬಹುದೇ ಹೊರತು ದಲಿತ ಸಮುದಾಯಕ್ಕಂತೂ ಯಾವುದೇ ಪ್ರಯೋಜನವಾಗುವುದಿಲ್ಲ!

ಧರ್ಮದಿಂದ ವಿಭಿನ್ನ ಜನಾಂಗಗಳ ಮಧ್ಯೆ ಏಕತೆ ಮೂಡಿಸಲು ಸಾಧ್ಯವಿಲ್ಲ.

ಬೆಲ್ಜಿಯನ್ನರು, ಡಚ್ಚರು, ನಾರ್ವೇಯನ್ನರು, ಸ್ವೀಡನ್ನರು, ಜರ್ಮನರು, ಇಟಲಿಯನ್ನರು, ಸ್ಲಾವ್ ಇತ್ಯಾದಿ ಜನಾಂಗಗಳಿಗೆ ಸೇರಿದವರು ಕ್ರೈಸ್ತರಲ್ಲವೇ? ಅವರೆಲ್ಲರೂ ಒಂದೇ ದೇವರನ್ನು ಪೂಜಿಸುವುದಿಲ್ಲವೇ? ಅವರೆಲ್ಲರೂ ಏಸುಕ್ರಿಸ್ತನು ತಮ್ಮ ಉದ್ಧಾರಕನೆಂದು ಒಪ್ಪಿಕೊಳ್ಳುತ್ತಿಲ್ಲವೇ? ಅವರಿಗೆ ಒಂದೇ ಬಗೆಯ ಧಾರ್ಮಿಕ ನಂಬಿಕೆಯಿಲ್ಲವೇ? ಅವರೆಲ್ಲರ ನಡುವಿನ ಚಿಂತನೆ, ಪೂಜಾವಿಧಾನ ಹಾಗೂ ನಂಬಿಕೆಗಳಲ್ಲಿ ಖಂಡಿತವಾದ ಸ್ಪಷ್ಟವಾದ ಧಾರ್ಮಿಕ ಐಕ್ಯತೆ ಯಿದ್ದರೂ ಕೂಡ ಅವರೆಲ್ಲ ಬೇರೆ ಬೇರೆ ಜನಾಂಗಗಳಲ್ಲ ಎಂದು ಯಾರು ತಾನೇ ಹೇಳಲು ಸಾಧ್ಯ?

ಅದೇ ರೀತಿಯಲ್ಲಿ ಅಮೇರಿಕದ ಬಿಳಿ ಜನರು ಮತ್ತು ನಿಗ್ರೋ ಜನಾಂಗದವರು ಒಂದೇ ಧರ್ಮಕ್ಕೆ (ಕ್ರೈಸ್ತ ಧರ್ಮಕ್ಕೆ) ಸೇರಿದವರಾಗಿದ್ದಾರೆ. ಧರ್ಮದ ಆಧಾರದಿಂದಲೇ ಅವರನ್ನು ಒಂದೇ ಜನಾಂಗವೆಂದು ಹೇಳಲು ಸಾಧ್ಯವೇ? ಭಾರತೀಯ ಕ್ರೈಸ್ತರು, ಯುರೋಪಿಯನ್ನರು ಮತ್ತು ಆಂಗ್ಲೋ ಇಂಡಿಯನ್ನರು ಒಂದೇ ಧರ್ಮವನ್ನು ಒಪ್ಪಿಕೊಂಡಿದ್ದಾರೆ. ಆದರೂ ಸಹ, ಇವರೆಲ್ಲರೂ ಒಂದೇ ಜನಾಂಗಕ್ಕೆ ಸೇರಿದವರಲ್ಲ ಎಂಬುದು ಸತ್ಯ. ಸಿಖ್ಖರತ್ತ ನೋಡಿ ಅವರಲ್ಲಿ ಸಿಖ್ಖರು, ಮಜ್ಜಿಸಿಖ್ಖರು ಮತ್ತು ರಾಮ್ ದಾಸಿಯಾ ಸಿಖ್ಖರಿದ್ದಾರೆ. ಎಲ್ಲರೂ ಸಿಖ್ ಧರ್ಮವಲಂಬಿಗಳೇ, ಆದರೆ ಇವರೆಲ್ಲರೂ ಒಂದೇ ಜನಾಂಗಕ್ಕೆ ಸೇರಿದವರಲ್ಲ ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ.

ಧರ್ಮ ಎಂಬ ಸ್ಥಿತಿಯ ಮೂಲಕ ಸಾಮಾಜಿಕ ಐಕ್ಯತೆ ಸಾಧ್ಯ ಎನ್ನುವುದಾದರೆ-ಯುರೋಪಿಯನ್ನರು, ಫ್ರೆಂಚರು, ಇಟಲಿಯನ್ನರು, ಜರ್ಮನ್ನರು ಮತ್ತು ಸ್ಲಾವರು, ಅಮೇರಿಕಾದ ಬಿಳಿಯರು ಹಾಗೂ ನಿಗ್ರೋಗಳು ಮತ್ತು ಇಂಡಿಯಾದ ಕ್ರೈಸ್ತರು, ಯುರೋಪಿಯನ್ನರು, ಆಂಗ್ಲೋ

ದಲಿತರಿಗೆ ವೈಷ್ಣವ ದೀಕ್ಷೆ ಕೊಟ್ಟ ನಂತರ, ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಅವರನ್ನು ಮೇಲ್‌ಸ್ತರದ ಜಾತಿಗಳಿಗೆ ಸೇರಿಸುತ್ತೀರಾ? ಆ ಜಾತಿಗಳೊಂದಿಗೆ ವೈವಾಹಿಕ ಜೀವನ ಮತ್ತು ಸಹಭೋಜನ ಏರ್ಪಡಿಸುತ್ತೀರಾ? ಎಂಬ ಪ್ರಶ್ನೆಗಳಿಗೆ ತಡಬಡಿಸುತ್ತಿರುವ ಪೇಜಾವರರು; ಧೀಕ್ಷೆ ಕೊಡುವುದು ಮಾತ್ರ ತಮ್ಮ ಕೆಲಸವೆಂದು ಪಲಾಯನಗೈಯ್ಯುತ್ತಿದ್ದಾರೆ. ಅಸ್ಪೃಶ್ಯರು ತಾವು ಹಿಂದೂಗಳಲ್ಲ, ಪ್ರತ್ಯೇಕ ಅಸಿತ್ವವುಳ್ಳವರು ಎಂದು ಹೇಳಿದಲ್ಲಿ, ಅವರು ರಾಜಕೀಯ ಅನುಕೂಲಕ್ಕಾಗಿ ಒಂದು ಹೊಸ ಸಿದ್ಧಾಂತವನ್ನು ಕಂಡುಹಿಡಿದ್ದಾರೆಂದು ಯಾರೂ ಆರೋಪ ಮಾಡುವಂತಿಲ್ಲ.

ಇಂಡಿಯನ್ನರು ಒಂದೇ ಧರ್ಮವನ್ನು ಪರಿಪಾಲಿಸುತ್ತಿದ್ದರೂ, ಜನಾಂಗವಾಗದಿರುವಂತಹ ನಿದರ್ಶನವು, ಧರ್ಮದ ಮೂಲಕ ಸಾಮಾಜಿಕ ಐಕ್ಯತೆ ಸಾಧ್ಯವೆನ್ನುವ ವಾದವನ್ನು ಪೊಳ್ಳಾಗಿಸುತ್ತದೆ, ಎಂದು ಅಂಬೇಡ್ಕರರು ವಿಶ್ಲೇಷಿಸಿದ್ದಾರೆ.

ಧರ್ಮವೆಂಬುದು ಐಕ್ಯಗೊಳಿಸುವ ಶಕ್ತಿಯಾಗಿದೆ ಎನ್ನುವುದು ಒಂದು ಬಗೆಯ ಕುರುಡು ನಂಬಿಕೆಯಾಗಿದೆ. ಧರ್ಮಕ್ಕೂ ಐಕ್ಯತೆಗೂ ಸಂಬಂಧವೇ ಇಲ್ಲ ಎಂಬ ಸರಳ ಸತ್ಯವನ್ನು ಪೇಜಾವರರು ಮನಗಾಣಬೇಕಿದೆ.

ಧರ್ಮ ವಿಭಿನ್ನವಾಗಿದ್ದರೂ-ಜಾತಿ ಒಗ್ಗೂಡಿಸುತ್ತದೆ

ಭಾರತದ ಸಾಮಾಜಿಕ ಸಂದರ್ಭದಲ್ಲಿ ವಿಭಿನ್ನ ಧರ್ಮಗಳಿಗೆ ಸೇರಿದ ಒಂದೇ ಜನಾಂಗ ಜಾತಿಯನ್ನು ಬೆಸೆಯುವ ಸಾಧನ 'ಜಾತಿ'ಯಾಗಿದೆ. ಇದಕ್ಕೆ ಪೂರಕವಾಗಿ ಅಂಬೇಡ್ಕರರು ಸಿಖ್ಖರ ಉದಾಹರಣೆಯನ್ನು ಕೊಡುತ್ತಾರೆ.

"ಸಿಖ್ಖರು ಮತ್ತು ಹಿಂದೂಗಳು ಧಾರ್ಮಿಕವಾಗಿ ಪ್ರತ್ಯೇಕವಾಗಿದ್ದಾರೆ. ಆದರೆ ಸಾಮಾಜಿಕವಾಗಿ ಪ್ರತ್ಯೇಕವಾಗಿಲ್ಲ. ಒಟ್ಟಾಗಿ ಊಟ ಮಾಡುತ್ತಾರೆ. ತಮ್ಮೊಳಗೆ ಮದುವೆ ಮಾಡಿಕೊಳ್ಳುತ್ತಾರೆ, ಒಟ್ಟಿಗೆ ಜೀವಿಸುತ್ತಾರೆ. ಹಿಂದೂ ಕುಟುಂಬವೊಂದರಲ್ಲಿ ಒಬ್ಬ ಮಗ ಸಿಖ್ಖನಾಗಿದ್ದರೆ, ಮತ್ತೊಬ್ಬ ಹಿಂದೂ ಆಗಬಹುದು. ಇಲ್ಲಿ ಧಾರ್ಮಿಕ ಭಿನ್ನತೆಯು ಸಾಮಾಜಿಕ ಐಕ್ಯತೆಯನ್ನು ಮುರಿದಿಲ್ಲ.

ಯುರೋಪಿಯನ್ನರು, ಇಟಾಲಿಯನ್ನರು, ಫ್ರೆಂಚರು, ಜರ್ಮನರು ಮತ್ತು ಅಮೇರಿಕದ ಬಿಳಿಯರು ಹಾಗೂ ನಿಗ್ರೋಗಳು ತಮ್ಮ ಜನಾಂಗದೊಳಗೆ ವೈವಾಹಿಕ ಸಂಬಂಧಗಳನ್ನು ಕಂಡುಕೊಳ್ಳುತ್ತಾರೆ. ಧರ್ಮವು ಜನಾಂಗೀಯ ಭಾವನೆಗಳನ್ನು ಎದುರಿಸಿ ನಿಲ್ಲುವಷ್ಟು ಶಕ್ತಿಶಾಲಿಯಾಗಿಲ್ಲ.

ಪ್ರತ್ಯೇಕತೆಯೇ ಹಿಂದೂ ಧರ್ಮದ ಸಾರ

ಹಿಂದೂ ಎನಿಸಿಕೊಳ್ಳಬೇಕಾದವನು ಯಾರೊಂದಿಗೂ ಬೆರೆಯದೇ, ಎಲ್ಲದರಲ್ಲೂ ಭಿನ್ನನಾಗಿ ಇರಬೇಕು. ಹಿಂದೂಧರ್ಮದಲ್ಲಿನ ಶ್ರೇಷ್ಠತೆಯು, ಹಿಂದೂ ಧರ್ಮ ಎತ್ತಿ ಹಿಡಿಯುತ್ತದೆ ಎನ್ನಲಾದ ಜಾತೀಯತೆ ಮತ್ತು ಅಸ್ಪೃಶ್ಯತೆಯಡಿಯಲ್ಲಿ ಮರೆಯಾಗಿದೆ ಎಂದು ಸಾಮಾನ್ಯವಾಗಿ ಹೇಳುತ್ತಾರೆ. ಒಡೆದು ಹಾಕುವುದೇ ಹಿಂದೂಧರ್ಮದ ಶ್ರೇಷ್ಠತೆ ಎನ್ನುವುದು ಸಂದೇಹಾತೀತ ಸತ್ಯ. ಒಬ್ಬ ಹಿಂದೂ ಕೇವಲ ಜಾತೀಯತೆ ಮತ್ತು ಅಸ್ಪೃಶ್ಯತಾ ಸಿದ್ಧಾಂತಗಳಲ್ಲಿ ನಂಬಿಕೆಯಿಟ್ಟರೆ ಸಾಲದು, ಅದನ್ನು ಪ್ರತಿನಿತ್ಯದ ಬದುಕಿನಲ್ಲಿ ಅಕ್ಷರಶಃ ಪಾಲಿಸಲೇಬೇಕು.

ಹಿಂದೂಗಳ ಮತ್ತು ಅಸ್ಪೃಶ್ಯರ ನಡುವೆ, ಅಸ್ಪೃಶ್ಯತೆಯನ್ನು ಸಿದ್ಧಾಂತದ ಮೂಲಕ ತಂದಿರುವ ವಿಭಜನೆಯು ಕೇವಲ ಕಾಲ್ಪನಿಕ ಪ್ರತ್ಯೇಕತಾ ರೇಖೆಯಲ್ಲ. ಈ ಪ್ರತ್ಯೇಕತಾ ಗೆರೆಯು, ವಸಾಹತುಗಳ ಸ್ವಾಧೀನಕ್ಕಾಗಿ ಪೋರ್ಚುಗೀಸರಿಗೂ ಅವರ ವೈರಿಗಳಿಗೂ ನಡೆದ ಕದನದಲ್ಲಿ ಪೋಪ್ ರವರು ಎಳೆದಂತಹಗೆರೆಯಲ್ಲ. ಕೆಲವರು ಪಾಲಿಸುತ್ತಾ ಮತ್ತೆ ಕೆಲವರು ಪಾಲಿಸದೇ ಇರುವ, ಉದ್ದುದ್ದವಿದ್ದು ಅಗಲವಿರದ ವರ್ಣರೇಖೆಯಂತಹದ್ದಲ್ಲ. ತಾರತಮ್ಯವನ್ನು ತೋರದೆ ಪ್ರತಿಷ್ಠೆಯನ್ನು ತೋರುವ ಜನಾಂಗೀಯ ರೇಖೆಯಂತಹದ್ದಲ್ಲ. ಈ ಪ್ರತ್ಯೇಕತಾ ರೇಖೆಗೆ ಆಳ ಅಗಲಗಳೆರಡೂ ಉಂಡು. ವಾಸ್ತವವಾಗಿ, ಹಿಂದೂಗಳಿಗೂ ಅಸ್ಪೃಶ್ಯರಿಗೂ ನಡುವೇ ಮುಳ್ಳಿನ ತಂತಿಯ ಬೇಲಿಯೇ ಇದೆ. ರಾಷ್ಟ್ರೀಯವಾಗಿ ಅಸ್ಪೃಶ್ಯರನ್ನು ಒಂದು ನಿರ್ಧಿಷ್ಟ ಸ್ಥಳದಲ್ಲಿ ಕೂಡಿಟ್ಟು, ಅವರು ಅಲ್ಲಿಂದ ಹೊರಬರುವುದಕ್ಕಾಗಲೀ. ಹೊರಬರುವ ಕನಸು ಕಾಣುವುದಕ್ಕಾಗಲೀ ಸಾಧ್ಯವಾಗದಂತೆ ಭಯಂಕರ ಪಹರೆಯನ್ನಿಟ್ಟಂತಾಗಿದೆ, ಎಂದು ಅಂಬೇಡ್ಕರರು ಹಿಂದೂ ಸಮಾಜ ಹೇಗೆ ದಲಿತರನ್ನು ಉಸಿರು ಕಟ್ಟಿಸುವ ವಾತಾವರಣದಲ್ಲಿ ಅದುಮಿಟ್ಟಿದೆ ಎಂಬುದನ್ನು ವಿವರಿಸಿದ್ದಾರೆ.

ದಲಿತರು ಸದಾಕಾಲ ಈ ಉಸಿರು ಕಟ್ಟಿಸುವ ವಾತಾವರಣದಲ್ಲಿ ಗುಲಾಮರಾಗಿರಬೇಕೆಂದು ಪೇಜಾವರರು ಅಪೇಕ್ಷಿಸುತ್ತಾರೆ.

ದಲಿತರು ಹಿಂದೂಗಳಲ್ಲ-ಪ್ರತ್ಯೇಕ ಜನಾಂಗ

ಅಸ್ಪೃಶ್ಯರೂ ಹಿಂದೂಗಳೇ ಎಂಬ ನಿರ್ಧಾರಕ್ಕೆ ಬಂದಲ್ಲಿ, ಆಚಾರ ವಿಚಾರಗಳೆರಡರಲ್ಲೂ ಹಿಂದೂ ಧರ್ಮವೇ ಅಸ್ಪೃಶ್ಯರನ್ನು ತನ್ನಲ್ಲಿನ ಸಣ್ಣ ತುಣುಕಾಗಿ ಗುರುತಿಸುವುದನ್ನು ಸ್ಪಷ್ಟವಾಗಿ ನಿರಾಕರಿಸುತ್ತದೆ. ಅಲ್ಲದೇ, ಅಸ್ಪೃಶ್ಯರನ್ನು ತನ್ನಿಂದ ಬೇರೆಯಾದ ಅಂಶವನ್ನಾಗಿಯೇ ಪರಿಗಣಿಸುತ್ತದೆ, ಎಂದು ಅಂಬೇಡ್ಕರರು ವಾಸ್ತವಿಕ ಚಿತ್ರಣವನ್ನು ಬಿಚ್ಚಿಟ್ಟಿದ್ದಾರೆ.

ದಲಿತರಿಗೆ ವೈಷ್ಣವ ದೀಕ್ಷೆ ಕೊಟ್ಟ ನಂತರ, ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಅವರನ್ನು ಮೇಲ್‌ಸ್ತರದ ಜಾತಿಗಳಿಗೆ ಸೇರಿಸುತ್ತೀರಾ? ಆ ಜಾತಿಗಳೊಂದಿಗೆ ವೈವಾಹಿಕ ಜೀವನ ಮತ್ತು ಸಹಭೋಜನ ಏರ್ಪಡಿಸುತ್ತೀರಾ? ಎಂಬ ಪ್ರಶ್ನೆಗಳಿಗೆ ತಡಬಡಿಸುತ್ತಿರುವ ಪೇಜಾವರರು; ಧೀಕ್ಷೆ ಕೊಡುವುದು ಮಾತ್ರ ತಮ್ಮ ಕೆಲಸವೆಂದು ಪಲಾಯನಗೈಯ್ಯುತ್ತಿದ್ದಾರೆ.

ಅಸ್ಪೃಶ್ಯರು ತಾವು ಹಿಂದೂಗಳಲ್ಲ, ಪ್ರತ್ಯೇಕ ಅಸಿತ್ವವುಳ್ಳವರು ಎಂದು ಹೇಳಿದಲ್ಲಿ, ಅವರು ರಾಜಕೀಯ ಅನುಕೂಲಕ್ಕಾಗಿ ಒಂದು ಹೊಸ ಸಿದ್ಧಾಂತವನ್ನು ಕಂಡುಹಿಡಿದ್ದಾರೆಂದು ಯಾರೂ ಆರೋಪ ಮಾಡುವಂತಿಲ್ಲ. ಅವರು ಕೇವಲ ಸತ್ಯ ಸಂಗತಿಗಳನ್ನು ಎತ್ತಿ ತೋರಿದ್ದಾರೆ ಮತ್ತು ಆ ಸತ್ಯ ಸಂಗತಿಗಳು ಹಿಂದೂ ಧರ್ಮದ ಪರಂಪರೆಯೇ ಆಗಿದೆ, ಎಂದು ಅಂಬೇಡ್ಕರರು ಪ್ರತಿಪಾದಿಸಿದ್ದಾರೆ.

ದಲಿತರ ಹಕ್ಕುಗಳನ್ನು ಕಬಳಿಸುವ ಹುನ್ನಾರ

ಅಸ್ಪೃಶ್ಯರನ್ನು ಪ್ರತ್ಯೇಕ ಸಮುದಾಯವನ್ನಾಗಿ ಗುರುತಿಸಿದಲ್ಲಿ ಕಾರ್ಯಾಂಗ, ಶಾಸಾಕಾಂಗ ಹಾಗೂ ಸಾರ್ವಜನಿಕ ಸೇವಾ ಕ್ಷೇತ್ರಗಳಲ್ಲಿನ ಸ್ಥಾನಗಳನ್ನು ಅಸ್ಪೃಶ್ಯರ ಹಾಗೂ ಹಿಂದೂಗಳ ನಡುವೆ ಹಂಚಬೇಕಾಗುತ್ತದೆ. ಆಗ ಹಿಂದೂಗಳ ಪಾಲು ಕಡಿಮೆಯಾಗುತ್ತದೆ. ಮೊದಲಿನಿಂದಲೂ ಅಸ್ಪೃಶ್ಯರ ಪಾಲನ್ನು ತಮ್ಮ ಹೊಟ್ಟೆಯೊಳಗೆ ಇಳಿಸಿಕೊಳ್ಳುವ ಹಿಂದೂಗಳ ಪರಿಪಾಠ ಹಠತ್ ಆಗಿ ನಿಲ್ಲುತ್ತದೆ, ಎಂದು ಸಮರ್ಥಿಸಿದ ಬಾಬಾಸಾಹೇಬ್ ಅಂಬೇಡ್ಕರ್‌ರವರು, ದಲಿತರಿಗೆ ಪ್ರತ್ಯೇಕ ಚುನಾಯಕಗಳನ್ನು ಮತ್ತು ಪ್ರತ್ಯೇಕ ವಾಸಸ್ಥಾನವನ್ನು (Seperate Elictor ate and Seperate Settlement) ಒದಗಿಸಿಕೊಡಬೇಕೆಂದು ಬ್ರಿಟಿಷರ ಮನವೊಲಿಸುವುದರಲ್ಲಿ ಯಶಸ್ವಿಯಾದರು.

ದಲಿತರನ್ನು ಒಂದು ಪ್ರತ್ಯೇಕ ಜನಾಂಗವನ್ನಾಗಿ ಗುರುತಿಸುವುದರಿಂದ, ಅಸ್ಪೃಶ್ಯರು ಹಾಗೂ ಹಿಂದೂಗಳ ನಡುವೆ ನಿರಂತರವಾದ ಕಂದಕ ಏರ್ಪಡುತ್ತದೆ. ಅಂತಹ ಅನಾಹುತಕ್ಕೆ ಬ್ರಿಟೀಷ್ ಸರ್ಕಾರ ಕೈ ಹಾಕಬಾರದೆಂದು ಗಾಂಧಿಯವರ ನೇತೃತ್ವದ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭಾದಂತಹ ಸಂಘ ಪರಿವಾರದ ಸಂಘಟನೆಗಳು, ಕೈಗೆ ಬಂದ ತುತ್ತು ಬಾಯಿಗೆ ಬಾರದಂತೆ ಮಾಡಿದವು. ಪರಿಣಾಮವಾಗಿ ಅಂಬೇಡ್ಕರ್ ಕನಸಿದ ಆಶಯಕ್ಕೆ ವಿರುದ್ಧವಾಗಿ 1932ರಲ್ಲಿ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ಜಾರಿಯಾಯಿತು. 1935ರಲ್ಲಿ ಅದಕ್ಕೆ ಕಾಯಿದೆಯ ಮಾನ್ಯತೆ ದೊರೆಯಿತು. ಇದೇ ವರ್ಷದಲ್ಲಿ ಅಂಬೇಡ್ಕರರು ಹಿಂದುತ್ವದ ವೈಧಿಕ ಧರ್ಮಕ್ಕೆ ಪರ್ಯಾಯವಾಗಿ ಸಮಾನತೆ ಬೋಧಿಸುವ ಹಿಂದೂಯೇತರ ಧರ್ಮದ ಹುಡುಕಾಟದಲ್ಲಿರುವುದಾಗಿ ಘೋಷಿಸಿದರು.

ಅಸ್ಪೃಶ್ಯರಿಗೆ ಮೀಸಲಾತಿ ಜಾರಿಗೆ ಬಂದಾಗಿನಿಂದ, ನಿರಂತರವಾಗಿ ಜಾತಿ ಆಧಾರಿತ ಮೀಸಲಾತಿಯನ್ನು ವಿರೋಧಿಸುವ ಮತ್ತು ದಲಿತರು ಹಿಂದೂ ಧರ್ಮದಿಂದ ಹೊರಹೋಗದಂತೆ ನಿರ್ಬಂಧಿಸುವ ಮನುವಾದಿ ಪ್ರಕ್ರಿಯೆಗಳು ಚಾಲ್ತಿಯಲ್ಲಿವೆ. ದಲಿತರಿಗೆ ಹಿಂದೂ/ವೈಷ್ಣವ ಧೀಕ್ಷೆ ಕೊಡಿಸುವ ಮೂಲಕ ಹಿಂದೂಗಳೆಂದು ಅರ್ಥೈಸಿ, ಅವರೂ ಕೂಡ ಸಮಾಜದ ಮುಖ್ಯವಾಹಿನಿಗೆ ಸೇರಿರುವುದರಿಂದ ಜಾತಿ ಆಧಾರಿತ ಮೀಸಲಾತಿಯ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೇ ವಿನಾಶ ಮಾಡಿ, ಶಾಶ್ವತವಾಗಿ ದಲಿರನ್ನು ಗುಲಾಮರನ್ನಾಗಿಸುವ ಪ್ರಯತ್ನ ಪೇಜಾವರ ಮತ್ತವರ ಪಟಾಲಂನಿಂದ ನಡೆಯುತ್ತಿದೆ. ತಮ್ಮ ದೈನಂದಿನ ಜ್ವಲಂತ ಸಮಸ್ಯೆಗಳಿಂದ ದಲಿತರ ಗಮ ನವನ್ನು ಬೇರೆಡೆ ಸೆಳೆಯಲು, ಮುಸ್ಲಿಮ್ ಮತ್ತು ಕ್ರೈಸ್ತ ಸಮುದಾಯಗಳ ವಿರುದ್ಧ ಎತ್ತಿಕಟ್ಟುವ ಹವ್ಯಕ ಕುತಂತ್ರ ನಡೆಯುತ್ತಿದೆ.

ಹಿಂದುತ್ವದ ಆಕ್ರಮಣದಿಂದ ದಲಿತರ ಪ್ರತ್ಯೇಕತೆಯನ್ನು ಸಂರಕ್ಷಿಸಲು, ದಲಿತರು ಬಾಬಾಸಾಹೇಬರ ಹಾದಿಯಲ್ಲಿ ನಡೆಯುವುದರ ಮೂಲಕ ಬೌದ್ಧ ಧರ್ಮ ಅಥವಾ ಇನ್ನಾವುದೇ ಧರ್ಮವನ್ನು ಲಕ್ಷೋಪಾದಿ ಸಂಖ್ಯೆಯಲ್ಲಿ ಅಧಿಕೃತವಾಗಿ ಸ್ವೀಕರಿಸಬೇಕು. ಧರ್ಮಾತೀತವಾಗಿ ಜಾತಿ ಆಧಾರದ ಮೇಲೆ ಸಾಮಾಜಿಕ ಸಂಬಂಧಗಳನ್ನು ಸಬಲಗೊಳಿಸಬೇಕು. ಜಾಗತೀಕರಣ ಖಾಸಗೀಕರಣ ಹಾಗೂ ಉದಾರೀಕರಣ ನೀತಿಯಿಂದ ಮೀಸಲಾತಿಯ ಅವಕಾಶ ಕ್ಷೀಣಿಸುತ್ತಿರುವುದರಿಂದ, ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿಯ ಜಾರಿಗಾಗಿ ಪ್ರಭುತ್ವವನ್ನು ಆಗ್ರಹಿಸಬೇಕು. □

'ಹಿಂದೂ' ಎಂಬ ಕೇಂದ್ರವೂ.

(27ನೇ ಪುಟದಿಂದ)

ದೋರ್ ಜಾತೀಕ ಸೇರ್ರ್ಕೊಬೇಕಂತಾನೆ, ನಿನ್ನ ಅದ್ಯಾವ್ನನ್ ಮಗ್ನು ಹೇಳ್‌ಕೊಟ್ನೋ ಅವನಮ್ನು ಅಂತ ಮುಷ್ಠಿ ಬಿಗಿ ಹಿಡ್ಕೊಂಡ್ ಹಲ್‌ಮುಡಿ ಕಚ್‌ಕೊಂಡು ಅಟ್ಟಾಡಿಸ್ಕೊಂಡ್ ಬಂದ್‌ಬಿಟ್ಟಿದ್ದನು.

ನಾನು ಅವೊತ್ತೊಂದು ದಿವ್ಸ ಗೌರ್ಮೆಂಟ್ ಇಸ್ಕೂಲ್‌ತಾಕ್ ಹೋಗಿದ್ದೆ. ಕ್ರಿಸ್ತಾನ್ ಪಾದ್ರುಗಳು ನಮ್ ಕೇರಿನಾಗಿರೋ ಎಲ್ಲಾರ್ನ್ನು ಗುಡ್ಡೆ ಹಾಕ್ಕೊಂಡು ನಿಮ್ದು ದೇವರುಗಳು ದೇವ್ರುಗಳಲ್ಲ ಅವು ದೆವ್‌ಗಳು, ಅದ್ಕೇ ಅವು ಆ ಪಾಟಿ ಪ್ರಾಣಿಗಳನ್ನು ಬಲಿ ಕೇಳ್ತವೆ. ಕುರಿ ಕ್ವಾಣ ತಿಂತವೆ. ಕುಂಕುಮ ಈಭೂತಿ ಎಲ್ಲಾ ಹಚ್ಕೊಂಡು ಊರಾಗಿಲ್ದಿರೋ ಹಬ್ಬಾಗಳ್ನೆಲ್ಲಾ ಮಾಡ್ತಿರಿ. ಒಂದ್ ದೇವ್ರಿಲ್ಲ, ಒಂದ್ ದಿಂಡ್ರಿಲ್, ಕಲ್ಲು ಮಣ್ಣು ಎಲ್ಲವ್ನ ದೇವ್ರು ಅಂತ ಕೈ ಮುಗೀತೀರಿ. ಆದ್ರೂ ನೀವೆಲ್ಲಾ ಸ್ವರ್ಗಕ್ಕೋಗೋದು ಡೌಟೇಯಾ! ಅಂಗಿದ್ ಮೇಲೆ ಇನ್ನೂ ಅದೇನ್ ಅಂಗೆ ಯೇಚ್ನೆ ಮಾಡ್ಕಂತ ನಿಂತಿದೀರಿ "ಬರ್ರಿ, ಮನಸ್ನ ಬದಲಯ್ಸಿಕೊಳಿ. ನಮ್ ಕ್ರಿಸ್ತಾನ್ ಜಾತಿ ಸೇರ್ಕಳಿ. ನಮ್ ಯೇಸುಪೆಬು ನಿಮ್ ಪಾಪಾನೆಲ್ಲಾ ಕ್ಷಮಿಸಿಬುಟ್ಟು ಹೊಟೇಕ್ ಹಾಕ್ಕೋತಾನೆ, ನೀವ್ಯಾರುವೆ ನರಕಕ್ಕೆ ಹೋಗೋ ಅಂಗೇ ಇಲ್ಲ ಸೀದಾ ಥುರೂ ಸ್ವರ್ಗಕ್ಕೇ ಹೋಗ್‌ಬೌದು ಅಂತ ನನ್ನ ತಲೆ ತಿಂದಾಕುದ್ರು, ಅದ್ಯಾರೋ ಒಬ್ ನರ್‌ಮನಸನ್ನ ಪೂಜೆ ಮಾಡಾಕೋಗಿ ನಾವು ನಮ್ ನೂರಾರ್ ದ್ಯಾವ್ರುಗಳನ್ನ ಬಿಡೋಕಾತದಾ? ನೀನೇನಾದ್ರೂ ಅವರ್ ಮಾಡೋ ಮೀಟಿಂಗು ಮಣ್ಣು ಮಸಿ ಅಂತೇನಾದ್ರೂ ಹೋಗ್‌ಬುಟ್ ತಲೆ ಕೆಡಿಸ್ಕೊಂಡು ಬಂದೀಯಾ ಉಸಾರ್ ಚಮ್ಡಾ ಸುಲ್ದಾಕ್ತೀನಿ" ಅಂದ್‌ಬುಟ್ಟಿದ್ದ.

ಅಮ್ಮ ಮಾತ್ರ ಮನೇನಲ್ಲಿ ಯಾರ್‌ಕಾದ್ರು ವಾಂತಿ, ಭೇದಿ, ಸಿಡುಬು, ಅಂಟು, ಮುಂಟು ಏನೇ ಆಗ್ಲಿ, ದೇವ್ ಸ್ಥಾನಕ್ಕೆ ಹೋದಂಗೇ ಹೋಗಿ ಅಪ್ಪನ ಕಣ್ ತಪ್ಪಿಸಿಬಿಟ್ಟು ಕ್ರಿಸ್ತಾನ್‌ದೋರ್ ಚರ್ಚಿಗೂ ಕ್ಯಾಂಡಲ್ ಹಚ್ಕೊಂಡು ಪ್ರೇಯರ್‌ನಲ್ಲಿ ಮಂಡಿ ಊರ್ಕೊಂಡ್ ಬಂದು ಗೊತ್ತಿಲ್ದಂಗೆ ಇದ್ ಬಿಡೋಳು. ಕಿಸ್‌ಮಸ್ ಹಬ್ಬದಾಗೆ ಅವರು ಕೊಡ್ತಾ ಇದ್ದ ಬಿರಿಯಾನಿಯಾಗೆ ಅನ್ನಕ್ಕಿಂತ ಜಾಸ್ತಿ ಪೀಸ್ ಗೋಳೇ ಇರೋವು! ಇವರ್ ಮನೆ ಕಾಯಾವಾಗ, ಅಷ್ಟಾದುಡ್ಕೊಟ್ಟು ಇಷ್ಟೊಂದ್ ಮರಿ ಮಾಂಸ ತಂದಾಕವ್‌ರಲ್ಲಾ! ಅಂತ ಆಶ್ಚರ್ಯ ಆಗೋದು. ಅಪ್ಪನ ತಣಿಗೆಗೆ ಪೀಸ್ ಬಿದ್ ಕೂಡ್ಲೆ ಅರೇ ನಂಕ್ಯಾಕೋ ಡೌಟೇ ಇದು ಮಾಲ್ ನೋಡ್ದ್ರೆ ನಮ್ದೇ ಇದ್ದಂಗೇ ಐತಲ್ಲ, ಅಂತ ಡೌಟ್ ಬಂದ್ ಬಿಟ್ಟು ಅಲ್ಲೆ ಪಕ್ಕದಲ್ಲೇ ಕೂತ್ಕೊಂಡು ಇಸುಕಿ ಇಸುಕಿ ನೋಡ್ತಿದ್ದ. ಅಮ್ಮನಿಗೆ ಲೇ ಇವ್ಳೇ, ಇದು ನಮ್ದಿದ್ದಂಗೇ ಐತೆ ಅಲ್ವೇನೇ ನೋಡು ಒಂದೊಂದ್ ದಾರ ಎಷ್ಟೊಂದ್ ದಪ್ಪ ಐಯ್ತೆ! ಡೌಟೇ ಇಲ್ಲಾ ಬಿಡು ದೊಡ್ಡ ದರದೇ ಇದು ಇದು ನಮ್ದೇನೇ ಅಂತ ಒಳ್ಳೆ ಆರ್ಕಿಮಿಡೀಸ್ ತತ್ವ ಕಂಡ್‌ಕೊಂಡಾಗ ಉಬ್ಬೋಗ್ತಾನಲ್ಲ ಅಂಗೆ ಉಬ್ಬೋಗ್ ಬಿಟ್ಟಿದ್ದ. ಅಪ್ಪ ಹೆಳ್ದಂಗೆ ಆವೊತ್ತು ಅದೇ ಬಿರಿಯಾನಿಯನ್ನು ದೊಡ್ ಜ್ಯಾತೋರೆಲ್ಲಾ ಕಿಸ್‌ಮಿಸ್ ಬಿರಿಯಾನಿ, ಕಿಸ್‌ಮಿಸ್ ಬಿರಿಯಾನಿ ಅಂತ ಬಂದು ತಿಂದ್ಕೊಂಡೋಗೋರು. ನಾನಂತೂ ಅಂಗೆ ಆಗ್ಲಿ, ಅಂಗೆ ಆಗ್ಲಿ ಅಂತ ಒಳಗೊಳಗೇ ನಕ್ಕೊಂಡು ಕುಷಿ ಪಟ್ಕೊತಿದ್ದೆ.

ಅಂತೂ ನಾನು ಅತ್ಲಾಗೆ ಹಿಂದೂವೂ ಆಗ್‌ಲಿಲ್ಲ. ಇತ್ಯಾಗೆ ಕ್ರಿಶ್ಚಿಯನ್ನೂ ಆಗಲಿಲ್ಲ. ನನ್ನ ಪಾಡಿಗೆ ನಾನು ಅದೇ ಹಳೇ ಎಸ್ಸಿ ಆಗಿ ಇದ್‌ಬಿಡಾನ ಅಂದ್ಕೊಂಡ್ರೆ ಇನ್ನೊಂದ್ ಸಂತೋಷದ ವಿಷಯ ಏನ್ ಗೊತ್ತಾ, ಇಡೀ ಇಂಡಿಯಾದಂತಾ ಇಂಡಿಯಾವೇ ನಾವು ಯಾವ ಎಸ್ಸಿ ಅಂತ ನಮ್ಮನ್ನು ಕರೀಬೇಡಿ, ಹೊಲೇರು ಅಂತ ಕರೀಬ್ಯಾಡಿ. ನಮ್ನು ಹಿಂದೂ ಅಂತಾನೇ ಕರೀರಿ ಅಂತ ಕೂಗಾಡ್ತ ಇದ್ವೋ, ಅದೇ ಜಾತಿಗಾಗಿ ಇಡೀ ಇಂಡಿಯಾದಲ್ಲಿರೋ ಸಬ್ಬಂಡಾರು ಜಾತಿಗಳೋರು ನಮ್ನು ಎಸ್ಸಿ ಮಾಡಿ ಎಸ್ಸಿ ಮಾಡಿ ಅಂತ ಬೇಡ್ಕೋತಾ ಇರೋದನ್ನು ನೋಡಿದ್ರೆ – ಅಂತೂ ನಮ್ ಎಸ್ಸೀ ಜಾತಿ ಕೂಡಾ ಡಿಮ್ಯಾಂಡಪ್ಪೋ ಡಿಮ್ಯಾಂಡು ಅಂತ, ಬಲು ಬೇಡಿಕೆಯ ಜಾತಿ ಆಗೊಯ್ತಲ್ಲ ಅನ್ನೋ ಖುಸೀನಾಗೆ ನಂಗೆ ಇಷ್ಟೊಂದ್ ಮೆಜಾರಿಟಿ ಸಿಕ್ಕುದ್ ಮೇಲೆ, ಬೇರೆ ಜಾತಿ ಗೀತಿ ಎಲ್ಲಾ ಆಚೆಗಿರ್ಲಿ ನಂದೇ ನಂಗಿರಲಿ ಅಂತ ಎದೆ ಸೆಟ್ಕೊಂಡು ಹೊಲೆಯನೊಬ್ಬ ನಡುಬಿದೀಲಿ ತಲೆ ಎತ್ಕೊಂಡ್ ಹೋಗೋ ಥರದ ಗೌರವ ಘನತೆ, ಪ್ರಾಪ್ತವಾದ ದಿನ, ಅಂಬೇಡ್ಕರಣ್ಣ ಮತಾಂತರ ಈಗ ನಮಕ್ಯಾಕೆ? ನೋಡ್ ಬಾ ಎಲ್ರೂ ನಿನ್ ಜಾತಿಕೇ ಸೇರ್ಕೋತಾವರೆ ಅಂತ ಒಂದ್ ಈ ಮೇಲಾದ್ರೂ ಕಳ್ಸಬೇಕು ಅಂದ್ಕೊಂಡ್ರೆ ನಂಕಾ ಅದೆಲ್ಲಾ ಬರೋಲ್ಲೋ ತಮ್ಮ ಕಾಗ್ದಾನೇ ಬರೀ ಪರವಾಗಿಲ್ಲ ಒಂದ್ ಕಾಪಿ ದಾಖಲೆ ಮಡಿಕ್ಕೋ ಆದ್ರೂ ನಿನ್ ಬುದ್ದಿ ನಿನ್ ಕೈಯಾಗೆ ಇರ್ಲಿ, ಆ ಕಂಪ್ಯುಟರ್ ಅನ್ನೋ ಮಿಶಿನ್ ಒಳಗೆ ಹಾಕ್‌ಬುಟ್ಟು ನೀನು ಅದರ ಕೈಗೊಂಬೆ ಆಗ್ಬುಟ್ಟಿಯ. ನಿಮ್ಮಣ್ಣ ಮಾದೇವಣ್ಣ ಗುಡಿಸಲ ಗ್ವಾಡೆ ಮೇಲೆ ನೀಲಿ ಅದ್‌ಕೊಂಡು ಕಾಲಿನಿಂದ ಮೂಡಿಸಿದ ನವಿಲುಗಳನ್ನ ಯಾರಾದ್ರೂ ಆ ಹಲಾಲಾಖೋರ ಮಿಶಿನ್ನು ಕಂಪ್ಯೂಟರ್ ಬಳಕ್ಕೆ ಎತ್ತಿ ಹಾಕ್ಕೊಂಡ್ ಬಿಟ್ಟವರೋ ಹೆಂಗೆ? ಅವೇನಾದ್ರೂ ಮಕ್ಳು ಮರಿ ಮಾಡ್ಕಂಡವೋ ಇಲ್ವೋ. ಇವನೆಲ್ಲಾ ವಸಿ ಉಸಾರಾಗಿ ನೋಡ್ಕ ಅಂತ ಅವನ್‌ತಾಗೇಳು, ಇತ್ತೀಚ್ಗೆ ಯಾಕೊ ನನ್ ತವ್ ಮುನಿಸಿಕೊಂಡು ಮಾತ್‌ಬಿಟ್ಟು ಏನೂ ಬರಿಯೋದಿಲ್ಲ ಅಂತ ಕುಂತ್‌ಬಿಟ್ಟವನೆ ಅಂತ ಕನಸಾಗ್ ಬಂದು ಕೈ ಕೈ ಹಿಸ್ಕೋತಾನೆ ಅಂಬೇಡ್‌ಕರ್ರು.

ಕುರೀಗಳ್ನೆಲ್ಲಾ ಮೇಯಾಕ್ ಬುಟ್‌ಬುಟು ಅಯ್ಯೊ ಎಷ್ಟು ಚೆಂದಾಗ್ ಮೇಯ್ತಾ ಐವೆ. ಎಷ್ಟು ವರ್ಸಾಗಿತ್ತು ಹೊಟ್ಟೆತುಂಬಾ ಮೇಯಾಕ್ ಸಿಕ್ಕಿ, ಅಂತ ಅವು ಮೇಯೋದ್ನೇ ನೋಡ್ತ ಕುರುಬಣ್ಣ ತಾನು ಹಿಂಗೆ ಹಸ್ಕೊಂಡ್ ಕುಂತ್‌ಬುಟ್ರೆ ಯೆಂಗೆ ಕಡೇಪಕ್ಷ ಆ ಕಿರುಬಾನೋ ತ್ವಾಳಾನೋ ಬಂದ್ ಅವ್‌ಗೋಳ್ ಜೊತೇಲಿ ಯಾಸ ಹಾಕ್ಕೊಂಡು ಈ ಪಾಟಿ ಮೆರಿತಿರೋ ಈ ಹೊತ್‌ನಲ್ಲೂ ಇಂಗೆ ತಾನೇ ದಿಕ್ ತಪ್ಪಂಗೆ ಕುಂತ್ ಬುಟ್ಟವನಲ್ಲಾ ಅಂತ, ನಮ್ ಮನೆ ಬಾಗಿಲ್ ಮುಂದೆ ಅಂಬೇಡ್ಕರ್ ಗಂಟಲರಕೊಂಡಂಗಿತ್ತು. ಕಣ್ಣುಜ್ಜಿಕೊಂಡು ಎದ್ದೋಗಿ ಬಾಗಿಲು ತೆರೆದುನೋಡ್ತಿನಿ, ಪೇಪರಿನ ಮುಖಪುಟದಲ್ಲಿ ಜಾತಿ ಸಂಘರ್ಷ ನಾಲ್ವರು ದಲಿತರ ಸಾವು ಅಂತಿತ್ತು. ಮತ್ತೊಂದು ಪುಟದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಕಿಡಿಗೇಡಿಗಳಿಂದ ಭಗ್ನ, ಅಂತ ವರದಿಯೊಂದಿತ್ತು! □

ಸಾಹಿತ್ಯ ಸಾಕ್ಷಿ ಬೆಲೆ: ರೂ. ೧೮೦/-
ಲೇ: ಡಾ. ಅರವಿಂದ ಮಾಲಗತ್ತಿ

ಈ ಕೃತಿಯಲ್ಲಿ ವಿಷಯನಿಷ್ಠ, ಕೃತಿನಿಷ್ಠ ವ್ಯಕ್ತಿನಿಷ್ಠ, ಹೀಗೆ ಮೂರು ಬಗೆಯ ೨೧ ಲೇಖನಗಳಿವೆ. ಹಲವಾರು ವಿಚಾರ ಸಂಕಿರಣಗಳಲ್ಲಿ ಮಂಡಿಸಿರುವ ವಿಚಾರಗಳು ಪ್ರಂಬಂಧಗಳಾಗಿ ಹೊರಹೊಮ್ಮಿವೆ. ಹೆಚ್ಚಿನವು ಒಂದು ಸಾಂಸ್ಕೃತಿಕ ಸಂದರ್ಭದ ಅಧ್ಯಯನ ಮತ್ತು ಪ್ರತಿಕ್ರಿಯಾತ್ಮಕ ವೈಚಾರಿಕ ಸ್ಪಂದನದ ಅಭಿವ್ಯಕ್ತಿಯ ಗುಣಧರ್ಮವನ್ನು ಹೊಂದಿವೆ. ಮಾನವೀಯತೆ, ವೈಚಾರಿಕತೆ, ಸಾಮಾಜಿಕ ಕಳಕಳಿ, ಚಲನಶೀಲತೆ ಮತ್ತು ಪ್ರಾದೇಶಿಕತಾ ಮೂಲದ ರಾಷ್ಟ್ರೀಯತೆಯ ವಿಚಾರಗಳು ಅಧ್ಯಯನದ ಹಾಗೂ ವಿಮರ್ಶೆಯ ನೆಲೆಯಲ್ಲಿ, ಮೂಡಿಬಂದಿವೆ,

ಪ್ರಕಾಶಕರು: ಚೈತನ್ಯ ಪ್ರಕಾಶನ
ಸಂತೇಬಾಚಳ್ಳಿ, ಮಂಡ್ಯ ಜಿಲ್ಲೆ.



ವಿಶ್ವತೋಮುಖ ಹೂ ಬಲು ಭಾರ
ಲೇ: ಪ್ರೊ. ಅರವಿಂದ ಮಾಲಗತ್ತಿ
ಬೆಲೆ: ರೂ. ೧೫೦/-

ಈ ಸಂಕಲನದಲ್ಲಿ ಭಿನ್ನ ಗುಣಗಳಿಂದ ಕೂಡಿದ ೧೦೮ ಕವಿತೆಗಳನ್ನು ಆಯ್ದು ಎರಡು ಭಾಗ ಮಾಡಲಾಗಿದೆ. 'ವಿಶ್ವತೋಮುಖ' ಲಯ ಪ್ರಧಾನ ಕವಿತೆಗಳಿಂದ ಕೂಡಿದ್ದು, ದೇಶಿ ನೆಲೆಯಿಂದ ಸಮಕಾಲೀನ ವಿಶ್ವದ ವಿದ್ಯಮಾನಗಳನ್ನು ಗ್ರಹಿಸಿದ ಅರ್ಥೈಸಿದ, ವ್ಯಾಖ್ಯಾನಿಸಿದ, ಸ್ಪಂದಿಸಿದ ಗುಣ ಹೊಂದಿವೆ. ಗೇಯ ಪ್ರಧಾನ ಕವಿತೆಗಳಿಂದ ಕೂಡಿದ 'ಹೂ ಬಲು ಭಾರ'ದಲ್ಲಿ ನಾಡು-ನುಡಿಗೆ ಸಂಬಂಧಿಸಿದಂತೆ ಹೆಚ್ಚಿನ ಹಾಡುಗಳು ಅಭಿವ್ಯಕಿಯನ್ನು ಸ್ಫುರಿಸುತ್ತವೆ. ಕವಿಯ ಅನುಭವದ ಗಮ್ಮತೆ, ಬೌದ್ಧಿಕ ಪಕ್ವತೆ ಎರಡರಲ್ಲೂ ಹರಿದಾಡಿದೆ.

ಪ್ರ: ಸಿರಾ ಪಬ್ಲಿಷಿಂಗ್ ಹೌಸ್
ಮೈಸೂರು-೫೭೦೦೧೫



ಹೊಸ ಪುಸ್ತಕ

*** ತೆರೆದರಷ್ಟೇ ಬಾಗಿಲು**
ಲೇ: ಡಿ.ಎಸ್. ರಾಮಸ್ವಾಮಿ
ಬೆಲೆ: ರೂ. ೪೦/-
*** ಹರಿವ ನೀರೊಳಗಿನ ಉರಿ**
ಅನು: ವಿಭಾ
ಬೆಲೆ: ರೂ. ೬೦/-
*** ದಲಿತತ್ವ: ಅಕ್ಷರವಾಗದ ಆತ್ಮ ಕಥಾನಕ ಬೆಲೆ: ರೂ. ೭೦/-**
ಲೇ: ಡಾ.ಕಾ.ವೆಂ ಶ್ರೀನಿವಾಸಮೂರ್ತಿ

ಲಡಾಯಿ ಪ್ರಕಾಶನದಿಂದ ಪ್ರಕಟಗೊಂಡಿರುವ ಈ ಮೂರು ಪುಸ್ತಕಗಳು ಜನಪರ ಆಶಯಗಳನ್ನು ಹೊಂದಿವೆ. ಮೊದಲನೆಯದು ಚಿಂತನೆಯ ಲಹರಿಗಳನ್ನು ಎಬ್ಬಿಸುವ ಇಲ್ಲಿನ ೩೧ ಕವನಗಳು ಪ್ರಸ್ತುತ ಘಟಿಸುತ್ತಿರುವ ಸಂಘರ್ಷಗಳಿಂದ ಘಾಸಿಗೊಂಡ ಮನಸ್ಸುಗಳಿಗೆ ಸಂವಾದಿಯಾಗಿಯೂ, ತಣಿಸುವಂತೆಯೂ ಇವೆ. ಅಲ್ಲದೆ ಭಾಷೆಯ ಲಯ, ಬಳಕೆ, ಭಾವುಕ





ಮನೋ ಧರ್ಮದ ಜೊತೆಗೆ ಚಿಂತನೆಯ ಅಂಶವೂ ಒಳಗೊಂಡಿದ್ದು ಓದುಗರನ್ನು ವಿಚಾರ ಲಹರಿಗೆ ಹಚ್ಚುವಂತಿವೆ.

ಎರಡನೆಯದು ಕಾವ್ಯವನ್ನೆ ಉಸಿರಾಗಿಸಿಕೊಂಡಿದ್ದ ವಿಭಾ ಅನುವಾದಕ್ಕೆ ಆಯ್ಕೆ ಮಾಡಿಕೊಂಡ ಕವಿತೆಗಳೇ ಅದ್ಭುತ. ಕವಿ ನೋವಿನ ಪರಂಪರೆಯನ್ನು, ಮನುಷ್ಯನ ತೊಳಲಾಟಗಳನ್ನು ಸಮರ್ಥವಾಗಿ ಕಟ್ಟಿಕೊಡಲಾಗಿದೆ. ಭಾರತದ ವಿವಿಧ ಭಾಷೆಗಳ ಹಾಗೂ ವಿವಿಧ ವಿದೇಶಿ ಹೆಸರಾಂತ ಲೇಖಕರ ಕವನಗಳನ್ನು ಕನ್ನಡದ್ದೇ ನೇಟಿವಿಟಿಗೆ ಒಗ್ಗಿಸಿಕೊಂಡಿರುವ ಪರಿ ಅನುವಾದಕಿಯ ಆಗಾಧ ಸೂಕ್ಷ್ಮ ಗ್ರಹಿಕೆಯನ್ನು ಮನದಟ್ಟು ಮಾಡಿಸುತ್ತದೆ. ಅಷ್ಟೊಂದು ತಾದ್ಯಾತ್ಮ, ತನ್ಮಯತೆ ಮೆಳೈಸಿದೆ. ಸಂಬಂಧಗಳನ್ನು ಕಳಚುವುದು ಸುಲಭ ಕಟ್ಟುವುದು ಸವಾಲು ಎಂಬ ಸದಾಶಯದಿಂದ ಏಕತೆಯ ಧನಿಯನ್ನು ಧ್ವನಿ ಸುವ, ಸಾಮಾಜಿಕ ಬದಲಾವಣೆಯ ಮೂಲಕ ಸಮಾನತೆಯತ್ತ ತುಡಿಯುವ ಹಂಬಲ ಹೊಂದಿವೆ. ಮಹತ್ತು ಮತ್ತು ಕಿಂಚಿತ್ತು



ಮಾಲಗತ್ತಿ ಮಾತು ಮಥನ
ಲೇ: ಜಿ. ಎಸ್. ಭಟ್ಟ
ಬೆಲೆ: ರೂ. ೮೦/-

ಡಾ. ಅರವಿಂದ ಮಾಲಗತ್ತಿ ಕನ್ನಡದ ಮಹತ್ವದ ಬರಹಗಾರರಲ್ಲಿ ಒಬ್ಬರು. ಅವರ ಜೀವನ ಸಾಧನೆ, ಸಾಹಿತ್ಯಗಳನ್ನು ಕುರಿತಂತೆ ಪ್ರಶ್ನಿಸಿ ಅವರಿಂದಲೇ ಉತ್ತರ ಪಡೆಯಲಾಗಿದ್ದು ಇದೊಂದು ಹೊಸ ಪ್ರಯೋಗವೆನಿಸಿದೆ. ಸಮಕಾಲೀನ ಸಾಹಿತ್ಯ, ದಲಿತ ಸಂಘಟನೆ, ಕೃತಿಗಳು, ಅವರ ವೈಯಕ್ತಿಕ ವಿಷಯಗಳು ಇಲ್ಲಿ ದಾಖಲಾಗಿವೆ. ಸದಾ ನೂತನ ಅನುಭವಗಳನ್ನು, ಅಭಿವ್ಯಕ್ತಿ ಸಾಧ್ಯತೆಗಳನ್ನು ನಿರಂತರವಾಗಿ ಶೋಧಿಸುತ್ತಿರುವ ಇವರ ದಲಿತ ಸಂವೇದನೆ, ಸಾಂಸ್ಕೃತಿಕ ವೈವಿಧ್ಯತೆ, ಜನಪದ, ಸಾಹಿತ್ಯ ವಿಮರ್ಶೆ, ಸಂಶೋಧನೆಗಳನ್ನು ಸಮರ್ಥವಾಗಿ ದಾಖಲಿಸಲಾಗಿದೆ.

ಪ್ರ: ಶಿವರಂಜಿನಿ ಪಬ್ಲಿಕೇಷನ್ಸ್,
ಮೈಸೂರು.-೫೭೦೦೨೪

ಎಂಬ ಭೇದ ಪ್ರಶ್ನಿಸುತ್ತಲೇ ಗಾಢ ವಿಷಾದದೊಂದಿಗೆ. ಜೀವಪರ ಕಾಳಜಿಯನ್ನು ಉಕ್ಕಿಸುವ ಹಾಗೂ ಸಾವು, ಅಗಲಿಕೆ, ಪ್ರೀತಿ ವಿರಹ ಇಲ್ಲಿನ ಕವಿತೆಗಳಲ್ಲಿ ಗಾಢವಾಗಿ ಹೊರಹೊಮ್ಮಿದೆ. ವಿಹ್ವಲಗೊಂಡ ಮನಸ್ಸಿಗೆ ಒಂದು ಆಪ್ತತೆಯ ದನಿ ಒದಗಿಸುತ್ತವೆ.

ಮೂರನೆಯ ಕೃತಿಯಲ್ಲಿ ದಲಿತ ಮತ್ತು ಭಾರತದ ವಿಮೋಚನೆಯ ಬಗೆಗೆ ಸೈದ್ಧಾಂತಿಕ ನಿಲುವನ್ನು ಹೊಂದಿರುವ ಬರಹಗಳಿವೆ. ಶೋಷಿತ ಸಮುದಾಯಗಳು ಮತ್ತು ಇತರೆ ಸಮುದಾಯಗಳ ಮನಸ್ಸುಗಳನ್ನು ಬೆಸೆಯುವ, ಸಾಮಾಜಿಕ ಅಡ್ಡಗೋಡೆಗಳನ್ನು ಕೆಡವುವ ಆಶಯಗಳನ್ನು ಹೊಂದಿರುವ ಈ ಕೃತಿಯಲ್ಲಿ ದಲಿತತ್ವದ ಅಸ್ಮಿತೆಯ ಮಂಡನೆಯಿದೆ.

ಈ ಮೂರು ಪುಸ್ತಕಗಳ ಪ್ರಕಾಶಕರು:
ಲಡಾಯಿ ಪ್ರಕಾಶನ, ಗದಗ.

ಮೂರು ಪ್ರಬಂಧಗಳು

ಡಾ. ಬಿ.ಎಂ. ಪುಟ್ಟಯ್ಯ

ಪ್ರಬಂಧ ೧

ಬೆಂಗಳೂರಿನಿಂದ ಬಳ್ಳಾರಿಗೆ ಬಂದ ಜಾಥಾದ ಬಹಿರಂಗ ಸಭೆ ಸುರುವಾಯಿತು. ನಿರೂಪಕರು, 'ಮಹಾಜನಗಳೆ ಈ ಬಹಿರಂಗ ಸಭೆಗೆ ಸ್ವಂತ ಆಸಕ್ತಿಯಿಂದ ಬಂದಿರುವ ಲಕ್ಷಗಟ್ಟಲೆ ಜನರಿಗೆ ಸ್ವಾಗತ' ಎಂದರು. ಜನರ ಚಪ್ಪಾಳೆ ಮುಗಿಲು ಮುಟ್ಟಿದವು. ಇನ್ನೇನು ಮುಖಂಡರು ಭಾಷಣಕ್ಕೆ ಏಳಬೇಕು, ಅಷ್ಟರಲ್ಲಿ ಸ್ವತಃ ಗಾಂಧೀಜಿ ವೇದಿಕೆಯ ಮೇಲೆ ಪ್ರತ್ಯಕ್ಷರಾದರು. ಜಾಥಾದಲ್ಲಿ ಬಂದಿದ್ದ ಗಾಂಧಿ ವೇಷಧಾರಿ ಇರಬೇಕೆಂದು ನೋಡಿದರೆ ಆತ ವೇದಿಕೆಯ ಎದುರಿಗೇ ಕೂತಿದ್ದ. ಎಲ್ಲರೂ ಇದನ್ನು ನಂಬಲಾಗದೆ ಕಕ್ಕಾಬಿಕ್ಕಿಯಾದರು. ಗಾಂಧೀಜಿ ಸೀದ ಮೈಕ್ ಹತ್ತಿರ ಹೋಗಿ 'ನಾನು ಮಹಾತ್ಮಾ ಗಾಂಧಿ, ನಿಮ್ಮ ಜಾಥಾಕ್ಕೆ ಮನಸೋತು ನಿಮ್ಮೊಂದಿಗೆ ಮಾತಾಡಲು ಬಂದಿದ್ದೇನೆ' ಎಂದರು. ಜನ 'ಮಹಾತ್ಮಾ ಗಾಂಧೀಜಿ ಕಿ ಜೈ' ಎಂದರು. ವೇದಿಕೆಯಲ್ಲಿದ್ದವರಿಗೆ ಸಂತೋಷ ತಡೆಯಲಾಗದೆ ಕಣ್ಣೀರಧಾರೆ ಹರಿಯಿತು. ಆ ಕಣ್ಣೀರು ಸೀದ ಕುಡತಿನಿ ಮಾರ್ಗವಾಗಿ ತೋರಣಗಲ್ಲಿನ ಜಿಂದಾಲ್ ಫ್ಯಾಕ್ಟರಿಗೆ ಹೋಯಿತು. ಕೂಡಲೆ ಅಲ್ಲಿಯ ಅಧಿಕಾರಿಗಳು 'ತುಂಗಭದ್ರಾ ಡ್ಯಾಮಿನ ನೀರು ಇನ್ನು ಮುಂದೆ ನಮಗೆ ಬೇಡ' ಎಂಬ ಮನವಿಯನ್ನು ಸರಕಾರಕ್ಕೆ ಕಳಿಸಿದರು.

ಇತ್ತ ಮುಖಂಡರೊಬ್ಬರು 'ನಮ್ಮ ಜಾಥಾದ ಸುದ್ದಿ ಕರ್ನಾಟಕಕ್ಕೆ, ಭಾರತಕ್ಕೆ, ಪ್ರಪಂಚಕ್ಕೆ ಮಾತ್ರವಲ್ಲ; ಅದು ಸ್ವರ್ಗದವರೆಗೂ ಹಬ್ಬಿದೆ. ಅಲ್ಲಿಂದ ಸ್ವತಃ ಗಾಂಧೀಜಿಯವರೇ ಬಂದಿರುವುದು ನಮ್ಮ ನಿಮ್ಮೆಲ್ಲರ ಏಳೇಳು ಜನ್ಮದ ಪುಣ್ಯ ಎಂದು ಹೇಳಿದರೆ ತಪ್ಪಾಗಲಾರದು' ಎಂದರು. ಜನ ಚಪ್ಪಾಳೆ ತಟ್ಟಿದರು. ಗಾಂಧೀಜಿ ಮಾತು ಮುಂದುವರಿಸಿದರು. 'ನಾನು ಕ್ವಿಟ್ ಇಂಡಿಯಾಕ್ಕೆ ಕರೆಕೊಟ್ಟ ದಿನವೇ ಇದು ನಡೆಯುತ್ತಿರುವುದು. ಎನ್ನುವಷ್ಟರಲ್ಲಿ 'ಕಾಂಗ್ರೆಸ್‌ಗೆ ಜಯವಾಗಲಿ!' ಎಂಬ ಘೋಷಣೆ ಮೊಳಗಿತು. ಗಾಂಧೀಜಿಯವರು 'ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಬೇಕು ಎಂದು ನಾನು ಕರೆಕೊಟ್ಟಿದ್ದೆ. ಆದರೆ ಇನ್ನೂ ಆ ಪಕ್ಷವನ್ನಿಟ್ಟುಕೊಂಡಿರುವುದು ಸಂತೋಷವೊ ವಿಷಾದವೊ ತಿಳಿಯದು' ಎಂದರು.

ಜನ ಚಪ್ಪಾಳೆ ತಟ್ಟಿದರು. 'ನಮ್ಮ ಈ ಹೋರಾಟ ಸಕ್ಸಸ್ ಆದ ತಕ್ಷಣ ಕಾಂಗ್ರೆಸ್ಸನ್ನು ವಿಸರ್ಜಿಸುತ್ತೇವೆ' ಎನ್ನಲು ಬಾಯಿ ತೆರೆದಿದ್ದ ನಾಯಕರೊಬ್ಬರು ಸುಮ್ಮನೆ ಕೂರುವಂತೆ ಜನರಿಗೆ ಕೈಸನ್ನೆ ಮಾಡಿದರು. 'ನಾನು ಬಹಳ ವರ್ಷಗಳ ಹಿಂದೆಯೇ ಈ ನಾಡಿಗೆ ಬರಬೇಕು ಎಂದುಕೊಂಡಿದ್ದೆ. ಸಮಯ ಕೂಡಿಬಂದಿರಲಿಲ್ಲ. ನಾನು ಬ್ರಿಟೀಷರ ವಿರುದ್ಧ ಉಪ್ಪಿನ ಸತ್ಯಾಗ್ರಹ ಮಾಡಲು, ದಂಡಿಯವರೆಗೆ ಕಾಲ್ನಡಿಗೆ ಜಾಥಾ ಮಾಡಿದ್ದೆ. ಅದೇ ರೀತಿಯ ಜಾಥಾವನ್ನು ನೀವೀಗ ಮಾಡಿದ್ದೀರಿ' ಎಂದರು ಗಾಂಧೀಜಿ. ಮುಖಂಡರು 'ಕಾಂಗ್ರೆಸ್‌ಗೆ ಜೈ' ಎಂದರು. ಸಭೆಯಲ್ಲಿ ಕುಳಿತಿದ್ದ ವಯಸ್ಸಾದ ವ್ಯಕ್ತಿಯೊಬ್ಬ 'ನಾನೂ ಅದರಲ್ಲಿ ಭಾಗವಹಿಸಿದ್ದೆ' ಎಂದು ಹೇಳಲು, ಯಾವ ಸಪೋರ್ಟೂ ಇಲ್ಲದೆ ಎದ್ದು ನಿಲ್ಲಲು ಪ್ರಯತ್ನಿಸಿ ಕುಸಿದು ಬಿದ್ದ. ಪೋಲೀಸರೊಂದಿಗೆ ನಾಲ್ಕಾರು ಜನ ಆತನನ್ನು ಹೊರಗೆ ಎತ್ತಿಕೊಂಡು ಹೋದರು.

ಗಾಂಧೀಜಿ ಮುಂದುವರಿಸಿದರು. '1948ರಲ್ಲಿ ನನ್ನ ಎದೆಗೆ ಗುಂಡುತಾಗಿದ್ದು ನಿಜ. ಆಗ ನನ್ನ ದೇಹ ಮಾತ್ರ ಸತ್ತಿತ್ತು. ಆದರೆ ನನ್ನ

ಮುಖಂಡರೊಬ್ಬರು ನಮ್ಮ ಜಾಥಾದ ಸುದ್ದಿ ಕರ್ನಾಟಕಕ್ಕೆ, ಭಾರತಕ್ಕೆ, ಪ್ರಪಂಚಕ್ಕೆ ಮಾತ್ರವಲ್ಲ; ಅದು ಸ್ವರ್ಗದವರೆಗೂ ಹಬ್ಬಿದೆ. ಅಲ್ಲಿಂದ ಸ್ವತಃ ಗಾಂಧೀಜಿಯವರೇ ಬಂದಿರುವುದು ನಮ್ಮ ನಿಮ್ಮೆಲ್ಲರ ಏಳೇಳು ಜನ್ಮದ ಪುಣ್ಯ ಎಂದು ಹೇಳಿದರೆ ತಪ್ಪಾಗಲಾರದು' ಎಂದರು. ಜನ ಚಪ್ಪಾಳೆ ತಟ್ಟಿದರು. ಗಾಂಧೀಜಿ 'ನಾನು ಕ್ವಿಟ್ ಇಂಡಿಯಾಕ್ಕೆ ಕರೆಕೊಟ್ಟ ದಿನವೇ ಇದು ನಡೆಯುತ್ತಿರುವುದು. ಎನ್ನುವಷ್ಟರಲ್ಲಿ 'ಕಾಂಗ್ರೆಸ್‌ಗೆ ಜಯವಾಗಲಿ!' ಎಂಬ ಘೋಷಣೆ ಮೊಳಗಿತು. ಗಾಂಧೀಜಿಯವರು 'ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಬೇಕು ಎಂದು ನಾನು ಕರೆಕೊಟ್ಟಿದ್ದೆ. ಆದರೆ ಇನ್ನೂ ಆ ಪಕ್ಷವನ್ನಿಟ್ಟುಕೊಂಡಿರುವುದು ಸಂತೋಷವೊ ವಿಷಾದವೊ ತಿಳಿಯದು' ಎಂದರು.

ಆಗಸ್ಟ್ ೯: ಬಳ್ಳಾರಿಯಲ್ಲಿ ಗಾಂಧೀಜಿ

ಹೀಗೆ ಒಂದು ಪತ್ರಿಕಾ ಗೋಷ್ಠಿ

ಆತ್ಮ ಸಾಯಲಿಲ್ಲ. ಆದರೆ 1992ರ ಡಿಸೆಂಬರ್ 6ನೇ ತಾರೀಖು ಬಾಬ್ರಿ ಮಸೀದಿಯನ್ನು ಕುಟ್ಟಿ ಪುಡಿ ಮಾಡಿದಾಗ, ನನ್ನ ಆತ್ಮವನ್ನೇ ಕುಟ್ಟಿ ಪುಡಿ ಮಾಡಿದಂತೆ ಆಯಿತು' ಎಂದರು. ಅವರ ಗಂಟಲು ಕಟ್ಟಿ ಬಂದಂತಾಗಿ, ಮುಖ ಬೆವರಿ ಕುರ್ಚಿಯಲ್ಲಿ ಕುಳಿತರು. ಜನ ಚಪ್ಪಾಳೆ ತಟ್ಟಿದರು. ಇದ್ದಕ್ಕಿದ್ದಂತೆ ವೇದಿಕೆಯ ಮೇಲೆ ಬಾಬಾ ಸಾಹೇಬ್ ಅಂಬೇಡ್ಕರ್ ಪ್ರತ್ಯಕ್ಷರಾದರು. ಮುಖಂಡರಿಗೆ ಮತ್ತು ಜನರಿಗೆ ತಮ್ಮ ಕಣ್ಣುಗಳನ್ನು ತಮಗೇ ನಂಬಲು ಆಗಲಿಲ್ಲ. 'ಇದೇನು ಕೆಡುಕಿನ ಸೂಚನೆಯೊ, ಒಳ್ಳೆಯದರ ಸೂಚನೆಯೊ!' ಎಂದು ಗಾಬರಿಯಾದರು. ಅಷ್ಟರಲ್ಲಿ ಸ್ವತಃ ಅಂಬೇಡ್ಕರರೇ ಮೈಕ್ ಹತ್ತಿರ ಹೋಗಿ 'ನಿಮಗೆ ನನ್ನನ್ನು ನಂಬಲು ಆಗುತ್ತಿಲ್ಲ. ಹೌದು, ನಾನು ಅಂಬೇಡ್ಕರ್' ಎಂದರು. ಜನ ಚಪ್ಪಾಳೆ ತಟ್ಟಿದರು. ಕೆಲವರು 'ಅಂಬೇಡ್ಕರರಿಗೆ ಜೈ' ಎಂದರೆ, ಮತ್ತೆ ಕೆಲವರು 'ಕಾಂಗ್ರೆಸ್ಸಿಗೆ ಜೈ' ಎಂದರು. ಎರಡೂ ಮಿಕ್ಸಾಗಿ ಯಾವುದೂ ಸರಿಯಾಗಿ ಕೇಳಿಸಲಿಲ್ಲ.

ಅಂಬೇಡ್ಕರ್ ಮಾತು ಮುಂದುವರಿಸಿದರು. 'ನಾನು ಇಲ್ಲಿಗೆ ಬರಬೇಕೊ ಬೇಡವೊ ಎಂದು ಆಲೋಚಿಸುತ್ತಿದ್ದೆ. ಶ್ರೀಮಾನ್ ಎಂ.ಕೆ. ಗಾಂಧಿಯವರು ಬಂದಿದ್ದರಿಂದ ನನಗೂ ಬರಬೇಕೆನಿಸಿತು. ಈಗ ತಾನೆ ಗಾಂಧಿಯವರು ಹೇಳಿದರು. ಬಾಬ್ರಿ ಮಸೀದಿಯನ್ನು ಕುಟ್ಟಿ ಪುಡಿ ಮಾಡಿದಾಗ ನನ್ನ ಆತ್ಮವನ್ನೆ ಕುಟ್ಟಿ ಪುಡಿ ಮಾಡಿದಂತೆ ಆಯಿತು ಎಂದು. ಸರಿ, ಅದನ್ನು ಒಪ್ಪೋಣ. ಮೊನ್ನೆ ಸವಣೂರಿನಲ್ಲಿ..' ಎನ್ನುವಷ್ಟರಲ್ಲಿ, ವೇದಿಕೆಯಲಿದ್ದ ಕಪ್ಪು ಬಣ್ಣದ ಮಹಿಳೆಯೊಬ್ಬರು, 'ನಾನು ಅಲ್ಲಿಗೆ ಹೋಗಿದ್ದೆ' ಎಂದು ಹೇಳಲು, ಎದ್ದು ನಿಲ್ಲಲು ಪ್ರಯತ್ನಿಸಿದರು. ಮುಖಂಡರು ಅವರನ್ನು ದಬಾಯಿಸಿ ಕೂರಿಸಿದರು. ಅದರಲ್ಲಿ ಬಂದ ಒಂದೆರಡು ಏಕವಚನ ಪ್ರಯೋಗಗಳನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಅಷ್ಟರಲ್ಲಿ ವೇದಿಕೆಯ ಮುಂಭಾಗದಲ್ಲಿ ಕುಳಿತಿದ್ದ ಜುಬ್ಬ ಪೈಜಾಮದ ವ್ಯಕ್ತಿಯೊಬ್ಬ ಎದ್ದು ನಿಂತು 'ನಮ್ದುಕಿ ಒಂದು ಮಾತ್ಗೆ ಹಾಡ್ತದೆ' ಎಂದರು.

ತಕ್ಷಣ ಅಂಬೇಡ್ಕರ್ ಆತನನ್ನು ಮೈಕ್ ಹತ್ತಿರಕ್ಕೆ ಕರೆದರು. 'ಅಲ್ಪ ಸಂಖ್ಯಾತರಿಗೆ ಜಯವಾಗಲಿ!' ಎಂದು ಜನ ಕೂಗಿದರು. 'ಅಲ್ಪಸಂಖ್ಯಾತರಿಗೆ ಅವಕಾಶ ಕೊಟ್ಟ ಕಾಂಗ್ರೆಸ್ ಪಕ್ಷಕ್ಕೆ ಜಯವಾಗಲಿ!' ಎಂದು ಮುಖಂಡರು ಕೂಗಿದರು. ಮೈಕ್ ಹತ್ತಿರಕ್ಕೆ ಬಂದ ಆ ವ್ಯಕ್ತಿ 'ಸರಕಾರ ನಮ್ದುಕೆ ದನದ ಮಾಂಸಕ್ಕೆ ಬಂದ್‌ಗೆ ಮಾಡಿದೆ. ಅಂಬೇಡ್ಕರ್‌ಜಿ ನಿಮ್ದು ಹರಿಜನ್ರಿಗೆ ದನದ ಮಾಂಸಕೆ ತಿನ್ತದೆ. ನಿಮ್ದುಕೆ ಸಂವಿಧಾನಕ್ಕೆ ಬರ್ದಿದೆ. ಹೀಗ ದನದಮಾಂಸಕ್ಕೆ ಬಂದ್‌ಗೆ ಮಾಡಿದರಲ್ಲ; ಅದಕ್ಕೆ ನಿಮ್ದು ಇಷ್ಟಾಪ್ ಮಾಡಿ. ಅಷ್ಟ್‌ಗೆ ಸಾಕು' ಎಂದರು. ಇದನ್ನು ಕೇಳಿ ಜನ ಹೋ ಎಂದು ನಗಾಡಿದರು, ಕೂಗಾಡಿದರು. ಮುಖಂಡರ ಹೊಟ್ಟೆ ಸೀಳಿಕೊಂಡು ನಗು ಎಂಬುದು ಹೊರಗೆ ಬರಲು ಪ್ರಯತ್ನಿಸುತ್ತಿತ್ತು. ಆದರೆ ಗಾಂಧೀಜಿ ಯವರ ಮುಖ ನೋಡಿ ತಡೆದುಕೊಂಡಿದ್ದರು. ಗಾಂಧೀಜಿ ಆ ಕಡೆ ಈ ಕಡೆ ನೋಡಿ, ಗೊಳ್ ಎಂದು ನಕ್ಕು ಬಿಟ್ಟರು. ಇಡೀ ಸಭೆಗೆ ಸಭೆಯೇ ನಗೆ ಎಂಬ ಕಡಲಿನಲ್ಲಿ ತೇಲಿ ಹೋಯಿತು. ಇದನ್ನು ಟಿ.ವಿ.ಯ ನೇರ ಪ್ರಸಾರದಲ್ಲಿ ನೋಡುತ್ತಿದ್ದವರು, ಅದರಲ್ಲೂ ಮಣ್ಣಿನ ಮಕ್ಕಳು, ರೈತರ

> **ಗಾಂಧೀಜಿ '1948 ರಲ್ಲಿ ನನ್ನ ಎದೆಗೆ ಗುಂಡು ತಾಗಿದ್ದು ನಿಜ. ಆಗ ನನ್ನ ದೇಹ ಮಾತ್ರ ಸತ್ತಿತ್ತು. ಆದರೆ ನನ್ನ ಆತ್ಮ ಸಾಯಲಿಲ್ಲ. ಆದರೆ 1992ರ ಡಿಸೆಂಬರ್ 6ನೇ ತಾರೀಖು ಬಾಬ್ರಿ ಮಸೀದಿಯನ್ನು ಕುಟ್ಟಿ ಪುಡಿ ಮಾಡಿದಾಗ, ನನ್ನ ಆತ್ಮವನ್ನೇ ಕುಟ್ಟಿ ಪುಡಿ ಮಾಡಿದಂತೆ ಆಯಿತು' ಎಂದರು. ಅವರ ಗಂಟಲು ಕಟ್ಟಿ ಬಂದಂತಾಗಿ, ಮುಖ ಬೆವರಿ ಕುರ್ಚಿಯಲ್ಲಿ ಕುಳಿತರು. ಜನ ಚಪ್ಪಾಳೆ ತಟ್ಟಿದರು. ಇದ್ದಕ್ಕಿದ್ದಂತೆ ವೇದಿಕೆಯ ಮೇಲೆ ಬಾಬಾ ಸಾಹೇಬ್ ಅಂಬೇಡ್ಕರ್ ಪ್ರತ್ಯಕ್ಷರಾದರು. ಮುಖಂಡರಿಗೆ ಮತ್ತು ಜನರಿಗೆ ತಮ್ಮ ಕಣ್ಣುಗಳನ್ನು ತಮಗೇ ನಂಬಲು ಆಗಲಿಲ್ಲ. 'ಇದೇನು ಕೆಡುಕಿನ ಸೂಚನೆಯೊ, ಒಳ್ಳೆಯದರ ಸೂಚನೆಯೊ!' ಎಂದು ಗಾಬರಿಯಾದರು.**

ಮಕ್ಕಳು, ಅವರಿವರ ಮೊಮ್ಮಕ್ಕಳು ಮುಂತಾದವರೆಲ್ಲ ನಗಾಡಿದ್ದೇ ನಗಾಡಿದ್ದು. ಟಿ.ವಿ.ಯವರು ಆ ದೃಶ್ಯವನ್ನು ರಿಪೀಟ್ ರಿಪೀಟ್ ಮಾಡಿದರು.

ಅಂಬೇಡ್ಕರ್ ಮುಂದುವರಿದು 'ಮೊನ್ನೆ ಸವಣೂರಿನಲ್ಲಿ ಮೈಮೇಲೆ ಮಲವನ್ನು ಸುರಿದುಕೊಂಡು ಹೋರಾಟ ಮಾಡಿದರಲ್ಲ; ಅಂತಹ ಪರಿಸ್ಥಿತಿಯನ್ನು ಕಾಂಗ್ರೆಸ್ ಆಡಳಿತ ನಿರಂತರವಾಗಿ ಕಾಪಾಡಿಕೊಂಡು ಬಂದಿದೆ. ನಾನು ಸ್ವಾತಂತ್ರ್ಯ ಪೂರ್ವದಲ್ಲೆ ಕಾಂಗ್ರೆಸ್ಸನ್ನು ಬೇಯುತ್ತಿರುವ ಮನೆ ಎಂದು ಕರೆದಿದ್ದೆ. ಅದನ್ನೇ ಈಗ ಸ್ವಲ್ಪ ಬದಲಾಯಿಸಿ ಹೇಳುವುದಾದರೆ, ಕಾಂಗ್ರೆಸ್ಸನ್ನೂ ಒಳಗೊಂಡಂತೆ ಎಲ್ಲಾ ಪಕ್ಷಗಳ ಆಡಳಿತವೂ ದಲಿತ, ದಮನಿತ ಹಾಗೂ ಶೋಷಿತರನ್ನು ಬೇಯಿಸುತ್ತಿರುವ ಮನೆ. ನಿಮಗೇನಾದರೂ ಆತ್ಮಸಾಕ್ಷಿ ಇದ್ದರೆ ಒಮ್ಮೆ ಸವಣೂರಿನಂತಹ ಲಕ್ಷಲಕ್ಷ ಕೇರಿಗಳನ್ನು ಕೊಳೆಗೇರಿಗಳನ್ನು ಪ್ರತ್ಯಕ್ಷವಾಗಿ ನೋಡಿ. ನಿಮ್ಮ ಅಧಿಕಾರದ ಅಮಲಿನ ಕಚ್ಚಾಟ ಕಿತ್ತಾಟಗಳ ನಡುವೆ ಲಕ್ಷಲಕ್ಷ ಜನ ಹಸಿವಿನಿಂದ ಸಾಯುತ್ತಿದ್ದಾರೆ. ನೀವು ಡೋಲು, ಡೊಳ್ಳು ಬಾರಿಸಿಕೊಂಡು, ಟೀಕೆ ಪ್ರತಿಟೀಕೆ ಮಾಡಿಕೊಂಡು ಟಿ.ವಿ.ಗಳಿಗೆ ಪೋಸು ಕೊಡುತ್ತಿದ್ದೀರಿ. ನಿಮ್ಮ ಸುಳ್ಳು ಕಪಟಗಳನ್ನು, ತಂತ್ರ ಕುತಂತ್ರಗಳನ್ನು ಇನ್ನು ಮುಂದೆ ಜನ ನಂಬುವುದಿಲ್ಲ. ಕ್ರೂರ ಕಾನೂನುಗಳಿಂದ, ಪೊಲೀಸು ಹಾಗೂ ಮಿಲಿಟರಿಗನ್ನುಗಳಿಂದ ಜನರನ್ನು ಹೆದರಿಸಿಟ್ಟುಕೊಳ್ಳುವ ಕಾಲ ಬಹಳ ದಿನ ನಡೆಯುವುದಿಲ್ಲ' ಎಂದರು. ಗಾಂಧೀಜಿಯವರನ್ನೂ ಒಳಗೊಂಡಂತೆ ಮುಖಂಡರಿಗೆ ಕಕ್ಕಾಬಿಕ್ಕಿಯಾಯಿತು.

ಒಂದು ಕ್ಷಣ ಸಭೆಗೆ ಸಭೆಯೇ ನಿಶ್ಯಬ್ದವಾಯಿತು. ನಂತರ ಜನರು.

'ಎಲ್ಲಾ ಜನದ್ರೋಹಿ ಪಕ್ಷಗಳಿಗೆ ಧಿಕ್ಕಾರ!
ಎಲ್ಲಾ ಜನದ್ರೋಹಿ ಆಡಳಿತಕ್ಕೆ ಧಿಕ್ಕಾರ!
ಎಲ್ಲಾ ಜನದ್ರೋಹಿ ಸರಕಾರಗಳಿಗೆ ಧಿಕ್ಕಾರ!'

ಎಂದು ಕೂಗತೊಡಗಿದರು. ಇನ್ನೂ ಏನೇನೊ ಮಾಡುವವರಿದ್ದರು. ವೇದಿಕೆಯ ಮೇಲಿದ್ದ ಮುಖಂಡರು ಕಾಣದಾದರು.

* * * * * * * *

ಪ್ರಬಂಧ ೨

'ಈ ವರ್ಷದ ಶಿವರಾತ್ರಿ ಬರುವವರೆಗೆ ನಾವು ಯಾವುದೆ ಮನುಷ್ಯರನ್ನು ಕಚ್ಚುವುದಿಲ್ಲ ಮತ್ತು ಅವರ ಹನಿ ರಕ್ತವನ್ನೂ ಕುಡಿಯುವುದಿಲ್ಲ' ಎಂದು 'ಉತ್ತರ ಕರ್ನಾಟಕದ ಸಾಮಾನ್ಯ ಸೊಳ್ಳೆಗಳ ಸಂಘ'ದ ಅಧ್ಯಕ್ಷ ಸೊಳ್ಳೆಯು ಹೇಳಿತು. ವಿಜಯನಗರ ವೈಭವದ ಹಂಪಿಯಲ್ಲಿ ಹಂಪಿ ಉತ್ಸವ ಕೊನೆಗೊಂಡ ಮಾರನೆ ದಿನ ಕಿಕ್ಕಿರಿದು ಸೇರಿದ್ದ ಮಾಧ್ಯಮದವರ ಎದುರು ಈ ವಿಷಯದ ಹತ್ತುಹಲವು ಸಂಗತಿಗಳನ್ನು ಎಳೆಯೆಳೆಯಾಗಿ ಬಿಡಿಸಿಟ್ಟಿತು.

'ಅನ್ಯಾಯ, ಅಸಮಾನತೆ, ಶೋಷಣೆ, ನಿರುದ್ಯೋಗ ಮುಂತಾದವುಗಳ ವಿರುದ್ಧ ಹೋರಾಡಲು ಮನುಷ್ಯರು ಸಂಘಗಳನ್ನು ಕಟ್ಟಿಕೊಂಡು, ತಮ್ಮ ತಮ್ಮ ಬೇಡಿಕೆಗಳನ್ನು ಸರಕಾರದ ಮುಂದೆ ಇಡುತ್ತ ಬಂದಿದ್ದಾರೆ. ಆಯಾ ಸರಕಾರಗಳು ಅದರಲ್ಲಿ ಕೆಲವನ್ನು ಈಡೇರಿಸಿವೆ. ಆದರೆ ಸೊಳ್ಳೆಗಳಾದ ನಮ್ಮ ಬವಣೆಯನ್ನು ಕೇಳುವವರು ಯಾರಿದ್ದಾರೆ? ಕೊನೇ ಪಕ್ಷ ಪ್ರಾಣಿ ದಯಾ ಸಂಘದವರೂ ನಮ್ಮನ್ನು ಗಮನಿಸದಿರುವುದು ವಿಷಾದದ ಸಂಗತಿ. ನಮಗೆ ಸರಿಯಾಗಿ ರಕ್ತ ಕುಡಿಯಲು ದಿನಕ್ಕೆ ಒಬ್ಬ ಮನುಷ್ಯರ ತೊಟ್ಟು ರಕ್ತವೂ ಸಿಗುತ್ತಿಲ್ಲ. ಹಿಂದಿನ ಕಾಲದಂತೆ ಈಗ ಎಲ್ಲೆಂದರಲ್ಲಿ ರಕ್ತ ಸಿಗುತ್ತಿಲ್ಲ. ಯಾಕೆಂದರೆ ತರಾವರಿಯಾದ ಸೊಳ್ಳೆ ನಾಶಕಗಳು, ಸೊಳ್ಳೆ ಬ್ಯಾಟುಗಳು ಮತ್ತು ಸೊಳ್ಳೆ ಪರದೆಗಳು ಬಂದಿವೆ. ಆಧುನಿಕವಾದ ಇವೆಲ್ಲವೂ ನಮಗೆ ಸಿಗುವ ಹನಿ ಆಹಾರವನ್ನೂ ಕಿತ್ತುಕೊಂಡಿವೆ. ಇನ್ನು ಇವುಗಳ ಬಳಕೆ ಇಲ್ಲದ ಕೆಲವು ಬಡಪಾಯಿಗಳು ಹಾದಿಬೀದಿಯಲ್ಲಿ ಮಲಗಿರುತ್ತಾರೆ. ಅವರ ಬಳಿಗೆ ಹೋಗಿ, ನಮ್ಮ ಸೂಜಿಯನ್ನು ಅವರಿಗೆ ಬಿಟ್ಟರೆ ಅವರಿಂದ ನಮಗೆ ರಕ್ತ ಬರುವ ಬದಲು ನಮ್ಮಿಂದಲೆ ಅವರಿಗೆ ರಕ್ತ ಹೋಗುವಂತಹ ಪರಿಸ್ಥಿತಿ ಇದೆ'. (ಇದನ್ನು ಕೇಳಿ ಮಾಧ್ಯಮದ ಕೆಲವರಿಗೆ ಅಯ್ಯೊ ಪಾಪ ಎನಿಸಿತು).

'ಈ ಹಿನ್ನೆಲೆಯಲ್ಲಿ ನಮ್ಮ ಸಂಘವು ಕಳೆದ ಐದಾರು ವರ್ಷಗಳಿಂದ 'ಸಾವಿರಾರು ಜನರು ಒಂದೇ ಕಡೆ ಸೇರುವಂತೆ ವ್ಯವಸ್ಥೆ ಮಾಡಿ' ಎಂಬ ಬೇಡಿಕೆಯನ್ನು ಸರಕಾರದ ಮುಂದೆ ಇಡುತ್ತಾ ಬಂದಿದೆ. ಕಳೆದ ವರ್ಷ ನಾವು ಬೆಂಗಳೂರಿನಲ್ಲಿ ಬೃಹತ್ ರಾಜ್ಯ ಮಟ್ಟದ ರ್‍ಯಾಲಿಯನ್ನೂ ನಡೆಸಿದ್ದೆವು. ಕೊನೇ ಘಳಿಗೆಯಲ್ಲಿ ನಮ್ಮ ಬೇಡಿಕೆಗೆ ಓಗೊಟ್ಟ ಸರಕಾರವು ಹಂಪಿ ಉತ್ಸವವನ್ನು 3 ದಿನಗಳ ಕಾಲ ಬೆಳಕು ಹರಿಯುವ ತನಕ ನಡೆಸಬೇಕು

...ಯ ತೀರ್ಮಾನವನ್ನು ತೆಗೆದುಕೊಂಡಿತು. ಪರಿಣಾಮವಾಗಿ 3 ದಿನಗಳ ಕಾಲ ರಾತ್ರಿ ಇಡೀ ಸಾವಿರಾರು ಜನರು ಹಂಪಿಯಲ್ಲಿ ಸೇರುವಂತಾಯಿತು.

ರಾತ್ರಿ ಇಡೀ ನಾವು ಅಲ್ಲಿ ಸೇರುವ ಜನರಿಂದ ನಮ್ಮ ಅಗತ್ಯಕ್ಕೆ ತಕ್ಕಂತೆ ಆಹಾರ ಪಡೆಯುತ್ತಿದ್ದೇವೆ. ಹಾಗಾಗಿ ಇದನ್ನು ವ್ಯವಸ್ಥೆ ಮಾಡಿದ ಘನತೆವೆತ್ತ ರಾಜ್ಯ ಸರಕಾರಕ್ಕೆ ನಮ್ಮ ಸಂಘದ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು' ಎಂದಿತು. ಕೆಲವು ಪತ್ರಕರ್ತರು ಇದು ಪತ್ರಿಕಾ ಗೋಷ್ಠಿ ಎಂಬುದನ್ನು ಮರೆತು ಚಪ್ಪಾಳೆ ತಟ್ಟಿದರು. ಅದಕ್ಕೆ ವೇದಿಕೆಯಲ್ಲಿದ್ದ ಸೊಳ್ಳೆಗಳ ಸಂಘದ ಪದಾಧಿಕಾರಿಗಳು ಒಳಗೊಳಗೇ ನಸುನಕ್ಕವು. ಉಳಿದ ಕೆಲವು ಮಾಧ್ಯಮದವರಿಗೆ ಇದು ತೀವ್ರ ಮುಜುಗರವನ್ನು ಉಂಟುಮಾಡಿತು.

'ಹಾಲಿ ಸರಕಾರವನ್ನು ಕೆಲವರು ಕೋಮುವಾದಿ ಸರಕಾರ ಎನ್ನುತ್ತಾರೆ. ಆದರೆ ನೀವು ಈ ಸರಕಾರವನ್ನು ಹೊಗಳುತಿದ್ದೀರಲ್ಲ. ಏನಿದರ ಗುಟ್ಟು?' ಎಂಬ ಪ್ರಶ್ನೆಗೆ ಉತ್ತರಿಸಿದ ಪ್ರಧಾನ ಕಾರ್ಯದರ್ಶಿ ಸೊಳ್ಳೆಯು 'ಈ ಸರಕಾರದ ಜನೋಪಯೋಗಿ ಕೆಲಸಗಳನ್ನು ಸಹಿಸಿಕೊಳ್ಳದ ಹೊಟ್ಟೆಕಿಚ್ಚಿನ ಜನ ಹಾಗೆ ಹೇಳುತ್ತಿದ್ದಾರೆ. ಅಂತವರ ಬಗ್ಗೆ ನಮಗೆ ಅನುಕಂಪವಿದೆ' ಎಂದಿತು. 'ನೀವು ಈ ವರ್ಷದ ಶಿವರಾತ್ರಿಯವರೆಗೆ ಯಾರ ರಕ್ತವನ್ನೂ ಕುಡಿಯುವುದಿಲ್ಲ' ಎಂದಿದ್ದೀರಿ. ಇದು ಯಾವ ಗ್ಯಾರಂಟಿ?' ಎಂಬ ಪ್ರಶ್ನೆಗೆ 'ಯಾವುದಕ್ಕೂ ಅಲ್ಲಿಯವರೆಗೆ ಕಾಯ್ದು ನೋಡಿ' ಎಂದಷ್ಟೆ ಹೇಳಿ ಒಳಗೊಳಗೆ ನಸುನಕ್ಕಿತು.

'ಹಾಗಾದರೆ ಶಿವರಾತ್ರಿಯ ನಂತರ ನಿಮ್ಮ ಆಹಾರಕ್ಕೆ ಏನು ಮಾಡುತ್ತೀರಿ?' ಎಂಬ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಕಾರ್ಯದರ್ಶಿ ಸೊಳ್ಳೆಯು 'ಅಲ್ಲೆ ಇರುವುದು ನಮ್ಮ ಮುಖ್ಯ ಗುಟ್ಟು' ಎಂದಿತು. ಒಂದು ಕ್ಷಣ ಇಡೀ ಪತ್ರಿಕಾ ಗೋಷ್ಠಿಯೇ ಅವಾಕ್ಕಾಯಿತು. ಮುಂದುವರಿದು ಮಾತನಾಡಿದ ಅದು 'ನೋಡಿ, ನಮ್ಮ ಅಂದರೆ ಸೊಳ್ಳೆಗಳ ನಾಶಕ್ಕೆ ಅನೇಕ ವಿದೇಶಿ ಕಂಪನಿಗಳು ತರಾವರಿ ನಾಶಕಗಳನ್ನು, ಕೆಮಿಕಲ್‌ಗಳನ್ನು ಉತ್ಪಾದನೆ ಮಾಡುತ್ತಿವೆ. ಅವು ಮಾರಾಟವಾಗದೆ ಉಳಿದಿರುವುದರಿಂದ ನಮ್ಮ ಸಂಖ್ಯೆ ತೀವ್ರ ಪ್ರಮಾಣದಲ್ಲಿ ಹೆಚ್ಚಾಗುವಂತಹ ಸೂಕ್ಷ್ಮ ಅಂಶಗಳನ್ನೂ ಅದರೊಳಗೇ ಸೇರಿಸುತ್ತಿವೆ. ನಮ್ಮ ನಾಶಕ್ಕೆಂದು ಬಳಸುವ ಅವುಗಳಲ್ಲಿ ನಮ್ಮನ್ನು ಸಾಯಿಸುವ ಅಂಶವಿಲ್ಲ. ಬದಲಿಗೆ ಸ್ವಲ್ಪ ದೂರ ಓಡಿಸುವ ಅಂಶವಿದೆ ಅಷ್ಟೆ. ಅವುಗಳನ್ನು ಕೊಂಡುಕೊಳ್ಳುವ ಜನರು ಒಂದು ಕಡೆ ಆ ಮಾರುಕಟ್ಟೆಗೆ ದುಡ್ಡು ಇಡುತ್ತಿದ್ದಾರೆ. ಮತ್ತೊಂದು ಕಡೆ ನಮ್ಮ ಪ್ರಮಾಣವನ್ನು ಜಾಸ್ತಿ ಮಾಡುತ್ತಿದ್ದಾರೆ. ಇದು ಪಕ್ಕಾ ಗೊತ್ತಿರುವ ನಾವು ಒಳಗೊಳಗೇ ಸಂತಸ ಪಡುತ್ತಿದ್ದೇವೆ.

ಮುಂದಿನ ಬಜೆಟ್ಟಿನಲ್ಲಿ ನಮ್ಮನ್ನು ಸಂರಕ್ಷಣೆ ಮಾಡುವ ವಿಶೇಷ ಪಾರ್ಕುಗಳನ್ನು ಘೋಷಿಸಲಾಗುತ್ತಿದೆ. ದೇಶದಲ್ಲಿ 750 ಕಡೆ ಮತ್ತು ಕರ್ನಾಟಕದಲ್ಲಿ 10 ಕಡೆ ಈಗಾಗಲೆ ಸೊಳ್ಳೆ ಪಾರ್ಕುಗಳ ನಿರ್ಮಾಣಕ್ಕೆ ನೀಲಿನಕಾಶೆ ತಯಾರಿಸಲಾಗಿದೆ. ಇದಕ್ಕೆ ವಿಶ್ವಬ್ಯಾಂಕ್, ಐಎಂಎಫ್ ಮತ್ತು ಏಷ್ಯನ್ ಅಭಿವೃದ್ಧಿ ಬ್ಯಾಂಕುಗಳಿಂದ ಸಾವಿರಾರು ಕೋಟಿ ಅನುದಾನ ಹಾಗೂ ಸಹಾಯ ಧನ ಹರಿದು ಬರುತ್ತಿದೆ. ಆಗ ನಾವು ಯಾವ ಮನುಷ್ಯರ ರಕ್ತವನ್ನೂ ಕುಡಿಯುವ ಅಗತ್ಯ ಬರುವುದಿಲ್ಲ' ಎಂದಿತು. ಇಂತಹ ಮಹತ್ವದ ಯೋಜನೆಯ ಸುಳಿವನ್ನು ಕೇಳಿ ಮಾಧ್ಯಮದವರೆಲ್ಲ ದಂಗಾಗಿ ಹೋದರು. ಮುಂದೆ ಏನು ಪ್ರಶ್ನೆ ಕೇಳ ಬೇಕೆಂದು ಹೊಳೆಯಲಿಲ್ಲ. 'ಸಾವಿರಾರು ಕೋಟಿ ದುಡ್ಡು!' ಎಂಬ ಅಂಶ ಮಾತ್ರ ಎಲ್ಲರ ತಲೆಯಲ್ಲಿ ಗಿರ್ರನೆ ತಿರುಗ ತೊಡಗಿತು.

ಆಗ ದಲಿತ ಹಿನ್ನೆಲೆಯ ಪರ್ತಕರ್ತರೊಬ್ಬರು 'ಆ ಸಾವಿರಾರು ಕೋಟಿ ಅನುದಾನದಲ್ಲಿ ದಲಿತರಿಗೆ 18 ಪರ್ಸೆಂಟ್ ಹಣವನ್ನು ಮೀಸಲಿಡಬೇಕು ಎಂಬುದರ ಬಗ್ಗೆ ನಿಮ್ಮ ನಿಲುವೇನು?' (ಸೊಳ್ಳೆಗಳ ಪಾರ್ಕಿಗೆ ದುಡ್ಡು ಬರುತ್ತಿರುವುದು ಎಂಬುದನ್ನು ಮರೆತು) ಎಂದು ಕೇಳಿದರು. ಅದಕ್ಕೆ ಅಧ್ಯಕ್ಷ ಸೊಳ್ಳೆಯು ಒಳಗೊಳಗೇ ನಕ್ಕು 'ಇದನ್ನು ಕೇಂದ್ರ ಸಮಿತಿಯಲ್ಲಿ ಚರ್ಚಿಸುತ್ತೇನೆ' ಎಂದಿತು. ಪ್ರಶ್ನೆ ಕೇಳಿದ ಪರ್ತಕರ್ತರು 'ಹೇಗಿದೆ ನನ್ನ ಪ್ರಶ್ನೆ' ಎಂಬಂತೆ ಎಲ್ಲರ ಮುಖ ನೋಡಿ ಕುಳಿತುಕೊಂಡರು. ನಂತರ ಟಿವಿ ವರದಿಗಾರರೊಬ್ಬರು 'ಸೊಳ್ಳೆ ಪಾರ್ಕುಗಳ ನಿರ್ಮಾಣಕ್ಕೆ ರೈತರ ಭೂಮಿಯನ್ನು ಬಲಾತ್ಕಾರವಾಗಿ ಕಿತ್ತುಕೊಳ್ಳಲಾಗುತ್ತದೆಯೆ?' ಎಂದು ಕೇಳಿದರು. ಅದಕ್ಕೆ ಗಂಭೀರವಾಗಿ ಉತ್ತರಿಸಿದ ಸೊಳ್ಳೆಗಳ ಸಂಘದ ಪದಾಧಿಕಾರಿ ಸೊಳ್ಳೆಯೊಂದು 'ಆಧುನಿಕ ಅಭಿವೃದ್ಧಿ ಎಂದರೆ ಹಲವು ಬಗೆಯ ಪಾರ್ಕುಗಳನ್ನು ನಿರ್ಮಾಣ ಮಾಡಲೇಬೇಕು. ಇದು ಅನಿವಾರ್ಯ.

ಇಂತಹ ಅಭಿವೃದ್ಧಿಗೆ ರೈತರ ಭೂಮಿಯನ್ನು ಕಿತ್ತುಕೊಳ್ಳುತ್ತಾರಾ ಎಂಬ ಪ್ರಶ್ನೆಯೆ ಅಸಂಬದ್ಧವಾದುದು. ಯಾವ ಭೂಮಿಯನ್ನೂ ರೈತರು ಸೃಷ್ಟಿ ಮಾಡಿಲ್ಲ. ಅದು ಪ್ರಕೃತಿಯ ಕೊಡುಗೆ. ಮನುಷ್ಯರ ಸುಖಕ್ಕೆ ಏನೆಲ್ಲ ಮಾಡಿದರೂ ನೀವೆಲ್ಲ ಸುಮ್ಮನಿರುತ್ತೀರಿ. ಆಫ್ಟರ್ ಆಲ್ ನಮ್ಮಂತಹ ಯಃಕಶ್ಚಿತ್ ಸೊಳ್ಳೆಗಳ ಪಾರ್ಕು ನಿರ್ಮಾಣ ಅಂದ ತಕ್ಷಣ ನಿಮಗೆಲ್ಲ ಎಲ್ಲಿಲ್ಲದ ಹೊಟ್ಟೆಕಿಚ್ಚು ಬಂದುಬಿಟ್ಟಿದೆ. ಹಾಗೇನಾದರೂ ಪಾರ್ಕು ನಿರ್ಮಾಣದ ಸಂಗರ್ಭದಲ್ಲಿ ರೈತರಾಗಲಿ, ಯಾವುದೇ ಸಂಘದವರಾಗಲಿ ಹೋರಾಟಕ್ಕೆ ಇಳಿದದ್ದೇ ಆದರೆ ಅಂತವರ ರಕ್ತವನ್ನು ಹೀರುವುದೆ ನಮ್ಮ ಮೊದಲ ಗುರಿ. ಇದು ಈ ಮಹತ್ವದ ಪತ್ರಿಕಾ ಗೋಷ್ಠಿಯ ಮೂಲಕ ನಾವು ಸಂಬಂಧಪಟ್ಟವರಿಗೆ ಕೊಡುತ್ತಿರುವ ಗಂಭೀರ ಎಚ್ಚರಿಕೆ!' ಎಂದಿತು.

ಈ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾದ ಮಾರನೆ ದಿನ 'ಸೊಳ್ಳೆ ಪಾರ್ಕು ವಿರೋಧಿ ಒಕ್ಕೂಟ' ಅಸ್ತಿತ್ವಕ್ಕೆ ಬರುವು ದೆಂದೂ, ಅದಕ್ಕೆ ಕೆಲವು ಮಠಾಧೀಶರು, ಭಾರೀ ಭೂಮಾಲೀಕರು, ಕೆಲವು ರಾಜಕಾರಣಿಗಳು ಇನ್ನೂ ಮುಂತಾದವರು ನಾಯಕತ್ವ ವಹಿಸಬೇಕೆಂದು ಅಲ್ಲಲ್ಲಿ ಚರ್ಚೆಗಳು, ತಯಾರಿಗಳು ನಡೆಯತೊಡಗಿದವು.

> 'ಹಾಲಿ ಸರಕಾರವನ್ನು ಕೆಲವರು ಕೋಮುವಾದಿ ಸರಕಾರ ಎನ್ನುತ್ತಾರೆ. ಆದರೆ ನೀವು ಈ ಸರಕಾರವನ್ನು ಹೊಗಳುತಿದ್ದೀರಲ್ಲ. ಏನಿದರ ಗುಟ್ಟು?' ಎಂಬ ಪ್ರಶ್ನೆಗೆ ಉತ್ತರಿಸಿದ ಪ್ರಧಾನ ಕಾರ್ಯದರ್ಶಿ ಸೊಳ್ಳೆಯು 'ಈ ಸರಕಾರದ ಜನೋಪಯೋಗಿ ಕೆಲಸಗಳನ್ನು ಸಹಿಸಿಕೊಳ್ಳದ ಹೊಟ್ಟೆಕಿಚ್ಚಿನ ಜನ ಹಾಗೆ ಹೇಳುತ್ತಿದ್ದಾರೆ. ಅಂತವರ ಬಗ್ಗೆ ನಮಗೆ ಅನುಕಂಪವಿದೆ' ಎಂದಿತು. 'ನೀವು ಈ ವರ್ಷದ ಶಿವರಾತ್ರಿಯವರೆಗೆ ಯಾರ ರಕ್ತವನ್ನೂ ಕುಡಿಯುವುದಿಲ್ಲ' ಎಂದಿದ್ದೀರಿ. ಇದು ಯಾವ ಗ್ಯಾರಂಟಿ?' ಎಂಬ ಪ್ರಶ್ನೆಗೆ 'ಯಾವುದಕ್ಕೂ ಅಲ್ಲಿಯವರೆಗೆ ಕಾಯ್ದು ನೋಡಿ' ಎಂದಷ್ಟೆ ಹೇಳಿ ಒಳಗೊಳಗೆ ನಸುನಕ್ಕಿತು. 'ಹಾಗಾದರೆ ಶಿವರಾತ್ರಿಯ ನಂತರ ನಿಮ್ಮ ಆಹಾರಕ್ಕೆ ಏನು ಮಾಡುತ್ತೀರಿ?' ಎಂಬ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಕಾರ್ಯದರ್ಶಿ ಸೊಳ್ಳೆಯು 'ಅಲ್ಲೆ ಇರುವುದು ನಮ್ಮ ಮುಖ್ಯ ಗುಟ್ಟು' ಎಂದಿತು.

* * * * * *

ಪ್ರಬಂಧ ೩

77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಅದ್ದೂರಿಯಾಗಿ ಮತ್ತು ಬಹು ಯಶಸ್ವಿಯಾಗಿ ಆಚರಿಸಿರುವುದು 6 ಕೋಟಿ ಕನ್ನಡಿಗರು ಹೆಮ್ಮೆಪಟ್ಟು ನೆನಪಿನಲ್ಲಿ ಇಟ್ಟುಕೊಳ್ಳುವಂತಹ ಸಂಗತಿ ಎಂಬುದು ಸರಿಯಷ್ಟೆ. ಇದರಲ್ಲಿ ಬೇರೆಬೇರೆ ಕಾರಣಗಳಿಗೆ ನೇರವಾಗಿ ಅಲ್ಲಿಗೇ ಹೋಗಿ ಭಾಗವಹಿಸಿ ದವರು ಅನೇಕರು. ಅಲ್ಲದೆ ಅನೇಕ ಬೇರೆಬೇರೆ ಕಾರಣಗಳಿಗೆ ಅಲ್ಲಿಗೆ ಹೋಗಲಾಗದೆ ಪೇಪರು ಹಾಗೂ ಟಿವಿಗಳ ಮೂಲಕ ಓದಿ, ನೋಡಿ, ಕೇಳಿ ಆನಂದಿಸಿದವರು ಅನೇಕರು. ಪರಿಸ್ಥಿತಿ ಹೀಗಿರುವಾಗ ಈ ವಿಷಯವನ್ನು ಕುರಿತು ರಾಜ್ಯ ಮಟ್ಟದಲ್ಲಿ ಪರೀಕ್ಷೆಯೊಂದನ್ನು ನಡೆಸಲಾಯಿತು. ಆ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನೂ ಮತ್ತು ಉತ್ತರ ಪತ್ರಿಕೆಯ ಕೆಲವು ಆಯ್ದ ಭಾಗಗಳನ್ನೂ (ಗಮನಿಸಿ: ಇದನ್ನು ಮಾಹಿತಿ ಹಕ್ಕು ಕಾಯ್ದೆಯ ಪ್ರಕಾರ ಪಡೆಯಲಾಗಿದೆ) ಕೆಲವು ಅಭ್ಯರ್ಥಿಗಳ ಒತ್ತಾಯದ ಮೇರೆಗೆ ಇಲ್ಲಿ ಕೊಡ

77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ:
ರಾಜ್ಯ ಮಟ್ಟದ ಬಹಿರಂಗ ಪರೀಕ್ಷೆ

ಲಾಗಿದೆ. ಇದನ್ನು ಸಾಹಿತ್ಯ ಕೋಶ, ಸುಭಾಶ್ ಗೈಡ್, ಎಂಸಿಸಿ ಡೈಜೆಸ್ಟ್ ಮುಂತಾದುವುಗಳಲ್ಲಿ ಸೇರಿಸುವ ವರು ಪತ್ರಿಕೆಯ ಸಂಪಾದಕರಿಗೆ ಅಥವಾ ಲೇಖಕರಿಗೆ ಸೂಕ್ತ ಗೌರವ ಸಂಭಾವನೆ ಕೊಟ್ಟು ಇದನ್ನು ಅಲ್ಲಿ ಸೇರಿಸಬೇಕೆಂದು 6ಕೋಟಿ ಕನ್ನಡಿಗರ ಪರವಾಗಿ ವಿನಂತಿಸಲಾಗಿದೆ.

ಪ್ರಶ್ನೆ ಪತ್ರಿಕೆ

ಅಂಕಗಳು 100. ಸಮಯ 3 ಗಂಟೆಗಳು ಅಥವಾ 180 ನಿಮಿಷಗಳು ಮಾತ್ರ.

(ಅಂದವಾದ ಮತ್ತು ತಪ್ಪಿಲ್ಲದ ಬರವಣಿಗೆಗೆ ವಿಶೇಷ ಅಂಕಗಳನ್ನು ಗುಪ್ತವಾಗಿ ಕಾಯ್ದಿರಿಸಲಾಗಿದೆ)

ಭಾಗ 1.

2 ಅಂಕದ ಪ್ರಶ್ನೆಗಳು. ಸರಿ ತಪ್ಪು ಗುರುತಿಸಿ. 2 x 10 = 20

1. ಕನ್ನಡ ಭುವನೇಶ್ವರಿ ಪ್ರತಿಮೆ ಸ್ಥಾಪನೆಗೆ 25 ಕೋಟಿ ತೆಗೆದಿಡುವುದಾಗಿ ಮುಖ್ಯಮಂತ್ರಿಯವರು ಹೇಳಲಿಲ್ಲ. ಸ/ತ
2. ಸಾಹಿತ್ಯ ಸಮ್ಮೇಳನದ ಮುಂದಿನ ಅಧ್ಯಕ್ಷರು ಡಾ. ಎಂ. ಚಿದಾನಂದಮೂರ್ತಿಯವರು. ಸ/ತ
3. ಸಾಹಿತ್ಯ ಅಭಿಮಾನಿಗಳಿಗೆ ಸರಿಯಾಗಿ ಊಟ ಸಿಗಲಿಲ್ಲ. ಸ/ತ
4. ಡಾ. ಚಿ.ಮೂ. ಅವರಿಗೆ ಗೌರವ ಡಾಕ್ಟರೇಟ್ ಪ್ರಕಟವಾಗದ ಬಗ್ಗೆ ಸಾಹಿತ್ಯ ಸಮ್ಮೇಳನದಲ್ಲಿ ಪ್ರಸ್ತಾಪವೇ ಆಗಲಿಲ್ಲ. ಸ/ತ
5. ಸಾಹಿತ್ಯ ಸಮ್ಮೇಳನ ನಡೆದ ಮೂರೂ ದಿವಸ ಬೆಂಗಳೂರಿನ ಎಲ್ಲಾ ಸಿನಿಮಾ ಟಾಕೀಸುಗಳಲ್ಲಿ ಅವುಗಳ ಮಾಲೀಕರೆ ಮುಂದೆ ನಿಂತು ಕನ್ನಡದ ಸಿನಿಮಾಗಳನ್ನು ಮಾತ್ರವೇ ಪ್ರದರ್ಶಿಸಿದರು. ಸ/ತ
6. ಪ್ರದೇಶ, ಜಾತಿ, ಒಳ ಜಾತಿ, ಪಂಗಡ, ಕೋಮು, ಲಿಂಗ ಇತ್ಯಾದಿ ಅಂಶಗಳನ್ನು ಆಧರಿಸಿಯೆ ಪ್ರಬಂಧಕಾರರು, ಕವಿಗಳು ಮುಂತಾದವರನ್ನು ಕರೆಯಲಾಗಿತ್ತು. ಸ/ತ
7. ಸಮ್ಮೇಳನದ ಅಧ್ಯಕ್ಷರು ರಾಜ್ಯದ ಭ್ರಷ್ಟಾಚಾರವನ್ನು ಕುರಿತು ಏನೂ ಪ್ರಸ್ತಾಪ ಮಾಡಲಿಲ್ಲ. ಸ/ತ
8. ಮೆರವಣಿಗೆಯಲ್ಲಿ ಸಿನಿಮಾ ನಟ ನಟಿಯರು ಭಾಗ ವಹಿಸಿದುದರಿಂದ ಕನ್ನಡದ ಅಭಿವೃದ್ಧಿ ಶೀಘ್ರಗತಿಯಲ್ಲಿ ಆಗಲಿದೆ. ಸ/ತ
9. ಬೆಂಗಳೂರಿನ ರೋಡುರೋಡುಗಳಲ್ಲಿ ಮೆರವಣಿಗೆ ನಡೆಸಿದರೂ ಯಾರೂ ಕೂಡ ತೊಂದರೆಯಾಯಿತೆಂದು ಆಕ್ಷೇಪ ಎತ್ತಲಿಲ್ಲ. ಸ/ತ
10. ಸಮ್ಮೇಳನದಲ್ಲಿ ಕೊಟ್ಟ ಸುಂದರವಾದ ಕಿಟ್‌ಅನ್ನು ನೋಡಿ ಮನೆಮಂದಿಯೆಲ್ಲ ಖುಷಿ ಪಟ್ಟರು. ಸ/ತ

ಭಾಗ 2.

20 ಅಂಕದ ಪ್ರಶ್ನೆಗಳು. 40 ಪದಗಳಿಗೆ ಮೀರದಂತೆ ವಿಮರ್ಶಾತ್ಮಕವಾಗಿ ಮಾತ್ರ ಉತ್ತರಿಸಿ. 15 X 5 = 75 (ಪ್ರತಿ 2 ಪದಕ್ಕೆ 1 ಅಂಕ ನೆನಪಿರಲಿ. ಹಾಗಾಗಿ ಬಹಳ ಎಚ್ಚರಿಕೆಯಿಂದ ಉತ್ತರಿಸಿ)

1. ಸಾಹಿತ್ಯ ಸಮ್ಮೇಳನದ ಯಶಸ್ಸು ಎಂದರೇನು? ವಿಮರ್ಶಾತ್ಮಕವಾಗಿ ಚರ್ಚಿಸಿ.
2. ಸಮ್ಮೇಳನದ ಅಧ್ಯಕ್ಷರ ಭಾಷಣದ ಕೆಲವು ಮುಖ್ಯ ವಿಚಾರಗಳು ನಂತರ ಚರ್ಚೆ ಆಗದಿರಲು ಕಾರಣಗಳೇನು?
3. ಡಾ. ಯು. ಆರ್. ಅನಂತಮೂರ್ತಿಯವರು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಮುಖ್ಯ ವಿಚಾರಗಳಲ್ಲಿ ಅತಿಮುಖ್ಯ ವಿಚಾರಗಳನ್ನು ಸಂಗ್ರಹಿಸಿ ಸಂಶೋಧನಾತ್ಮಕವಾಗಿ ಬರೆಯಿರಿ.
4. ಡಾ. ಎಂ. ಚಿದಾನಂದಮೂರ್ತಿಯವರಿಗೆ ಗೌರವ ಡಾಕ್ಟರೇಟ್ ಪ್ರಸ್ತಾವನೆಗೆ ರಾಜ್ಯಪಾಲರು ಸಹಿ ಹಾಕಿಲ್ಲ ಎಂಬ ವಿಷಯಕ್ಕೆ ಇಡೀ ಸಾಹಿತ್ಯ ಸಮ್ಮೇಳನವನ್ನು ಬಳಸಿಕೊಳ್ಳಲಾಯಿತಾ? ಇದನ್ನು ನೀವು ಒಪ್ಪುವಿರಾ? ಚರ್ಚಿಸಿ.
5. ಸಾಹಿತ್ಯ ಸಮ್ಮೇಳನದಲ್ಲಿ ಚರ್ಚೆ ಮಾಡಬಹುದಾಗಿದ್ದ ಜ್ವಲಂತ ವಿಷಯಗಳಿದ್ದವೆ? ಅವು ಯಾವುವು? ಅವನ್ನು ಸುಮ್ಮನೆ ಹೆಸರಿಸಿ, ಅಷ್ಟೆ ಸಾಕು.

ಉತ್ತರಗಳು.

ಭಾಗ 1: 1–ಸ, 2–ತ, 3–ತ, 4–ಸ, 5–ಸ, 6–ತ, 7–ಸ, 8–ಸ, 9–ಸ, 10–ಸ.

ಭಾಗ 2:

1. ಸಾಹಿತ್ಯ ಸಮ್ಮೇಳನದ ಯಶಸ್ಸು ಎಂದರೆ, ಸಮ್ಮೇಳನ ನಡೆಯುವ ಊರಿನಲ್ಲಿ ಕಣ್ಣು ಬಿಟ್ಟರೆ ಕಣ್ಣಿಗೆ ರಾಚುವ ಫ್ಲೆಕ್ಸ್ ಬ್ಯಾನರ್‌ಗಳನ್ನು ಕಟ್ಟುವುದು, ಅದ್ದೂರಿಯಾಗಿ ಮೆರವಣಿಗೆ ಮಾಡುವುದು, ತರಾವರಿ ಅಡಿಗೆ ಮಾಡಿಸುವುದು, ಎಲ್ಲಾ ಕಡೆಗೂ ನೆಲ ಹಾಸು ಹಾಸುವುದು, ತಡ ರಾತ್ರಿಯವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವುದು, ನಾಡಿನ ಜನತೆ ಎದುರಿಸುತ್ತಿರುವ ಮುಖ್ಯ ಸಮಸ್ಯೆಗಳನ್ನು ಬದಿಗಿಟ್ಟು, ಆಳುವ ವರ್ಗದ ಪರಿವಾರಕ್ಕೆ ಬೇಸರವಾಗದಂತಹ ವಿಷಯಗಳನ್ನು ವಿಚಾರ ಗೋಷ್ಠಿಗಳಲ್ಲಿ ಇಟ್ಟು ಆಳುವ ವರ್ಗವನ್ನು ಸಮಾಧಾನ ಪಡಿಸುವುದು.

2. ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಜಿ. ವೆಂಕಟಸುಬ್ಬಯ್ಯನವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕರ್ನಾಟಕ ರಾಜ್ಯದ ರಾಜಕಾರಣದ ಭ್ರಷ್ಟಾಚಾರವನ್ನು, ಸವಣೂರಿನ ಭಂಗಿ ಸಮುದಾಯದವರ ಪರಿಸ್ಥಿತಿಯನ್ನು, ರಾಜಕಾರಣಿಗಳ ನೈತಿಕ ಅಧಃಪತನವನ್ನು ಪ್ರಸ್ತಾಪ ಮಾಡಿ, ಕೊನೆಗೆ ಇದೇ ಪರಿಸ್ಥಿತಿ ಮುಂದುವರಿದರೆ ಕರ್ನಾಟಕ ಕೇಂದ್ರಾಡಳಿತ ಪ್ರದೇಶವಾಗುವುದು ದೂರವಿಲ್ಲ ಎಂಬ ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ. ಇವು ನೇರವಾಗಿ ಆಳುವ ವರ್ಗವನ್ನೆ ಕೇಂದ್ರೀಕರಿಸಿರುವುದರಿಂದ ಅದನ್ನು ಮುಚ್ಚಿಹಾಕುವ ಸಲುವಾಗಿ ಡಾ. ಚಿ.ಮೂ. ಅವರ ವಿಷಯವನ್ನು ಕನ್ನಡ ಅಭಿಮಾನದ ನೆಪದಲ್ಲಿ ಮುಂದಕ್ಕೆ ತಂದು ಎಲ್ಲರ ಗಮನವನ್ನು ಆ ಕಡೆಗೆ ಸೆಳೆಯಲಾಯಿತು.

3. ಡಾ. ಯು. ಆರ್. ಅನಂತಮೂರ್ತಿಯವರು ಕವಿ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಕನ್ನಡದ ಸಾರಸ್ವತ ಲೋಕ ಎಂದೆಂದೂ ಕೇಳರಿಯದ ಬಹಳ ಗಂಭೀರವಾದ ವಿಚಾರಗಳನ್ನು ಮಂಡಿಸಿದರು. ಆ ಕಾರಣಕ್ಕಾಗಿ ಅವರು ಬರೆದುಕೊಂಡು ಬಂದು ತಮ್ಮ ಪ್ರಬಂಧವನ್ನು ಓದಿದರು. ಅವರು ಹೇಳಿದ ಅತಿಮುಖ್ಯ ವಿಚಾರಗಳು ಇವು: 'ಡಾ. ಎಂ. ಚಿದಾನಂದಮೂರ್ತಿಯವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಕೊಡುವುದಕ್ಕೆ ಮಾನ್ಯ ರಾಜ್ಯಪಾಲರು ಸಹಿ ಹಾಕಿಲ್ಲ. ಇದು ತಪ್ಪು. ಇದರಿಂದ ನನಗೆ ದುಃಖವಾಗಿದೆ. ಇದನ್ನು ಹೇಳುವ ಸಲುವಾಗಿಯೇ ನಾನು ಇಲ್ಲಿಗೆ ಬಂದೆ'. (ಇದರಲ್ಲಿ ಕವಿ ಗೋಷ್ಠಿಗೆ ಸಂಬಂಧಿಸಿದುದು ಯಾವುದು, ಸಂಬಂಧಿಸದೆ ಇರುವುದು ಯಾವುದು ಎಂಬುದನ್ನು ಪ್ರಶ್ನೆ ಕೇಳಿರುವ ಮೂರ್ಖರೆ ತೀರ್ಮಾನಿಸುವುದು ಒಳ್ಳೆಯದು).

4. ಈ ಪ್ರಶ್ನೆಗೆ ಉತ್ತರಿಸುವುದು ಸ್ವಲ್ಪ ಕಷ್ಟ. ಕಳೆದ ವರ್ಷ ಗದಗ್‌ನಲ್ಲಿ ಸಮ್ಮೇಳನ ಜರುಗಿತ್ತು. ಅದೇ ಸಮಯದಲ್ಲಿ ಕನ್ನಡ ವಿಶ್ವವಿದ್ಯಾಲಯದ 80 ಎಕರೆ ಜಮೀನನ್ನು ಸರಕಾರ ಪರಭಾರೆ ಮಾಡಲು ಮುಂದಾಗಿತ್ತು. ಅದನ್ನು ವಿರೋಧಿಸಿ ಇಡೀ ನಾಡಿನ ಅನೇಕ ಪ್ರಗತಿಪರರು, ಸಾಹಿತಿಗಳು ಹೋರಾಟದಲ್ಲಿ ತೊಡಗಿದ್ದರು. ಆಗ ಸಮ್ಮೇಳನದ ಅಧ್ಯಕ್ಷರಾಗಿದ್ದ ಗೀತಾ ನಾಗಭೂಷಣ ಅವರು ಅದನ್ನು ತೀವ್ರವಾಗಿ ವಿರೋಧಿಸಿದ್ದರು. ಆದರೂ ಆ ವಿಷಯ ಆ ಸಮ್ಮೇಳನದ ನಿರ್ಣಯ ಆಗಲಿಲ್ಲ.

ಅವರು ಮಹಿಳೆ ಎಂಬ ಕಾರಣಕ್ಕೆ ಇರಬಹುದೆ? ಆದರೆ ಈ ಸಲ ಡಾ. ಚಿದಾನಂದಮೂರ್ತಿಯವರಿಗೆ ಗೌರವ ಡಾಕ್ಟರೇಟ್ ಪ್ರಸ್ತಾವನೆಗೆ ರಾಜ್ಯಪಾಲರು ಸಹಿ ಹಾಕಿಲ್ಲ ಎಂಬ ವಿಷಯಕ್ಕೆ ಇಡೀ ಸಾಹಿತ್ಯ ಸಮ್ಮೇಳನವನ್ನು ಬಳಸಿಕೊಳ್ಳಲಾಯಿತು. ನಿರ್ಣಯ ಮಾಡಲಾಯಿತು. ಅದು ಜಾರಿಗೂ ಬಂತು. ಸಾಹಿತ್ಯ ಸಮ್ಮೇಳನದ ಚರಿತ್ರೆಯಲ್ಲಿ ಒಬ್ಬ ಸಾಹಿತಿಯ ಬಗ್ಗೆ ನಿರ್ಣಯವಾದುದು ಇದೇ ಮೊದಲು. ರಾಜ್ಯಪಾಲರ ಕ್ರಮವನ್ನು ವಿರೋಧಿಸುವ ಮೂಲಕ ಕೋಮುವಾದದ ಸಮರ್ಥನೆಯನ್ನು ಒಳಗೊಳಗೇ ಮಾಡಲಾಯಿತು. ರಾಜ್ಯಪಾಲರು ಪ್ರಸ್ತಾವನೆಗೆ ಸಹಿ ಹಾಕದೆ ಇರುವುದು ಅದನ್ನು ಶಿಫಾರಸ್ಸು ಮಾಡಿದ್ದ ಬೆಂಗಳೂರು ವಿವಿ ಸಿಂಡಿಕೇಟಿಗೆ ಅವಮಾನ ಆಗಬೇಕೆ ಹೊರತು ಅದು ಇಡೀ ಕನ್ನಡಿಗರಿಗೆ ಅವಮಾನ ಆಗುವುದಿಲ್ಲ.

5. ಸಾಹಿತ್ಯ ಸಮ್ಮೇಳನದಲ್ಲಿ ಚರ್ಚೆ ಮಾಡಬಹುದಾಗಿದ್ದ ಜ್ವಲಂತ ವಿಷಯಗಳಿದ್ದವು. ಆದರೆ ಸಮ್ಮೇಳನ ಮುಗಿದ ಮೇಲೆ ಅವನ್ನು ಸುಮ್ಮನೆ ಹೆಸರಿಸಿದರೆ ಏನು ಪ್ರಯೋಜನ ಎಂಬುದು ತಿಳಿಯುತ್ತಿಲ್ಲ. ಆದರೂ ಉತ್ತರಿಸಬೇಕಾಗಿದೆ. ಆದಿವಾಸಿ ಬುಡಕಟ್ಟು ಮತ್ತು ಅಲೆಮಾರಿ ಜನರ ಪರಿಸ್ಥಿತಿ, ಬಹುರಾಷ್ಟ್ರೀಯ ಬಂಡವಾಳ ಮತ್ತು ಕನ್ನಡದ ಅಭಿವೃದ್ಧಿ, ನಿರುದ್ಯೋಗ, ಬಡತನ, ಬೆಲೆ ಏರಿಕೆ, ಜಾತಿ ಬಹಿಷ್ಕಾರ, ಕೋಮುವಾದ, ಖಾಸಗೀಕರಣ, ನರಳುತ್ತಿರುವ ಸರಕಾರಿ ಶಾಲೆಗಳು, ಬಂಡವಾಳ ಬೆಳೆಸಿಕೊಳ್ಳುತ್ತಿರುವ ಖಾಸಗಿ ಶಿಕ್ಷಣ, ಮಾರುಕಟ್ಟೆಯ ಸಂಸ್ಕೃತಿ ಮತ್ತು ಕನ್ನಡದ ದೇಸಿ ಸಂಸ್ಕೃತಿ, ತೀವ್ರವಾಗಿ ನಶಿಸುತ್ತಿರುವ ಕೃಷಿ ಮತ್ತು ರೈತರು, ಉನ್ನತ ಶಿಕ್ಷಣ ಮತ್ತು ಹೊಸ ತಲೆಮಾರು. ಇಂತಹ ಇನ್ನೂ ಹಲವಾರು ವಿಷಯಗಳಿವೆ. ಸಧ್ಯಕ್ಕೆ ಇಷ್ಟು ಸಾಕು.

(ಮಾನ್ಯ ಮೌಲ್ಯಮಾಪಕರಲ್ಲಿ ಮತ್ತು ಪರೀಕ್ಷೆ ನಡೆಸಿದವರಲ್ಲಿ ಒಂದು ಗಂಭೀರ ವಿನಮ್ರ ಕೋರಿಕೆ: ಪ್ರತಿಯೊಂದಕ್ಕೂ ಉತ್ತರ ಬರೆಯುವುದು ಬಹಳ ಇತ್ತು. ಆದರೆ ಅದಕ್ಕೆ ಪದಗಳ ಮಿತಿ ಹಾಕಿದ್ದೀರಿ. ಆ ಮೂಲಕ ಆಲೋಚನೆಗೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮಿತಿ ಹಾಕಿದ್ದೀರಿ. ಅಂತೂ ರಾಜ್ಯ ಮಟ್ಟದ ಪರೀಕ್ಷೆಯಲ್ಲಿ ಉತ್ತರ ಬರೆಯಲು ಅವಕಾಶ ಕೊಟ್ಟ ತಮಗೆ 6 ಕೋಟಿ ಕನ್ನಡಿಗರ ಪರವಾಗಿ ಕೋಟಿ ನಮನಗಳು. ಈ ಉತ್ತರಗಳು ತಪ್ಪಾಗಿರಬಹುದು. ಹಾಗಾಗಿ ದಯವಿಟ್ಟು ಇದನ್ನು ಹೊರಗಡೆ ಎಲ್ಲಿಯೂ ಪ್ರಕಟಿಸಬಾರದಾಗಿ ವಿದೇಯ ವಿನಂತಿ. ಜೈ ಹಿಂದ್! ಜೈ ಕರ್ನಾಟಕ!). □

ಹೊಲಗೇರಿ ಎಂಬ University

ಅಲ್ಲಿ, ಪ್ರಾಯೋಜಿತ ಶಾಲೆ ಕಾಲೇಜುಗಳಿಲ್ಲ
ಕೋಟ್ಯಾಂತರ ಬಂಡವಾಳದ ಪ್ರಯೋಗಶಾಲೆಗಳಿಲ್ಲ
ತರಗತಿಗಳು ಮೊದಲೇ ಇಲ್ಲ
ಶಾಸ್ತ್ರಗಳ ಗೊಂದಲವಿಲ್ಲ, ಸಿದ್ಧಾಂತದ ಹಂಗು ಇಲ್ಲ.
ಬೋಳು ತಲೆಯ ಹಿಪಕ್ರಟಿಕ್ ಪ್ರಾಧ್ಯಾಪಕರಿಲ್ಲ
ಆದರೂ, ಹಗಲು ರಾತ್ರಿಯೆನ್ನದೆ
ಬದುಕು ಅರಳುತ್ತದೆ ನಿರಂತರ ಬೆಳಗುವ ಹಣತೆಯ ಹಾಗೆ
ನನ್ನ ಕೇರಿಯ ಲೋಕಾನುಭವವೇ ಡೆಮಾಕ್ರಟಿಕ್
ಈ ನೆಲದ ವಿವೇಕದ ಹಾಗೆ



ಅಲ್ಲಿ, ಮುಖ ನೋಡಿ ಮನವರಿವ ನೆರಳ ನೋಡಿ
ಗುಣ ತಿಳಿವ ಮನೋವೈದ್ಯರಿದ್ದಾರೆ
ಗರಿಕೆಯಿಂದ ಆಲದವರೆಗೆ ಸ್ಪರ್ಶಮಾತ್ರದಲ್ಲಿ
ಗುರುತಚ್ಚುವ ಮಂದಣ್ಣರಿದ್ದಾರೆ
ಈರಿ ತೊಳ್ಳೆ ಬಿಕ್ಕೆಮ್ಯಾತೆ ಬೋಟಿ ಕೈಗಳ್ಳ
ಲೀಲಾಜಾಲವಾಗಿ ಬೇರ್ಪಡಿಸೊ ಸರ್ಜನ್ನರಿದ್ದಾರೆ.
ವಿಧಿವಿಧಾನಗಳಿಲ್ಲದ ಪರಿಣಿತ ಪಂಡಿತರು
ಜಗದ ಭಾರವ ಹೊತ್ತು ಹಸಿರುಟ್ಟ ಹೊಲವಾಗಿದ್ದಾರೆ.
ಕಣ್ಣು ತುಂಬ ಕನಸೊತ್ತ ಸ್ವಾಭಿಮಾನಿ ಸೂರ್ಯರಿದ್ದಾರೆ
ಸಾಗರದ ಶಾಂತತೆಯ ಹಾಗೆ.

ಅಲ್ಲಿ, ಎದೆಯೊಳಗೆ ಭಾವನದಿಯ ತುಂಬಿಕೊಂಡವರು
ಮನದೊಳಗೆ ಮನುಕುಲದ ಸಂಕಥನವ ಹೊತ್ತು ಬಂದವರು
ಈ ನೆಲವನ್ನು ಹೊಲ ಮಾಡಿ ಹಸಿರ ಹಬ್ಬಿಸಿದ ಕಲೆಗಾರರು
ಜಾತಿ ಅಸಮತೆಯ ಆದಿವ್ಯಾಧಿಯ ನೆಲದೊಳಗೆ
ಹಗಲ ಕ್ರೌರ್ಯವ ಮರೆತು
ಕನಸಲ್ಲೂ ಸಂಬಂಧ ಅನ್ನೋದು ದೊಡ್ಡದೆನ್ನುವ
ಮನುಕುಲ ಮಮತೆಯ ಮಾಲಿಗಳಿದ್ದಾರೆ
ನೆಲದ ಮರೆಯ ನಿಧಾನದಂತೆ ನನ್ನ ಕೇರಿಯ ಸಿರಿಯ ವೈಭವವೇ ಹಾಗೆ

ಅಲ್ಲಿ, ಹಸಿದವರಿಗೆ ಅಂಬಲಿಯನ್ನಿಕ್ಕಿ
ಬೆಂದವರಿಗೆ ನೆರಳಾಗಿ
ದಿಕ್ಕು ತಪ್ಪಿ ದೆಸೆಗಾಣದವರಿಗೆ ತೊಟ್ಟಿಲಾಗಿ
ಮಡಿಲ ತುಂಬ ಮಮತೆ ಬಸಿದು
ಚುಕ್ಕಿ ಚಂದ್ರಮರ ಕಥೆ ಪಾಡುತ್ತಾ
ನೋವ ಮರೆಸೋ ಊಟದಮ್ಮರಿದ್ದಾರೆ
ಪಾಪ ತೊಳೆವ ಗಂಗೆಯ ಹಾಗೆ

ಯಾವತ್ತೊ ಬರಬೇಕಿತ್ತು
ನನ್ನ ಕೇರಿಗೆ ಜ್ಞಾನಪೀಠ ಅದ್ಯಾವುದೋ ನೋಬೆಲ್ ಗೀಬಲ್
ಬರಲಿಲ್ಲ. ಇಲ್ಲ ಇಲ್ಲ ಕೊಡಲಿಲ್ಲ ಬಿಡಿ!
ಯಾವ ಪ್ರಶಸ್ತಿ ತೂಗೀತು ಸಮ
ನನ್ನ ಕೇರಿಯ ಧನ್ಯತೆಯ ಬಾಳಿಗೆ.
ಅದ್ಯಾವ ಪುರಸ್ಕಾರದ ಪದವಿ ಪದಕ
ನನ್ನ ಜನರ ಬದುಕ ಹದಕ್ಕೆ
ಬಂದರೂ ತಿಪ್ಪೆಗೆಸೆವ ಬರಿಕಾಲ ಸಂತರು
ನಿರುಮ್ಮಳವಾಗಿ ಬದುಕುತ್ತಾರೆ
ಈ ನೆಲದ ಪುಣ್ಯದ ಹಾಗೆ.

○ ಎಸ್. ಚಂದ್ರಕಿರಣ್ ಕುಳವಾಡಿ

ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯ ರೋಗವು ಹರಡದಂತೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ

* ಯಾವುದೇ ಜ್ವರ ಮಲೇರಿಯ ಇರಬಹುದು, ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ್ ಗುಳಿಗೆಗಳನ್ನು ತೆಗೆದುಕೊಳ್ಳಿ.
* ಮಲೇರಿಯ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರ ಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ.
* ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
* ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.
* ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
* ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
* ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
* ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
* ಸಂಜೆವೇಳೆ ಬೇವಿನ ಹೊಗೆ ಹಾಕುವುದು, ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿವೇಳೆ ಇತರ ಸೊಳ್ಳೆ ನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
* ಹರಿಯದೇ ನಿಂತ ನೀರು–ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ.

ಶೀಘ್ರ ಪತ್ತೆ – ತ್ವರಿತ ಚಿಕಿತ್ಸೆಯಿಂದ ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ.

ಕರ್ನಾಟಕ ವಾರ್ತೆ
Karnataka Information

ದೇಸಿ ಸಂಸ್ಕೃತಿ ಮತ್ತು ಅಂಬೇಡ್ಕರ್



> **ದೇಸಿ ಸಂಸ್ಕೃತಿ ಮತ್ತು ಅಂಬೇಡ್ಕರ್ ಅನ್ನುವ ವಿಷಯದ ಬಗ್ಗೆ ಆಲೋಚಿಸುವಾಗ, ದೇಸಿ ಸಂಸ್ಕೃತಿಯ ಬಗ್ಗೆ ಅಂಬೇಡ್ಕರ್ ಅವರಿಗಿದ್ದಂತಹ ನಿಲುವುಗಳೇನು ಎಂಬುದನ್ನು ಗ್ರಹಿಸಲು ಯತ್ನಿಸಿದೆ. ಅವರ ಆಯ್ದ ಬರಹಗಳಲ್ಲಿ, ಭಾಷಣಗಳಲ್ಲಿ ಎಲ್ಲಾದರೂ ಉಲ್ಲೇಖ ಸಿಗಬಹುದು ಅಂತ ಓದಿದೆ. ಅದರಿಂದ ಟಿಪ್ಪಣಿ ಮಾಡಿ ಏನಾದರೂ ಹೇಳೋಕೆ ಸಾಧ್ಯವಾಗಬಹುದು ಎಂದು ಗಮನಿಸಿದೆ. ಆ ರೀತಿಯಾಗಿರೋ ಉಲ್ಲೇಖ ಎಲ್ಲೂ ಸಿಗೋದಿಲ್ಲ. ಆ ರೀತಿಯ ದೊಡ್ಡ ಉಲ್ಲೇಖಸಿಗುವುದು ಅಪರೋಕ್ಷವಾಗಿ ಅವರ ನಿಲುವುಗಳಲ್ಲಿ. ನಾನು ಮಹರ್ ಜಾತಿಯಲ್ಲಿ ಹುಟ್ಟಿರುವುದಕ್ಕೆ ಬಹಳ ಹೆಮ್ಮೆಪಡ್ತೀನಿ ಅಂತ ಒಂದು ಕಡೆ ಅವರು ಹೇಳಿದ್ದಾರೆ.**

ದೇಸಿ ಸಂಸ್ಕೃತಿ ಮತ್ತು ಅಂಬೇಡ್ಕರ್ ಅನ್ನುವ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ಕೊಡಬೇಕು ಎನ್ನುವುದು ಸ್ನೇಹಿತರ ಒತ್ತಾಯ. ಇದೊಂದು ಹೊಸ ವಿಷಯ ಅಂತ ನನಗೆ ಅನ್ನಿಸುತ್ತಿದೆ ಅಥವಾ ಈವರೆಗೆ ನಾವು ಈ ವಿಷಯವನ್ನು ಕುರಿತು ಹೆಚ್ಚು ಚಿಂತನೆ ಮಾಡಿಲ್ಲದ, ಹೆಚ್ಚು ಗ್ರಹಿಸಲು ಪ್ರಯತ್ನಪಟ್ಟಿಲ್ಲದ ಒಂದು ವಿಷಯ ಅಂತ ಹೇಳಬಹುದೇನೋ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೆಸರು ಬಂದ ತಕ್ಷಣ ನಮಗೆ ಮೊದಲು ನೆನಪಿಗೆ ಬರುವುದು ಅವರ ಸಾಮಾಜಿಕ ನ್ಯಾಯದ ಸಿದ್ಧಾಂತ. ಸಂವಿಧಾನ ಕರ್ತೃವಾಗಿ, ದಲಿತರ ಹಕ್ಕುಗಳ ವಿಮೋಚನಾ ಹೋರಾಟಗಾರರಾಗಿ, ಅವರು ದೊಡ್ಡ ಹೆಸರು ಸಂಪಾದಿಸಿದ್ದು ಸಮಾಜಿಕ ನ್ಯಾಯದ ಸಿದ್ಧಾಂತದಿಂದ. ಈವತ್ತು ಭಾರತಕ್ಕೆ ಮಾತ್ರ ಅಲ್ಲದೆ ಹಲವಾರು ಹಿಂದುಳಿದ ದೇಶಗಳಿಗೆ ಮತ್ತು ಮೇಲು ಕೀಳು ಎಂಬ ಸಾಮಾಜಿಕ ಅನಿಷ್ಟವನ್ನು ಹೊಂದಿರುವಂತಹ ದೇಶಗಳಲ್ಲಿ ಬಹಳ ಪರಿಣಾಮಕಾರಿಯಾದ ಸಿದ್ಧಾಂತವಾಗಿ ಅದು ಕೆಲಸ ಮಾಡುತ್ತಿದೆ. ಇದು ಮೊದಲನೇ ಅಂಶ.

ಎರಡನೇ ಅಂಶ ಅಂದರೆ, ಸಾಮಾನ್ಯವಾಗಿ ನಾವು ಅಂಬೇಡ್ಕರ್ ರವರನ್ನು ಜ್ಞಾಪಿಸಿಕೊಂಡರೆ ದೇಸಿ ಸಂಸ್ಕೃತಿಯ ಬಗ್ಗೆ ಅವರು ಮಾಡಿದ ಟೀಕೆಗಳು ನೆನಪಿಗೆ ಬರುತ್ತವೆ. ಅವರು ಆಧುನಿಕತೆಯ ಪ್ರತಿಪಾದಕರು ಎನ್ನುವುದು ನಮ್ಮ ಗ್ರಹಿಕೆ. ಇಂಗ್ಲಿಷ್ ಭಾಷೆಯ ಕಲಿಕೆಗೆ ಹಾಗೂ ಆಗಿನ ಪ್ರಜಾಪ್ರಭುತ್ವ ದೇಶಗಳ ವೈಜ್ಞಾನಿಕ ಮತ್ತು ವೈಚಾರಿಕ ವಿಚಾರ ಸರಣಿಗೆ ಅವರು ಕೊಟ್ಟಂತಹ ಮಹತ್ವ ಈ ಎಲ್ಲ ಅಂಶಗಳ ಆಧಾರದಿಂದ ಅವರನ್ನು ನಾವು ಆಧುನಿಕ ವಿಚಾರವಾದಿಗಳ ಲೆಕ್ಕದಲ್ಲಿ ಪರಿಗಣಿಸುವುದು ಒಂದು ಪರಿಕಲ್ಪನೆಯಾಗಿ ಬೆಳೆದುಬಂದಿದೆ.

ಆದರೆ ಈ ದೇಸಿ ಸಂಸ್ಕೃತಿ ಮತ್ತು ಅಂಬೇಡ್ಕರ್ ಅನ್ನುವ ವಿಷಯದ ಬಗ್ಗೆ ಆಲೋಚಿಸುವಾಗ, ದೇಸಿ ಸಂಸ್ಕೃತಿಯ ಬಗ್ಗೆ ಅಂಬೇಡ್ಕರ್ ಅವರಿಗಿದ್ದಂತಹ ನಿಲುವುಗಳೇನು ಎಂಬುದನ್ನು ಗ್ರಹಿಸಲು ಯತ್ನಿಸಿದೆ. ಅವರ ಆಯ್ದ ಬರಹಗಳಲ್ಲಿ, ಭಾಷಣಗಳಲ್ಲಿ ಎಲ್ಲಾದರೂ ಉಲ್ಲೇಖ ಸಿಗಬಹುದು ಅಂತ ಓದಿದೆ. ಅದರಿಂದ ಟಿಪ್ಪಣಿ ಮಾಡಿ ಏನಾದರೂ ಹೇಳೋಕೆ ಸಾಧ್ಯವಾಗಬಹುದು ಎಂದು ಗಮನಿಸಿದೆ. ಆ ರೀತಿಯಾಗಿರೋ ಉಲ್ಲೇಖ ಎಲ್ಲೂ ಸಿಗೋದಿಲ್ಲ. ಆ ರೀತಿಯ ದೊಡ್ಡ ಉಲ್ಲೇಖ ಸಿಗುವುದು ಅಪರೋಕ್ಷವಾಗಿ ಅವರ ನಿಲುವುಗಳಲ್ಲಿ. ನಾನು ಮಹರ್ ಜಾತಿಯಲ್ಲಿ ಹುಟ್ಟಿರುವುದಕ್ಕೆ ಬಹಳ ಹೆಮ್ಮೆಪಡ್ತೀನಿ ಅಂತ ಒಂದು ಕಡೆ ಅವರು ಹೇಳಿದ್ದಾರೆ. ಅವರು ಬೌದ್ಧ ಧರ್ಮಾವಲಂಬಿ ಆದ ಮೇಲೂ ಕೂಡ ಅವರ ಜಾತಿ ಪ್ರಶ್ನೆ ಬಂದಾಗ, "ನಾನು ಮಹರ್ ಆಗಿ ಹುಟ್ಟಿರುವುದಕ್ಕೆ ಹೆಮ್ಮೆಪಡ್ತೀನಿ" ಅಂತ ಹೇಳಿದ್ದಾರೆ. ಆ ರೀತಿಯಾದ ಒಂದು ಹೇಳಿಕೆ ಬಿಟ್ಟರೆ ದೇಸಿ ಸಂಸ್ಕೃತಿ ಪರವಾಗಿ ಅವರು ಮಾತನಾಡಿರುವುದು ಕಡಿಮೆ.

ಅಷ್ಟು ಮಾತ್ರವಲ್ಲದೆ ಆಗಿನ ರಾಜಕಾರಣದ ವಿನ್ಯಾಸದಲ್ಲಿ ಅವರು ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ಮೂಲಭೂತವಾದ ವಿರೋಧವನ್ನು ವ್ಯಕ್ತಪಡಿಸುತ್ತಿದ್ದರು. ಭಾಷಾವಾರು ಪ್ರಾಂತ್ಯಗಳ ಬಗ್ಗೆ ಮತ್ತು ಸ್ಥಳೀಯ ಸಂಸ್ಕೃತಿಗಳ ಬಗ್ಗೆ ಅವರದೇ ಆದ ಖಚಿತ ವಿಮರ್ಶಾತ್ಮಕ ನಿಲುವಿತ್ತು. ಅದನ್ನು ನಾವು ಈ ರೀತಿಯಾಗಿ ಗ್ರಹಿಸಬಹುದು ಅಂತ ನಾನು ಅಂದ್ಕೊಂಡಿದೀನಿ. ಅವತ್ತು ಆಳ್ವಿಕೆ ಮಾಡುತ್ತಿದ್ದ ಬ್ರಿಟಿಷರು ಮತ್ತು ಬಿಳಿಯರು ಅವರ ಆಡಳಿತವನ್ನು ಪರದೇಶಿ ಸಂಸ್ಕೃತಿ ಅಂತ ಒಂದು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಭಾವಿಸಿದರೆ, ಅದಕ್ಕೆ ವಿರುದ್ಧವಾಗಿ ದೇಸಿ ಅಂತ ಬಿಂಬಿತವಾಗುತ್ತಿದ್ದುದು ಭಾರತದ ವೈದಿಕಶಾಹಿ ಸಂಸ್ಕೃತಿ. ಪರಕೀಯರು ನಮ್ಮನ್ನು ಆಳ್ವಿಕೆ ಮಾಡುತ್ತಿದ್ದಾರೆ. ಅನ್ಯ ಸಂಸ್ಕೃತಿಯವರು ನಮ್ಮನ್ನು ಆಳ್ವಿಕೆ ಮಾಡುತ್ತಿದ್ದಾರೆ, ಅನ್ಯರು ನಮ್ಮನ್ನು ಆಕ್ರಮಣ ಮಾಡಿದ್ದಾರೆ ಎಂಬ ಗ್ರಹಿಕೆಯ ಹಿನ್ನೆಲೆಯಲ್ಲಿ ನಾವು ನಮ್ಮತನವನ್ನು ಕಾಪಾಡಿಕೊಳ್ಳಬೇಕು ಅಂತ ಯಾವ ಭಾರತೀಯ ತ್ವವನ್ನು ಮುಂದಿಡುತ್ತಿದ್ದರೋ, ಆ ಭಾರತೀಯತ್ವದ ವಕ್ತಾರರಾಗಿ ಇದ್ದವರೆಲ್ಲ ವೈದಿಕಶಾಹಿ ಪರಂಪರೆಯವರು.

ಹಾಗಾಗಿ ಆವತ್ತಿನ ಸಂದರ್ಭದಲ್ಲಿ ದೇಸಿ ಸಂಸ್ಕೃತಿ ಎಂಬ ಪರಿಕಲ್ಪನೆ ಏನಿತ್ತೋ ಅದಕ್ಕವರು ತದ್ವಿರುದ್ಧ ನಿಲುವುಗಳನ್ನು ತಳೆದಿರುವುದು ಸಹಜವಾಗಿದೆ. ಅದನ್ನು ಖಂಡಿಸುವುದು, ಅದನ್ನು ವಿಮರ್ಶಿಸುವುದು, ಅದರ ತಳಬುಡಗಳನ್ನು ಶೋಧಿಸುವುದರಲ್ಲಿಯೇ ಅವರ 20–30 ವರ್ಷ ಆಯುಷ್ಯ ಕಳೆದುಹೋಗಿತ್ತು. ಶೂದ್ರರು ಅಂದ್ರೆ ಯಾರು? ವೇದಗಳು ಯಾಕೆ ಅಪೌರುಷೇಯ? ಹಿಂದೂ ಧರ್ಮದ ಒಗಟುಗಳು; ರಾಮ, ಕೃಷ್ಣ ಇತ್ಯಾದಿ ದೇವರುಗಳ ನಿಜವಾದ ಕತೆ ಏನು? ಈ ರೀತಿಯಾದ ವಿಮರ್ಶೆಗಳನ್ನು ಮಾಡುವುದರಲ್ಲಿಯೇ ಅಂಬೇಡ್ಕರ್ ಬಹಳ ಆಳವಾಗಿ ತೊಡಗಿಕೊಂಡಿದ್ದರು. ಅದೇ ಸಂದರ್ಭದಲ್ಲಿ ಯಾವುದನ್ನು ಇಲ್ಲಿಯ ಜಾತಿವಾದಿ ದೇಸಿ ಸಂಸ್ಕೃತಿ ಪರಕೀಯವಾದದ್ದು ಅಂತ ಕರೆಯುತ್ತಿತ್ತೋ ಆ ಭಾಷೆಯ ಮೂಲಕ ಜ್ಞಾನವನ್ನು ಸಂಗ್ರಹಿಸಿ, ಹೊಸ ಸಾಂಸ್ಕೃತಿಕ ಚೌಕಟ್ಟುಗಳನ್ನು ರೂಪಿಸಬೇಕು ಅಂತ ಅವರು ಪ್ರತಿಪಾದಿಸಿದ್ದರು.

ಅದು ಯಾಕೆ ಅನ್ನುವುದನ್ನು ನಂತರ ವಿವರಿಸುತ್ತೀನಿ. ಈ ಸನ್ನಿವೇಶದಲ್ಲಿ ಒಂದು ಹೋಲಿಕೆ ಮಾತ್ರ ಹೊಳೆಯುತ್ತಿದೆ. ಇದೇ ಬಗೆಯ ವಿದ್ವತ್ ನಿಲುವುಗಳನ್ನು ಕುವೆಂಪು ಕೂಡ ವ್ಯಕ್ತಪಡಿಸಿದ್ದರು. ಇಂಗ್ಲಿಷ್ ಭಾಷೆ ಬಗೆಗೆ ಮತ್ತು ಭಾರತೀಯ ಸಂಸ್ಕೃತಿ ಎಂದು ಬಿಂಬಿಸಲ್ಪಡುತ್ತಿದ್ದ ವೈದಿಕಶಾಹಿ ಸಂಸ್ಕೃತಿಯ ಬಗ್ಗೆ ಅವರದು ಇದೇ ರೀತಿಯ ನಿಲುವು. ಭಾರತೀಯ ಸಂಸ್ಕೃತಿ ಅಂತ ಬಿಂಬಿತವಾಗುತ್ತಿದ್ದುದನ್ನು ವಿರೋಧಿಸುವಲ್ಲಿ ಮತ್ತು ವಿಮರ್ಶಿಸುವಲ್ಲಿ ಮತ್ತು ಅದಕ್ಕೆ ಬದಲಿಯಾಗಿ ಇಂಗ್ಲಿಷ್ ಶಿಕ್ಷಣವನ್ನು ಪ್ರತಿಪಾದಿಸುವುದು, ಅದರ ಕಲಿಕೆಯಿಂದ ಶೂದ್ರ ಮತ್ತು ದಲಿತ ವರ್ಗಗಳ ವಿಮೋಚನೆಯಾಗಬಲ್ಲದು ಎಂಬ ಚಿಂತನೆಯಲ್ಲಿ ಕುವೆಂಪು ಕೂಡ ನಿರತರಾಗಿದ್ದರು. ಆದರೆ ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ ಅವರು ಚಿತ್ರಿಸಿದ್ದು ಸಂಪೂರ್ಣವಾಗಿ ಮಲೆನಾಡಿನ ದೇಸಿ ಸಂಸ್ಕೃತಿ ಸತ್ವವನ್ನು. ಈ ವಿಧಾನದಲ್ಲಿ ನೋಡಿದಾಗ ಅಂಬೇಡ್ಕರ್‌ರವರು ವಾಸ್ತವವಾಗಿ ಕರ್ನಾಟಕವೂ ಸೇರಿದಂತೆ ಸಮಗ್ರ ಭಾರತದ ದೇಸೀ ಸಂಸ್ಕೃತಿಯ ನಿರ್ಮಾಣಕಾರರಲ್ಲಿ ಆದ್ಯರು ಎಂದು ಪ್ರತಿಪಾದಿಸಲು ಸಾಧ್ಯವಾಗುತ್ತದೆ ಎಂದು ನನಗೆ ಹೊಳೆಯಿತು.

ಸಂಸ್ಕೃತಿಯ ಬಗ್ಗೆ ಮಾತಾಡುವುದು ಬೇರೆ. ಸಂಸ್ಕೃತಿ ನಿರ್ಮಾಣಕ್ಕೆ ಅಗತ್ಯವಾಗಿರುವ ತಳಹದಿಯನ್ನು ರೂಪಿಸುವುದು ಬೇರೆ. ಅದಕ್ಕೆ ನಾನು ಅಂಬೇಡ್ಕರ್ ಅವರ ವಿಧಾನವನ್ನು 'ನಿರಾಕರಣೆಯ ನಿರಾಕರಣೆ' ಎಂಬ ತಾತ್ವಿಕತೆಯ ಚೌಕಟ್ಟಿ

ನಲ್ಲಿಟ್ಟು ನೋಡಲು ಸಾಧ್ಯವಿದೆ ಎಂದು ಭಾವಿಸುತ್ತಿದ್ದೇನೆ. ದೇಸಿ ಸಂಸ್ಕೃತಿ ಮತ್ತು ಅಂಬೇಡ್ಕರ್ ಅವರ ಬಗ್ಗೆ ಮಾತನಾಡುವಾಗ ಇದು ಮುಖ್ಯವಾಗಿರುವ ಗ್ರಹಿಕೆಗಳನ್ನು ಒದಗಿಸಲು ಸಾಧ್ಯವಿರುವ ಪ್ರಮೇಯವಾಗಿ ನನಗೆ ಕಂಡು ಬರುತ್ತಿದೆ. ಅಂಬೇಡ್ಕರ್‌ರವರು ಭಾರತದಲ್ಲಿ ದೇಸೀ ಸಂಸ್ಕೃತಿಯ ಪ್ರತಿಪಾದನೆಗೆ ಕೊಟ್ಟ ಬಹು ದೊಡ್ಡ ಕಾಣಿಕೆಯೆಂದರೆ ಈ ನಿರಾಕರ ಣೆಯ ನಿರಾಕರಣೆ. ಈ ದೇಶದ ಮೂಲ ನಿವಾಸಿಗಳು, ಈ ದೇಶದ ದಲಿತರು ಮತ್ತು ಜನಸಾಮಾನ್ಯರ ಸಂಸ್ಕೃತಿಯನ್ನು ನಿರಾಕರಿಸಿ, ಯಾವುದನ್ನು ಭಾರತೀಯ ಸಂಸ್ಕೃತಿ ಅಂತ ಶಿಷ್ಟ ವರ್ಗಗಳು ಕರೆದಿದ್ದರೋ ಆ ನಿರಾಕರಣೆಯನ್ನು ನಿರಾಕರಿಸುವುದು ಅವರ ಮೊದಲ ಹೋರಾಟವಾಗಿತ್ತು. ಆ ಸಾಂಸ್ಕೃತಿಕ ಚಿಪ್ಪನ್ನು ಒಡೆಯುವಂತ ಬಹಳ ದೊಡ್ಡ ಕೆಲಸ ಇದರಿಂದ ಸಾಧ್ಯವಾಯಿತು.

ಅದನ್ನು ಕುವೆಂಪು ಮತ್ತೊಂದು ರೀತಿಯಲ್ಲಿ ಹೇಳಿದ್ದಾರೆ. ನಮ್ಮ ತಲೆಗೆ ನಾವು ಗುಂಡಿಕ್ಕಿಕೊಳ್ಳದ ಹೊರತು, ಪುರೋಹಿತಶಾಹಿಯನ್ನು ತಲೆಯಿಂದ ಕಿತ್ತೊಗೆಯದ ಹೊರತು ನಮಗೆ ಬಿಡುಗಡೆ ಇಲ್ಲ. ಅದೇ ಚಿಂತನೆ ಬಹುಶಃ ಆಗಿನ ಕಾಲದ ಬಹುಪಾಲು ಹಿಂದೂ ಧರ್ಮ ಮತ್ತು ವೈದಿಕಶಾಹಿಯ ಟೀಕಾಕಾರರಲ್ಲಿತ್ತು. ಪೆರಿಯಾರ್, ನಾರಾಯಣಗುರು, ಜ್ಯೋತಿ ಬಾ ಫುಲೆ ಅವರಿಗೆಲ್ಲ ಈ ನಿರಾಕರಣೆಯನ್ನು ನಿರಾಕರಿಸುವುದೊಂದು ದೊಡ್ಡ ಸವಾಲಾಗಿತ್ತು. ಈ ಹಾದಿಯಲ್ಲಿ ಅಂಬೇಡ್ಕರ್ ಬಹಳ ಮಹತ್ತರವಾದ ಕೆಲಸ ಮಾಡಿದರು ಮತ್ತು ನಿರಾಕರಣೆಯನ್ನು ಉಚ್ಚಾಟಿಸಲು ಅಗತ್ಯವಾದ ಸಾಮಾಜಿಕ ತಳಹದಿ ನಿರ್ಮಾಣವನ್ನು ಉದ್ಘಾಟಿಸಿದರು.

ದೇಸಿ ಸಂಸ್ಕೃತಿ ಅಧ್ಯಯನ ಅಂತ ಕರೆಯುವುದರ ಅಧಿಕೃತ ಛಾಯೆಗಳನ್ನು ಕರ್ನಾಟಕದಲ್ಲಿ ನಾವು ಕಾಣುವುದು 80ರ ದಶಕದಲ್ಲಿ. ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾಗಳಲ್ಲಿ ಇದಕ್ಕೂ 10-15 ವರ್ಷ ಹಿಂದೆಯೇ ಅದು ಪ್ರಾರಂಭವಾಗಿತ್ತು. ದೇಸಿತನದೊಳಗೆ ಒಂದು ಸಾಂಸ್ಕೃತಿಕ ಮಹತ್ವ ಇದೆ ಮತ್ತು ಬಹಳ ದೊಡ್ಡ ಸತ್ವ ಇದೆ. ಅದು ಯಾವುದೇ ಸಮಾಜದ ಮೂಲ ಸಂಸ್ಕೃತಿಯ ನಿರ್ಮಾಪಕತ್ವ ವಹಿಸುವಷ್ಟು ಚೈತನ್ಯ ಅದರೊಳಗಿದೆ ಎಂಬ ಪ್ರತಿಪಾದನೆ ಅಲ್ಲಿ ಶುರುವಾಗಿದ್ದು 70ರ ದಶಕದಲ್ಲಿ. ಅದು ಕರ್ನಾಟಕದಲ್ಲಿ ತೆಳುವಾಗಿ ಪ್ರಾರಂಭವಾಗಿದ್ದು 80ರ ದಶಕದ ಕೊನೆಕೊನೆಗೆ. ಆದರೆ ಅಂಬೇಡ್ಕರ್ ಮತ್ತು ಅವರ ಸಮಕಾಲೀನ ಹಿಂದೂ ಧರ್ಮದ ವಿಮರ್ಶಕರು ಆ ಬಗೆಯ ಅಧ್ಯಯನಗಳ ಉದ್ಘಾಟಕರಾಗಿದ್ದರು ಎಂಬುದನ್ನು ನಾವೀಗ ಗುರುತಿಸಬೇಕಾಗಿದೆ. ನಿರಾಕರಣೆಯನ್ನು ನಿರಾಕರಣೆ ಮಾಡುವುದೆಂಬ ಸವಾಲು ಕೈಗೊಳ್ಳದೆ ದೇಸಿ ಸಂಸ್ಕೃತಿಯ ಅಧ್ಯಯನಕ್ಕೆ ಬೇಕಾದ ಮನೋಸ್ಥೈರ್ಯದ ನಿರ್ಮಾಣ ಮಾಡಲು ಸಾಧ್ಯವಿಲ್ಲ ಎಂಬುದನ್ನು ನೆನೆದುಕೊಂಡರೆ ಈ ಮಾತಿನ ಪ್ರಸ್ತುತತೆ ಅರ್ಥವಾಗುತ್ತದೆ.

ಸಂಸ್ಕೃತಿಯ ಬಗ್ಗೆ ಇದ್ದ ಅವತ್ತಿನ ವ್ಯಾಖ್ಯಾನಕ್ಕೆ ತದ್ವಿರೋಧಿ ನಿಲುವನ್ನು ತೆಗೆದುಕೊಳ್ಳುವುದರಿಂದಲೇ ಈ ಪ್ರಕ್ರಿಯೆ ಆರಂಭವಾಗಬೇಕಿತ್ತು. ಮತ್ತು ಆ ಬಗೆಯ ತದ್ವಿರೋಧಿ ನಿಲುವನ್ನು ತೆಗೆದುಕೊಳ್ಳುವುದಕ್ಕೆ ಇದರಿಂದ ಹೊರತಾದ ಒಂದು ನೆಲೆಯ ಆಧಾರವನ್ನು ಇಟ್ಟುಕೊಳ್ಳಬೇಕಿತ್ತು. ಆ ಆಧಾರವನ್ನು ಅವರು ಇಂಗ್ಲಿಷ್ ಮತ್ತು ಪಶ್ಚಿಮದಿಂದ ಬಂದ ಹೊಸ ಪ್ರಜಾತಾಂತ್ರಿಕ ಸಂಸ್ಕೃತಿಯ ಆಶಯಗಳಲ್ಲಿ ಕಂಡುಕೊಂಡರು. ಇದು ಆರಂಭದ ಹಂತ. ಯಾಕೆಂದರೆ ಅವರು ನಿರಾಕರಿಸಬೇಕಿದ್ದ ವಿಷಯಗಳು ಬಹಳಷ್ಟಿದ್ದವು. ಸಾವಿರಾರು ವರ್ಷಗಳಿಂದ ಜಾತಿಯ ಮೇಲು, ಕೀಳು ಪರಿಗಣನೆಗಳು, ಕೆಲವರು ಸಂಸ್ಕೃತಿಹೀನರು, ಭಾಷಾಹೀನರು, ಚರಿತ್ರೆಹೀನರು ಮತ್ತು ಚಾರಿತ್ರ್ಯಹೀನರು ಅಂತ ವ್ಯಾಖ್ಯಾನಿಸಿದ್ದ ಸಾಂಸ್ಕೃತಿಕ ಧೋರಣೆಗಳೇ ಅಂದು ದೇಸಿ ಸಂಸ್ಕೃತಿಯೆಂಬ ಪೋಷಾಕಿನಲ್ಲಿದ್ದವು. ನಿರಾಕರಣೆಗೊಂಡಿದ್ದ ಜನಾಂಗಕ್ಕೆ ಈ ಸಂಸ್ಕೃತಿ ತನ್ನದಲ್ಲ ಅಂತ ಹೇಳದ ಹೊರತು ಹೊಸ ಸಂಸ್ಕೃತಿ ದಕ್ಕಲು ಸಾಧ್ಯವಿರಲಿಲ್ಲ. ನಮಗೆ ಸಂಸ್ಕೃತಿ ಚರಿತ್ರೆ ಮತ್ತು ಭಾಷೆಯ ಹೆಸರಲ್ಲಿ ಏನು ಕೊಡಮಾಡಲ್ಪಟ್ಟಿತೋ, ಅದು ನಮ್ಮದಲ್ಲ ಮತ್ತು ನಾವು ಇದಕ್ಕೆ ಧಿಕ್ಕಾರ ಹೇಳುತ್ತಿದ್ದೇವೆ ಎನ್ನುವ ನಿಲುವೇ ತಳ ಹಂತಕ್ಕೆ ತಳ್ಳಲ್ಪಟ್ಟಿದ್ದ ದೇಸಿ ಸಂಸ್ಕೃತಿಯ ಸ್ವಾಭಿಮಾನ ಪುನರ್‌ನಿರ್ಮಾಣದ ಉದ್ಘಾಟನೆ.

ನಮ್ಮ ತಲೆಗೆ ನಾವು ಗುಂಡಿಕ್ಕಿಕೊಳ್ಳದ ಹೊರತು, ಪುರೋಹಿತಶಾಹಿಯನ್ನು ತಲೆಯಿಂದ ಕಿತ್ತೊಗೆಯದ ಹೊರತು ನಮಗೆ ಬಿಡುಗಡೆ ಇಲ್ಲ. ಅದೇ ಚಿಂತನೆ ಬಹುಶಃ ಆಗಿನ ಕಾಲದ ಬಹುಪಾಲು ಹಿಂದೂ ಧರ್ಮ ಮತ್ತು ವೈದಿಕಶಾಹಿಯ ಟೀಕಾಕಾರರಲ್ಲಿತ್ತು. ಪೆರಿಯಾರ್, ನಾರಾಯಣಗುರು, ಜ್ಯೋತಿ ಬಾ ಫುಲೆ ಅವರಿಗೆಲ್ಲ ಈ ನಿರಾಕರಣೆಯನ್ನು ನಿರಾಕರಿಸುವುದೊಂದು ದೊಡ್ಡ ಸವಾಲಾಗಿತ್ತು. ಈ ಹಾದಿಯಲ್ಲಿ ಅಂಬೇಡ್ಕರ್ ಬಹಳ ಮಹತ್ತರವಾದ ಕೆಲಸ ಮಾಡಿದರು.

ಕೆಲವನ್ನು Disown ಮಾಡದ ಹೊರತು ಕೆಲವನ್ನು Own ಮಾಡಲು ಆಗುವುದಿಲ್ಲ. ಅತ್ಯಂತ ತೀವ್ರವಾಗಿ ವೈದಿಕ ಧರ್ಮ ಮತ್ತು ಅದರ ಪುರಾಣ ದಂತಕತೆಗಳನ್ನು ವಿಮರ್ಶಿಸುವುದರಲ್ಲಿಯೇ ಅಂಬೇಡ್ಕರ್‌ರವರ ದೇಸಿ ಸಂಸ್ಕೃತಿ ಬಗೆಗಿನ ಅಭಿಮಾನ ಮೊಟ್ಟ ಮೊದಲು ವ್ಯಕ್ತವಾಗುತ್ತಿದೆ. ಇದು ನನಗೆ ಸೇರಿದ ಪರಂಪರೆಯಲ್ಲ, ಇದು ಹೇರಿರುವಂತಹ ಸಂಸ್ಕೃತಿ, ಇದನ್ನು ನಾವು ಉಳಿಸುವುದರಲ್ಲಿ ಮತ್ತು ಬೆಳೆಸುವುದರಲ್ಲಿ ಅರ್ಥ ಇಲ್ಲ ಎನ್ನುವ ಮುಖಾಂತರ ಅದರ ನಿರಾಕರಣೆಯನ್ನು ಅವರು ಆರಂಭಿಸಿದರು. ಸಂವಿಧಾನದಲ್ಲಿ ಅವರು ಮಂಡಿಸಿದ ಸಾಮಾಜಿಕ ನ್ಯಾಯ, ಮೀಸಲಾತಿ ಆ ಮೂಲಕ ಸಮಾನತೆ ಸಾಧಿಸುವ ಸಿದ್ಧಾಂತವನ್ನು ಮಂಡಿಸಿದರು. ಅದು ವಾಸ್ತವವಾಗಿ ಸ್ವಾತಂತ್ರ್ಯಾನಂತರ ಭಾರತದಲ್ಲಿ ದಲಿತ ಜನಸಮುದಾಯಗಳ ಜೀವನಾಧಾರಗಳನ್ನು ವಿಸ್ತರಿಸುವುದು ಮತ್ತು ಪುನಾ ನೆಲೆಗೊಳಿಸಿಕೊಡುವುದಾಗಿತ್ತು. ಅವರ ಬದುಕಿನ ಅವಕಾಶಗಳನ್ನು ಪುನಾಗಳಿಸಿಕೊಡುವ ಕ್ರಮದಲ್ಲಿಯೇ ಅವರ ಸಾಂಸ್ಕೃತಿಕ ಹಿರಿಮೆಯನ್ನು ಮತ್ತು ಮಹತ್ವವನ್ನು ಸಾಧಿಸುವಂತಹ ದಾರಿಗಳು ತಾನೇ ತಾನಾಗಿ ರೂಪುಗೊಳ್ಳಲು ಪ್ರಾರಂಭವಾಯಿತು.

ಈವತ್ತು ದೇಸಿ ಸಂಸ್ಕೃತಿ ಅಧ್ಯಯನ ಇಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದೆ ಅಂದರೆ, ಅದಕ್ಕೆ ಬಹಳ ಮುಖ್ಯವಾದ ಕಾರಣ ಇಷ್ಟು ಜನ ದಲಿತ ಮತ್ತು ಹಿಂದುಳಿದ ವರ್ಗಗಳ ವಿದ್ಯಾವಂತರಿದ್ದಾರೆ, ಅಧಿಕಾರಿಗಳಿದ್ದಾರೆ, ವಿದ್ವಾಂಸರಿದ್ದಾರೆ, ರಾಜಕಾರಣಿಗಳಿದ್ದಾರೆ, ಅಧಿಕಾರಸ್ಥರಿದ್ದಾರೆ. ಆ ಕಾರಣಕ್ಕೆ ಇಷ್ಟು ಮನೋಸ್ಥೈರ್ಯ ಆ ಸಮುದಾಯಗಳಿಗೆ ಒದಗಿದೆ.

ನಿರಾಕರಣೆಯ ನಿರಾಕರಣೆ ಅಂಬೇಡ್ಕರ್ ಅವರ ಮೊದಲ ಹಂತವಾದರೆ, ನಂತರ ತನಗೆ ಬೇಕಾಗಿರುವ ಸಂಸ್ಕೃತಿ ಯಾವುದು ಅನ್ನುವುದನ್ನು ಪ್ರತಿಪಾದಿಸಲು ಶುರುಮಾಡಿದರು. ಅದು ಬಹಳ ಮುಖ್ಯವಾದಂತಹ ಹಂತ. ಅವರ ಜೀವನ ಮಾಗಿದ ಕಾಲದಲ್ಲಿ, ಅವರ ರಾಜಕಾರಣ, ದಲಿತಪರ ಹೋರಾಟ, ಸಂವಿಧಾನ ನಿರ್ಮಾಣ ಇವೆಲ್ಲವುಗಳ ನಂತರ, ಬಹಳ ಆಲೋಚಿಸಿದ ನಂತರ ಅವರು ಮಂಡಿಸಿದ ಚಿಂತನೆ ಇದು. ಅವರ ಕಟ್ಟಕಡೆಯ ಸಂದರ್ಶನಗಳಲ್ಲಿ ಆ ಬಗ್ಗೆ ಹೇಳಿದ್ದಾರೆ. ನಾವು ಯಾವಾಗಲೂ ಅಂಬೇಡ್ಕರ್‌ರವರನ್ನು ರಾಜಕೀಯ ಚಿಂತಕರು ಅಂತಲೇ ನೋಡುತ್ತೇವೆ. ಅದು ಸರಿ ಕೂಡ. ನಿಜವಾಗಿ ಹೇಳಬೇಕೆಂದರೆ ಯಾವುದೇ ಸಂಸ್ಕೃತಿ ಚಿಂತಕ ಒಬ್ಬ ರಾಜಕೀಯ ಚಿಂತಕನಾಗದ ಹೊರತು, ಅವನಿಗೆ ಸಂಸ್ಕೃತಿ ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸಂಸ್ಕೃತಿ ಅನ್ನುವಂತದ್ದು ಸ್ವತಂತ್ರವಾಗಿರುವ ವಿಷಯ ಅಲ್ಲ. ಯಾವುದೇ ಸಮಾಜದಲ್ಲಿ ಅದರ ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ರಾಜಕೀಯ ಶಾಸ್ತ್ರಗಳ ನಡುವೆಯೇ ಸಂಸ್ಕೃತಿ ನಿರ್ಮಾಣ ಆಗುವಂತದ್ದು.

ನಾನು ಕುವೆಂಪು ಅವರ ಉದಾಹರಣೆ ಹೇಳಲು ಬಯಸುತ್ತೇನೆ. ಕನ್ನಡವನ್ನು ಬದುಕಿಸಬೇಕು ಅಂದರೆ ಕನ್ನಡಿಗರನ್ನು ಬದುಕಿಸಬೇಕು. ನೀವು ಕನ್ನಡಿಗರ ಏಳ್ಗೆಯನ್ನು ಹೊರತುಪಡಿಸಿ ಕನ್ನಡ ಸಂಸ್ಕೃತಿಯನ್ನು ಉಳಿಸೋದಾಗಲೀ, ಬೆಳೆಸೋದಾಗಲೀ, ಕರ್ನಾಟಕವನ್ನು ಕಾಪಾಡೋದಾಗಲೀ ಸಾಧ್ಯವೇ ಇಲ್ಲ. ಅದನ್ನು ನೀವು ಶೋಕೇಸಿನ ವಸ್ತು ಮಾಡಬಹುದಷ್ಟೆ, ಮ್ಯೂಸಿಯಂನ ವಸ್ತು ಮಾಡಬಹುದಷ್ಟೆ. ಜೀವನದಿಂದ ಹೊರತುಪಡಿಸಿದಂತಹ ಒಂದು ಸಂಸ್ಕೃತಿಯನ್ನು, ಒಂದು ಭಾಷೆಯನ್ನು ಬದುಕಿಸುವ ಪ್ರಯತ್ನ ಅಸಾಧ್ಯವಾದುದು. ಜನರ ಜೀವನವನ್ನು ನಿರ್ಮಾಣ ಮಾಡುವುದು, ಅವರನ್ನು ಭದ್ರ ನೆಲೆಗಟ್ಟಿನ ಮೇಲೆ ನೆಲೆಗೊಳಿಸುವುದು, ಅವರ ಭವಿಷ್ಯವನ್ನು ಉಜ್ವಲಗೊಳಿಸುವಂತೆ ಮಾಡುವುದು, ಆ ಮುಖಾಂತರ ನಾವು ಒಂದು ಭಾಷೆ ಮತ್ತು ಸಂಸ್ಕೃತಿಗೆ ಭದ್ರ ತಳಪಾಯವನ್ನು ಹಾಕಬಹುದು.

ನಾವು ಅಂಬೇಡ್ಕರ್‌ರವರ ಪ್ರಯತ್ನಗಳನ್ನು ಅದೇ ರೀತಿಯಲ್ಲಿ ನೋಡಬಹುದು. ದಲಿತರ ಜೀವನಾವಕಾಶ ವಿಸ್ತರಣೆ, ಅವರ ಸಮಾನತೆಯ ಪ್ರತಿಪಾದನೆ ಮತ್ತು ಅವರ ಸಾಂಸ್ಕೃತಿಕ ನೆಲೆಗಳ ವಿಸ್ತರಣೆಯನ್ನು ಅವರು ಬಯಸಿದ್ದರಿಂದಲೇ ಅವರನ್ನು ಭಾರತದ ರಾಜಕೀಯ ಚಿಂತಕರಲ್ಲಿ ಅಗ್ರಗಣ್ಯರು ಅಂತ ಕರೆಯುತ್ತೇವೆ.

ನಾವು ಇವತ್ತು ದೇಸೀ ಅಧ್ಯಯನಗಳು, ದೇಸೀ ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಬಹಳ ಚರ್ಚೆ ಮಾಡ್ತಿದ್ದೀವಿ, ಮಾತಾಡ್ತಿದ್ದೀವಿ. ಅದಕ್ಕೆ ಬೇಕಾಗಿರುವ ಬಹಳ ದೊಡ್ಡ ಸಾಮರ್ಥ್ಯ ನಮಗೆ ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ, ರಾಜಕೀಯ ಸಿದ್ಧಾಂತದಿಂದ ದೊರೆಯಿತು. ಅದೇ ಅವರ ಬಹಳ ದೊಡ್ಡ ಕೊಡುಗೆಯಾಗಿತ್ತು. ಅದಿಲ್ಲದೆ ನಾವು ಈ ಅಧ್ಯಯನ ಮುಂದುವರಿಸಲು ಮತ್ತು ಈ ಸಂಸ್ಕೃತಿ ನಿರ್ವಚನಗಳನ್ನು ಬದಲಾಯಿಸಲು ಸಾಧ್ಯ

ವಾಗುತ್ತಿರಲಿಲ್ಲ. ಸಂಸ್ಕೃತಿ ಅಂದ್ರೆ ಅದೇ ಹಳೆಯ ಸಂಸ್ಕೃತಿ. ಅದೇ ಭರತನಾಟ್ಯ, ಅದೇ ವೀಣೆ, ಅದೇ ಬೇಲೂರು ಹಳೇಬೀಡುಗಳ ಶಿಲ್ಪ ಕಲೆ– ಅದು ಸಂಸ್ಕೃತಿ ಅಲ್ಲ ಅನ್ನೋದಿಲ್ಲ. ಅವೆಲ್ಲ ಸಂಸ್ಕೃತಿಯ ಒಂದು ಧಾರೆ ಮಾತ್ರ. ಈ ಧಾರೆ ಸಂಪೂರ್ಣ ಪ್ರಾತಿನಿಧಿಕ ಸಂಸ್ಕೃತಿಯಲ್ಲ. ಅದರ ಹೊರತಾಗಿ ದಮನಿಸಲ್ಪಟ್ಟಿರುವಂತಹ ಬಹುದೊಡ್ಡ ಸಂಸ್ಕೃತಿಯ ಸಾಗರವೇ ಇದೆ.

ಅದನ್ನು ಅಂಬೇಡ್ಕರ್‌ರವರು ತಮ್ಮ ರಾಜಕೀಯ ಜೀವನದ ಕಡೆಗಾಲದಲ್ಲಿ ಪ್ರತಿಪಾದನೆ ಮಾಡಿದರು. ಅದು ಬೌದ್ಧ ಸಂಸ್ಕೃತಿ. ಸಂವಿಧಾನದ ಪ್ರೇರಣೆಗಳಾಗಿರುವ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯನ್ನು ನಾನು ಫ್ರೆಂಚ್ ಕ್ರಾಂತಿಯಿಂದ ತರಲಿಲ್ಲ, ಅದನ್ನು ನನ್ನ ಗುರುವಾದ ಬುದ್ಧನಿಂದ ಪಡೆದೆ ಅಂತ ಅಂಬೇಡ್ಕರ್ ಹೇಳಿದ್ದಾರೆ. ಅವರ ರಾಜಕೀಯ ಚಿಂತನೆಯ ಮೂಲ, ಅವರ ರಾಜ್ಯಶಾಸ್ತ್ರದಲ್ಲಿರಲಿಲ್ಲ. ಅದು ಅವರ ಅನುಸರಿಸಬಯಸಿದ ಧರ್ಮದಲ್ಲಿದೆ ಎಂಬುದನ್ನು ಹೇಳಿದ್ದಾರೆ. ಶೀಲ ವಿಲ್ಲದ ಜ್ಞಾನ ವ್ಯರ್ಥ ಅಂತ ಹೇಳಿದ್ದು ಈ ಹಂತದಲ್ಲಿಯೇ. ಇದು ಅವರ ದೇಸಿ ಸಂಸ್ಕೃತಿಯ ಗ್ರಹಿಕೆ.

ಆ ಆಳಕ್ಕೆ ಇಳಿಯುವ ಮೊದಲು ಅವರು ಒಡೆಯಬೇಕಾಗಿರುವ ಚಿಪ್ಪುಗಳನ್ನು ಒಡೆಯುತ್ತಾ ಬಂದರು. ನಂತರದಲ್ಲಿ ಅವರು ಬೌದ್ಧ ಧರ್ಮಕ್ಕೆ ಬಂದು ನಿಂತರು. ಅವರ ದೇಸಿ ಸಂಸ್ಕೃತಿಯ ಪರಿಜ್ಞಾನ ಎಷ್ಟು ಆಳವಾದದ್ದು ಎಂದರೆ, ಅದು ಇತಿಹಾಸದ ಆಳವಾದ ಅಧ್ಯಯನದಿಂದ, ಬಹಳ ಪ್ರಗಾಢವಾದ ಸಾಂಸ್ಕೃತಿಕ ಅನುಭೂತಿಯಿಂದ ಹುಟ್ಟಿ ಬಂದಂತಹುದು. ತಾವು ಬೌದ್ಧ ಧರ್ಮ ಸ್ವೀಕಾರ ಎಲ್ಲಿ ಪಡೆಯಬೇಕು? ಅದಕ್ಕೆ ನಾಗಪುರವೇ ಆಗಬೇಕು ಆಯ್ಕೆ ಮಾಡಿಕೊಂಡರು. ಅದಕ್ಕಿರುವ ದೇಸೀ ಸಾಂಸ್ಕೃತಿಕ ಮಹತ್ವ ಏನು? ಅದು ಪೂರ್ವದಲ್ಲಿ ಆದಿ ಬೌದ್ಧರ ನೆಲೆತಾಣವಾಗಿತ್ತು. ನಾಗಾ ಸಂಸ್ಕೃತಿಯ ನೆಲೆವೀಡಾಗಿತ್ತು. ಇಂದಿನ ವೈದಿಕಶಾಹಿಗೆ ಪ್ರಬಲ ಪ್ರತಿರೋಧ ಒಡ್ಡಿದಂತಹ ಮಹಾ ಕುಲ ಸಾಮ್ರಾಜ್ಯವೇ ಆಗಿತ್ತು.

ಭಾರತದಲ್ಲಿ ವೈದಿಕಶಾಹಿ ಮತ್ತು ಆರ್ಯರ ದಾಳಿಯನ್ನೆದುರಿಸಲು ನಡೆದ ಪ್ರತಿರೋಧಕ್ಕೆ ಬಹಳ ದೊಡ್ಡ ಲಾಂಛನ ಆದಿವಾಸಿ ನಾಗಾ ಕುಲ. ಇವತ್ತು ಅದು ಹಲವಾರು ಜಾತಿ ಸಮುದಾಯಗಳಲ್ಲಿ ವಿಂಗಡಿಸಿ ಹೋಗಿದೆ. ಆ ನಾಗರು, ನಾಗಕುಲ, ಮುಂತಾದ ಈ ದೇಸಿ ನೆಲೆಗಳಿಂದ ಸಾಂಸ್ಕೃತಿಕ ಚಹರೆಯನ್ನು ಕಟ್ಟಬೇಕು ಎನ್ನುವ ಚಿಂತನೆಯಿಂದಲೇ ಅವರು ನಾಗಪುರವನ್ನು ಆಯ್ಕೆ ಮಾಡಿಕೊಂಡರು.

ಇಲ್ಲಿನ ದಲಿತ ಕುಲಗಳ, ಆದಿವಾಸಿ ಸಮುದಾಯಗಳ ಮತ್ತು ಇಲ್ಲಿರುವ ಜನ ಸಮೂಹ ಸಂಸ್ಕೃತಿಗಳನ್ನು ವಿಸ್ಮೃತಿಗೆ ತಳ್ಳಿದ ಸಾಂಸ್ಕೃತಿಕ ಯಜಮಾನಿಕೆಯನ್ನು ಒಡೆದು ಹಾಕುವುದು ಮೊದಲ ಘಟ್ಟವಾದರೆ, ನಂತರ ಯಾವುದನ್ನು ಆರಿಸಿಕೊಳ್ಳಬೇಕೆಂಬ ಪ್ರಜ್ಞಾವಂತ ಆಯ್ಕೆ ಅಂಬೇಡ್ಕರ್ ಅವರ ದೇಸಿ ಸಂಸ್ಕೃತಿಯ ಚಿಂತನೆಯಲ್ಲಿತ್ತು. ಇದರ ಬಗ್ಗೆ ಅವರು ನಿರ್ದ್ವಂದ್ವವಾಗಿರುವ ಉತ್ತರಗಳನ್ನು ಕೊಟ್ಟಿದ್ದಾರೆ. ಯಾಕೆ ಮುಸ್ಲಿಂ ಆಗುವುದಕ್ಕೆ ಪ್ರಯತ್ನಪಡ್ಲಿಲ್ಲ? ಜಾತಿ ವ್ಯವಸ್ಥೆಗೆ ವಿರೋಧವಾದಂತಹ ಆಶಯಗಳು ಆ ಧರ್ಮದಲ್ಲೂ ಇವೆ. ಕ್ರಿಶ್ಚಿಯನ್ ಧರ್ಮದ ಸಮಾನ ಆಶಯಗಳು, ಸಹೋದರತೆಯ ಆಶಯಗಳು, ಅವರ ಐಕ್ಯತೆಯ ವಿಧಾನ ಅದರ ಬಗ್ಗೆ ಬಹಳ ಗೌರವವಿದೆ. ಆದರೆ ಮತಾಂತರಗೊಳ್ಳಬೇಕಾದರೆ ಈ ನೆಲದಲ್ಲಿಯೇ ಸಾಂಸ್ಕೃತಿಕ ಮೂಲ ಹೊಂದಿರುವಂತಹ ಧರ್ಮ ಇರಬೇಕು. ಅದು ಇಲ್ಲಿನ ದೇಸಿ ಸಂಸ್ಕೃತಿಯ ಮೂಲ ಮತ್ತು ತಳಪಾಯ ಆಗಿರಬೇಕು ಎನ್ನುವ ನಿಲುವಿನಿಂದ ಅವರ ಬೌದ್ಧ ಧರ್ಮವನ್ನು ಆಯ್ಕೆ ಮಾಡಿದರು.

ಬೌದ್ಧ ಧರ್ಮ ಇಲ್ಲಿರುವ ದಲಿತ ಕುಲಗಳ, ಆದಿವಾಸಿ ಸಮೂಹಗಳ, ಜನ ಸಮೂಹಗಳ ಮೂಲ ಧರ್ಮದ ಒಂದು ಪ್ರಕಾರ ಆಗಿತ್ತು. ಅದು ಬುಡಕಟ್ಟು ಮತ್ತು ಆದಿವಾಸಿ ಸಮೂಹ ಲೋಕದೃಷ್ಟಿಯನ್ನು ಆಧರಿಸಿ ರೂಪುಗೊಂಡ ಚಿಂತನಾಕ್ರಮವಾಗಿದೆ. ಧರ್ಮ ಎನ್ನುವುದು ಜೀವನದಿಂದ ಹೊರಗೆ ನಿಲ್ಲುವಂತಾದ್ದಲ್ಲ ಎನ್ನುವುದನ್ನು ಅಂಬೇಡ್ಕರ್ ಸ್ಪಷ್ಟವಾಗಿ ಹೇಳಿದ್ದಾರೆ.

ಬದುಕಿನಿಂದ ಆಚೆ ಇರುವಂತಹ ಒಂದು ಧರ್ಮ, ವಿಚಾರ ಹಾಗೂ ಪರಿಕಲ್ಪನೆಯನ್ನು ಬೌದ್ಧ ಧರ್ಮ ಒಪ್ಪಿರಲಿಲ್ಲ. ಅದು ಬುದ್ಧ ಪ್ರತಿಪಾದಿಸಿದ ಮಾರ್ಗ ಆಗಿರಬಹುದು. ಆದರೆ ಬುದ್ಧನಿಗೆ ಆ ತತ್ವ ಬಂದಿದ್ದು ಸಮುದಾಯದ ವಿವೇಕದಿಂದ. ಆತ ಬದುಕಿದ್ದ ಕಾಲದಲ್ಲಿ ನಾಲ್ಕು ಬುಡಕಟ್ಟುಗಳು ಮಾತ್ರ ಪ್ರಜಾಪ್ರಭುತ್ವವಾದಿ ಗಣತಂತ್ರಗಳಾಗಿ ಉಳಿದುಕೊಂಡಿದ್ದವು. ಆ ಹೊತ್ತಿಗಾಗಲೇ 19 ರಾಜವಂಶಗಳು ಆಳ್ವಿಕೆ ನಡೆಸಿ ರಾಜಸತ್ತೆಯ ಪದ್ಧತಿ ಬಲಗೊಳ್ಳತೊಡಗಿತ್ತು. ಆದರೆ ಬುದ್ಧ ಹುಟ್ಟಿ ಬೆಳೆದ ಜನಪದ ಗಣತಂತ್ರ ವ್ಯವಸ್ಥೆಯನ್ನೇ ಪ್ರತಿಪಾದಿಸಿಕೊಂಡಿತ್ತು. ಬುಡಕಟ್ಟಿನ ಜನರೆಲ್ಲ ಸಹೋದರ ಸಮಾನರು ಎನ್ನುವ ತತ್ವದಲ್ಲಿ ನಂಬಿಕೆಯಿಟ್ಟುಕೊಂಡಿತ್ತು. ಆ ಪ್ರೇರಣೆಯ ಹಿನ್ನೆಲೆಯಲ್ಲಿ ಬುದ್ಧ ಅಷ್ಟಾಂಗ ಮಾರ್ಗವನ್ನು ಪ್ರತಿಪಾದಿಸಿದ. ಸಂಗ್ರಹವನ್ನು ಮಾಡಕೂಡದು, ಅಧಿಕಾರವನ್ನು ಹೇರಕೂಡದು, ಅಧಿಕಾರ ಸೋದರ ಸೋದರಿಯರಾದರೂ ಅವರ ನಡುವೆ ವೈರುಧ್ಯ ಬರುತ್ತದೆ. ಅಧಿಕಾರ ಅಂತ ಇರೋದೇ ವೈರುಧ್ಯಗಳಿಗೆ ಕಾರಣ.

ಅಂಬೇಡ್ಕರ್ ಇದೇ ನೆಲೆಯಿಂದ ಕಮ್ಯೂನಿಸ್ಟ್ ಸಿದ್ಧಾಂತವನ್ನು ಪ್ರಶ್ನೆ ಮಾಡಿದರು. ನೀವು ಸಮಾನತೆಯನ್ನು ಸಾಧಿಸುವುದಕ್ಕೋಸ್ಕರ ಸರ್ವಾಧಿಕಾರ ಸ್ಥಾಪಿಸುತ್ತೀರಿ ಎಂದಾದರೆ, ಅಧಿಕಾರದ ಇರುವಿಕೆಯೇ ವೈರುಧ್ಯವನ್ನು ಹುಟ್ಟಿಸುತ್ತದೆ. ಆದ್ದರಿಂದ ನಾನು ಹೇಳುವುದು ಅಧಿಕಾರವನ್ನು ಇಲ್ಲವಾಗಿಸುವುದನ್ನು. ಅದೇ ನನ್ನ ಧರ್ಮ. ಆದ್ದರಿಂದ ನನ್ನ ರಾಜಕೀಯ ಚಿಂತನೆಗಳು ಮನಸ್ಸನ್ನು ಪರಿವರ್ತನೆಗೊಳಿಸುವಂತಹ ಧಾರ್ಮಿಕ ಮಾರ್ಗದಲ್ಲಿದೆ. ಅಂಬೇಡ್ಕರ್‌ರವರು ಬೌದ್ಧ ಧರ್ಮವನ್ನು ಆರಿಸಿಕೊಂಡದ್ದು, ಅವರಿಗೆ ದೇಸಿ ಸಂಸ್ಕೃತಿ ಬಗೆಗಿದ್ದ ಖಚಿತ ಕಲ್ಪನೆಯನ್ನು ತೋರಿಸುತ್ತದೆ. ಇದು ಮೊದಲ ಅಂಶ. ಎರಡನೆಯದು ನಾವು ಹೊಸತನ್ನು ಎಷ್ಟೋ ಸಮಾಜಗಳಿಂದ ಸ್ವೀಕರಿಸಬಹುದು.

> **ಧರ್ಮಗಳ ಬಗ್ಗೆ ನನಗೆ ಗೌರವವಿದೆ ಆದರೆ, ನನಗೆ ಬೌದ್ಧ ಧರ್ಮವೇ ಸರಿಯಾದುದು. ಯಾಕೆಂದರೆ ಅದಕ್ಕೆ ಈ ನೆಲದ ಆದಿಮ ಸಂಸ್ಕೃತಿಯಲ್ಲಿ ಬೇರುಗಳಿವೆ, ಆದಿವಾಸಿ ಜೀವನ ಪದ್ಧತಿಯಲ್ಲಿ ಅದರ ಚೈತನ್ಯದ ಸೆಲೆಗಳಿವೆ ಎಂಬುದನ್ನು ಅಂಬೇಡ್ಕರ್ ಪ್ರತಿಪಾದಿಸಿದರು.**

ಆದರೆ ನಮ್ಮ ಸಾಂಸ್ಕೃತಿಕ ಬೇರುಗಳು ಮತ್ತು ನಮ್ಮ ನೆಲದ ಆಳದಿಂದ ಅದನ್ನು ಕಸಿ ಮಾಡಲಿಲ್ಲ ಅಂತ ಹೇಳಿದ್ರೆ ಅದು ನಮ್ಮದಾಗಿ ಉಳಿಯಲು ಸಾಧ್ಯವಿಲ್ಲ. ಅದು ನಮ್ಮ ಸಂವೇದನೆಗಳನ್ನು ತಾಕುವುದಕ್ಕೆ ಸಾಧ್ಯ ಇಲ್ಲ. ಅಂಬೇಡ್ಕರ್ ಇಲ್ಲಿ ಕೇವಲ ರಾಜಕೀಯ ಚಿಂತಕರಾಗಿ ಯೋಚಿಸಿಲ್ಲ. ಅವರಿಗಿದ್ದ ದೇಸಿ ಸಂಸ್ಕೃತಿ ಚಿಂತನೆಯಿಂದಾಗಿಯೇ ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳ ಬದಲು ಬೌದ್ಧ ಧರ್ಮ ಆರಿಸಿಕೊಂಡರು ಎನ್ನಬಹುದು.

ಆ ಧರ್ಮಗಳ ಬಗ್ಗೆ ನನಗೆ ಗೌರವವಿದೆ ಆದರೆ, ನನಗೆ ಬೌದ್ಧ ಧರ್ಮವೇ ಸರಿಯಾದುದು. ಯಾಕೆಂದರೆ ಅದಕ್ಕೆ ಈ ನೆಲದ ಆದಿಮ ಸಂಸ್ಕೃತಿಯಲ್ಲಿ ಬೇರುಗಳಿವೆ, ಆದಿವಾಸಿ ಜೀವನ ಪದ್ಧತಿಯಲ್ಲಿ ಅದರ ಚೈತನ್ಯದ ಸೆಲೆಗಳಿವೆ ಎಂಬುದನ್ನು ಅವರು ಪ್ರತಿಪಾದಿಸಿದರು. ಅದರ ಸರಳಾರ್ಥದಲ್ಲಿ ಬುದ್ಧ ಮಾರ್ಗವೆಂದರೆ ಅವರು ಪ್ರತಿಪಾದಿಸಿದ್ದು ಇಲ್ಲಿನ ದಮನಿತ ಜನ ಸಮೂಹಗಳ ಮರೆಮಾಚಲ್ಪಟ್ಟಿದ್ದ ಸಾಂಸ್ಕೃತಿಕ ಹಾದಿ. ಯಾವ ಸಂಸ್ಕೃತಿಯು ಮೌನವಾಗಿರಿಸಲ್ಪಟ್ಟಿತ್ತೋ, ಯಾವ ಸಂಸ್ಕೃತಿ ಆಕ್ರಮಣಕ್ಕೆ ಒಳಗಾಗಿತ್ತೋ ಮತ್ತು ಯಾವ ಸಂಸ್ಕೃತಿ ತನಗೋಸ್ಕರ ಒಂದು ನೆಲೆಯಿಲ್ಲದೆ ತಲೆಮರೆಸಿಕೊಳ್ಳುವ ಅನಿವಾರ್ಯತೆಗೆ ಒಳಗಾಗಿತ್ತೋ, ಆ ದಾರಿಯನ್ನು ತಾನು ಹಿಡಿಯುವ ಮುಖಾಂತರವಾಗಿ ಸಾಂಸ್ಕೃತಿಕವಾಗಿ ಭಾರತವನ್ನು ಪುನರ್‌ನಿರ್ಮಾಣ ಮಾಡಬಹುದು ಎಂದು ಅವರು ಆಶಿಸಿದರು. ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿ ಇದನ್ನು ಅಂಬೇಡ್ಕರ್ ಪ್ರತಿಪಾದಿಸಿದ್ದು ಮಾತ್ರವಲ್ಲದೆ ಇಂದಿನ ದೇಸಿ ಸಂಸ್ಕೃತಿ ಚಿಂತನೆಗೆ ಒಂದು ಹಾದಿ ನಿರ್ಮಿಸಿದರು.

ಅದರ ಮುಂದುವರಿದ ರೂಪದಲ್ಲಿ ಇನ್ನುಳಿದ ಎಷ್ಟೋ ಆದಿವಾಸಿ ಸಮುದಾಯಗಳಿಗೆ ತಂತಮ್ಮ ಸಂಸ್ಕೃತಿಗಳು ಮತ್ತು ಸಾಂಸ್ಕೃತಿಕ ನೆಲೆಗಳ ಬಗ್ಗೆ ವಿಶ್ವಾಸವನ್ನು ಮೂಡಿಸಲಿಕ್ಕೆ ಇದು ಕಾರಣವಾಯಿತು. ಇದನ್ನು ರಾಜಕೀಯ ಉದಾಹರಣೆ ಮೂಲಕ ಕೂಡ ಅರ್ಥೈಸಬಹುದು. ಅಸ್ಪೃಶ್ಯತೆಯನ್ನು ನಿವಾರಣೆಗೆ, ರಾಜಕೀಯದಲ್ಲಿ ಸಮಾನ ಪಾಲು ಪಡೆಯಲಿಕ್ಕೆ ಅಂಬೇಡ್ಕರ್‌ರವರು ದಲಿತ ಹೋರಾಟ ಪ್ರಾರಂಭಿಸಿದರು. ಎಂದರೆ ಸಾಮಾಜಿಕ ಪರಿಣಾಮವಾಗಿ ಭಾರತದ ಎಲ್ಲಾ ದಮನಿತ ಜಾತಿಗಳು ತಮ್ಮ ಪಾಲಿಗೋಸ್ಕರವಾಗಿ ಹೋರಾಟಮಾಡುವ ಮತ್ತು ತಮ್ಮ ಅಸ್ಮಿತೆಗಳನ್ನು ಪುನರ್ ನಿರ್ಮಾಣ ಮಾಡುವ ಕಾಲಘಟ್ಟಕ್ಕೆ ಈಗ ಬಂದಿವೆ. ಇದರ ಹಿಂದೆ ಅಂಬೇಡ್ಕರ್ ಹಾಕಿಕೊಟ್ಟ ಸಾಮಾಜಿಕ ನ್ಯಾಯ ಸಿದ್ಧಾಂತದ ಪ್ರೇರಣೆ ಇದೆ. ಕಟ್ಟಕಡೆಯವನ ವಿಮೋಚನೆಯಲ್ಲಿ ಎಲ್ಲರ ವಿಮೋಚನೆಯೂ ಇದೆ. ಅದು ಈ ರೀತಿಯಾಗಿ ನಿಜ ಆಗುತ್ತಿದೆ. ದಲಿತರು ಸಂಘಟಿತರಾಗಿ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಶುರು ಮಾಡಿದರೋ, ಅದರ ಬೆಳಕಿನಲ್ಲಿ, ಅದರ ಎಚ್ಚರದಲ್ಲಿ ಇತರ ಎಲ್ಲ ಹಿಂದುಳಿದ, ಅತಿ ಹಿಂದುಳಿದ ಮತ್ತು ದಮನಿತ ಜಾತಿಗಳೂ ತಮ್ಮ ಹಕ್ಕುಗಳನ್ನು ಕೇಳುವ ಪ್ರೇರಣೆ ಪಡೆದುಕೊಂಡಿವೆ.

ಇದು ಯಾರೂ ಕೂಡ ವಿಷಾದಿಸಬೇಕಾದ ಅಂಶ ಅಲ್ಲ. ಇದನ್ನು ವಿಷಾದಿಸಬೇಕಾದವರು. ಯಾಕೆಂದರೆ ಇಲ್ಲಿ ಅಂತವರಿಗೆ ಮಾತ್ರ ಜಾತಿ ಸಂಘಗಳಿದ್ದವು. ಅವರಿಗೆ ಮಾತ್ರ ಜಾತಿ ಅಸ್ಮಿತೆ ಅಂತ ಇದ್ದದ್ದು. ಅವರು ಮಾತ್ರ ಜಾತಿ ಹೆಸರಿನಲ್ಲಿ ರಾಜಕಾರಣ ಮಾಡುತ್ತಾ ಬಂದಿದ್ದರು. ಈವತ್ತು ಪ್ರತಿಯೊಂದು ಜಾತಿಯವರು ಮಾಡ್ತಿದ್ದಾರೆ.

(42ನೇ ಪುಟಕ್ಕೆ)

ಅಂಬೇಡ್ಕರ್ ಮಾನವ ಕುಲದ ದಾರಿದೀಪ

–೯–

ಜ್ಯೋತಿ ಗುರುಪ್ರಸಾದ್

'ದಲಿತ' ಎಂಬ ಪದ ಹುಟ್ಟಿಕೊಂಡ ಕ್ಷಣವೇ ಅದನ್ನು ಹುಟ್ಟು ಹಾಕಿದ ಪುರೋಹಿತಶಾಹೀ ವರ್ಗವೂ ಹುಟ್ಟಿಕೊಂಡಿರುವ ವಾಸ್ತವ ಇಂದು ಈ ಲೇಖನ ಬರೆಯಲು ಪ್ರೇರೇಪಣೆಯಾಗುತ್ತಿದೆ. ಮೇಲು ಕೀಳು– ಅಸ್ಪೃಶ್ಯತೆ ಇಂಥ ವ್ಯತ್ಯಾಸಗಳ ಅನುಭೂತಿ ನನಗೆ ಮೊಟ್ಟ ಮೊದಲು ಉಂಟಾದ ನೆನಪನ್ನೇ ಮೊದಲು ಬಗೆಯುವುದು ಔಚಿತ್ಯವೆನಿಸುತ್ತದೆ. ನನಗೆ ಐದು ವರ್ಷಗಳು ತುಂಬಿದ ನಂತರದ ಬಾಲ್ಯದ ದಿನಗಳಲ್ಲಿ ಅಂದರೆ ಸುಮಾರು 1970ರ ನಂತರದ ನನಗೆ ಬುದ್ಧಿ ತಿಳಿಯಲು ಆರಂಭವಾದ ದಿನಗಳಲ್ಲಿ ನನ್ನ ಅಜ್ಜಿ ಮನೆಯಲ್ಲಿ ಇನ್ನೂ ಪಾಷ್ಚಾತ್ಯ ರೀತಿಯ ಪಾಯಿಖಾನೆ ಸೌಲಭ್ಯವಿರಲಿಲ್ಲ. ಈಗಾಗಲೇ ನಾನು ಹಲವು ಬಾರಿ ಈ ಅಂಕಣದಲ್ಲಿ ನೆನೆದಿರುವಂತೆ ನನ್ನ ಬಾಲ್ಯದ ಬಹುಪಾಲು ದಿನಗಳು ಕಳೆದಿದ್ದು ಶ್ರೀವೈಷ್ಣವ ಸಂಪ್ರದಾಯದ ವೈದಿಕ ಕುಟುಂಬವಾದ ನನ್ನ ಅಜ್ಜಿ ಮನೆಯಲ್ಲಿಯೇ.

ಪಾಯಿಖಾನೆಗೆ ಹಿತ್ತಿಲಲ್ಲಿ ಒಂದು ದೊಡ್ಡ ಕೋಣೆಯನ್ನು ನಿರ್ಮಿಸಲಾಗಿತ್ತು. ಅಲ್ಲಿ ಎರಡು ದೊಡ್ಡ ಕಲ್ಲುಗಳ ನಡುವೆ ಊಟದ ಎಲೆಗಳನ್ನು ಇರಿಸಲಾಗುತ್ತಿತ್ತು. ಅದರ ಮೇಲೆ ಸಂಗ್ರಹವಾದ ಮಲವನ್ನು ಸ್ವಚ್ಛಗೊಳಿಸಿ ತೆಗೆದುಕೊಂಡು ಹೋಗಲು ರಂಗಮ್ಮ ಎಂಬ ಹೆಂಗಸು ಆಗಾಗ ಬರುತ್ತಿದ್ದಳು. ದಪ್ಪಕ್ಕೆ ಕಪ್ಪಗಿದ್ದ ಯಾವಾಗಲೂ ಎಲೆ ಅಡಿಕೆ ಜಗಿಯುತ್ತಿದ್ದ ಹೆಂಡ ಕುಡಿದು ಬರುತ್ತಿದ್ದ ರಂಗಮ್ಮ, ಆಕೆ ನೇರವಾಗಿ ಮುಂದಿನ ಬಾಗಿಲಿಂದ ನಮ್ಮ ಮನೆಗೆ ಪ್ರವೇಶಿಸುತ್ತಿರಲಿಲ್ಲ. ಮನೆಯ ಗೋಡೆಗೆ ಸೇರಿದಂತೆ ಹಿತ್ತಿಲಿಗೆ ಹೋಗಲು ಒಂದು ಗಲ್ಲಿಯಂಥ ಉದ್ದನೆಯ ದಾರಿಯಿತ್ತು. ಅದರ ಮೂಲಕ ಬಂದು ತನ್ನ ಕೆಲಸ ಮುಗಿಸಿ ಕೊಡುವ ಒಂದು ರೂಪಾಯಿಯನ್ನೋ–ಎರಡು ರೂಪಾಯಿಯನ್ನೋ ದೂರದಲ್ಲೇ ನಿಂತು ಕೈ ಸೋಕದಂತೆ ಕೆಳಕ್ಕೆ–ತುಂಬಾ ಕೆಳಕ್ಕೆ ಹಿಡಿದುಕೊಂಡು ತೆಗೆದುಕೊಂಡು ರಾಗವಾದ ಕನ್ನಡದಲ್ಲಿ ಜೋರಾಗಿ ಏನೇನೋ ಮಾತಾಡುತ್ತ ಹೊರಟು ಹೋಗುತ್ತಿದ್ದಳು. ಆಗ ನನಗೆ 'ಜಾಡಮಾಲಿ' ಎಂಬ ಪದದ ಮೊದಲ ಪರಿಚಯವಾಗಿದ್ದು. ಎಂದರೆ ಇಂಥ ಸ್ವಚ್ಛತೆಗಾಗಿಯೇ ಇರುವವರು. ಅವರು ಜಾತಿಯಲ್ಲಿ ಕೀಳು. ಅವರನ್ನು ಮುಟ್ಟಿಸಿಕೊಳ್ಳ ಬಾರದು ಇಂಥ ಉಪದೇಶಗಳೆಲ್ಲಾ ಧಾರಾಳವಾಗಿ ಸಿಕ್ಕಿತ್ತು!

ಈಗಲೂ ರಂಗಮ್ಮನ ಮುಖವನ್ನು ಮರೆಯಲಾಗುತ್ತಿಲ್ಲ. ಸ್ವಲ್ಪ ವಯಸ್ಸಾಗ ವೃದ್ಧೆ, ವಿಧವೆಯಾಗಿದ್ದಳು. ಬಹುಷಃ ನನ್ನಜ್ಜಿಯಷ್ಟೇ ವಯಸ್ಸಿರಬಹುದು. ನನ್ನಜ್ಜಿಯೂ ಆ ವೇಳೆಗೆ ವಿಧವೆಯಾಗಿಬಿಟ್ಟಿದ್ದರು. ಆದರೆ ಮಡಿಯಿಂದ ಮನೆಯಲ್ಲಿದ್ದೇ ಕಷ್ಟಗಳನ್ನು ಅನುಭವಿಸುತ್ತ ಮಕ್ಕಳ ದುಡಿಮೆಯಲ್ಲಿ ಸಂಸಾರ ನಡೆಸುತ್ತಿದ್ದರು. ರಂಗಮ್ಮನಿಗೆ ಆ ಭಾಗ್ಯವಿರಲಿಲ್ಲ. ಅವಳ ದೊಡ್ಡ ದೊಡ್ಡ ಗಂಡು ಮಕ್ಕಳೂ ಕಾಕಿ ಅಂಗಿ–ಕಾಕಿ ಚೆಡ್ಡಿ ಹಾಕಿಕೊಂಡು ಇದೇ ಕೆಲಸಕ್ಕೆ ಬರುತ್ತಿದ್ದರು. ಒಂದು ದಿನ ಬರುವುದು ತಡವಾದರೆ ಚೆನ್ನಾಗಿ ನನ್ನಜ್ಜಿಯಿಂದ ಬೈಸಿಕೊಂಡು ಹೋಗುತ್ತಿದ್ದರು. ಕೊಟ್ಟಷ್ಟು ಚಿಲ್ಲರೆ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದರು. ಒಂದೊಂದು ದಿನ ಅಂತೂ ರಂಗಮ್ಮ ಹೆಂಡ ಕುಡಿಯಲು ಹಣವಿಲ್ಲದಿದ್ದರೆ ಮನೆಯ ಹೊರಗಡೆ ಜಗಲಿಯ ಬಳಿ ನಿಂತು ಜೋರಾಗಿ ಕೂಗು ಹಾಕುತ್ತಿದ್ದಳು.

"ಅಮ್ಮೌವ್ರೆ ಒಂದು ನಾಕು ರೂಪಾಯಿ ಈಗಲೇ ಕೊಟ್ಬು ಬಿಡಿ. ಇನ್ನೊಂದು ವಾರ ಕೊಡಬ್ಯಾಡಿ" ಎಂದು ಕೊಡುವವರೆಗೂ ಬಿಡದೆ ತೂರಾಡುತ್ತಾ ಅಲ್ಲೇ ಗಿರಕಿ ಹೊಡೆಯುತ್ತಾ ತನ್ನ ಕಷ್ಟವನ್ನೆಲ್ಲಾ ನೆನೆಯುತ್ತ ಕಣ್ಣೀರು ಹಾಕುತ್ತಾ ನಗುತ್ತಿದ್ದಳು. ಪಟ್ಟು ಬಿಡದೆ ಬೈಸಿಕೊಂಡಾದರೂ ಸರಿ ಹಣವನ್ನು ತೆಗೆದುಕೊಂಡೇ ಹೋಗುತ್ತಿದ್ದಳು. ಎಲ್ಲೋ ಊರಾಚೆ ಅವಳ ಗುಡಿಸಲ ಮನೆ. ಒಂದು ದಿನವೂ ಅವಳು ಒಳ್ಳೆಯ ಸೀರೆ ಯುಟ್ಟು ಬಂದು ಸಂಭ್ರಮಿಸಿದ್ದನ್ನು ನಾನು ನೋಡಲೇ ಇಲ್ಲ. ಯಾರೋ ಕೊಟ್ಟ ಮಾಸಲು ನೈಲೆಕ್ಸ್ ಸೀರೆಯನ್ನೇ ಅವಳು ಉಟ್ಟು ಬರುತ್ತಿದ್ದದು. 'ಅವಳು ಹೀಗೆ ಇರಬೇಕು' ಎಂದು ಹಣೆಬರಹವನ್ನು ಯಾರು ಬರೆದಿಟ್ಟದ್ದು? ಎಂದು, ಈ ಗಂಭಿರವಾದ ಪ್ರಶ್ನೆ ಮೂಡುತ್ತಿದೆ. ಆರ್ಥಿಕವಾದ ಬಡತನ ಎಷ್ಟೋ ಜನಕ್ಕೆ ಇರುತ್ತದೆ. ಅದು ಬಡತನದ ಸಮಾನತೆ ಆದರೆ ಆ 'ಸಮಾನತೆ'ಯ ನಡುವೆಯೂ 'ಅಸ್ಪೃಶ್ಯತೆ' ಎಂಬ ಪೆಡಂಭೂತದ ಕಂದಕ ಹೊಕ್ಕು ಮೇಲ್ಜಾತಿ–ಕೀಳ್ಜಾತಿ ಎಂಬ ಮಹಾಭೇದವನ್ನು ಹುಟ್ಟುಹಾಕಿತ್ತು.

ಕ್ರಮೇಣ ಕಾಲೇಜಿಗೆ ಬಂದು ಯೋಚಿಸತೊಡಗಿದ ಮೇಲೆಯೇ ಇವುಗಳ (ಈ ಜಾತಿ ಭೇದದ–ದಲಿತರ ಬವಣೆಯ) ಸ್ವರೂಪದ ಕರಾಳತೆ ನಿಖರವಾಗುತ್ತಾ ಹೋಗಿ ಇವೆಲ್ಲಾ ಮನುಷ್ಯ ನಿರ್ಮಿತ ಕ್ರೌರ್ಯದ ನಿಯಮಗಳೇ ಹೊರತು ಮಾನವೀಯತೆ ಅಲ್ಲವೇ ಅಲ್ಲ ಎಂಬ ಆತಂಕದ ನೋವು ತಿಳಿಯತೊಡಗಿತು. ಆಗಲೇ 'ಚಿಂತನಾಲಯ' ಎಂಬ ವೈಚಾರಿಕ ಸಂಘಟನೆಯೊಂದು ನಮ್ಮ ಕೆಲ ಸಮಾನ ಮನಸ್ಕರ ಒಡನಾಟದಲ್ಲಿ ನನ್ನೂರಾದ ಟಿ. ನರಸೀಪುರದಲ್ಲಿ ಹುಟ್ಟಿಕೊಂಡಿತು. ಕುವೆಂಪುವಿನ ಮನುಜಮತ– ವಿಶ್ವಪಥ–ಪೂರ್ಣ ದೃಷ್ಟಿ ಇವೇ ಮನುಷ್ಯನ ವಿಕಾಸದ ನಿಜದ ದಾರಿ ಎಂದು ಪ್ರಬಲವಾಗಿ ಅನ್ನಿಸಿತು. ಆನಂತರ ನಾನು ಈ ದಾರಿಯಲ್ಲೇ ನಡೆದು ಬಂದನೇ ವಿನಃ ತಪ್ಪಿಯೂ ಕೂಡ ಮನುಷ್ಯತ್ವಕ್ಕೆ ಮಾರಕವಾಗುವಂಥ ಭೀಭತ್ಸ 'ಅಸ್ಪೃಶ್ಯತೆ'ಯ ಪರವಾಗಿ ವರ್ತಿಸಿಲ್ಲ. ವರ್ತಿಸಲು ಸಾಧ್ಯವಾದರೆ ತಾನೇ?! ಆ ವೇಳೆಗೆ ಸದ್ಯ ನಮ್ಮ ಮನೆಯಲ್ಲಿ ಸುಸಜ್ಜಿತ ಪಾಯಿಖಾನೆಯ ಸೌಲಭ್ಯವಿತ್ತು. 'ಕುವೆಂಪು' ಅವರ 'ಜಲಗಾರ' ಓದುವಾಗ ಎಂಥ ಸಾಕ್ಷಾತ್ಕಾರ ಆಯಿತೆಂದರೆ 'ಶಿವ' ನನ್ನು ಮನೆಗೆ ನಿಜವಾಗಿ ಕೊಂಡುಹೋಗುವವನು ಬೀದಿಯನ್ನು ಸ್ವಚ್ಛಗೊಳಿಸುವ ಅವನೇ ಎಂಬ ಮಿಂಚು ಬೆಳಕಿನ ಚಿಂತನೆಯೊಂದು ಮೂಡಿತು.

ಅಂಬೇಡ್ಕರ್ ಹೇಳಿದ ಅವರ ಜೀವನ ತತ್ವದ ಬೆಳಕಾಗಿದ್ದ ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ, ನೈತಿಕ ಸ್ವಾತಂತ್ರ್ಯಗಳು ಪ್ರಜಾಪ್ರಭುತ್ವದ ಎಲ್ಲ ಪ್ರಜೆಗಳಿಗೆ ಲಭಿಸಬೇಕಾದ ಆತ್ಮ ಗೌರವದ ನಿಜವಾದ ಸ್ವಾತಂತ್ರ್ಯ ಎಂಬ ಚಿಂತನೆ ಮೂಡತೊಡಗಿತು. ಅಂಬೇಡ್ಕರ್ ಅನುಭವಿಸಿದ ಅವಮಾನದ ನೋವು ಅವರನ್ನು ಕೆತ್ತಿ ರೂಪಿಸಿದ ಶಿಲ್ಪವಾಗಿದ್ದು ನನಗೆ ಇಂದಿಗೂ ಬೆರಗು ಹುಟ್ಟಿಸುವ ಒಬ್ಬ 'ದಲಿತ' ತನ್ನ ಜೀವನವನ್ನು ಅತ್ಯುತ್ತಮವಾದ ಮಹತ್ತಿನ ಮಟ್ಟಕ್ಕೆ ಕೊಂಡೊಯ್ಯಬಹುದಾದ ಸಾಧನೆಯ ಪರಿಶ್ರಮದ ಮಾರ್ಗ ಎನಿಸಿತು. ಈಗ ಈ ಭೀಕರ 'ಅಸ್ಪೃಶ್ಯತೆ'ಯ ನಿರ್ಮೂಲನೆಗೆ ನನಗೆ ತೋಚುವ ಒಂದೇ ಮಾರ್ಗ–ಅರಿವು;

ಅಂಬೇಡ್ಕರ್ ಹೇಳಿದ ಅವರ ಜೀವನ ತತ್ವದ ಬೆಳಕಾಗಿದ್ದ ಆರ್ಥಿಕ ಸ್ವಾತಂತ್ರ್ಯ. ಸಾಮಾಜಿಕ ಸ್ವಾತಂತ್ರ್ಯ, ನೈತಿಕ ಸ್ವಾತಂತ್ರ್ಯಗಳು ಪ್ರಜಾಪ್ರಭುತ್ವದ ಎಲ್ಲ ಪ್ರಜೆಗಳಿಗೆ ಲಭಿಸಬೇಕಾದ ಆತ್ಮ ಗೌರವದ ನಿಜವಾದ ಸ್ವಾತಂತ್ರ್ಯ ಎಂಬ ಚಿಂತನೆ ಮೂಡತೊಡಗಿತು. ಅಂಬೇಡ್ಕರ್ ಅನುಭವಿಸಿದ ಅವಮಾನದ ನೋವು ಅವರನ್ನು ಕೆತ್ತಿ ರೂಪಿಸಿದ ಶಿಲ್ಪವಾಗಿದ್ದು ನನಗೆ ಇಂದಿಗೂ ಬೆರಗು ಹುಟ್ಟಿಸುವ ಒಬ್ಬ 'ದಲಿತ' ತನ್ನ ಜೀವನವನ್ನು ಅತ್ಯುತ್ತಮವಾದ ಮಹತ್ತಿನ ಮಟ್ಟಕ್ಕೆ ಕೊಂಡೊಯ್ಯಬಹುದಾದ ಸಾಧನೆಯ ಪರಿಶ್ರಮದ ಮಾರ್ಗ ಎನಿಸಿತು. ಈಗ ಈ ಭೀಕರ 'ಅಸ್ಪೃಶ್ಯತೆ'ಯ ನಿರ್ಮೂಲನೆಗೆ ನನಗೆ ತೋಚುವ ಒಂದೇ ಮಾರ್ಗ-ಅರಿವು; ಸ್ವವಿಮರ್ಶೆ.

ಸ್ವ ವಿಮರ್ಶೆ. ಮನದ ಮಲಿನ ತೊಳೆದುಕೊಳ್ಳುವಂಥ 'ಮೇಲ್ವರ್ಗ' ಎಂದು ಬಿಂಬಿಸಿಕೊಳ್ಳುವವರಲ್ಲಿ ಮೂಡಬೇಕಾದ ಜ್ಞಾನ, ಜೊತೆಗೆ ದಲಿತರಿಗೆ–ಶೋಷಿತರಿಗೆ ಸಿಗಲೇಬೇಕಾದ ಸಮಾನತೆ ಹಾಗೂ ಶಿಕ್ಷಣ.

ಅಲ್ಲಮನ ವಚನವೊಂದು ಹೀಗಿದೆ:-

ಮಾಯಾ ಮಲಿನ ಮನದಿಂದ ಅಗಲದೆ
ಕಾಯದ ದಂದುಗ ಕಳೆಯದೆ
ನಿಜವು ಬರಿದೇ ಸಾಧ್ಯವಪ್ಪುದೇ ಮರುಳೇ
ಗುಹೇಶ್ವರ ಲಿಂಗವನು ಅರಿಯಬಲ್ಲಡೆ
ನಿನ್ನ ನೀ ತಿಳಿದು ನೋಡಾ..........

ಮಹಾ ಮಾನವತಾವಾದಿ ಅಂಬೇಡ್ಕರ್‌ರ ಫೋಟೋವನ್ನು ಮಾತ್ರ ಮನೆಯಲ್ಲಿಟ್ಟು ಪೂಜಿಸಿ ಅವರು ತಮ್ಮವರೆಂದು ಅಭಿಮಾನ ಪಟ್ಟು ಅವರ ಜೀವನ ಕ್ರಮದ ಅನುಷ್ಠಾನವನ್ನು ಮರೆತು ಹೋಗುವವರ ಮೌಢ್ಯದ ಕುರಿತು ನನಗೆ ಅಸಮಾಧಾನವಾಗುತ್ತದೆ. ಅಂಬೇಡ್ಕರ್‌ರ 'ಭೀಮರಾವ್' ಎಂಬ ಹಳೆಯ ಹೆಸರಿನ – ಬಾಲ್ಯದ ಹೆಸರಿನ ಮುಂದೆ ಅವರು ವಯಸ್ಕರಾದಾಗ 'ಅಂಬೇಡ್ಕರ್' ಎಂಬ ಹೆಸರು ಸೇರಿಕೊಂಡಿದ್ದೇ ಅವರು 'ಗುರುಮುಖೇನ' ಜೀವನ ದರ್ಶನವನ್ನು ಪಡೆದ ಶಿಕ್ಷಣ ಸಂಸ್ಕೃತಿಯನ್ನು ಅರಗಿಸಿಕೊಂಡ– ಅಳವಡಿಸಿಕೊಂಡ ಸಂಕೇತ. ಹಿಂದೂ ಸಮಾಜದ ಅಸ್ಪೃಶ್ಯತೆಯ ಅಂಧಕಾರದ ಹೊಡೆತವನ್ನು ಇನ್ನು ಮೇಲೇಳಲಾರದಂತೆ ಅಂಬೇಡ್ಕರ್ ಅವರು ಬಾಲ್ಯದ ತಮ್ಮ ಶಾಲಾ ವಿದ್ಯಾಭ್ಯಾಸದಲ್ಲಿ ಅನುಭವಿಸಿ ತತ್ತರಿಸಿದಾಗಲೇ ಅವರ ಮನಸ್ಸಿನಲ್ಲಿ ಈ ಖಿನ್ನತೆಯನ್ನು ಮೀರುವ ಸ್ವಾಭಿಮಾನ ಮೊಳೆತಿತ್ತು.

ಇದಕ್ಕೆ ತಕ್ಕಂತೆ ಅವರ ತಂದೆಯಿಂದ ಕೂಡ ಅಂಬೇಡ್ಕರ್‌ರ ಶಿಕ್ಷಣದ ಸಂಸ್ಕಾರಕ್ಕೆ ಒತ್ತು ಸಿಗುವಂಥ ನೈತಿಕ ಬೆಂಬಲ ದೊರೆಯಿತು. ಈ ಬೆಂಬಲ–ನೋವುಗಳ ಮೊತ್ತವನ್ನಿಟ್ಟುಕೊಂಡೇ ಅಂಬೇಡ್ಕರ್ ಉನ್ನತ ವಿದ್ಯಾಭ್ಯಾಸವೊಂದೇ ಈ ಅಸ್ಪೃಶ್ಯತೆಯ–ತನ್ನ ಜನಾಂಗವನ್ನು ಅದಃಪತನದಿಂದ ಮೇಲೆತ್ತುವ ಏಕೈಕ ಬೆಳಕು ಎಂಬುದನ್ನು ಕಂಡುಕೊಂಡರು. ಮೋಟುಗೋಡೆಯ ಮೇಲಿನ ಚಿಮಣಿ ದೀಪದ ಪುಟ್ಟ ಗುಡಿಸಿಲಿನಂಥ ಮನೆಯಲ್ಲಿ ಪುಸ್ತಕದ ಬೆಳಕನ್ನು ಹೃದಯಕ್ಕೂ– ಬುದ್ಧಿಗೂ ತಂದುಕೊಂಡು ತಪಸ್ಸಿನಂತೆ ಜೀವನವನ್ನು ಶಿಸ್ತಿನಿಂದ ತಮ್ಮ ಗುರಿಗಾಗಿಸವೆಸಿ ಕೊನೆಗೂ ಆ ಮಹೋನ್ನತ ಶಿಖರ ತಲುಪಿ ಪ್ರಪಂಚಕ್ಕೇ ಮಾದರಿಯಾಗುವಂಥ 'DEMOCRACY- ಪ್ರಜಾಪ್ರಭುತ್ವ'ದ ಸುಂದರ ಸಂವಿಧಾನದ ಪರಿಕಲ್ಪನೆಯನ್ನು ಕೊಟ್ಟರು. 'ದಲಿತತನ'ವನ್ನು ಮೀರಿ ಎಲ್ಲ ಸ್ವಾತಂತ್ರ್ಯವನ್ನೂ ಪಡೆದು ಕೊನೆಗೆ ತಮ್ಮಿಚ್ಛೆಯ ಮನೋಧರ್ಮವನ್ನ ಅನುಸರಿಸಿ– ಅಸ್ಪೃಶ್ಯತೆಯನ್ನು ಧಿಕ್ಕರಿಸಿ ಮನುಷ್ಯರಾಗಿ ಕೊನೆಯುಸಿರೆಳೆದ ಅಂಬೇಡ್ಕರ್ ಇಂದು ಕೇವಲ ದಲಿತ ಜನಾಂಗಕ್ಕೆ ಮಾತ್ರ ಆದರ್ಶವಲ್ಲ. ಇಡೀ ಮಾನವ ಜನಾಂಗಕ್ಕೆ ಮಾದರಿಯಾಗಿ ಮೂಲಾಜಿಲ್ಲದೆ ಇರುವಂಥವರು.

'ಮೀಸಲಾತಿ'ಯ ಕಾನೂನು ಕ್ರಮವೂ ಕೂಡ ದಲಿತ ಜನಾಂಗಕ್ಕೆ ಸಮಾನತೆ ಕಲ್ಪಿಸುವಂಥ ಮಹತ್ತರ ಉದ್ದೇಶದಿಂದಲೇ ಸ್ವತಂತ್ರ ಭಾರತದಲ್ಲಿ ಜಾರಿಗೆ ಬಂತು. ಹುಟ್ಟುತ್ತಾ ಎಲ್ಲ ಮಗುವೂ ವಿಶ್ವ ಮಾನವನಾಗೇ ಹುಟ್ಟಿದರೂ ಕೂಡ ಈ 'ಜಾತಿ–ಮತ ವರ್ಣಾಶ್ರಮ'ಗಳ ಕಟ್ಟಳೆಗಳಲ್ಲಿ ತನ್ನದೇನೂ ತಪ್ಪಿಲ್ಲದೆಯೇ ಸಿಕ್ಕಿ ಹಾಕಿ ಕೊಂಡು ನರಳಬೇಕಾದ ಮಗು ಸಮಾನತೆಯಿಂದ 'ತಾನಿನ್ನು ದಲಿತನಲ್ಲ' ಎಂದು ತಲೆಯೆತ್ತಿ ನಡೆಯಲು ಈ 'ಮೀಸಲಾತಿ'

'ಮೀಸಲಾತಿ'ಯ ಕಾನೂನು ಕ್ರಮವೂ ಕೂಡ ದಲಿತ ಜನಾಂಗಕ್ಕೆ ಸಮಾನತೆ ಕಲ್ಪಿಸುವಂಥ ಮಹತ್ತರ ಉದ್ದೇಶದಿಂದಲೇ ಸ್ವತಂತ್ರ ಭಾರತದಲ್ಲಿ ಜಾರಿಗೆ ಬಂತು. ಹುಟ್ಟುತ್ತಾ ಎಲ್ಲ ಮಗುವೂ ವಿಶ್ವ ಮಾನವನಾಗೇ ಹುಟ್ಟಿದರೂ ಕೂಡ ಈ 'ಜಾತಿ–ಮತ ವರ್ಣಾಶ್ರಮ'ಗಳ ಕಟ್ಟಳೆಗಳಲ್ಲಿ ತನ್ನದೇನೂ ತಪ್ಪಿಲ್ಲದೆಯೇ ಸಿಕ್ಕಿ ಹಾಕಿಕೊಂಡು ನರಳಬೇಕಾದ ಮಗು ಸಮಾನತೆಯಿಂದ 'ತಾನಿನ್ನು ದಲಿತನಲ್ಲ' ಎಂದು ತಲೆಯೆತ್ತಿ ನಡೆಯಲು ಈ 'ಮೀಸಲಾತಿ' ಬೇಕೇ ಬೇಕು.

ಬೇಕೇ ಬೇಕು. ಆದರೆ ಈ'ಮೀಸಲಾತಿ'ಯ ಸೌಲಭ್ಯದಿಂದ ವ್ಯಕ್ತಿ ಮೈಗಳ್ಳನಾಗಿ–ಸೋಮಾರಿಯಾಗಿ ಬೆಳೆದರೆ ಮಾತ್ರ ಇದು ಆ ವ್ಯಕ್ತಿಯ ದಲಿತತನವನ್ನು ಇನ್ನಷ್ಟು ಪೋಷಿಸುವುದೇ ಹೊರತು ಇದರಿಂದ ಆತ ವಿಮುಕ್ತನಾಗಿ ಉನ್ನತಿಯ ಸಮಾನತೆಯನ್ನು ಸಾಧಿಸಿದಂತಾಗುವುದಿಲ್ಲ.

ಇಲ್ಲೊಬ್ಬರು ಕಣ್ಣಿನ ವೈದ್ಯರಿದ್ದಾರೆ. ಅವರು ಎಲ್ಲ ಮೀಸಲಾತಿಯ ಸವಲತ್ತುಗಳನ್ನು ಪಡೆದು ಜೀವನದಲ್ಲಿ ಆರ್ಥಿಕವಾಗಿ ತುಂಬಾ ಸುಭದ್ರವಾಗಿ, ಸರ್ಕಾರಿ ಆಸ್ಪತ್ರೆಯಲ್ಲಿ ಉನ್ನತ ಹುದ್ದೆ ದೊರೆತು ಸಮಾನತೆಯ ಹಂತ ತಲುಪಿದ್ದರೂ ಪ್ರತ್ಯೇಕ ಕ್ಲಿನಿಕ್ ಇಟ್ಟು ಸಂಜೆಯ ಹೊತ್ತು ಅಲ್ಲೂ ರೋಗಿಗಳನ್ನು ನೋಡಿ ದುಡ್ಡು ಮಾಡುತ್ತಾರೆ. ಆದರೆ ಇನ್ನೂ ಸಾಲದೆಂಬಂತೆ ಇನ್ನಾವುದಾದರೂ 'ಸೈಟು –ಜಮೀನು' ಇಂಥ ಆಸ್ತಿಗಳು ತಮ್ಮ ಜಾತಿಯ ಪ್ರಮಾಣ ಪತ್ರದಿಂದಾಗಿ ದಲಿತರಿಗೆ ಸಿಗುವ ಮೀಸಲಾತಿಯ ಕಾರಣದಿಂದ ಸಿಗುತ್ತದೆಂದಾದರೆ ಆ ವಿವರಗಳನ್ನೆಲ್ಲಾ ಮುಂದಿಟ್ಟು ಆ 'ಮೀಸಲಾತಿ'ಯನ್ನು ತಮ್ಮದಾಗಿಸಿಕೊಳ್ಳುವ ಹುನ್ನಾರದಲ್ಲಿ ತೊಡಗುತ್ತಾರೆ. ಇಂಥವರಿಂದ 'ಆಸೆಬುರುಕುತನ' ಬೆಳೆಯುತ್ತದೆಯೇ ಹೊರತು ದಲಿತರಿಗೆ ಇನ್ನಷ್ಟು ಅವಮಾನವಾಗಲು ತೊಡಗುತ್ತದೆ. ಇಂಥದ್ದಾಗಬಾರದು. ಸಮಾಜದ ತಳಮಟ್ಟದ ಮನುಷ್ಯ ಮೇಲೆ ಬರಲು ಮಾತ್ರ 'ಮೀಸಲಾತಿ' ನೆರವಾಗಬೇಕು.

ನಮ್ಮ ದೇವನೂರು ಮಹಾದೇವ ಅವರ ಸಾಹಿತ್ಯ ಓದುತ್ತಿದ್ದರೆ ದಮನಿತ ಜನರು ನೊಂದು–ಬೆಂದ ಆ ಕರಾಳತೆ ಕಣ್ಮುಂದೆ ಬಂದು ಕಣ್ಣೀರು ಇಳಿಯುತ್ತದೆ. ಅಷ್ಟೊಂದು ನೋವಿನ ಜೊತೆಯೂ ಅವರು ತಮ್ಮ ಪ್ರಖರ ಚಿಂತನೆಯ ಆಸರೆಯಿಂದಲೇ ಜೀವನ ಮಟ್ಟವನ್ನು ಎತ್ತರಿಸಿಕೊಂಡು ಕಲಾತ್ಮಕತೆಯನ್ನೂ ಸಾಹಿತ್ಯವನ್ನೂ ಎರಕ ಹೊಯ್ದು ಸಾಹಿತ್ಯ ಲೋಕಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. 'ನಾಡೋಜ' ಪ್ರಶಸ್ತಿಯನ್ನು ತಾತ್ವಿಕ ಕಾರಣಕ್ಕಾಗಿ ತಿರಸ್ಕರಿಸುವುದರಿಂದಲೇ 'ನಾಡೋಜ'ರಾಗಿದ್ದಾರೆ! ಹಾಗೂ 'ಪದ್ಮಶ್ರೀ ದೇವನೂರ ಮಹಾದೇವ' ಆಗಿ ಪ್ರಶಸ್ತಿಗೆ ಗೌರವವನ್ನು ತಂದಿದ್ದಾರೆ. 'ದಲಿತತನ' ಮೀರಲು ಇದು ಮಾದರಿಯಲ್ಲವೇ?

ಅವಮಾನಗಳನ್ನು ಮೀರಿ ಆತ್ಮಗೌರವವನ್ನು ಉಳಿಸಿಕೊಳ್ಳಲು ಸಾಧನೆ ಮಾಡುವಂಥ ವೈಚಾರಿಕ ಸ್ಪಷ್ಟತೆ–ಸಮಾನತೆ ದೊರೆತು ಇಂದು 'ದಲಿತರು' ಎಂಬ ಪಟ್ಟವನ್ನು ನಿರ್ಮೂಲನಗೊಳಿಸುವಂತ 'ಮನುಜಮತ'ವನ್ನು ನಾವೆಲ್ಲರೂ ಅನುಸರಿಸಬೇಕಾಗಿದೆ, ಶರಣರ ಕಾಲದ– ಬುದ್ಧ ಮನಸ್ಥಿತಿಯ ಎತ್ತರಕ್ಕೆ ಬೆಳೆಯಬೇಕಾಗಿದೆ. □

ದೇಸಿ ಸಂಸ್ಕೃತಿ ಮತ್ತು ಅಂಬೇಡ್ಕರ್

(40ನೇ ಪುಟದಿಂದ)

ಆದ್ದರಿಂದ ಪಟ್ಟ ಭದ್ರಹಿತಾಸಕ್ತಿಯ ಜೊತೆಗಿರುವ ವಿದ್ವಾಂಸರೆಲ್ಲರೂ ವಿಷಾದಿಸುತ್ತಿದ್ದಾರೆ. ಜಾತಿವಾದ ಜಾಸ್ತಿ ಆಗಿದೆ ಅಂತ. ಜಾತಿ ಯಾವತ್ತು ಇರಲಿಲ್ಲ ಭಾರತದಲ್ಲಿ? ಈವತ್ತು ಎಲ್ಲ ಜಾತಿಗಳು ತಮ್ಮ ಹಕ್ಕಿನ ಮಾತಾಡುತ್ತಿವೆ, ಆದ್ದರಿಂದಲೇ ವ್ಯವಸ್ಥೆಗೆ ಭಯವಾಗುತ್ತಿದೆ.

ಜಾತಿಗಳ ರಾಜಕೀಯ ಜಾಗೃತಿ ನಿರ್ಮಾಣವಾಗಿರುವ ರೂಪದಲ್ಲಿಯೇ ಸಂಸ್ಕೃತಿ ಅಸ್ಮಿತೆಗಳು ಕೂಡ ನಿರ್ಮಾಣವಾಗತೊಡಗಿವೆ. ಯಾವುದೇ ಕೆಳ ಜಾತಿಯನ್ನು ತೆಗೆದುಕೊಳ್ಳಿ, ಮರೆಮಾಚುವ ಪ್ರಶ್ನೆಯೇ ಇಲ್ಲ. ನನ್ನ ಜಾತಿ ಇಂತಹುದು ಎಂದು ಬಚ್ಚಿಡುವ ಕಾಲಘಟ್ಟ ಹೋಯಿತು. ತನ್ನ ಜಾತಿಯ ಹೆಮ್ಮೆಗಳು ಏನೇನಿತ್ತು ಅಂತ ಹುಡುಕಿ ಪುಸ್ತಕ ಬರೆಯೋದು ಪ್ರತೀ ಜಾತಿಯ ವಿದ್ವಾಂಸರ ಕೆಲಸವಾಗಿದೆ. ಇದರಲ್ಲಿ ಸ್ವಲ್ಪ ರೊಮ್ಯಾಂಟಿಕ್ ಅಂಶಗಳು, ವೈಭವೀಕರಣಗಳು ಸೇರಿಕೊಳ್ಳುತ್ತಿರಬಹುದು. ಇದು ಒಂದು ಕಾಲ ಘಟ್ಟ, ಪ್ರತಿಯೊಂದು ಕುಲವೂ ಕೂಡ ತನ್ನ ಲಾಂಛನಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದೆ. ಕುರುಬರು ಕನಕದಾಸನನ್ನು, ಉಪ್ಪಾರರು ಭಗೀರಥನನ್ನು ಹುಡುಕುತ್ತಾರೆ. ಗೊಲ್ಲರು ಕೃಷ್ಣನನ್ನು, ಇತರೆ ಕೆಲವು ಜಾತಿಗಳವರು ಒಬ್ಬ ಶರಣನನ್ನು, ಸಂತನನ್ನು ಹುಡುಕಿ, ಅವರ ಜಾತಿ ಅಸ್ಮಿತೆಯ ಲಾಂಛನವಾಗಿ ಬಳಸತೊಡಗಿದ್ದಾರೆ. ಇದೆಲ್ಲ ದೇಸಿ ಸಂಸ್ಕೃತಿ ಹೆಮ್ಮೆ ನಿರ್ಮಾಣಗೊಳ್ಳುತ್ತಿರುವುದರ ಅಂಗವಾಗಿಯೇ ಬರುತ್ತಿರುವುದು.

ಈ ಎಲ್ಲ ಪರಿಣಾಮಗಳ ಹಿನ್ನೆಲೆಯಲ್ಲಿಯೇ ಅಂಬೇಡ್ಕರ್ ಮತ್ತು ದೇಸಿ ಸಂಸ್ಕೃತಿ ನಿರ್ಮಾಣದ ವಿಷಯವನ್ನು ನಾವು ಗ್ರಹಿಸಬೇಕಿದೆ. ಬೌದ್ಧ ಸಾಂಸ್ಕೃತಿಕ ಮೂಲವನ್ನು ಒದಗಿಸಿಕೊಡುವುದರ ಮೂಲಕ ದಲಿತರಿಗೆ ಒಂದು ಹೊಸ ಅಸ್ಮಿತೆಯನ್ನು ಅವರು ಕೊಟ್ಟರು. ಅದು ದಲಿತರ ಕಳೆದುಹೋದ ಅಸ್ಮಿತೆಯನ್ನು ಪುನರ್ ನಿರ್ಮಿಸಿ ಕೊಡುವುದಾಗಿತ್ತು. ನಿರಾಕರಣೆಗೊಂಡಿದ್ದುದು ಆದಿ ಬೌದ್ಧ ಧರ್ಮ. ವೈದಿಕಶಾಹಿ ಧರ್ಮ ಅವರ ತಲೆಯ ಮೇಲೆ ಹೇರಲ್ಪಟ್ಟಿತ್ತು. ಅದನ್ನು ನಿರಾಕರಿಸಿ, ಅವರಿಗೆ ಮೂಲ ಆದಿ ಬೌದ್ಧ ಧರ್ಮದ ಆಶಯಗಳನ್ನು ಪುನರ್‌ಗಳಿಕೆ ಮಾಡಿಕೊಟ್ಟರು. ಹೊಸ ಅಸ್ಮಿತೆಯನ್ನು ನಿರ್ವಚಿಸಿದರು.

ಅಂಬೇಡ್ಕರ್ ಅವರು ಕೈಗೊಂಡ ನಿರಾಕರಣೆ ಮತ್ತು ಆಯ್ಕೆಯ ಪ್ರಕ್ರಿಯೆ ಈವತ್ತಿಗೂ ಮುಂದುವರೆಯುತ್ತಿದೆ. ನಾವು ನಿರಾಕರಿಸಬೇಕಾಗಿರುವಂತಹ ಸಾಂಸ್ಕೃತಿಕ ನಿರ್ವಚನಗಳು ಮತ್ತು ಮೌಲ್ಯಗಳಿವೆ ಹಾಗೆಯೇ ಹುಡುಕಾಡಬೇಕಾಗಿರುವ, ಪ್ರತಿಪಾದಿಸಬೇಕಾಗಿರುವ ಮತ್ತು ಪುನಾರಚಿಸಿ ಮಂಡಿಸಿ ಹೆಮ್ಮೆಯನ್ನು ಗಳಿಸಬೇಕಾದಂತಹ ಸಾಂಸ್ಕೃತಿಕ ಮೌಲ್ಯಗಳಿವೆ. ಆದ್ದರಿಂದಲೇ ಅಂಬೇಡ್ಕರ್ ರಾಜಕೀಯವಾಗಿ ದಾರ್ಶನಿಕ ಚಿಂತಕರಾಗಿ ಮಾತ್ರವಲ್ಲದೆ ದೇಸಿ ಸಂಸ್ಕೃತಿ ಪುನರ್‌ನಿರ್ಮಾಣದ ಮಾರ್ಗ ನಿರ್ಮಾಪಕರಾಗಿಯೂ ನಮ್ಮ ಗೌರವಕ್ಕೆ ಪಾತ್ರರಾಗುತ್ತಿದ್ದಾರೆ. □

(೬. ೧೨. ೨೦೦೬ ರಂದು ಮೈಸೂರು ವಿಶ್ವ ವಿದ್ಯಾಲಯದ ಡಾ. ಬಿ. ಆರ್ ಅಂಬೇಡ್ಕರ್ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಏರ್ಪಡಿಸಿದ್ದ ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ನೀಡಿದ ವಿಶೇಷ ಉಪನ್ಯಾಸದ ಮುಖ್ಯಾಂಶಗಳ ಬರಹ ರೂಪ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಛೇರಿ, ನಗರ ಪಾಲಿಕೆ ಕಛೇರಿಗಳು,
ಎನ್.ಆರ್. ವೃತ್ತ ಬೆಂಗಳೂರು - 560 002.

ಸಂಖ್ಯೆ : ಮು.ಆ(ಘ.ತ್ಯಾ.ನಿ)ಪಿ.ಆರ್/58/2010-11 ದಿನಾಂಕ : 11.03.2011

ನಾಗರಿಕರ ತಿಳುವಳಿಕೆಗಾಗಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರವನ್ನು ಸಂಗ್ರಹಿಸುವ ಬಗ್ಗೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ನೈರ್ಮಲೀಕರಣ ವ್ಯವಸ್ಥೆ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣಾ ವ್ಯವಸ್ಥೆಗೆ ವಾರ್ಷಿಕ ಸುಮಾರು 200 ಕೋಟಿ ವೆಚ್ಚವಾಗುತ್ತಿದ್ದು, ಈ ಮೊತ್ತವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಆದುದರಿಂದ ಕರ್ನಾಟಕ ಪೌರ ನಿಗಮಗಳ ಕಾಯಿದೆ 1976ರ ಪ್ರಕರಣ 103 ಬಿ ಅನ್ವಯ, ಹಾಗೂ ತೆರಿಗೆ ನಿಯಮಾವಳಿ 19 ಎ ರಲ್ಲಿ ಸೂಚಿಸಿರುವಂತೆ ಘನ ತ್ಯಾಜ್ಯ ವಸ್ತು ನಿರ್ವಹಣಾ ಉಪಕರವನ್ನು ನಗರದ ಆಸ್ತಿ ಮಾಲೀಕರಿಂದ ಈ ಕೆಳಕಂಡ ದರಗಳಲ್ಲಿ ಸಂಗ್ರಹಿಸಲು ನಿಗದಿಪಡಿಸಲಾಗಿದೆ:-

1. ವಾಸದ ಕಟ್ಟಡಗಳಿಗೆ

ವಿವರ	ಮಾಹೆಯಾನ
1000 ಚದರಡಿವರೆಗೆ ಇರುವ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 10
1001 ಚದರಡಿಯಿಂದ 3000 ಚದರಡಿ ವರೆಗೆ ಇರುವ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 30
3001 ಚದರಡಿಗಿಂತ ಮೇಲ್ಪಟ್ಟ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 50

2. ವಾಣಿಜ್ಯ ಕಟ್ಟಡಗಳಿಗೆ

ವಿವರ	ಮಾಹೆಯಾನ
1000 ಚದರಡಿವರೆಗೆ ಇರುವ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 50
1001 ಚದರಡಿಯಿಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 100
5001 ಚದರಡಿಗಿಂತ ಮೇಲ್ಪಟ್ಟ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 200

3. ಕೈಗಾರಿಕಾ ಕಟ್ಟಡಗಳಿಗೆ

ವಿವರ	ಮಾಹೆಯಾನ
1000 ಚದರಡಿವರೆಗೆ ಇರುವ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 100
1001 ಚದರಡಿಯಿಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 200
5001 ಚದರಡಿಗಿಂತ ಮೇಲ್ಪಟ್ಟ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 300

4. ಹೋಟೇಲ್‌ಗಳು, ಕಲ್ಯಾಣ ಮಂಟಪಗಳು, ನರ್ಸಿಂಗ್ ಹೋಂ

ವಿವರ	ಮಾಹೆಯಾನ
1000 ಚದರಡಿವರೆಗೆ ಇರುವ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 300
1001 ಚದರಡಿಯಿಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 500
5001 ಚದರಡಿಗಿಂತ ಮೇಲ್ಪಟ್ಟ ಆವರಣಕ್ಕೆ	ಪ್ರತಿ ತಿಂಗಳಿಗೆ ರೂ. 600

ಮೇಲ್ಕಂಡ ಉಪಕರವನ್ನು ಆಸ್ತಿ ತೆರಿಗೆ ಪಾವತಿ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಪಾವತಿ ಮಾಡಬೇಕಾಗುತ್ತದೆ. ಈ ರೀತಿ ಪಾವತಿ ಮಾಡಲು ಸ್ವಯಂ ಘೋಷಣಾ ಆಸ್ತಿ ತೆರಿಗೆ ನಮೂನೆಯ ಜೊತೆಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರಗಳ ಸ್ವಯಂ ಘೋಷಣಾ ನಮೂನೆಯನ್ನು ಒದಗಿಸಲಾಗುತ್ತದೆ. ಈ ನಮೂನೆಯಲ್ಲಿ ಆಯಾ ಕಟ್ಟಡದ ಅಳತೆ ಮತ್ತು ಉಪಯೋಗವನ್ನು ನಮೂದಿಸಿ, ಅದಕ್ಕನುಗುಣವಾಗಿ ಉಪಕರವನ್ನು ಪಾವತಿ ಮಾಡತಕ್ಕದ್ದು.

ಈ ದರಗಳು ದಿನಾಂಕ 01.04.2011 ರಿಂದ ಜಾರಿಗೆ ಬರುತ್ತವೆ. ದಿನಾಂಕ : 01.04.2011 ರಿಂದ ಆಯಾ ಸ್ವತ್ತಿನ ಮಾಲೀಕರು ಅಥವಾ ಅನುಭೋಗದಾರರು ತಮ್ಮ ಸ್ವತ್ತಿನ ಪೂರ್ಣ ವರ್ಷದ ಅಥವಾ ಅರ್ಧವರ್ಷದ ಆಸ್ತಿ ತೆರಿಗೆ ಪಾವತಿ ಮಾಡುವ ಸಂದರ್ಭದಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರವನ್ನೂ ಸಹ ಕಡ್ಡಾಯವಾಗಿ ವರ್ಷದ ಪ್ರಾರಂಭದಿಂದ 60 ದಿವಸಗಳ ಒಳಗೆ ಆಯಾ ವರ್ಷದ ಪೂರ್ಣ/ಅರ್ಧ ವರ್ಷದ ಉಪಕರವನ್ನು ಮುಂಗಡವಾಗಿ ಪಾವತಿ ಮಾಡಲು ಈ ಮೂಲಕ ತಿಳಿಸಲಾಗಿದೆ. ಪೂರ್ಣ ವರ್ಷದ ಆಸ್ತಿ ತೆರಿಗೆ ಪಾವತಿ ಮಾಡುವವರು ಘನ ತ್ಯಾಜ್ಯ ವಸ್ತು ನಿರ್ವಹಣಾ ಉಪಕರವನ್ನು ಪೂರ್ಣ ವರ್ಷದ ಅವಧಿಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು. ತಪ್ಪಿದ್ದಲ್ಲಿ ಮಹಾನಗರ ಪಾಲಿಕೆ ಕಂದಾಯ ಇಲಾಖೆಯ ಸಿಬ್ಬಂದಿಯು, ಆಯಾ ಕಟ್ಟಡದ ಅಳತೆ ಮತ್ತು ಉಪಯೋಗಕ್ಕನುಗುಣವಾಗಿ ಘನ ತ್ಯಾಜ್ಯ ವಸ್ತು ನಿರ್ವಹಣಾ ಉಪಕರವನ್ನು ವಿಧಿಸಿ, ತಿಳುವಳಿಕೆ ಪತ್ರ ನೀಡಿ, ದಂಡ / ಬಡ್ಡಿ ಸಮೇತ ವಸೂಲು ಮಾಡುತ್ತಾರೆ.

ನಗರ ನೈರ್ಮಲೀಕರಣ ವ್ಯವಸ್ಥೆಯ ಉತ್ತಮತೆಗಾಗಿ ಈ ಉಪಕರಗಳು ಅತ್ಯಂತ ಅಗತ್ಯವಾಗಿವೆ ಎಂಬುದನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಸಹಿ/-
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಲಿತ ಬಂಡವಾಳಶಾಹಿ ಹಾಗೂ ಅಂಬೇಡ್ಕರ್‌ವಾದದ ಪುನರ್ ವಿಮರ್ಶೆ



ಕಾಲಮಾನ-೧೫

ಡಾ. ಮುಜಾಫರ್ ಅಸ್ಸಾದಿ

ಕಳೆದ ಕೆಲವು ತಿಂಗಳಿಂದ ಒಂದು ಮಹತ್ವವಾದ ಚರ್ಚೆಯೊಂದು ನಡೆಯುತ್ತಿದೆ. ಅದು ಬಂಡವಾಳಶಾಹಿ ಮತ್ತು ದಲಿತ ಆಧುನಿಕತೆಯ ಕುರಿತಾದ ಚರ್ಚೆಯೆನ್ನಬಹುದು, ಈ ಚರ್ಚೆಯ ಕೇಂದ್ರದ ವಿಷಯ ದಲಿತ ಬಂಡವಾಳಶಾಹಿಯನ್ನು ಗುರುತಿಸಲು ಇಂದಿನ ಸಂದರ್ಭದಲ್ಲಿ ಸಾಧ್ಯವೇ ಎಂಬುದಾಗಿದೆ. ಎರಡನೇದಾಗಿ ದಲಿತ ಆಧುನಿಕತೆ ದಲಿತ ಬಂಡವಾಳಶಾಹಿಗಳನ್ನಾಗಿ ಯಾಕೆ ನಿರ್ಮಿಸಲು ಸಾಧ್ಯವಾಗಲಿಲ್ಲ? ದಲಿತರು ವೈರುಧ್ಯಗಳ ಸಂಕೇತಗಳಾಗುತ್ತಿದ್ದಾರೆಯೇ? ಅಲ್ಲದೇ ಅಂಬೇಡ್ಕರ್‌ವಾದದ ಪುನರ್ ವಿಮರ್ಶೆಯ ಅಗತ್ಯತೆ ಇದೆಯೇ?

ಬಂಡವಾಳ ಶಾಹಿಯ ಕುರಿತು ಮಹತ್ವದ ಚರ್ಚೆ ಬಂದಿರುವುದು ಉದಾರವಾದಕ್ಕಿಂತಲೂ ಮಾರ್ಕ್ಸ್‌ವಾದದಲ್ಲಿ. ಉದಾರವಾದಿಗಳಾದ ಆಡಂ ಸ್ಮಿತ್, ರಿಕಾರ್ಡೋ ಇತ್ಯಾದಿ ಚಿಂತಕರು ಅದರ ಬೆಳವಣಿಗೆಯನ್ನು ಅಥವಾ ಉಗಮವನ್ನು ಅಂದಿನ ಸಂದರ್ಭದಲ್ಲಿ ಗುರುತಿಸದರೂ, ಅದಕ್ಕೆ ಹೊಸ ಆಯಾಮವನ್ನು ಮಾರ್ಕ್ಸ್ ನೀಡುತ್ತಾನೆ, ಬಂಡವಾಳಶಾಹಿ ಬಗ್ಗೆ ಮಾರ್ಕ್ಸ್‌ನಲ್ಲಿ ಎರಡು ವಾದವಿದೆ: ಒಂದನೇ ವಾದದಲ್ಲಿ ಅದನ್ನು ಪ್ರಗತಿಪರ ಎಂದು ಕರೆಯುತ್ತಾನೆ ಎರಡನೇ ವಾದದಲ್ಲಿ ಅದು ವಿನಾಶದ, ಶೋಷಣೆಯ ಸಂಕೇತವಾಗಿ ಗುರುತಿಸುತ್ತಾನೆ. ವಾಸ್ತವವಾಗಿ ಬಂಡವಾಳಶಾಹಿಯ ಉಗಮಕ್ಕೆ ಒಂದೇ ಒಂದು ಕಾರಣವನ್ನು ನೀಡುವುದಿಲ್ಲ. ಕೃಷಿಯ ಶೋಷಣೆ ಬಂಡವಾಳಶಾಹಿಗೆ ಪ್ರಾಥಮಿಕ ತಳಹದಿಯನ್ನು ನೀಡಿದರೆ, ವಸಾಹತುಗಳ ಶೋಷಣೆ ಅದರ ವಿಶ್ವರೂಪದ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತ್ತು ಎಂದು ಕೂಡ ವಾದಿಸುತ್ತಾನೆ. ಬಂಡವಾಳ ಶಾಹಿಗೆ ಕೆಲವು ಲಕ್ಷಣಗಳಿವೆ: ಅದು ಭಲಾಢ್ಯ ಉತ್ಪಾದನಾ ರೂಪ, ಅದು ಇನ್ನಿತರ ಸಾಮಾಜಿಕ ಸಂರಚನೆಯನ್ನು ನಾಶಮಾಡಿ ಬೆಳೆಯುತ್ತದೆ, ಅದು ಜಗತ್ತಿನಾದ್ಯಂತ ಏಕ ರೂಪದಲ್ಲಿ ಶೋಷಿಸುತ್ತದೆ,

ವಿಚಿತ್ರವೆಂದರೆ ಮಾರ್ಕ್ಸ್‌ವೋತ್ತರ ಮಾರ್ಕ್ಸ್‌ವಾದ ಬಂಡವಾಳ ಶಾಹಿಯನ್ನು ವಿವಿಧ ಪ್ರಬೇಧಗಳಾಗಿ ಗುರುತಿಸುವುದಿಲ್ಲ. ಅದನ್ನು ಏಕೀಕೃತ ರೂಪವಾಗಿ ನೋಡುವ ಪರಿ ಮಾರ್ಕ್ಸ್ ವಾದದಲ್ಲಿ ಸರ್ವಸಾಮಾನ್ಯ. ವಾಸ್ತವವಾಗಿ ಬಂಡವಾಳಶಾಹಿಯನ್ನು ಒಂದು ನಿರ್ಧಿಷ್ಟ ದೃಷ್ಟಿಕೋನದಿಂದ ನೋಡಬಾರದು. ಅದನ್ನು ಬಹು ರೂಪಿಯಾಗಿ ಗುರುತಿಸುವುದು ಅವಶ್ಯಕ. ಅದನ್ನು ಒಂದು ಸಾಮಾಜಿಕ ವ್ಯವಸ್ಥೆಯಾಗಿ, ಉತ್ಪಾದನೆಯ ರೂಪವಾಗಿ, ಉತ್ಪಾದನೆಯ ಹಂತವಾಗಿ, ಯಜಮಾನಿಕೆಯ ತತ್ವವಾಗಿ ನೋಡಲೇಬೇಕು. ಅದರೊಂದಿಗೆ ಅದರಲ್ಲಿರುವ ವಿವಿಧ ಪ್ರಕಾರಗಳನ್ನು ಗುರುತಿಸಬೇಕು, ಮಾರ್ಕ್ಸ್‌ವಾದ ಬರೇ ಕೈಗಾರೀಕ ಬಂಡವಾಳಶಾಹಿಗೆ ಒತ್ತು ನೀಡುತ್ತ ವಿವಿಧ ಪ್ರಕಾರಗಳನ್ನು ಗುರುತಿಸಸುವುದಿಲ್ಲ. ಕೈಗಾರಿಕ ಬಂಡವಾಳ ಶಾಹಿಯೊಂದಿಗೆ ಕೃಷಿಯ, ವಾಣಿಜ್ಯದ, ವ್ಯಾಪಾರ, ಪ್ರಾಂತೀಯ ಬಂಡ ವಾಳಶಾಹಿಯನ್ನು ಗುರುತಿಸುವ ಅವಶ್ಯಕತೆ ಇದೆ. ಇವೆಲ್ಲರ ಸ್ವರೂಪಗಳು ಅಂತಿಮ ವಿಶ್ಲೇಷಣೆಯಲ್ಲಿ ಒಂದೇ ಆದರೂ ಅವುಗಳ ಆಂತರಿಕ ಚೌಕಟ್ಟಿನಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ಕೈಗಾರೀಕ ಬಂಡವಾಳಶಾಹಿ ಇವತ್ತು ಸಾಂಪ್ರದಾಯಿಕ ಬಂಡವಾಳಶಾಹಿಯಾಗಿ ಉಳಿದಿಲ್ಲ ಇದೇ ಸ್ಥಿತಿ ಕೃಷಿ ಬಂಡವಾಳಶಾಹಿಗೂ ಅನ್ವಯಿಸುತ್ತದೆ. ಕೈಗಾರೀಕ ಬಂಡವಾಳಶಾಹಿಯ ಶೋಷಣೆಯ ಸ್ವರೂಪ ಬಹಳಷ್ಟು ಬದಲಾಗಿದೆ- ಇವತ್ತಿನ ಸಂದರ್ಭದಲ್ಲಿ ಮಾರುಕಟ್ಟೆಯ ಶೋಷಣೆ ಪ್ರಾಥಮಿಕ ಶೋಷಣೆಯ ಸ್ಥಾನವನ್ನು ಹಾಗೂ ಸ್ವರೂಪವನ್ನು ಪಡೆಯುತ್ತಿರುವುದನ್ನು ನಾವು ನಿರಾಕರಿಸಲು ಸಾಧ್ಯವಿಲ್ಲ.

ಈ ಚೌಕಟ್ಟಿನ ಹಿನ್ನಲೆಯಲ್ಲಿ ಅಂಬೇಡ್ಕರೋತ್ತರ ದಲಿತ ಚಿಂತನೆಗಳನ್ನು ವಿಶ್ಲೇಷಿಸಬೇಕು. ವಿಪರ್ಯಾಸವೆಂದರೆ ದಲಿತ ಚಿಂತನೆ, ಚಳುವಳಿಗಳು ಇವತ್ತೀಗೂ ಕೂಡ ಅಂಬೇಡ್ಕರ್ ವಾದವನ್ನು ಯಾವುದೇ ವಿಮರ್ಶೆಗಳಿಲ್ಲದೆ, ಟೀಕೆ ಟಿಪ್ಪಣಿಗಳಿಲ್ಲದೇ ಒಪ್ಪಿಕೊಳ್ಳುತ್ತದೆ.

ಅಂಬೇಡ್ಕರ್ ಬಂಡವಾಳದ ಕುರಿತು ಚರ್ಚಿಸುವ ಸಂದರ್ಭದಲ್ಲಿ ಕೈಗಾರೀಕಾ ಬಂಡವಾಳ ಪ್ರಭಲವಾಗಿದ್ದ ಕಾಲ. ಅಲ್ಲದೇ ಜಾತೀಯ ಚೌಕಟ್ಟು ಗಟ್ಟಿಯಾಗಿದ್ದ ಕಾಲವದು. ಆದ ಕಾರಣ ಅಂಬೇಡ್ಕರ್‌ಗೆ ಅಂದಿನ ಸಂದರ್ಭದಲ್ಲಿ ಎರಡು ವೈರಿಗಳು ಪ್ರಮುಖವಾಗಿದ್ದವು ಹಾಗೂ ಸಹಜವಾಗಿದ್ದವು: ಬ್ರಾಹ್ಮಣವಾದ ಹಾಗೂ ಬಂಡವಾಳಶಾಹಿ ವಾದ. ಇದು 1938ರ ರೈಲ್ವೇ ಕಾರ್ಮಿಕರ ಭಾಷಣವೊಂದರಲ್ಲಿ ವ್ಯಕ್ತವಾಯಿತು. ಆಸಕ್ತಿಯ ವಿಷಯವೆಂದರೆ ಅಂಬೇಡ್ಕರ್‌ರವರು ಬಂಡವಾಳಶಾಹಿಯನ್ನು ವಿಮರ್ಶಿಸುತ್ತಾ ಸಮಾಜವಾದಿಯಾಗಿ ಹೊರಹೊಮ್ಮುತ್ತಾರೆ. ವಿಚಿತ್ರವೆಂದರೆ ಅವರನ್ನು ಇತಿಹಾಸದಲ್ಲಿ ಬಂಡವಾಳ ಶಾಹಿಯ ಟೀಕಾಕಾರಗಿಂತಲೂ ಒಬ್ಬ ಉದಾರವಾದಿಯ ಪ್ರತಿಪಾದಕನೆಂದು ಚಿತ್ರಿಸಲಾಗುತ್ತದೆ,

ವಾಸ್ತವವಾಗಿ ಭಾರತದಲ್ಲಿ ದಲಿತ ಬಂಡವಾಳಶಾಹಿ ಉಗಮಿಸಲು ಅಥವಾ ಬೆಳೆಯಲು ಸಾಧ್ಯವಿಲ್ಲ ಎಂಬ ವಾದವನ್ನು ತೇಲಿ ಬಿಡಲಾಗುತ್ತದೆ. ಯಾಕೆಂದರೆ ಚಾರಿತ್ರಿಕವಾಗಿ ದಲಿತರನ್ನು ಆರ್ಥಿಕ ಚೌಕಟ್ಟಿನಿಂದ ಹೊರಗಿಟ್ಟ ಕಾರಣ ಅವರು ಬಂಡವಾಳ ಶಾಹಿಗಳಾಗಲು ಸಾಧ್ಯವಿಲ್ಲ ಎಂಬ ನಿರ್ಣಾಯಕ ವಾದವನ್ನು ಮುಂದಿಡುವುದು ಸಹಜ. ಇದಕ್ಕೆ ಪೂರಕವಾಗಿ ಅಂಕಿಅಂಶಗಳು ಕೂಡ ಹೇಳುತ್ತವೆ. ಸಾಚಾರ್ ಸಮಿತಿ, ರಂಗನಾಥ ಮಿಶ್ರ ಸಮಿತಿಯ ಅಂಕಿಅಂಶಗಳನ್ನು ಗಮನಿದರೆ ಇದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಇತ್ತೀಚಿನ ವರುಷಗಳಲ್ಲಿ ಹುಟ್ಟಿದ ದಲಿತ್ ಚೆಂಬರ್ಸ್ ಆಂಡ್ ಕಾಮರ್ಸ್ ಏನನ್ನು ಪ್ರತಿನಿಧಿಸುತ್ತದೆ?

ಇದು ಗುಮಾನಿಗೆ ದಾರಿ ಮಾಡಿಕೊಡುತ್ತದೆ. ಅ ಗುಮಾನಿ ದಲಿತ ಬಂಡವಾಳಶಾಹಿ ಹುಟ್ಟಿನ ಕುರಿತಾಗಿದೆ. ಈ ಸಂದರ್ಭದಲ್ಲಿ ದಲಿತ ಬಂಡವಾಳಶಾಹಿ ಎಂಬ ವಿಶಿಷ್ಟವಾದ ಬಂಡವಾಳಶಾಹಿಯನ್ನು ಗುರುತಿಸಲು ಸಾಧ್ಯವೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ವಾಸ್ತವವಾಗಿ ಬಂಡವಾಳಶಾಹಿಯನ್ನು ನಿರ್ಧಿಷ್ಟ ಸಮುದಾಯದ ಭಾಗವಾಗಿ ನೋಡಬಾರದು ಎಂಬ ವಾದ ಭಾರತಕ್ಕೆ ಅಥವಾ ಆಫ್ರಿಕಾಕ್ಕೆ ಅನ್ವಯಿಸುವುದಿಲ್ಲ. ಇವತ್ತು ಪಾಶ್ಚಾತ್ಯಾ ಬಂಡವಾಳ ಶಾಯಿಗೆ ಪೂರಕವಾಗಿ ಅಥವಾ ಪರ್ಯಾಯವಾಗಿ ಆಫ್ರಿಕನ್ ಬಂಡವಾಳಶಾಹಿ ಇದೆ, ವೈಟ್ ಬಂಡವಾಳಶಾಹಿಗೆ ಪರ್ಯಾಯವಾಗಿ ಬ್ಲ್ಯಾಕ್ ಬಂಡವಾಳ ಶಾಹಿ ಇದೆ. ಆದ ಕಾರಣ ದಲಿತ ಬಂಡವಾಳ ಶಾಹಿ ಎಂಬ ಪದದ ಉಪಯೋಗ ಅದರ ಹುಟ್ಟುವಿಕೆಯನ್ನು

ಅಂಬೇಡ್ಕರ್ ಬಂಡವಾಳದ ಕುರಿತು ಚರ್ಚಿಸುವ ಸಂದರ್ಭದಲ್ಲಿ ಕೈಗಾರೀಕಾ ಬಂಡವಾಳ ಪ್ರಭಲವಾಗಿದ್ದ ಕಾಲ. ಅಲ್ಲದೇ ಜಾತೀಯ ಚೌಕಟ್ಟು ಗಟ್ಟಿಯಾಗಿದ್ದ ಕಾಲವದು. ಆದ ಕಾರಣ ಅಂಬೇಡ್ಕರ್‌ಗೆ ಅಂದಿನ ಸಂದರ್ಭದಲ್ಲಿ ಎರಡು ವೈರಿಗಳು ಪ್ರಮುಖವಾಗಿದ್ದವು ಹಾಗೂ ಸಹಜವಾಗಿದ್ದವು: ಬ್ರಾಹ್ಮಣವಾದ ಹಾಗೂ ಬಂಡವಾಳ ಶಾಹಿ ವಾದ. ಇದು ೧೯೩೮ರ ರೈಲ್ವೇ ಕಾರ್ಮಿಕರ ಭಾಷಣವೊಂದರಲ್ಲಿ ವ್ಯಕ್ತವಾಯಿತು. ಆಸಕ್ತಿಯ ವಿಷಯವೆಂದರೆ ಅಂಬೇಡ್ಕರ್‌ರವರು ಬಂಡವಾಳ ಶಾಹಿಯನ್ನು ವಿಮರ್ಶಿಸುತ್ತಾ ಸಮಾಜವಾದಿಯಾಗಿ ಹೊರಹೊಮ್ಮುತ್ತಾರೆ.

ಹಾಗೂ ಅಸ್ತಿತ್ವವನ್ನು ತೋರಿಸುತ್ತದೆ. ಆದರೆ ಅದು ಇನ್ನೂ ಬಾಲ್ಯಾವಸ್ಥೆಯಲ್ಲಿದೆ ಎಂದು ಹೇಳ ಬೇಕಾಗಿದೆ.

ಒಂದೆರೆಡು ಅಂಶಗಳು ಅದರ ಅಸ್ತಿತ್ವವನ್ನು ಹಾಗೂ ಹುಟ್ಟುವಿಕೆಯನ್ನು ಎತ್ತಿತ್ತೋರಿಸುತ್ತದೆ. ಕಳೆದ ವರುಷ ಪುಣೆಯಲ್ಲಿ ದಲಿತ ಕೈಗಾರಿಕೋದ್ಯಮಿಗಳು ಸಭೆ ಸೇರಿದ್ದರು. ಅದರರ್ಥ ಭಾರತದ ಎಲ್ಲಾ ದಲಿತರು ಬಂಡವಾಳ ಶಾಹಿಗಳಾಗಿದ್ದಾರೆ ಎಂದರ್ಥವಲ್ಲ. ಬೆರಳೆಣಿಕೆಯ ಉದ್ಯಮಿಗಳು ಈ ಕಾರ್ಯಕ್ರಮಗಳನ್ನು ಆಯೋಜಿಸಿದ ಕಾರಣ ಇದು ಎಲ್ಲಾ ದಲಿತರನ್ನು ಪ್ರತಿನಿಧಿಸುವುದಿಲ್ಲ. ಈಗ ದಲಿತ ಕೈಗಾರಿಕೋದ್ದಮಿಗಳೆಂದು ಗುರುತಿಸಲ್ಪಡುವ ವ್ಯಕಿಗಳೆಂದರೆ: ಕಮಾನಿ ಸ್ಟೀಲ್ ಮತ್ತು ಪೈಪ್ ಕಂಪೆನಿಯ ಮಾಲೀಕರು.

ಅಂಬೇಡ್ಕರೋತ್ತರ ವರ್ತಮಾನದಲ್ಲಿ ಬಂಡವಾಳ ಶಾಹಿಯ ಹೊಸ ರೂಪವನ್ನು ಚರ್ಚಿಸುವ ಅಗತ್ಯವಿದೆ. ಅಂಬೇಡ್ಕರ್‌ರವರ ಬಂಡವಾಳಶಾಹಿ ಕುರಿತಾದ ಟೀಕೆಯನ್ನು ಹೊಸ ಮಾರುಕಟ್ಟೆಗೆ ವಿಸ್ತರಿಸುವ ಅಗತ್ಯವೂ ಇದೆ. ಅಲ್ಲದೇ ಭಾರತದ ಸಂದರ್ಭದಲ್ಲಿ ಅದು ಫ್ಯೂಡಲ್ ಸಾಮಾಜಿಕ ಚೌಕಟ್ಟಿನೊಂದಿಗೆ ಅನುಸಂಧಾನ ಮಾಡುತ್ತಾ ತನ್ನ ಅಸ್ತಿತ್ವವನ್ನು ಹೇಗೆ ಉಳಿಸಿಕೊಳ್ಳಲು ಸಾಧ್ಯವಾಯಿತು ಎಂಬುಧರ ಕುರಿತು ಕೂಡ ದೀರ್ಘವಾದ ಚರ್ಚೆ ನಡೆಯ ಬೇಕಾಗಿದೆ. ಅದಕ್ಕಿಂತಲೂ ಮುಖ್ಯವಾಗಿ ಬಂಡವಾಳ ಶಾಹಿಯ ಜಾತೀಯ ಚೌಕಟ್ಟನ್ನು ಹಾಗೂ ನೆಲಗಟ್ಟುಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಭಾರತದಲ್ಲಿ ಜಾತಿಯ ಕುರಿತು ಬಹಳಷ್ಟು ಚರ್ಚೆಗಳು ಈಗಾಗಲೇ ನಡೆದಿವೆ. ದಲಿತ ಚಳುವಳಿಗಳು, ಅಬೇಡ್ಕರೋತ್ತರ ದಲಿತ ಚಿಂತನೆಗಳು ಜಾತಿ ಹಾಗೂ ಪ್ರಭುತ್ವ, ಜಾತಿಗಳ ಯಜಮಾನಿಕೆ ಕುರಿತು ಸಾಕಷ್ಟು ಚರ್ಚಿಸಿವೆ. ಆದರೆ ಜಾತಿಯ ಚೌಕಟ್ಟು ಬಂಡವಾಳಶಾಹಿ ಬೆಳವಣಿಗೆಗೆ ಹೇಗೆ ತಡೆಯೊಡ್ಡಿತ್ತು ಎಂಬುದರ ಬಗ್ಗೆ ಚಿಂತಿಸಲಿಲ್ಲ. ವಾಸ್ತವವಾಗಿ ಭಾರತದಲ್ಲಿ ಬೆಳೆದ ಬಂಡವಾಳ ಶಾಹಿ ಕೆಳಸ್ತರದಿಂದ ಬರಲಿಲ್ಲ. ಅನು ವಸಾಹತುಶಾಹಿಯ ಭಾಗವಾಗಿ, ಮೇಲ್ಪದರವಾಗಿ ಸಾಮಾಜಿಕ ಸಂರಚನೆಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಾ ಬೆಳೆಯಿತು. ವಿಚಿತ್ರವೆಂದರೆ ಭಾರತದಲ್ಲಿ ಬಂಡವಾಳಶಾಹಿ ಹಾಗೂ ಜಾತಿ ವ್ಯವಸ್ಥೆ ಜೊತೆ ಜೊತೆಯಾಗಿ ಬೆಳೆದವು. ಈ ಸಂದರ್ಭದ ವೈರುಧ್ಯವೆಂದರೆ: ಒಂದೆಡೆ ಜಾತಿಯ ವ್ಯವಸ್ಥೆ ವಸಾಹತುಶಾಹಿಯ ಆಧುನಿಕತೆಯೊಂದಿಗೆ ಅನ್ಸುಸಂಧಾನ ಮಾಡುತ್ತಾ ಬದಲಾಗುತ್ತಾ ಹೋದರೂ, ಅದು ಜಾತಿಯನ್ನು ನಾಶ ಮಾಡಲು ಸಾಧ್ಯವಾಗಲೇ ಇಲ್ಲ.

> **ಅಂಬೇಡ್ಕರೋತ್ತರ ವರ್ತಮಾನದಲ್ಲಿ ಬಂಡವಾಳ ಶಾಹಿಯ ಹೊಸ ರೂಪವನ್ನು ಚರ್ಚಿಸುವ ಅಗತ್ಯವಿದೆ. ಅಂಬೇಡ್ಕರ್‌ರವರ ಬಂಡವಾಳಶಾಹಿ ಕುರಿತಾದ ಟೀಕೆಯನ್ನು ಹೊಸ ಮಾರುಕಟ್ಟೆಗೆ ವಿಸ್ತರಿಸುವ ಅಗತ್ಯವೂ ಇದೆ. ಅಲ್ಲದೇ ಭಾರತದ ಸಂದರ್ಭದಲ್ಲಿ ಅದು ಫ್ಯೂಡಲ್ ಸಾಮಾಜಿಕ ಚೌಕಟ್ಟಿನೊಂದಿಗೆ ಅನುಸಂಧಾನ ಮಾಡುತ್ತಾ ತನ್ನ ಅಸ್ತಿತ್ವವನ್ನು ಹೇಗೆ ಉಳಿಸಿಕೊಳ್ಳಲು ಸಾಧ್ಯವಾಯಿತು ಎಂಬುದರ ಕುರಿತು ಕೂಡ ದೀರ್ಘವಾದ ಚರ್ಚೆ ನಡೆಯಬೇಕಾಗಿದೆ. ಅದಕ್ಕಿಂತಲೂ ಮುಖ್ಯವಾಗಿ ಬಂಡವಾಳ ಶಾಹಿಯ ಜಾತೀಯ ಚೌಕಟ್ಟನ್ನು ಹಾಗೂ ನೆಲೆಗಟ್ಟುಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಭಾರತದಲ್ಲಿ ಜಾತಿಯ ಕುರಿತು ಬಹಳಷ್ಟು ಚರ್ಚೆಗಳು ಈಗಾಗಲೇ ನಡೆದಿವೆ. ದಲಿತ ಚಳುವಳಿಗಳು, ಅಬೇಡ್ಕರೋತ್ತರ ದಲಿತ ಚಿಂತನೆಗಳು ಜಾತಿ ಹಾಗೂ ಪ್ರಭುತ್ವ, ಜಾತಿಗಳ ಯಜಮಾನಿಕೆ ಕುರಿತು ಸಾಕಷ್ಟು ಚರ್ಚಿಸಿವೆ. ಆದರೆ ಜಾತಿಯ ಚೌಕಟ್ಟು ಬಂಡವಾಳಶಾಹಿ ಬೆಳವಣಿಗೆಗೆ ಹೇಗೆ ತಡೆಯೊಡ್ಡಿತ್ತು ಎಂಬುದರ ಬಗ್ಗೆ ಚಿಂತಿಸಲಿಲ್ಲ. ವಾಸ್ತವವಾಗಿ ಭಾರತದಲ್ಲಿ ಬೆಳೆದ ಬಂಡವಾಳಶಾಹಿ ಕೆಳಸ್ತರದಿಂದ ಬರಲಿಲ್ಲ.**

ಇದೇ ಸಂದರ್ಭದಲ್ಲಿ ಜಾತಿಯ ಚೌಕಟ್ಟು ಆಧುನಿಕವಾಗುತ್ತಾ ಹೋದರೂ ಅದು ಎಲ್ಲಾ ಜಾತಿಗಳನ್ನು ತನ್ನ ತಕ್ಕೆಯಲ್ಲಿ ತರಲು ಸಾಧ್ಯವಾಗಲೇ ಇಲ್ಲ. ಎಷ್ಟೋ ಜಾತಿಗಳು ವಸಾಹತುಶಾಹಿಯ ಆಧುನಿಕತೆಯಿಂದ ಹೊರಗಿಳಿದವು. ಆಧುನಿಕತೆಯ ಭಾಗವಾಗಿದ್ದ ಬಂಡವಾಳಶಾಹಿ ಕೆಲವೇ ಜಾತಿಗಳಿಗೆ ಸೀಮಿತವಾಯಿತು. ಇದಕ್ಕೆ ವಸಾಹತುಶಾಹಿ ಎಷ್ಟು ಕಾರಣವೋ ಅಷ್ಟೇ ಕಾರಣ ಜಾತಿಯ ಮೌಲ್ಯಗಳು. ಜಾತಿಯ ಮೌಲ್ಯಗಳು ದಲಿತರನ್ನು ಕೈಗಾರಿಕ ಅಥವಾ ರೈತಾಪಿ ಬಂಡವಾಳಶಾಹಿಗಳಾಗಲು ಬಿಡಲಿಲ್ಲ. ದಲಿತರಲ್ಲಿದ್ದ ಎಷ್ಟೋ ಜಾತಿಗಳು ವಸಾಹತುಶಾಹಿಯ ರಾಜಕಾರಣಕ್ಕೆ ಬಲಿಯಾದವು. ಬಹುಷ: ವಸಾಹತು ಸಂದರ್ಭದಲ್ಲಿ ದಲಿತರಲ್ಲಿದ್ದ ಮಹಾರಾಷ್ಟ್ರದ ಮಹರ್‌ಗಳು, ಉತ್ತರ ಪ್ರದೇಶದ ಚಮ್ಮಾರ ಹಾಗೂ ಇನ್ನಿತರ ಚಿಕ್ಕ ಪುಟ್ಟ ಜಾತಿಗಳು ಮಾತ್ರ ಆಧುನಿಕವಾದವು ಆದರೆ ಬಂಡವಾಳಶಾಹಿಗಳಾಗಲಿಲ್ಲ, ಅದು ಸಾಧ್ಯನೂ ಇರಲಿಲ್ಲ.

ವಾಸ್ತವವಾಗಿ ಈ ಸಮುದಾಯಗಳಿಗೆ ಆಧುನಿಕತೆಯಿಂದ ದೊರೆತ ಅವಕಾಗಳೂ ಕೂಡ ಸೀಮಿತವಾಗಿದ್ದವು, ಅದು ಮೂಲತ:ವಾಗಿ ಶಿಕ್ಷಣ, ರಾಜಕೀಯ ಪ್ರಾತಿನಿಧಿತ್ವ ಇತ್ಯಾದಿಗಳಿಗೆ ಮಾತ್ರ ಸೀಮಿತವಾಗಿತ್ತು. ದುರಂತವೆಂದರೆ ಭೂಮಿಯ ಪ್ರಶ್ನೆ ವಸಾಹತು ಸಂದರ್ಭದಲ್ಲಿ ಪ್ರಮುಖ ವಿಷಯವಾಗಲೇ ಇಲ್ಲ. ಅಲ್ಲದೇ ಸಮುದಾಯಗಳನ್ನು ಭೂ ಸುಧಾರಣೆಗಳ ಮೂಲಕ ಆಧುನಿಕವನ್ನಾಗಿಸುವ ವಿಷಯ ಪ್ರಧಾನವಾಗಲೇ ಇಲ್ಲ. ವಸಾಹತು ಸಂದರ್ಭದಲ್ಲಿ ಬಂಡವಾಳಶಾಹಿಗಳಾಗದೇ ಆಧುನಿಕನಾಗುವುದು ಆ ಸಂದರ್ಭದ, ಕಾಲಘಟ್ಟದ ವೈರುಧ್ಯವಲ್ಲದೇ ಮತ್ತೇನು? ಇದನ್ನು ಅಂಬೇಡ್ಕರ್ ಗಮನಿಸಲು ಸಾಧ್ಯವಾಗಲಿಲ್ಲವೇ? ಎಂಬ ಜಿಜ್ಞಾಸೆ ಇದೆ. ಅವರೂ ಕೂಡ ಈ ವೈರುಧ್ಯದ ಪ್ರಭಾವದಿಂದ ಹೊರತಾಗಿರಲಿಲ್ಲ. ಈ ವೈರುಧ್ಯವನ್ನು ದಲಿತ ಚಳುವಳಿ, ದಲಿತ ಚಿಂತನೆ ಇಂದಿನ ಸಂದರ್ಭದಲ್ಲಿ ಗಮನಿಸಬೇಕಾದ ಅವಶ್ಯಕತೆ ಇದೆ.. ಅಲ್ಲದೇ ಸ್ವಾತಂತ್ರೋತ್ತರ ಆಧುನಿಕತೆ ತಂದಿರುವ ಮಹತ್ತರ ಬದಲಾಣೆ ಹಾಗೂ ಬಂಡವಾಳಶಾಹಿಯಲ್ಲಿ ಆಗಿರುವ ಬದಲಾವಣೆಯನ್ನು ಗಮನಿಸಬೇಕಾದ ಮತ್ತೊಂದು ತುರ್ತಾದ ಅವಶ್ಯಕತೆ ಇದೆ. ಬಹುಷ: ಇದು ಅಂಬೇಡ್ಕರ್ ಚಿಂತನೆಯನ್ನು ಮತ್ತೊಮ್ಮೆ ಪುನರ್ ವಿಮರ್ಶೆ ಮಾಡಬಹುದು.

ಅಂಬೇಡ್ಕರೋತ್ತರ ದಲಿತ ಚಳುವಳಿ ದಲಿತರನ್ನು ಬಂಡವಾಳಶಾಹಿಗಳಾನ್ನಾಗಿಸುವ ಸಂಕಥನವನ್ನು, ವೈಚಾರಿಕ ಚಿಂತನೆಯನ್ನು ನೆಲೆಗಟ್ಟುಗಳನ್ನು ಕಟ್ಟಲಿಲ್ಲವೆಂದು ವಾದಿಸಿದರೆ ಅತಿಶಯೋಕ್ತಿಯಾಗಲಾರದು. ಬಹಳಷ್ಟು ಸಲ ಚಳುವಳಿ ಕೇಂದ್ರೀಕರಿಸಿದ್ದು ರಾಜಕೀಯ ವಿಷಯಗಳ ಬಗ್ಗೆ. ಆದಕಾರಣ ಬಹಳಷ್ಟು ಚರ್ಚೆಗಳು ರಾಜಕೀಯ ಕೇಂದ್ರಿಕೃತವಾಗಿದ್ದವೇ ಹೊರತು ದಲಿತ ಬಂಡವಾಳಾಶಾಹಿ ಕುರಿತಾಗಿರಲಿಲ್ಲ, ದಲಿತ ಚಳುವಳಿ ಬಹಳಷ್ಟು ಸಲ ತನ್ನ ಸಂಕಥನವನ್ನು, ರಾಜಕೀಯವನ್ನು ದಲಿತ ಆಧುನಿಕತೆಗೆ ಸಿಮೀತಗೊಳಿಸಿತ್ತು. ಇದರ ಪರಿಣಾಮವೆಂದರೆ ಅಂಬೇಡ್ಕರ್ ಈ ಆಧುನಿಕತೆಯ ಸಂಕೇತವಾದರು/ ಅಂಬೇಡ್ಕರ್ ರವರ ಶೈಲಿಯನ್ನು ಅನುಕರಿಸುವುದು ಇದರ ಒಂದು ಬಹು ಮುಖ್ಯ ಭಾಗವಾಯಿತು. ಅಲ್ಲದೇ ಮೇಲ್ಜಾತಿಯವರ ಜೀವನ ಶೈಲಿಯ ಅನುಕರಣೆ ಇದರ ಇನ್ನೊಂದು ರೂಪಕವಾಯಿತು. ವಿಚಿತ್ರವೆಂದರೆ ಗಟ್ಟಿಯಾಗದ, ಸ್ಥಿರಗೊಳ್ಳದ ಆರ್ಥಿಕ ತಳಹದಿಗಳ ಮೇಲೆ ದಲಿತರು ಆಧುನಿಕರಾದರು. ಟೊಳ್ಳು ಆರ್ಥಿಕ ತಳಹದಿಯ ಸಂದರ್ಭದಲ್ಲಿ ಆಧುನಿಕತೆಯೊಂದಿಗೆ ಅನುಸಂದಾನ ಮಾಡಿದರೆ ಆಗುವ ಪರಿಣಾಮಗಳ ಬಗ್ಗೆ ದಲಿತ ಚಳುವಳಿ ಗಮನಿಸಲೇ ಇಲ್ಲ.

ದಲಿತ ಚಳುವಳಿ ಸಾಗುತ್ತಿರುವ ಪರಿಯನ್ನು ಗಮನಿಸಿದರೆ ಅದು ಅಂಬೇಡ್ಕರ್‌ರವರ ತತ್ವವನ್ನು ಒಂದೆಡೆ ಯಥಾವತ್ತಾಗಿ ಒಪ್ಪಿಕೊಳ್ಳುತ್ತಾ ಮತ್ತೊಂದೆಡೆ ಅಂಬೇಡ್ಕರ್ ವಾದಗಳ ಆತ್ಮಲೋಕನ ಮಾಡುವುದೇ ಇಲ್ಲ. ಇದು ಸ್ಪಷ್ಟವಾಗಿ ಗ್ರಾಮ ಪಂಚಾಯತ್ ವ್ಯವಸ್ಥೆ ಬಗ್ಗೆ ಅಂಬೇಡ್ಕರ್‌ಗಿದ್ದ ನಿಲುವಿನಲ್ಲಿ ನೋಡಬಹುದು. ಇದರ ಕುರಿತು ದಲಿತ ಚಳುವಳಿ ಟೀಕೆ ಟಿಪ್ಪಣಿಗಳನ್ನು ಮಾಡುವುದೇ ಇಲ್ಲ. ಅಂಬೇಡ್ಕರ್‌ಗೆ ಪಂಚಾಯತ್ ವ್ಯವಸ್ಥೆ ಅದೇ ಹಳೇಯ ಭೂಮಾಲೀಕರ ಯಜಮಾನಿಕೆಯ ಸಂಕೇತ. ಅಂಬೇಡ್ಕರವರ ಈ ವಾದವನ್ನು ಪುನರ್ ವಿಮರ್ಶಿಸುವ ಗೋಜಿಗೆ ಹೋಗಲು ದಲಿತ ಚಳುವಳಿಗಳು ಹಿಂಜರಿಯುತ್ತದೆ.

ಎರಡನೇದಾಗಿ ಭೂಮಿಯ ಪ್ರಶ್ನೆ ಅಥವಾ ಕೈಗಾರೀಕರಣ ವಿಷಯ ಬಂದಾಗ ಅಂಬೇಡ್ಕರ್‌ರವರ ವಾದವನ್ನು ಯಥಾತ್ತಾಗಿ ಒಪ್ಪಲೇಬೇಕೆ? ಎಂಬ ಜಿಜ್ಞಾಸೆ ಬರುವುದು ಸಹಜ. ಅಂಬೇಡ್ಕರ್ ಭೂ ವ್ಯವಸ್ಥೆ ಬಂದಾಗ ಎತ್ತಿದ ಕೆಲವು ವಿಷಯಗಳನ್ನು ಒಪ್ಪಬಹುದು. ಅವರಿಗೆ ಭೂಮಿಯ ಹಿಡುವಳಿಗಾತ್ರ ಮುಖ್ಯವಾಗಿರಲಿಲ್ಲ., ಈ ವಾದವನ್ನು ಯಥಾವತ್ತಾಗಿ ಒಪ್ಪಲೇಬೇಕು. ಅದು ಅವರ ಸ್ಟೇಟ್ ಸೋಶಿಯಲಿಸಂನ ಭಾಗವಾಗಿತ್ತು. ಅಲ್ಲದೇ ಸಣ್ಣ ಹಿಡುವಳಿಗಳು ದೊಡ್ಡ ಹಿಡುವಳಿಗಳೊಂದಿಗೆ ಉತ್ಪಾದನೆಯ ದೃಷ್ಟಿಯಿಂದ ಹಾಗೂ ಲಾಭದ ದೃಷ್ಟಿಯಿಂದ ವಿಲೀನಗೊಳ್ಳಬೇಕೆಂದು ವಾದಿಸಿದ್ದರು. ಅಲ್ಲದೇ ಸಹಕಾರಿ ಕೃಷಿಯನ್ನು ಕೂಡ ಮುಂದಿಟ್ಟಿದ್ದರು. ಭೂ ವ್ಯವಸ್ಥೆ

(49ನೇ ಪುಟಕ್ಕೆ)

ಮೀಸಲಾತಿಯನ್ನು ಬಿಡಿ

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಅನು: ಸತ್ಯಪ್ರಕಾಶ್ ಎಂ ಆರ್

ಇತ್ತೀಚೆಗೆ ಹಿಂದುಳಿದ ವರ್ಗಕ್ಕೆ ಸೇರಿದ ನನ್ನ ಸ್ನೇಹಿತರೊಬ್ಬರು ಹೀಗೆ ಮಾತನಾಡುವಾಗ "ಮೂರನೆಯ ತಲೆಮಾರಿನ ದಲಿತ ಫಲಾನುಭವಿಗಳು ಮೀಸಲಾತಿಯನ್ನು ಬಿಡಬೇಕು" ಎಂಬ ವಿಚಾರವನ್ನು ಪ್ರಸ್ತಾಪಿಸಿದರು. "ಮೀಸಲಾತಿಯ ಫಲಾನುಭವಿಗಳು ಮೀಸಲಾತಿಯ ಪರಿಧಿಯಿಂದ ಹೊರಬರಬೇಕೆನ್ನುವುದು ಮೀಸಲಾತಿಯ ಮೂಲಭೂತ ಗುರಿ. ಮೀಸಲಾತಿಯು ಮೂರನೆಯ ತಲೆಮಾರಿನವರು ಇತರ ಸಮುದಾಯಗಳೊಂದಿಗೆ ಸಮಾನರಾಗಬೇಕು, ಮತ್ತು ಅವಲಂಬಿಕೆಯಿಂದ ಮುಕ್ತರಾಗಬೇಕು."

ವೃತ್ತಿಯಿಂದ ಪೊಲೀಸ್ ಅಧಿಕಾರಿಯಾದ ನನ್ನ ಸ್ನೇಹಿತ ಯಾದವ ಸಮುದಾಯಕ್ಕೆ ಸೇರಿದವರು. ಅಧ್ಯಯನಶೀಲತೆಯನ್ನು ಮೈಗೂಡಿಸಿಕೊಂಡ ಪ್ರಜ್ಞಾವಂತರು. ಇಂತಹ ಅದ್ಭುತ ವಿಚಾರವನ್ನು ಪ್ರಸ್ತಾಪಿಸಿದ ಇವರಿಗೆ ನಾನು ಚಿರಋಣಿ.

ಒಂದು ಸರ್ಕಾರಿ ನೀತಿಯಾಗಿ ಮೀಸಲಾತಿ ದಲಿತ ಸಮುದಾಯಕ್ಕೆ ಪ್ರೋತ್ಸಾಹ ನೀಡಿದ್ದೇ ಅಲ್ಲದೆ, ದಲಿತ ಮಧ್ಯಮವರ್ಗದ ಸೃಷ್ಟಿಗೆ ಕಾರಣವಾಯಿತು. "ಮೂರನೆಯ ತಲೆಮಾರಿಗೆ ಸೇರಿದವರು (ಉದಾಹರಣೆಗೆ ತಂದೆ ಶಾಲಾ ಶಿಕ್ಷಕನಾಗಿದ್ದು, ಮಗ ಡಾಕ್ಟರ್ ಅಥವಾ ಎಂಜಿನಿಯರ್ ಆಗಿದ್ದರೆ, ಅವರ ಮಕ್ಕಳು ಮೀಸಲಾತಿ ಪಡೆಯುವುದು) ಮೀಸಲಾತಿ ಅಪೇಕ್ಷಿಸುವುದು ಕ್ರಾಂತಿಕಾರಿ ಮೀಸಲಾತಿ ನೀತಿಗೆ ಅವಮಾನ ಮಾಡಿದಂತೆ" ಎಂಬ ನನ್ನ ಸ್ನೇಹಿತನ ವಾದ ನಿಜವಾಗಿಯೂ ಸಮಂಜಸವಾದುದು.

ಶತಮಾನಗಳಿಂದ ಶೋಷಣೆಗೆ ಒಳಗಾದ, ತಾರತಮ್ಯಕ್ಕೆ ಒಳಗಾದ ದಲಿತರಿಗೆ ಮೀಸಲಾತಿಯ ಹಕ್ಕು ಇದೆ ಎಂಬುದರ ಬಗ್ಗೆ ನಮ್ಮಿಬ್ಬರ ಸಹಮತವಿದೆ. ಹಿಂದೆ ಮೇಲ್ಜಾತಿಯವರು ಭಾರತೀಯ ನಾಗರಿಕ ಸೇವೆಗೆ ಸೇರಲು ಬ್ರಿಟಿಷರಿಂದ ವಿಶೇಷ ವಿನಾಯಿತಿ ಪಡೆದದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ, ಒಂದು ಕುಟುಂಬ ಎಷ್ಟು ತಲೆಮಾರುಗಳವರೆಗೆ ಮೀಸಲಾತಿಯನ್ನು ಬಳಸಿಕೊಳ್ಳುವುದು ಸೂಕ್ತ ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ಮೂರನೆಯ ಪೀಳಿಗೆಯ ದಲಿತರು ಈಗಲೂ ಕೂಡ ಮೀಸಲಾತಿಯ ಲಾಭ ಪಡೆಯುತ್ತಿರುವುದರ ಹಲವಾರು ನಿದರ್ಶನಗಳನ್ನು ನಾನು ಕೊಡಬಲ್ಲೆ. ತಂದೆ ಭೂರಹಿತ ಕೃಷಿ ಕಾರ್ಮಿಕನಾಗಿದ್ದು, ಮಗ ಶಾಲಾ ಶಿಕ್ಷಕನಾಗಿದ್ದು, ಮೊಮ್ಮಗ ಮೀಸಲಾತಿ ಪಡೆಯುವುದರ ಬಗ್ಗೆ ನನ್ನ ತಕರಾರಿಲ್ಲ. ಆದರೆ, ತಂದೆ ಶಿಕ್ಷಕ ಅಥವಾ ಗುಮಾಸ್ತನಾಗಿದ್ದು, ಮಗ ವೈದ್ಯ, ಎಂಜಿನಿಯರ್, ಅಥವಾ ಐಎಎಸ್ ಅಧಿಕಾರಿಯಾಗಿದ್ದರೆ, ಆತನ ಮಗ ಮೀಸಲಾತಿ ಪಡೆಯಬಾರದು.

ದಲಿತರ ಸಬಲೀಕರಣದಿಂದ ಮುಜುಗರ ಅನುಭವಿಸುತ್ತಿರುವವರು ಮೀಸಲಾತಿ ನೀತಿಗೆ ಆಕ್ಷೇಪ ವ್ಯಕ್ತಪಡಿಸಲು ಈ ಪ್ರಶ್ನೆಯನ್ನು ಮುಂದಿಟ್ಟುಕೊಳ್ಳುತ್ತಾರೆ. "ನೋಡಿ, ಮೂರನೆಯ ತಲೆಮಾರಿನ ದಲಿತರೂ ಮೀಸಲಾತಿ ಪಡೆದುಕೊಳ್ಳುತ್ತಿದ್ದಾರೆ. ಕೆಲವೇ ಸಾವಿರ ದಲಿತ ಕುಟುಂಬಗಳು ಮೀಸಲಾತಿಯ ಮೇಲೆ ಏಕಸ್ವಾಮ್ಯತೆ ಸಾಧಿಸಿದ್ದಾರೆ. ಹತ್ತನೆಯ ತಲೆಮಾರಿನವರೂ ಕೂಡ ಮೀಸಲಾತಿ ಪಡೆಯಲು ಇವರು ಹಿಂಜರಿಯುವುದಿಲ್ಲ" ಎಂದು ದಲಿತರ ಸ್ಪರ್ಧಾತ್ಮಕ ಸಾಮರ್ಥ್ಯವನ್ನೇ ಇವರು ಪ್ರಶ್ನಿಸುತ್ತಾರೆ.

ಈ ರೀತಿಯ ಟೀಕೆ ಮಾಡುವ ಮೇಲ್ಜಾತಿಯವರ ವಾದ ತಪ್ಪೇ? ಖಂಡಿತ ಇಲ್ಲ. ಎರಡೆರಡು ಸಲ ಮೀಸಲಾತಿಯ ಲಾಭ ಪಡೆಯುವ ಬಹಳಷ್ಟು ಮಂದಿ ದಲಿತ ಕುಟುಂಬಗಳ ಬಗ್ಗೆ ನನಗೆ ತಿಳಿದಿದೆ. ದಲಿತ ಶಾಲಾ ಶಿಕ್ಷಕನ ಮಗ ಐಎಎಸ್ ಅಧಿಕಾರಿಯಾಗಿದ್ದು, ಆತ ಹೆಂಡತಿಯ ಹೆಸರಿನಲ್ಲಿ ಪೆಟ್ರೋಲ್ ಬಂಕ್ ಪರವಾನಗಿ ಪಡೆಯಲು ಮೀಸಲು ವರ್ಗದಲ್ಲಿ ಅರ್ಜಿ ಸಲ್ಲಿಸುತ್ತಾನೆ. ನಿವೃತ್ತಿ ಹೊಂದಿದ ನಂತರ ಆತ ವಿಧಾನಸಭೆ ಅಥವಾ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಮೀಸಲು ವರ್ಗದಡಿ ಟಿಕೆಟ್ ಅಪೇಕ್ಷಿಸುತ್ತಾನೆ.

ಇದರಿಂದ ಮೀಸಲಾತಿಯಂತಹ ಅದ್ಭುತ ಸೈದ್ಧಾಂತಿಕ ನೀತಿಯನ್ನು ನಗೆಪಾಟಲಿಗೀಡುಮಾಡಿದಂತಾಗುವುದಿಲ್ಲವೇ? ಕೆಳವರ್ಗದ ದಲಿತರೂ ಕೂಡ ಸಮುದಾಯದ ಮೇಲ್ಮಧ್ಯಮ ವರ್ಗದವರ ವಿರುದ್ಧ ತೀವ್ರ ಅಸಮಧಾನ ಹೊಂದಿದ್ದಾರೆ. "ಮೀಸಲಾತಿಯ ಎಲ್ಲ ಲಾಭಗಳನ್ನು ಈ ವರ್ಗ ಮಾತ್ರ ಪಡೆದುಕೊಳ್ಳುತ್ತಿವೆ" ಎಂಬ ಅಭಿಪ್ರಾಯ ಇಲ್ಲಿ ಕೂಡ ಚಾಲ್ತಿಯಲ್ಲಿರುವುದಂತೂ ಸತ್ಯ.

ಹೊಸ ವಿಚಾರಗಳನ್ನು ಪ್ರಸ್ತಾಪಿಸಲು ಯಾವಾಗಲೂ ಉತ್ಸುಕನಾಗಿರುವ ನಾನು, ಅಂತಹ ವಿಚಾರಗಳನ್ನು ಪರೀಕ್ಷಿಸಿ ಖಾತ್ರಿ ಪಡಿಸಿಕೊಳ್ಳಬಯಸುತ್ತೇನೆ. ಮೀಸಲಾತಿಯನ್ನು ವಿರೋಧಿಸುವವರಿಗೆ ಪೂರಕವಾಗಿ ನಾನು ಕೆಲವು ನಿದರ್ಶನಗಳನ್ನು ನೀಡಬಯಸುತ್ತೇನೆ. ಬಹಳಷ್ಟು ಮಂದಿ ಎರಡನೆಯ ತಲೆಮಾರಿನ ದಲಿತರು ಮೀಸಲಾತಿಯ ಪರಿಧಿಯಿಂದ ಹೊರಬಂದಿರುವುದನ್ನು ನಾನು ಗಮನಿಸಿದ್ದೇನೆ. ನನಗೆ ಪರಿಚಿತರಿರುವ ದಲಿತ ಐಎಎಸ್ ಅಧಿಕಾರಿಗಳ ಮಕ್ಕಳಿಬ್ಬರು ಇತ್ತೀಚೆಗೆ ಉನ್ನತ ಶಿಕ್ಷಣಕ್ಕಾಗಿ ಅಮೆರಿಕಾಗೆ ಹೋದರು. ಈ ಮಕ್ಕಳು ಸಿಬಿಎಸ್‌ಇ ಪರೀಕ್ಷೆಯಲ್ಲಿ ಮುಕ್ತ ವರ್ಗದಲ್ಲಿ 90% ಅಂಕಗಳನ್ನು ಗಳಿಸಿದ್ದರು. ಅದೇ ರೀತಿ ತಮ್ಮ ಪ್ರತಿಭೆಯ ಬಲದಿಂದ ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ಉದ್ಯೋಗ ಗಿಟ್ಟಿಸಿರುವ ಬಹಳಷ್ಟು ಮಂದಿಯ ಪರಿಚಯ ನನಗಿದೆ. ವಧು ವರಾನ್ವೇಷಣಾ ವೆಬ್ ತಾಣವೊಂದರಲ್ಲಿ ಎಸ್‌ಸಿ ವಿಭಾಗವನ್ನು ಜಾಲಾಡಿದರೆ, ಖಾಸಗಿ ಸಂಸ್ಥೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉದ್ಯೋಗ ಮಾಡುತ್ತಿರುವ ಬಹಳಷ್ಟು ಮಂದಿ ನಿಮಗೆ ಸಿಗುತ್ತಾರೆ.

ಮೇಲ್ಜಾತಿಯ ನನ್ನ ಕೆಲವು ಸ್ನೇಹಿತರೊಂದಿಗೆ ದಲಿತರು ಮುಕ್ತ ವರ್ಗದಲ್ಲಿ ಸ್ಪರ್ಧಿಸಿ ಉದ್ಯೋಗ ಪಡೆದದ್ದು, ಮತ್ತು ಎರಡನೆಯ ತಲೆಮಾರಿನ ದಲಿತರು ಮೀಸಲಾತಿಯ ಪರಿಧಿಯಿಂದ ಹೊರಬಂದುದರ ಬಗ್ಗೆ ಮಾತನಾಡಿದಾಗ ಅವರೆಲ್ಲರೂ, "ಮೀಸಲಾತಿ ನಿಜಕ್ಕೂ ಸಬಲೀಕರಣದ ಅದ್ಭುತ ನೀತಿ" ಎಂಬುದನ್ನು ಒಪ್ಪುತ್ತಾರೆ. ಅದೇ ರೀತಿ, ದಲಿತ ಐಎಎಸ್ ಅಧಿಕಾರಿ ತನ್ನ ಹೆಂಡತಿಯ ಹೆಸರಿನಲ್ಲಿ ಮೀಸಲು ವರ್ಗದಡಿ ಪೆಟ್ರೋಲ್ ಬಂಕ್ ಪರವಾನಗಿ ಪಡೆದು, ಈಗ ಮೀಸಲು ವರ್ಗದಡಿ ಚುನಾವಣೆಗೆ ಸ್ಪರ್ಧಿಸುತ್ತಿರುವ ಬಗ್ಗೆ ಪ್ರಸ್ತಾಪಿಸಿದಾಗ, "ಎಲ್ಲ ಸಮುದಾಯದಲ್ಲಿಯೂ ಇಂತಹ ಆಸೆ ಬುರುಕ ಜನರಿರುತ್ತಾರೆ" ಎಂದು ಸ್ವಲ್ಪ ಹಿಂಜರಿಕೆಯಿಂದಲೇ ಪ್ರತಿಕ್ರಿಯೆ ನೀಡುತ್ತಾರೆ. ಆದರೆ ಅವರ ಮಾತಿನ ಅರ್ಥ ಬೇರೆಯೇ ಇದೆ; ಇಂತಹ ದಲಿತರು ಒಟ್ಟಾರೆ ದಲಿತ ಸಮುದಾಯ ಮತ್ತು ಮೀಸಲಾತಿ ನೀತಿಗೆ ಕೆಟ್ಟ ಹೆಸರು ತರುತ್ತಿದ್ದಾರೆ.

ಮೂರನೆಯ ಪೀಳಿಗೆಯ ದಲಿತರು ಈಗಲೂ ಕೂಡ ಮೀಸಲಾತಿಯ ಲಾಭ ಪಡೆಯುತ್ತಿರುವುದರ ಹಲವಾರು ನಿದರ್ಶನಗಳನ್ನು ನಾನು ಕೊಡಬಲ್ಲೆ. ತಂದೆ ಭೂರಹಿತ ಕೃಷಿ ಕಾರ್ಮಿಕನಾಗಿದ್ದು, ಮಗ ಶಾಲಾ ಶಿಕ್ಷಕನಾಗಿದ್ದು, ಮೊಮ್ಮಗ ಮೀಸಲಾತಿ ಪಡೆಯುವು ದರ ಬಗ್ಗೆ ನನ್ನ ತಕರಾರಿಲ್ಲ. ಆದರೆ, ತಂದೆ ಶಿಕ್ಷಕ ಅಥವಾ ಗುಮಾ ಸ್ತನಾಗಿದ್ದು, ಮಗ ವೈದ್ಯ, ಎಂಜಿನಿಯರ್, ಅಥವಾ ಐಎಎಸ್ ಅಧಿಕಾರಿಯಾಗಿದ್ದರೆ, ಆತನ ಮಗ ಮೀಸಲಾತಿ ಪಡೆಯಬಾರದು. ದಲಿತರ ಸಬಲೀಕರಣದಿಂದ ಮುಜುಗರ ಅನುಭವಿಸುತ್ತಿರುವವರು ಮೀಸಲಾತಿ ನೀತಿಗೆ ಆಕ್ಷೇಪ ವ್ಯಕ್ತಪಡಿಸಲು ಈ ಪ್ರಶ್ನೆಯನ್ನು ಮುಂದಿಟ್ಟುಕೊಳ್ಳುತ್ತಾರೆ.

ಆತ್ಮ ಗೌರವ ಎಲ್ಲದಕ್ಕಿಂತ ಮುಖ್ಯ

ಮೂರನೆಯ ತಲೆಮಾರಿನ ದಲಿತರು ಮೀಸಲಾತಿಯನ್ನು ತೊರೆದರೆ ಎರಡು ರೀತಿಯ ಲಾಭವಿದೆ: ಮೀಸಲಾತಿಯನ್ನು ತೊರೆದುದರಿಂದ ಸಮಾಜದ ಮುಖ್ಯವಾಹಿನಿ ದಲಿತರ ಬಗ್ಗೆ ಗೌರವ ಬೆಳೆಸಿಕೊಳ್ಳುತ್ತದೆ, ಮತ್ತು ಮೇಲ್ಮಧ್ಯಮ ವರ್ಗದ ದಲಿತರು ಬಿಟ್ಟುಕೊಟ್ಟ ಸ್ಥಾನಗಳು ದಲಿತರ ಬಳಿಯೇ ಉಳಿದು, ದಲಿತ ಮಧ್ಯಮ ವರ್ಗ ಇನ್ನೂ ವಿಸ್ತಾರಗೊಳ್ಳುತ್ತದೆ.

* * * * * *

ಒಂದು ವರ್ಷದ ಹಿಂದೆ ದೆಹಲಿಯಲ್ಲಿ ದಲಿತರು ಸಮುದಾಯದ ಸಮಸ್ಯೆಗಳ ಕುರಿತ ವಿಚಾರಗೋಷ್ಠಿ ಹಮ್ಮಿಕೊಂಡಿದ್ದರು. ಗೋಷ್ಠಿಯಲ್ಲಿ ಎಂಜಿನಿಯರುಗಳು, ವೈದ್ಯರು, ವೃತ್ತಿಪರರು ಮತ್ತು ಸರ್ಕಾರಿ ಅಧಿಕಾರಿಗಳು ಹಾಜರಿದ್ದರು. ಬಹುತೇಕ ದಲಿತ ಮಧ್ಯಮವರ್ಗದವರು ಆಯೋಜಿಸಿದ್ದ ಈ ಸಮ್ಮೇಳನದಲ್ಲಿ ಮಾತನಾಡಲು ನನಗೂ ಕೂಡ ಆಹ್ವಾನ ನೀಡಲಾಗಿತ್ತು.

ಅಂದು "ಮೇಲ್ಜಾತಿಯವರು ಈಗಲೂ ನಮ್ಮನ್ನು ಯಾಕೆ ಇಷ್ಟಪಡುವುದಿಲ್ಲ" ಎಂಬ ವಿಚಾರ ಮುಖ್ಯವಾಗಿ ಚರ್ಚೆಯಾಯಿತು. ಉತ್ತಮವಾಗಿ ಕಾರ್ಯ ನಿರ್ವಹಿಸಿದರೂ ಕೂಡ ತಮ್ಮ ಕುರಿತ ರಹಸ್ಯ ವರದಿಯನ್ನು ಮೇಲಧಿಕಾರಿಗಳು ಬೇಕಂತಲೇ ತಪ್ಪಾಗಿ ಬರೆದುದರ ಬಗ್ಗೆ ಬಹಳಷ್ಟು ಮಂದಿ ಹೇಳಿಕೊಂಡರು. ಕೆಲವು ವರ್ಷಗಳ ಸಾಧಾರಣ ಕಾರ್ಯನಿರ್ವಹಣಾ ವರದಿಯಿಂದ ವೃತ್ತಿಯಲ್ಲಿ ಬಡ್ತಿಗೆ ಖಂಡಿತ ತೊಡಕಾಗುತ್ತದೆ. ಜೊತೆಗೆ, ಕಠಿಣ ಪರಿಶ್ರಮ ವಹಿಸಿ ದುಡಿದರೂ ಕೂಡ ದಲಿತರಿಗೆ ಅಷ್ಟೇನೂ ಮುಖ್ಯವಲ್ಲದ ಹುದ್ದೆಗಳನ್ನು ನೀಡಲಾಗುತ್ತದೆ. ಮೇಲಧಿಕಾರಿಗಳು ತಮ್ಮ ಅತ್ಯುತ್ತಮವಾದ ಸಾಧನೆಯನ್ನು ಪ್ರೋತ್ಸಾಹಿಸುವ ಮಾತುಗಳನ್ನು ಎಂದೂ ಆಡುವುದಿಲ್ಲ ಎಂಬುದು ಬಹುತೇಕ ಜನರ ಅಳಲಾಗಿತ್ತು.

"ಭಾರತ ಇನ್ನೂ ಜಾತಿರಹಿತ ಸಮಾಜವಾಗಿ ಪರಿವರ್ತಿತವಾಗಿಲ್ಲ" ಎಂದು ಮಾತನಾಡಲು ಆರಂಭಿಸಿದ ನಾನು, ದೇಶದಲ್ಲಿ ಬಹಳಷ್ಟು ಬದಲಾವಣೆಗಳಾಗಿದ್ದರೂ, ಜಾತಿವ್ಯವಸ್ಥೆ ನಮ್ಮ ಕಣ್ಮುಂದಿರುವ ಕರಾಳ ಸತ್ಯ. ಇದನ್ನು ನಾವು ಎದುರಿಸಲೇ ಬೇಕು. ತಾರತಮ್ಯಗಳು ಕೊನೆಯಾಗಲೂ ಇನ್ನೂ ಸಮಯ ಬೇಕು ಎಂದು ವಿವರಿಸಿದೆ.

ನಾವು ಎಲ್ಲದಕ್ಕೂ ಬೆಲೆ ತೆರಲೇಬೇಕಾಗುತ್ತದೆ, ಮೀಸಲಾತಿಗೂ ಅಷ್ಟೇ. ಯಾವುದೇ ಒಬ್ಬ ದಲಿತ 'ಮೀಸಲಾತಿ ವರ್ಗ'ದಲ್ಲಿ ಕೆಲಸ ಗಿಟ್ಟಿಸಿದರೆ, ಜೀವನಪರ್ಯಂತ 'ಮೀಸಲಾತಿಯ ಹುಡುಗ' ಎಂಬ ಹಣೆಪಟ್ಟಿಯೊಡನೆ ಬದುಕಬೇಕಾಗುತ್ತದೆ. ಉದಾಹರಣೆಗೆ, ಮಾಜಿ ರಾಷ್ಟ್ರಪತಿ ಕೆ ಆರ್ ನಾರಾಯಣನ್ ಅವರನ್ನು ದಲಿತ ರಾಷ್ಟ್ರಪತಿ ಎಂದೇ ಕರೆಯಲಾಗುತ್ತಿತ್ತು. ಇಂಗ್ಲಿಷ್ ಎಂ ಎ ಚಿನ್ನದ ಪದಕ ಪಡೆದ ನಾರಾಯಣನ್, ಸಂಕಷ್ಟದ ಸಮಯದಲ್ಲಿ ಚೀನಾ ಮತ್ತು ಅಮೆರಿಕಾ ದೇಶಗಳಲ್ಲಿ ಭಾರತದ ರಾಯಭಾರಿಯಾಗಿ ಕೆಲಸ ನಿರ್ವಹಿಸಿದ್ದವರು.

ಅಂಬೇಡ್ಕರ್ ಅವರ ಸಾಮರ್ಥ್ಯದ ಬಗ್ಗೆ ಯಾವುದೇ ಜಾತಿಯವರ ಅಭಿಪ್ರಾಯ ಕೇಳಿ ನೋಡಿ, ಅವರು ಇಪ್ಪತ್ತನೆಯ ಶತಮಾನದ ಮಹಾನ್ ಬೌದ್ಧಿಕ ವ್ಯಕ್ತಿ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಅಂಬೇಡ್ಕರ್ ಯಾವುದೇ ಮೀಸಲಾತಿಯಿಲ್ಲದೆ, ಕೊಲಂಬಿಯಾ ವಿಶ್ವ ವಿದ್ಯಾನಿಲಯದಲ್ಲಿ ದಾಖಲಾತಿ ಪಡೆದವರು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಕೂಡ ಇತರ ವಿದ್ಯಾರ್ಥಿಗಳಂತೆ ಪ್ರವೇಶ ಪಡೆದವರು ಅಂಬೇಡ್ಕರ್. ಹೌದು, ಭಾರತ ಬದಲಾಗುತ್ತಿದೆ. ಬದಲಾವಣೆಯ ಪ್ರಕ್ರಿಯೆಯಲ್ಲಿ, ದಲಿತರು ಕೂಡ ತಮ್ಮನ್ನು ತಾವು ಬದಲಾಯಿಸಿಕೊಳ್ಳಬೇಕಿದೆ. ದಲಿತರು ಅಂಬೇಡ್ಕರ್ ಮತ್ತು ಮಾಜಿ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ತೋರಿಸಿಕೊಟ್ಟ ಮಾರ್ಗದಲ್ಲಿ ನಡೆಯಬೇಕಿದೆ. ದಲಿತ ಚಳವಳಿಯ ಮೂಲ ಆಶಯ ಕೂಡ ಆತ್ಮಗೌರವವನ್ನು ಪಡೆಯುವುದೇ ಆಗಿದೆ. ಯಾವುದೇ ಹುದ್ದೆ ಅಥವಾ ಹಣಕ್ಕಿಂತ, ಆತ್ಮಗೌರವ ಬಹಳ ಮುಖ್ಯ. ಎಲ್ಲ ಸಮಾಜಗಳಲ್ಲಿಯೂ, ಮಧ್ಯಮವರ್ಗ ಸಮಾಜದ ಇತರ ವರ್ಗಗಳ ಜನರಿಗೆ ಆದರ್ಶಪ್ರಾಯವಾಗಿ ಪ್ರೇರಣೆ ನೀಡುತ್ತವೆ.

ತಮ್ಮ ಪ್ರತಿಭೆಯೊಂದರಿಂದಲೇ ನಾರಾಯಣನ್ ಚೀನಾ ಮತ್ತು ಅಮೆರಿಕಾದ ರಾಯಭಾರಿಯ ಹುದ್ದೆ ಗಳಿಸಿದ್ದರು. ತಮ್ಮ ಸಹುದ್ಯೋಗಿಗಳ ಗೌರವಕ್ಕೆ ಪಾತ್ರರಾಗಿದ್ದ ನಾರಾಯಣನ್ ಬಗ್ಗೆ ಎಲ್ಲರೂ ಒಳ್ಳೆಯ ಅಭಿಪ್ರಾಯ ಹೊಂದಿದ್ದರು. ತಟಸ್ಥ ನಿಲುವು ತಳೆದವರೂ ಕೂಡ ಅವರ ವಿರುದ್ಧ ಎಂದೂ ಮಾತನಾಡಿರಲಿಲ್ಲ. ದಲಿತ ಎಂಬ ಕಾರಣದಿಂದಾಗಿ ನಾರಾಯಣನ್ ಅವರಿಗೆ ರಾಷ್ಟ್ರಪತಿಯಾಗಿ ಆಯ್ಕೆ ಮಾಡಲಾಯಿತು ಎಂಬ ಅಭಿಪ್ರಾಯ ಹೊಂದಿದ್ದವರೂ ಕೂಡ, ರಾಷ್ಟ್ರಪತಿಯಾಗಿ ಅವರ ಕಾರ್ಯವೈಖರಿಯ ಬಗ್ಗೆ ಎರಡು ಮಾತನಾಡಲಿಲ್ಲ.

ಡಾ. ಬಿ. ಆರ್ ಅಂಬೇಡ್ಕರ್ ಅವರ ಉದಾಹರಣೆ ನೋಡಿ. ಬಹುತೇಕ ದಲಿತರು ಅಂಬೇಡ್ಕರ್ ಅವರನ್ನು ದಲಿತೋದ್ಧಾರಕ ಎಂದು ಆರಾಧಿಸುತ್ತಾರೆ. ಆದರೆ, ಕೆಲವರು ಮಾತ್ರ ಅವರನ್ನು ಭಾರತದ ಸಂವಿಧಾನ ಶಿಲ್ಪಿ ಎಂದು ನೆನೆಯುತ್ತಾರೆ. ಹೌದು, ಅಂಬೇಡ್ಕರ್ ದಲಿತರ ಉದ್ಧಾರಕ್ಕಾಗಿ ಮಹತ್ವದ ಕೆಲಸಗಳನ್ನು ಮಾಡಿದವರು. ದಲಿತರ ಏಳ್ಗೆಗಾಗಿ ಅಂಬೇಡ್ಕರ್ ಹಾಕಿಕೊಟ್ಟ ಮಾರ್ಗದಲ್ಲಿ ನಾವಿನ್ನೂ ಬಹಳ ದೂರ ಸಾಗಬೇಕಿದೆ. ಅದೇ ರೀತಿ ಭಾರತೀಯ ಸಂವಿಧಾನದ ರೂಪು ರೇಷೆ ಸಿದ್ಧಪಡಿಸಿದವರು ಅಂಬೇಡ್ಕರ್ ಅವರೇ. ಹಲವಾರು ತಿದ್ದುಪಡಿಗಳಿಗೆ ಒಳಗಾಗಿದ್ದರೂ ಈಗಲೂ ಕೂಡ ಸಂವಿಧಾನದ ಮೂಲ ಆಶಯ ಹಾಗೆ ಉಳಿದುಕೊಂಡಿದೆ. ಇಂತಹ ಸಂವಿಧಾನ ರಚಿಸಿದ ಅಂಬೇಡ್ಕರ್ ನಿಜವಾಗಿಯೂ ಭಾರತದ ಬೌದ್ಧಿಕ ಪಿತಾಮಹ. ಆದರೆ ಬಹಳಷ್ಟು ಮಂದಿ ಭಾರತೀಯರು ಇದನ್ನು ಒಪ್ಪಿಕೊಳ್ಳುವುದಿಲ್ಲ. ನನ್ನ ಪ್ರಕಾರ ಇದು ಜಾತಿ ತಾರತಮ್ಯವಲ್ಲದೆ ಮತ್ತೇನೂ ಅಲ್ಲ.

ಅಂಬೇಡ್ಕರ್ ಅವರ ಸಾಮರ್ಥ್ಯದ ಬಗ್ಗೆ ಯಾವುದೇ ಜಾತಿಯವರ ಅಭಿಪ್ರಾಯ ಕೇಳಿ ನೋಡಿ, ಅವರು ಇಪ್ಪತ್ತನೆಯ ಶತಮಾನದ ಮಹಾನ್ ಬೌದ್ಧಿಕ ವ್ಯಕ್ತಿ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಅಂಬೇಡ್ಕರ್ ಯಾವುದೇ ಮೀಸಲಾತಿಯಿಲ್ಲದೆ, ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ದಾಖಲಾತಿ ಪಡೆದವರು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಕೂಡ ಇತರ ವಿದ್ಯಾರ್ಥಿಗಳಂತೆ ಪ್ರವೇಶ ಪಡೆದವರು ಅಂಬೇಡ್ಕರ್.

ಹೌದು, ಭಾರತ ಬದಲಾಗುತ್ತಿದೆ. ಬದಲಾವಣೆಯ ಪ್ರಕ್ರಿಯೆಯಲ್ಲಿ, ದಲಿತರು ಕೂಡ ತಮ್ಮನ್ನು ತಾವು ಬದಲಾಯಿಸಿಕೊಳ್ಳಬೇಕಿದೆ. ದಲಿತರು ಅಂಬೇಡ್ಕರ್ ಮತ್ತು ಮಾಜಿ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ತೋರಿಸಿಕೊಟ್ಟ ಮಾರ್ಗದಲ್ಲಿ ನಡೆಯಬೇಕಿದೆ. ದಲಿತ ಚಳವಳಿಯ ಮೂಲ ಆಶಯ ಕೂಡ ಆತ್ಮಗೌರವವನ್ನು ಪಡೆಯುವುದೇ ಆಗಿದೆ. ಯಾವುದೇ ಹುದ್ದೆ ಅಥವಾ ಹಣಕ್ಕಿಂತ, ಆತ್ಮಗೌರವ ಬಹಳ ಮುಖ್ಯ.

ಎಲ್ಲ ಸಮಾಜಗಳಲ್ಲಿಯೂ, ಮಧ್ಯಮವರ್ಗ ಸಮಾಜದ ಇತರ ವರ್ಗಗಳ ಜನರಿಗೆ ಆದರ್ಶಪ್ರಾಯವಾಗಿ ಪ್ರೇರಣೆ ನೀಡುತ್ತವೆ. ಸಮಾಜದಲ್ಲಿ ಮಾದರಿ ಎನಿಸಿಕೊಂಡು ಒಟ್ಟಾರೆ ಸಮುದಾಯಕ್ಕೆ ಗೌರವ ತಂದುಕೊಡುವ ಜವಾಬ್ದಾರಿ ಈ ವರ್ಗದ ಮೇಲಿದೆ. "ದಲಿತರು ಮೀಸಲಾತಿಯಿಲ್ಲದ ಜಗತ್ತಿನಲ್ಲಿ ಸ್ಪರ್ಧಿಸಲಾರರು" ಎಂಬಿತ್ಯಾದಿಯಾಗಿ ಸಮಾಜದಲ್ಲಿ ದಲಿತರ ಬಗ್ಗೆ ಚಾಲ್ತಿಯಲ್ಲಿರುವ ಸಿದ್ಧ ಮಾದರಿಗಳನ್ನು ಮುರಿದು ಕಟ್ಟುವ ಜವಾಬ್ದಾರಿಯನ್ನು ದಲಿತ ಮಧ್ಯಮವರ್ಗ ತುರ್ತಾಗಿ ನಿರ್ವಹಿಸಬೇಕಿದೆ.

ವಾಸ್ತವವಾಗಿ, ಬಹಳಷ್ಟು ಮಂದಿ ಎರಡನೆಯ ತಲೆಮಾರಿನ ದಲಿತರು ಮುಕ್ತ ವರ್ಗದಲ್ಲಿ ಸ್ಪರ್ಧಿಸುತ್ತಿರುವುದು ನಿಜ. ಆದರೆ ದಲಿತರ ಬಗೆಗಿನ ಇಂತಹ ಕಥನಗಳು ಸಮುದಾಯದಿಂದ ಹೊರಗೆ ಇನ್ನೂ ಪ್ರಚಲಿತವಾಗಿಲ್ಲ. ದಲಿತರನ್ನು ಕುರಿತ ಉತ್ತಮ ಕಥನಗಳನ್ನು ಸಮಾಜದ ಮುಂದಿಡಲು ದೊಡ್ಡ ಮಟ್ಟದ ಕಾರ್ಯವನ್ನು ದಲಿತರು ಮಾಡಬೇಕಿದೆ.

ಈ ಕಾರ್ಯದ ನಾಯಕತ್ವವನ್ನು ದಲಿತ ಮಧ್ಯಮವರ್ಗ ವಹಿಸಿಕೊಳ್ಳಬೇಕಿದೆ. ಎರಡು ತಲೆಮಾರಿನವರೆಗೆ

ಮೀಸಲಾತಿಯ ಲಾಭ ಪಡೆದಿರುವ ದಲಿತ ಐಎಎಸ್ ಅಧಿಕಾರಿಗಳು, ವೈದ್ಯರು, ಎಂಜಿನಿಯರುಗಳು, ವೃತ್ತಿಪರರು ಮುಂಚೂಣಿಗೆ ಬರಬೇಕಿದೆ. ಇಂತಹವರು ಸಾಮೂಹಿಕ ಸಭೆಗಳನ್ನು ನಡೆಸಬೇಕು, ಮಾಧ್ಯಮದವರ ಮುಂದೆ ಬರಬೇಕು. ತಮ್ಮ ತಲೆಮಾರಿಗೆ ಮೀಸಲಾತಿ ಬೇಡ, ಮುಕ್ತ ವರ್ಗದಲ್ಲಿ ಸ್ಪರ್ಧಿಸುತ್ತೇವೆ ಎಂದು ಸಾರಿ ಸಾರಿ ಹೇಳಬೇಕು. ಮೀಸಲಾತಿಗೆ ಗುಡ್‌ಬೈ ಹೇಳಬೇಕು.

* * * * * * *

ಎರಡು ವಾರಗಳ ಹಿಂದೆ ಸ್ನೇಹಿತ ಶ್ಯಾಂ ಬಾಬು ಜೊತೆಗೆ ನಾನು ಬಿಹಾರದ ಬುಕ್ಸರ್ ಗ್ರಾಮಾಂತರ ಪ್ರದೇಶಕ್ಕೆ ಸಂಶೋಧನಾ ಕಾರ್ಯದ ನಿಮಿತ್ತ ಹೋಗಿದ್ದೆ. ಉತ್ತರ ಪ್ರದೇಶದ ಸಣ್ಣ ಗ್ರಾಮಗಳು ಮತ್ತು ಪಟ್ಟಣಗಳನ್ನು ಹಾದು ಬಿಹಾರಕ್ಕೆ ರಸ್ತೆ ಮೂಲಕ ಹೋಗುವುದಾಗಿ ನಾವು ನಿರ್ಧರಿಸಿದ್ದೆವು. ನಾವು ಲಕ್ನೌಗೆ ಬಂದಾಗ ಲಕ್ನೌ ವಿಶ್ವವಿದ್ಯಾನಿಲಯದ ಮೂವರು ಸ್ನೇಹಿತರು ನಮ್ಮ ಜೊತೆಗೂಡಿದರು. ನಂತರ ನಾವೆಲ್ಲರೂ ಪಶ್ಚಿಮ ಉತ್ತರ ಪ್ರದೇಶದ ಅಜ಼ಾಮ್‌ಗಡ್ ಜಿಲ್ಲೆಯಲ್ಲಿರುವ ನನ್ನ ಸ್ವಗ್ರಾಮಕ್ಕೆ ಪ್ರಯಾಣ ಬೆಳೆಸಿದೆವು.

ಆರು ಗಂಟೆಯ ಪಯಣದಲ್ಲಿ ನಾವು ಸುಮಾರು ಮೂರು ಗಂಟೆಯನ್ನು ದಲಿತ ಬಸ್ತಿಯಲ್ಲಿ ಕಳೆದೆವು. 1990ರ ನಂತರ ಉದ್ಯೋಗ, ಆಹಾರ ವಿಧಾನ ಮತ್ತು ಜೀವನ ಶೈಲಿಯಲ್ಲಿ ಆಗಿರುವ ಬದಲಾವಣೆಗಳ ಬಗ್ಗೆ ನಾವಿಲ್ಲಿ ಚರ್ಚಿಸಿದೆವು. ನನ್ನ ಸ್ವಗ್ರಾಮವನ್ನು ತಲುಪುವ ವೇಳೆಗೆ ಆಗಲೇ ಕತ್ತಲು ಕವಿದಿತ್ತು. ದೆಹಲಿಯಲ್ಲಿ ಶ್ಯಾಂ ಬಾಬುಗೆ ಪರಿಚಿತರಾದ ನನ್ನ ಅಣ್ಣ ನಿವೃತ್ತ ಪೊಲೀಸ್ ನಿರೀಕ್ಷಣಾಧಿಕಾರಿ, ಶ್ಯಾಂ ಬಾಬು ಅವರಿಗಾಗಿ ವಿಶೇಷ ಔತಣಕೂಟ ಆಯೋಜಿಸಿದ್ದರು. ಮರುದಿನ ಬೆಳಿಗ್ಗೆ ನಾವು ಗಾಜಿಯಾಬಾದ್ ಜಿಲ್ಲೆಯನ್ನು ಹಾದು ಬಿಹಾರಕ್ಕೆ ಹೊರಟೆವು.

ಶ್ಯಾಂ ಬಾಬು ಇಚ್ಛೆಯಂತೆ ಮಲಾರಿ ಗ್ರಾಮದಲ್ಲಿ ಅಂದು ರಾತ್ರಿ ಕಳೆದೆವು. ಅಲ್ಲಿ, ಪೂರ್ವಾಂಚಲ್ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆಯ ಮುಖ್ಯಸ್ಥ ಕಪಿಲ್ ದೇವ್ ಕೇಶರಿ ನಮಗೆ ಆತಿಥ್ಯ ನೀಡಿದ್ದರು. 2001ರಲ್ಲಿ ಡರ್ಬನ್ ಸಮ್ಮೇಳನದ ವೇಳೆ ನನಗೆ ಕಪಿಲ್ ಅವರ ಪರಿಚಯವಾಗಿತ್ತು. ಅಂದು, ಆತ ನಡೆಸುವ ಮೂರು ಶಾಲೆಗಳಲ್ಲಿ ಒಂದಕ್ಕೆ ನಮ್ಮನ್ನು ಕರೆದುಕೊಂಡು ಹೋದರು. ಶಾಲೆಯ ಕಟ್ಟಡ, ಶುಚಿತ್ವ, ಒಟ್ಟಾರೆ ಪರಿಸರವನ್ನು ನೋಡಿ ನಾವು ಚಕಿತರಾದೆವು. ಬಹುತೇಕ ದಲಿತ ಮಕ್ಕಳು ಶುಭ್ರವಾದ ಸಮವಸ್ತ್ರ ಧರಿಸಿ ಕಂಗೊಳಿಸುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ ಕೂಡ ಉತ್ತಮವಾದ ಶಾಲೆ ನಡೆಸಲು ಸಾಧ್ಯ ಎಂಬ ವಿಚಾರ ನಮಗೆ ಆಶ್ಚರ್ಯ ತಂದದ್ದು ಸುಳ್ಳಲ್ಲ.

ಕಪಿಲ್ ಅವರ ಮೂರು ಶಾಲೆಗಳಲ್ಲಿ ಸುಮಾರು 575 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. 17 ಮಂದಿ ಶಿಕ್ಷಕರು, ಮೂವರು ಹೆಡ್ ಮಾಸ್ಟರ್‌ಗಳು, ಓರ್ವ ಸಂಚಾಲಕರು, ಜೊತೆಗೆ, ಗ್ರಾಮೀಣ ಹಿನ್ನೆಲೆಯ ಬೋಧಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತಿದ್ದಾರೆ.

ನಾವು ಕಪಿಲ್ ಜೊತೆ ಮಾತನಾಡುವಾಗ ಅವರ ಸೆಲ್‌ಫೋನ್ ರಿಂಗಣಿಸುತ್ತಿತ್ತು. ಒಂದಾದ ಮೇಲೊಂದರಂತೆ ಕಪಿಲ್ ಕರೆ ಸ್ವೀಕರಿಸುತ್ತಿದ್ದಂತೆ ನಮಗೆ ಗೊತ್ತಾಯಿತು, ಕಪಿಲ್ ಕೇವಲ ಶಿಕ್ಷಣಕ್ಕೆ ಸಂಬಂಧಿಸಿದ ವ್ಯಕ್ತಿ ಮಾತ್ರ ಅಲ್ಲ ಎಂದು. ಜನರು ಕಪಿಲ್ ಅವರ ಬಳಿ ತಹಶೀಲ್ದಾರ್ ಕಚೇರಿ, ಬಿಡಿಓ ಕಚೇರಿ, ಪೋಸ್ಟ್ ಆಫೀಸ್ ಇತ್ಯಾದಿಗಳಿಗೆ ಸಂಬಂಧಿಸಿದ ಎಲ್ಲ ರೀತಿಯ ಮಾಹಿತಿ ಪಡೆಯಲು ಕರೆ ಮಾಡುತ್ತಿದ್ದರು. ಕಪಿಲ್ ಅವರ ಸರ್ಕಾರೇತರ ಸಂಸ್ಥೆಗೆ ಓಕ್ಸ್‌ಫಾಮ್ ಮತ್ತು ಆ್ಯಕ್ಷನ್ ಏಡ್ ಸಂಸ್ಥೆಯಿಂದ ಕೆಲವೊಮ್ಮೆ ಬೆಂಬಲ ಸಿಗುತ್ತದೆ.

ಶಾಲಾ ಭೇಟಿಯ ನಂತರ ಕಪಿಲ್ ನಮ್ಮನ್ನು ಎರಡಂತಸ್ತಿನ ತಮ್ಮ ಮನೆಗೆ ಕರೆದೊಯ್ದರು. ಅಲ್ಲಿ ನಾನು ಕಪಿಲ್ ಅವರ ಬಾಲ್ಯದ ಬಗ್ಗೆ ವಿಚಾರಿಸಿದೆ. ಆಗ ಕಪಿಲ್ ಹೇಳಿದ ಕಥೆ ಆಲ್‌ಫ್ರೆಡ್ ಹಿಚ್‌ಕಾಕ್ ಚಿತ್ರಕಥೆಯನ್ನು ನೆನಪಿಸುವಂತಿತ್ತು.

ಒಂದು ದಿನ, ಕಪಿಲ್ ಮತ್ತು ಆತನ ಹೆಂಡತಿ ಜಮೀನ್ದಾರರ ಭೂಮಿಯಲ್ಲಿ ಭತ್ತದ ಕುಯಿಲು ಮಾಡುತ್ತಿದ್ದರು. ಆಗ ಹೆಂಡತಿಗೆ ಇದ್ದಕ್ಕಿದ್ದಂತೆ ಹೆರಿಗೆ ನೋವು ಕಾಣಿಸಿಕೊಂಡು ಗಂಡನಿಗೆ ಹೇಳಿದ್ದಾಳೆ, ತತ್‌ಕ್ಷಣವೇ ಇಬ್ಬರೂ ಭತ್ತದ ಹೊರೆ ಹೊತ್ತು ಹಿಂದಿರುಗಿದ್ದಾರೆ. ಸುಮಾರು ಒಂದು ಗಂಟೆಯ ನಂತರ ಆಕೆ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ನೋಡಿ, ಗರ್ಭಾವಸ್ಥೆಯ ಆ ಕೊನೆಯ ದಿನದಲ್ಲಿ ಕೂಡ ಆಕೆ ಕೂಲಿಗಾಗಿ ಕೆಲಸ ಮಾಡಬೇಕಿತ್ತು. "ಕೇವಲ ಎರಡು ವಾರಗಳ ಕಾಲ ಭತ್ತದ ಕೆಲಸ ನಡೆಯುವುದರಿಂದ ಕುಟುಂಬದ ಎಲ್ಲ ಸದಸ್ಯರೂ ಕೆಲಸ ಮಾಡಿದರೆ ನಮಗೆ ಸಾಕಾಗುವಷ್ಟು ಆಹಾರ ಧಾನ್ಯ ಸಿಗುತ್ತಿತ್ತು" ಎನ್ನುತ್ತಾರೆ ಕಪಿಲ್.

ಯಾವುದೇ ರೀತಿಯ ಭೂಮಿಯ ಒಡೆತನವಿಲ್ಲದ ಕಪಿಲ್ ಅವರ ತಂದೆ ಬಾಜಾ ಭಜಂತ್ರಿಗಳ ತಂಡವೊಂದರಲ್ಲಿದ್ದರು. ನೀವು ಗೋಧಿಯಿಂದ ಮಾಡಿದ ರೊಟ್ಟಿಯನ್ನು ಮೊದಲಿಗೆ ಯಾವಾಗ ತಿಂದದ್ದು ಎಂದು ನಾನು ಕೇಳಿದಾಗ, "ಸಗಣಿಯಲ್ಲಿ ತೆಗೆದ ಗೋಧಿಯನ್ನು ಕೂಡ ನಾನು ಬಹಳಷ್ಟು ಸಲ ತಿಂದಿದ್ದೇನೆ" ಎನ್ನುತ್ತಾರೆ ಕಪಿಲ್.

"ಸಗಣಿಯಲ್ಲಿ ತೆಗೆದ ಗೋಧಿ" ಎಂದರೆ ಯಾವುದು? ಉತ್ತರ ಪ್ರದೇಶದ ಗ್ರಾಮೀಣ ಭಾಗಗಳಲ್ಲಿ ಬಹಳಷ್ಟು ವರ್ಷಗಳ ಕಾಲ ಗೋಧಿಯನ್ನು ಬೇರ್ಪಡಿಸಲು ದನಗಳನ್ನು ಬಳಸಲಾಗುತ್ತಿತ್ತು. ನೆಲದ ಮೇಲೆ ಟನ್‌ಗಟ್ಟಲೆ ಗೋಧಿಯನ್ನು ಹಾಕಲಾಗುತ್ತಿತ್ತು. ಎರಡು ದನಗಳು ಇಡೀ ದಿನ ಇದರ ಮೇಲೆ ನಡೆದಾಡುತ್ತಿದ್ದವು. ಈ ಪ್ರಕ್ರಿಯೆಯನ್ನು ದಲಿತರು ನೋಡಿಕೊಳ್ಳುತ್ತಿದ್ದರು. ದನಗಳು ಹಸಿ ಗೋಧಿಯನ್ನು ತಿನ್ನುತ್ತಾ ನಡೆದಾಡುತ್ತಿದ್ದವು.

ದಲಿತ ಕೂಲಿಗಳು ದನಗಳು ಹೆಚ್ಚು ಗೋಧಿ ತಿನ್ನುವಂತೆ ಉತ್ತೇಜಿಸುತ್ತಿದ್ದರು. ಯಾಕೆಂದರೆ ದನಗಳು ತಿಂದ ಗೋಧಿ ಪಚನವಾಗದೆ ಸಗಣಿಯ ಜೊತೆಗೆ ಬರುತ್ತಿತ್ತು. ದಲಿತ ಕೂಲಿಯಾಳುಗಳು ಇಂತಹ ಸಗಣಿಯನ್ನು ತುಂಬಿಕೊಂಡು ಮನೆಗೆ ತಂದು ಗೋಧಿಯನ್ನು ಬೇರ್ಪಡಿಸಿ, ಒಣಗಿಸಿ ಅದರಿಂದ ರೊಟ್ಟಿ ತಯಾರಿಸುತ್ತಿದ್ದರು. ಕಪಿಲ್ ಅಂತಹ ಬಡತನವನ್ನು ಅನುಭವಿಸಿದ್ದಾರೆ. ತನ್ನ 38ನೆಯ ವಯಸ್ಸಿಗೆ ಕಪಿಲ್ ಮೊಮ್ಮಕ್ಕಳನ್ನು ನೋಡಿದವರು ಎಂದರೆ ಸಾಕಲ್ಲ. ಇವರ ಪರಿಸ್ಥಿತಿಯನ್ನು ವಿವರಿಸಲು ಮತ್ಯಾವ ವಿವರಗಳೂ ಬೇಕಾಗಿಲ್ಲ.

ದಲಿತ ಕೂಲಿಗಳು ದನಗಳು ಹೆಚ್ಚು ಗೋಧಿ ತಿನ್ನುವಂತೆ ಉತ್ತೇಜಿಸುತ್ತಿದ್ದರು. ಯಾಕೆಂದರೆ ದನಗಳು ತಿಂದ ಗೋಧಿ ಪಚನವಾಗದೆ ಸಗಣಿಯ ಜೊತೆಗೆ ಬರುತ್ತಿತ್ತು. ದಲಿತ ಕೂಲಿಯಾಳುಗಳು ಇಂತಹ ಸಗಣಿಯನ್ನು ತುಂಬಿಕೊಂಡು ಮನೆಗೆ ತಂದು ಗೋಧಿಯನ್ನು ಬೇರ್ಪಡಿಸಿ, ಒಣಗಿಸಿ ಅದರಿಂದ ರೊಟ್ಟಿ ತಯಾರಿಸುತ್ತಿದ್ದರು. ಕಪಿಲ್ ಅಂತಹ ಬಡತನವನ್ನು ಅನುಭವಿಸಿದ್ದಾರೆ. ತನ್ನ 38ನೆಯ ವಯಸ್ಸಿಗೆ ಕಪಿಲ್ ಮೊಮ್ಮಕ್ಕಳನ್ನು ನೋಡಿದವರು ಎಂದರೆ ಸಾಕಲ್ಲ. ಇವರ ಪರಿಸ್ಥಿತಿಯನ್ನು ವಿವರಿಸಲು ಮತ್ಯಾವ ವಿವರಗಳೂ ಬೇಕಾಗಿಲ್ಲ.

ಆದರೆ ಇಂತಹ ಕ್ರೂರ ಜಾತಿತಾರತಮ್ಯ ಮತ್ತು ಬಡತನವನ್ನು ಮೀರಿ ಈ ಮಟ್ಟಕ್ಕೆ ಕಪಿಲ್ ಬಂದ ಕಥೆಯೇ ರೋಚಕವಾದುದು. ಪಶ್ಚಿಮ ಉತ್ತರ ಪ್ರದೇಶದ ಊಳಿಗಮಾನ್ಯ ವ್ಯವಸ್ಥೆಗೆ ಕೊಳ್ಳಿ ಇಟ್ಟ ಕಥೆ ಅದು. ಅದನ್ನು ಒಂದೇ ಒಂದು ಅಂಕಣದಲ್ಲಿ ಹೇಳಿ ಮುಗಿಸಲು ಸಾಧ್ಯವಿಲ್ಲ. ಬಹುಶಃ ಕಪಿಲ್ ಬಗ್ಗೆ ಪ್ರತ್ಯೇಕವಾದ ಪುಸ್ತಕವೊಂದನ್ನೇ ಬರೆಯಬೇಕು.

ಕಪಿಲ್ 11 ವರ್ಷದವನಿದ್ದಾಗ ಶೇರ್‌ಪುರ್ ಗ್ರಾಮದಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಯಿತು. ಬೆಲ್ಚಿಯಲ್ಲಿ ನಡೆದ ದಲಿತರ ಮಾರಣಹೋಮಕ್ಕಿಂತ ಮುಂಚೆ ಇಡೀ ರಾಷ್ಟ್ರದ ಗಮನ ಸೆಳೆದ ದಲಿತರ ಹತ್ಯಾಕಾಂಡದಲ್ಲಿ ದಲಿತರ 200 ಮನೆಗಳಿಗೆ ಬೆಂಕಿ ಹಚ್ಚಲಾಯಿತು. ಘಟನೆಯಲ್ಲಿ ಇಬ್ಬರು ಸಾವನ್ನಪ್ಪಿ, ಡಜನ್‌ನಷ್ಟು ಮಂದಿ ಗಾಯಗೊಂಡರು. ಈ ಸಂದರ್ಭದಲ್ಲಿ ಬಹಳಷ್ಟು ಸರ್ಕಾರೇತರ ಸಂಘ ಸಂಸ್ಥೆಗಳು ಸಕ್ರಿಯವಾದವು. ಕಪಿಲ್ ಅಂತಹ ಒಂದು ಸಂಸ್ಥೆಯೊಂದಿಗೆ ಸಂಪರ್ಕ ಬೆಳೆಸಿದರು.

ಗೌರಿ ಚೌಧರಿ ಅವರ ಆ್ಯಕ್ಷನ್ ಇಂಡಿಯಾ ಅಂತಹ ಒಂದು ಸಂಸ್ಥೆ. ಗೌರಿ ಚೌಧರಿ ಕಪಿಲ್ ದೇವ್ ಕೇಶರಿ ಅವರಿಗೆ ದೊಡ್ಡ ಮಟ್ಟದ ಬೆಂಬಲ ನೀಡಿ ಒಟ್ಟಾರೆ ದಲಿತ ಸಮುದಾಯಕ್ಕೆ ಬೇಕಾಗುವಂತಹ ಓರ್ವ ಮಾದರಿ ನಾಯಕನನ್ನು ಸೃಷ್ಟಿಸಿದ್ದಾರೆ ಎಂದರೆ ತಪ್ಪಾಗುವುದಿಲ್ಲ. "ಕೇಶರಿ" ಎಂದರೆ ಕನ್ನಡದಲ್ಲಿ 'ಗೆಲುವು' ಎಂಬರ್ಥ ಬರುತ್ತದೆ. ವಿಶಾಲ ಹೃದಯದ ಓರ್ವ ಸಂವೇದನಾಶೀಲೆ ಗೌರಿ, ಹೇಗೆ ಒಂದು ಚಳವಳಿಯ ಹುಟ್ಟಿಗೆ ಕಾರಣಳಾಗುತಾಳೆ ನೋಡಿ. □

ಗೌರಿಯಿಂದ ಸೃಷ್ಟಿಯಾದ ನಾಯಕ

ಅಂಬೇಡ್ಕರ್‌ವಾದದ ಪುನರ್ ವಿಮರ್ಶೆ

(45ನೇ ಪುಟದಿಂದ)

ಯಲ್ಲಿದ್ದ ಸರಂಜಾಮುಶಾಹಿಯ ವಿರುದ್ಧ ಬಾಂಬೆ ಶಾಸನ ಸಭೆಯಲ್ಲಿ ಮಂಡಿಸಿದ ಎರಡು ಬಿಲ್‌ಗಳು ಉಲ್ಲೇಖನಿಯ. ಬಾಂಬೆ ಶಾಸನ ಸಭೆಯಲ್ಲಿ 1937ರಲ್ಲಿ ಅವರು ಒಂದು ಬಹು ಮುಖ್ಯವಾದ ಶಾಸನವನ್ನು ಮಂಡಿಸಿದ್ದರು.

ಅದು ರತ್ನಗಿರಿ ಹಾಗೂ ಕೋಲಾಬ ಪ್ರಾಂತ್ಯಗಳಲ್ಲಿದ್ದ ಖೋಟಿ ಎಂಬ ವಕ್ಕಲುತನದ ಕುರಿತಾಗಿತ್ತು, ಈ ವ್ಯವಸ್ಥೆಯಲ್ಲಿ ಮುಖ್ಯ ಗೇಣಿದಾರರು ಖೋಟ್‌ಗಳಾಗಿದ್ದರು. ಅವರು ನೇರವಾಗಿ ಸರಕಾರಕ್ಕೆ ಗೇಣಿಯನ್ನು ನೀಡಬೇಕಾಗಿತ್ತು. ಆದರೆ ಸರಕಾರಕ್ಕೆ ನಿರ್ಧಿಷ್ಟವಾದ ಗೇಣಿಯನ್ನು ನೀಡಿದ ನಂತರ ಅವರು ಸ್ವತಂತ್ರರಾಗಿದ್ದರು. ಇದು ತಮ್ಮ ಕೈಗಳಗಿರುವ ಇನ್ನಿತರ ಗೇಣಿದಾರರನ್ನು ಶೋಷಿಸಲು ಅನುವು ಮಾಡಿಕೊಡುತ್ತಿತ್ತು. ಇದರಲ್ಲಿ ಅತೀ ಹೆಚ್ಚು ಗೇಣಿದಾರರು ಮಹರ್‌ಗಳು. ಇದಕ್ಕೆ ಪೂರಕವಾಗಿದ್ದದ್ದು ವಂಶ ಪಾರಂಪರ್ಯವಾಗಿದ್ದ ವತನ್ದಾರ್ ವ್ಯವಸ್ಥೆ. ಇದರಲ್ಲಿ ದಲಿತರು ವಂಶಪಾರಂಪರ್ಯವಾಗಿ ವತನ್ದಾರರಿಗೆ ಜೀತದಾಳುಗಳಾಗಬೇಕಿತ್ತು. ಇದರಲ್ಲಿ ಮಹರ್‌ಗಳು ಕೂಡ ಅತೀ ಹೆಚ್ಚು ಬಲಿಪಶುಗಳಾಗಿದ್ದರು. ಗೇಣಿದಾರರಾಗಿದ್ದ ಸಮುದಾಯ ಗೇಣಿಯನ್ನು ಬಲುಟಾ ಎಂಬ ಕಾಣಿಕೆ ರೂಪದಲ್ಲಿ ನೀಡಬೇಕಿತ್ತು. ಅದಕ್ಕಾಗಿ ಅಂಬೇಡ್ಕರ್ 1927 ರಲ್ಲಿ ಶಾಸನವನ್ನು ಮಂಡಿಸಿದರೂ ಅದನ್ನು ಕಾರಣಾಂತರದಿಂದ ವಾಪಾಸು ತೆಗೆದುಕೊಳ್ಳ ಬೇಕಾಯಿತು. ಇವೆರಡು ಹೋರಾಟಗಳು ಸಾಂಕೇತಿಕವಾಗಿದ್ದವು.

ಈ ರೀತಿಯ ಸಾಂಕೇತಿಕತೆಗೆ ಹೊಸ ಆಯಾಮವನ್ನು ದಲಿತ ಚಳುವಳಿಗಳು ನೀಡಲು ಸಾಧ್ಯವೇ?. ದಲಿತ ಚಳುವಳಿಗಳು ನಡೆಸಿದ ಭೂ ಸಂಬಂಧಿ ಹೋರಾಟಗಳು ಕೆಲವೆಡೆ ಸಫಲವಾದರೂ ಅದು ತೆಗೆದುಕೊಂಡ ಕಾಲಾವಧಿಯಲ್ಲಿ ಭೂಮಿಯ ಪ್ರಶ್ನೆಯ ತೀಪ್ರತೆಯನ್ನು ಕಡಿಮೆ ಮಾಡಿದಂತೆ ಭಾಸವಾಗುವುದು ಸಹಜ. ಇದಕ್ಕೆ ಇತ್ತೀಚಿನ ಚಿಕ್ಕಮಗಳೂರಿನ ಚೆನ್ನಂಗೂಡಿನ ಹೋರಾಟವೇ ಸಾಕ್ಷಿ. 1980ರ ಸುಮಾರಿಗೆ ಈ ಹೋರಾಟ ಆರಂಭವಾದರೂ ದಲಿತರಿಗೆ ಭೂಮಿ ಹಂಚಿಕೆಯಾಗಲು ಒಬ್ಬ ನಿಷ್ಠಾವಂತ ಸರಕಾರಿ ನೌಕರ ಬರಬೇಕಾಯಿತು. ಅದನ್ನು ಜಾರಿಗೊಳಿಸಲು ಹೆಚ್ಚು ಕಡಿಮೆ 30 ವರುಷವೇ ಬೇಕಾಯಿತು.

ಅಂಬೇಡ್ಕರ್ ಎತ್ತಿದ ಭೂಮಿ ಪ್ರಶ್ನೆ ಅಂದಿನ ಸಂದರ್ಭದಲ್ಲಿ ಸಹಜವಾಗಿತ್ತು. ಅಲ್ಲದೇ ಸೂಚಿಸಿದ ಪರಿಹಾರಗಳೂ ಕೂಡ ಸಹಜವಾಗಿದ್ದವು: ಭೂಮಿಯ ಹಿಡುವಳಿಯ ಗಾತ್ರಗಿಂತಲೂ ಅದರಲ್ಲಿ ಅಳವಡಿಸುವ ಬಂಡವಾಳವು ಭೂಮಿಯ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಎಂಬ ಒಂದು ನಂಬಿಕೆ ಸಹಜವಾಗಿದ್ದವು Journal of Indian Economic ನಲ್ಲಿ ಬರೆದ ಲೇಖನ Small holdings in India and their Remedies ನಲ್ಲಿ ಈ ರೀತಿಯಾಗಿ ವಾದಿಸುತ್ತಾರೆ: Sthe remedy for the ills of agriculture in India does not lie primarily in the matter of enlarging holdings but in the matter of increasing capital and capital goods" .

ಭಾರತದಲ್ಲಿ ಕೈಗಾರಿಕಾಕರಣವನ್ನು ಬಯಸುವುದು ಇದೇ ಕಾರಣಕ್ಕಾಗಿ: "Industrialization of India is the soundest remedy for the agricultural problems of India. Industrialization facilitates consolidation. It lessens the premium on land. It must precede consolidation. It is an effective barrier against future

ಅಲ್ಲದೇ ಭೂಮಿಯನ್ನು ರಾಷ್ಟ್ರೀಕರಣಗೊಳಿಸಬೇಕೆಂದು ಕೂಡ ವಾದಿಸುತ್ತಾರೆ. ಇವೆಲ್ಲವನ್ನು ಒಪ್ಪಿಕೊಂಡರೂ ಕೆಲವು ಪ್ರಶ್ನೆಗಳು ಸಹಜವಾಗಿ ಇಂದಿನ ಸಂದರ್ಭದಲ್ಲಿ ಉದ್ಭವಿಸುತ್ತದೆ ಇವೆಲ್ಲ ವಾದ ದಲಿತರನ್ನು ಎಷ್ಟರ ಮಟ್ಟಿಗೆ ಭಲಾಢ್ಯ, ಬಲಿತ ವರ್ಗವನ್ನಾಗಿಸಬಹುದು? ಅಥವಾ ಆರ್ಥಿಕ ಚೌಕಟ್ಟಿನಲ್ಲಿ ಯಜಮಾನಿಕೆಯನ್ನು ಸಾಧಿಸಲು ಅನುವು ಮಾಡಿಕೊಡಬಹುದು? ಅದನ್ನು ಮುಖಾಮುಖಿಯಾಗಿಸುವುದು ಅಥವಾ ಅನುಸಂಧಾನ ಮಾಡುವುದು ಅಷ್ಟು ಸುಲಭ ಸಾಧ್ಯವಿಲ್ಲ. ಇವತ್ತೀನ ಸಂದರ್ಭದಲ್ಲಿ ದೇಸಿಯ ಬಂಡವಾಳಶಾಹಿ ಜಾಗತೀಕ ಬಂಡವಾಳಶಾಹಿ ಆಗಿ ಪರಿವರ್ತಿಸುತ್ತಿರುವಾಗ, ದಲಿತ ನೊಬ್ಬ ಅಂತರ ರಾಷ್ಟ್ರೀಯ ಬಂಡವಾಳಶಾಹಿ ಆಗುವುದು ಬಿಡಿ, ದೇಶಿಯ ಬಂಡವಾಳಶಾಹಿಯಾಗುವುದು ಅಷ್ಟು ಸುಲಭವಲ್ಲ. ಜಗತ್ತಿನ 100 ಬಿಲಿಯನ್ಸ್ ಶ್ರೀಮಂತ ಪಟ್ಟಿಯಲ್ಲಿ ಒಬ್ಬನೇ ಒಬ್ಬ ದಲಿತನಿಲ್ಲ, ಆದರೆ ಉಳಿದ ಜಾತಿಗಳಿಗೆ ಸೇರಿದ ಶ್ರೀಮಂತರಿದ್ದಾರೆ. ಇತ್ತೀಚಿಗೆ ಬೆಳಕಿಗೆ ಬಂದ ಕೆಲವು ದಲಿತ ಬಂಡವಾಳಶಾಹಿಗಳು ಇದಕ್ಕೆ ಅಪವಾದ ತರಹ ಕಂಡು ಬಂದರೆ ಆಶ್ಚರ್ಯವೇನಿಲ್ಲ. ಈ ರೀತಿಯ ಬೆಳವಣಿಗೆ ತೀವ್ರತರವಾಗಿ ದಲಿತರಲ್ಲಿ ಐಡೆಂಟಿಟಿಯ ಬಿಕ್ಕಟ್ಟಿಗೆ, ಹತಾಶೆಗೆ ದಾರಿ ಮಾಡಿಕೊಟ್ಟಿದ್ದು ಸುಳ್ಳಲ್ಲ. ಇದು ದಲಿತ ಚಳುವಳಿಗಳ ಮೇಲೂ ಪರಿಣಾಮವನ್ನು ಬೀರಿತ್ತು: ದಲಿತ ಚಳುವಳಿಗಳು ಇವತ್ತು ಹತ್ತುಕ್ಕೂ ಮಿಕ್ಕಿ ಗುಂಪುಗಳಾಗಿ ಇಬ್ಭಾಗವಾಗಲೂ ಈ ರೀತಿಯ ಹತಾಶೆ ಕಾರಣ.

> **ಕೃಷಿ ಭೂಮಿಯ ಮೇಲಿನ ಒತ್ತಡ ಕೈಗಾರಿಕಾಕರಣದ ಹೆಸರಿನಲ್ಲಿ ಹೆಚ್ಚಾಗುತ್ತಿರುವುದು ಅಷ್ಟೇ ಸಹಜ. ಈ ಒತ್ತಡಕ್ಕೆ ಅತೀ ಹೆಚ್ಚು ಬಲಿಯಾಗುತ್ತಿರುವುದು ರೈತಾಪಿಗಳೊಂದಿಗೆ ದಲಿತರು ಹಾಗೂ ಆದಿವಾಸಿಗಳು. ಕೃಷಿಯಲ್ಲಿ ತೀವ್ರತರ ಬಂಡವಾಳದಿಂದ ಲಾಭವಾಗುತ್ತಿರುವುದು ದಲಿತರಿಗಲ್ಲ ಹೊರತು ಮಾರುಕಟ್ಟೆಗೆ ಜೋತು ಬಿದ್ದಿರುವ ಹಾಗೂ ಬೀಳುತ್ತಿರುವ ರೈತರು ಹಾಗೂ ದೊಡ್ಡ ಕೃಷಿ ಕಾರ್ಪೋರೇಟರ್‌ಗಳಿಗೆ. ಇವೆಲ್ಲದರ ನಡುವೆ ದಲಿತನೊಬ್ಬ ಬಂಡವಾಳ ಶಾಹಿಯಾಗುವುದು ಸಾಧ್ಯವೆ?ಭೂ ಸಂಬಂಧಿ ಕಾನೂನುಗಳು ನೂರಾರು, ಸಾವಿರಾರು ದಲಿತ ಹಿಡುವಳಿದಾರರನ್ನು ಸೃಷ್ಟಿಸಿರಬಹುದು, ಅವೆಲ್ಲವೂ ದಲಿತರನ್ನು ಬಲಿತರನ್ನಾಗಿಸುವುದಿಲ್ಲ. ಯಾಕೆಂದರೆ ಅವೆಲ್ಲವೂ ಆರ್ಥಿಕವಾಗಿ ಲಾಭದಾಯಕವಲ್ಲದ ಹಿಡುವಳಿಗಳು ಅಲ್ಲದೇ ಅವುಗಳು ಗಾತ್ರದಲ್ಲಿ ಚಿಕ್ಕ ಪುಟ್ಟ ಹಿಡುವಳಿಗಳು.**

ಇವತ್ತು ಕೃಷಿ ಭೂಮಿಯ ಮೇಲಿನ ಒತ್ತಡ ಕೈಗಾರಿಕಾಕರಣದ ಹೆಸರಿನಲ್ಲಿ ಹೆಚ್ಚಾಗುತ್ತಿರುವುದು ಅಷ್ಟೇ ಸಹಜ. ಈ ಒತ್ತಡಕ್ಕೆ ಅತೀ ಹೆಚ್ಚು ಬಲಿಯಾಗುತ್ತಿರುವುದು ರೈತಾಪಿಗಳೊಂದಿಗೆ ದಲಿತರು ಹಾಗೂ ಆದಿವಾಸಿಗಳು. ಕೃಷಿಯಲ್ಲಿ ತೀವ್ರತರ ಬಂಡವಾಳದಿಂದ ಲಾಭವಾಗುತ್ತಿರುವುದು ದಲಿತರಿಗಲ್ಲ ಹೊರತು ಮಾರುಕಟ್ಟೆಗೆ ಜೋತು ಬಿದ್ದಿರುವ ಹಾಗೂ ಬೀಳುತ್ತಿರುವ ರೈತರು ಹಾಗೂ ದೊಡ್ಡ ಕೃಷಿ ಕಾರ್ಪೋರೇಟರ್‌ಗಳಿಗೆ. ಇವೆಲ್ಲದರ ನಡುವೆ ದಲಿತನೊಬ್ಬ ಬಂಡವಾಳಶಾಹಿಯಾಗುವುದು ಸಾಧ್ಯವೆ? ಭೂಮಿಯ ಹಂಚಿಕೆ ವಿಷಯ ಬಂದಾಗಲೆಲ್ಲ ಒಂದು ವಿಷಯವನ್ನು ಗಮನದಲ್ಲಿರಿಸ ಬೇಕು: ಭೂ ಸಂಬಂಧಿ ಕಾನೂನುಗಳು ನೂರಾರು, ಸಾವಿರಾರು ದಲಿತ ಹಿಡುವಳಿದಾರರನ್ನು ಸೃಷ್ಟಿಸಿರಬಹುದು, ಆದರೆ ಅವೆಲ್ಲವೂ ದಲಿತರನ್ನು ಬಲಿತರನ್ನಾಗಿಸುವುದಿಲ್ಲ.

ಯಾಕೆಂದರೆ ಅವೆಲ್ಲವೂ ಆರ್ಥಿಕವಾಗಿ ಲಾಭದಾಯಕವಲ್ಲದ ಹಿಡುವಳಿಗಳು ಅಲ್ಲದೇ ಅವುಗಳು ಗಾತ್ರದಲ್ಲಿ ಚಿಕ್ಕ ಪುಟ್ಟ ಹಿಡುವಳಿಗಳು. ಇಲ್ಲಿರುವ ವಿರೋಧಾಭಾಸವೆಂದರೆ ಕಾನೂನಿನ ಚೌಕಟ್ಟಿನ ನಡುವೆಯೂ ಬಹಳಷ್ಟು ಭೂಮಿ ದಲಿತರಿಂದ ಪರಭಾರೆಯಾಗಿರುವುದು ವಾಸ್ತವ. ದುರಂತವೆಂದರೆ ಈ ಹಿಡುವಳಿಗಳು ಅಂಬೇಡ್ಕರ್ ವಾದಿಸಿದಂತೆ ತೀವ್ರವಾದ ಬಂಡವಾಳವನ್ನು ಹೂಡುವಷ್ಟು ಗಟ್ಟಿಯಾಗಿಲ್ಲ ಅಥವಾ ಪಕ್ಕದ ಹಿಡುವಳಿಗಳೊಂದಿಗೆ ಲಾಭಕ್ಕಾಗಿ ವಿಲೀನಗೊಳ್ಳುವಷ್ಟು ಶಕ್ತಿಶಾಲಿಯಾಗಿಲ್ಲ. ತೀವ್ರತರ ಬಂಡವಾಳವನ್ನು ಸರಂಜಾಮಶಾಹಿ ಭೂಮಿಯ ಇತಿಹಾಸ ಇರುವಲ್ಲಿ ಅಳವಡಿಸಲು ಸಾಧ್ಯವಿಲ್ಲ. ಉತ್ತರ ಭಾರತದಲ್ಲಿ ಇದು ಸಾಧ್ಯವಿಲ್ಲ.

ಇದಕ್ಕೆ ಪರ್ಯಾಯವಾದ ಚಿಂತನೆಗಳನ್ನು ಅಂಬೇಡ್ಕರೋತ್ತರ ದಲಿತ ಚಳುವಳಿಗಳು ಮಾಡಬೇಕಾಗಿದೆ. ದಲಿತರನ್ನು ಆಧುನಿಕರನ್ನಾಗಿಸುವ ಕನಸಿನೊಂದಿಗೆ ಅಥವಾ ಪ್ರಕ್ರಿಯೆಯೊಂದಿಗೆ ಬಂಡವಾಳಶಾಹಿಗಳೊಂದಿಗೆ ಮುಖಾಮುಖಿ ಅಥವಾ ಅನುಸಂಧಾನ ಮಾಡುವ ಶಕ್ತಿಶಾಲಿ ಸಮುದಾಯಗಳನ್ನು ನಿರ್ಮಿಸುವ ಅನಿವಾರ್ಯತೆ ಹಾಗೂ ಅವಶ್ಯಕತೆ ಇದೆ. ಇಂದಿನ ಸಂದರ್ಭದಲ್ಲಿ ಇವೆರಡು ಪ್ರಕ್ರಿಯೆ ಜೊತೆ ಜೊತೆಯಾಗಿ ಹೋಗಲೇ ಬೇಕು. ಇಲ್ಲದಿದ್ದರೆ ದಲಿತರು ವೈರುದ್ಧದ ಸಂಕೇತಗಳಾಗಿ ಹೊರಹೊಮ್ಮಿದರೆ ಆಶ್ವರ್ಯ ಪಡಬೇಕಾಗಿಲ್ಲ: ಒಂದೆಡೆ ಆಧುನಿಕತೆಯ ಸಂಕೇತಗಳಾದ ಅಕ್ಷರಜ್ಞಾನ, ಪುಸ್ತಕ, ಬಂಗಲೆಗಳು, ಸಾಲಗಳ ನಡುವೆ ಹೊಚ್ಚ ಹೊಸ ಕಾರುಗಳ ಒಡೆಯರು ಮತ್ತೊಂದೆಡೆ ಹೊಸ ಆರ್ಥಿಕತೆಯಲ್ಲಿ ಯಜಮಾನಿಕೆಯ ವಾರಾಸುದಾರರಾಗದೇ ಹೊರಗುಳಿಯುವ ಆಧುನಿಕ ಕೂಲಿಯಾಳುಗಳು. □

ಮಾಯೆಯ ಬಂಧಿಸಲೋಗಿ ಸೋತನಾ ರಾಜಾ!

ಬುದ್ಧಾಯಣ

೬೨

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತ ವನದಲ್ಲಿ ತಮ್ಮ ಅಪಾರ ಶಿಷ್ಯರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಮಯದಲ್ಲಿ ಬೋಧಿಸತ್ವರು ರಾಜನ ಪಟ್ಟ ಮಹಿಷಿಯ ಗರ್ಭದಲ್ಲಿ ಜನಿಸಿದನು. ಬೆಳೆದು ದೊಡ್ಡವನಾದ ಬಳಿಕ ಪಾಂಡಿತ್ಯ ಪಡೆದನು. ತಂದೆಯ ಕಾಲಾನಂತರ ರಾಜ ಪದವಿಯನ್ನು ಏರಿದನು. ಅವರಿಗೆ ಪ್ರಾಯಕ್ಕೆ ಬಂದ ಸುಂದರಳಾದ ಒಬ್ಬಳು ಮಗ ಳಿದ್ದಳು. ಆಕೆಯನ್ನು ತನ್ನ ಅಳಿಯನಿಗೆ ಕೊಟ್ಟು ಮದುವೆ ಮಾಡ ಬೇಕೆಂದು ನಿಶ್ಚಯಿಸಿದ್ದನು. ಈ ಬಗ್ಗೆ ತನ್ನ ಮಂತ್ರಿ ಬಳಿ ಕೂಡ ವಿಷಯವನ್ನು ಪ್ರಸ್ತಾಪಿಸುತ್ತಾ;

"ಹಾಗೆ ಮಾಡಿದ್ದೇ ಆದರೆ ನನ್ನ ಅಳಿಯ ನನ್ನ ನಂತರ ರಾಜ ನಾಗುತ್ತಾನೆ. ನನ್ನ ಮಗಳು ಅವನ ಪಟ್ಟಮಹಿಷಿಯಾಗುತ್ತಾಳೆ" ಎಂದ.

ಇದಕ್ಕೂ ಮುಂಚೆಯೇ ಮಗಳು ಮತ್ತು ಅಳಿಯ ಪರಸ್ಪರ ಗಾಢವಾಗಿ ಪ್ರೀತಿಸುತ್ತಿದ್ದರು. ಕೆಲವು ವರ್ಷಗಳ ನಂತರ ರಾಜನು ತನ್ನ ಅಳಿಯನಿಗೆ ಮಗಳನ್ನು ಕೊಡುವ ವಿಷಯವನ್ನು ಬದಲಿಸಿದ. ಒಂದು ದಿನ ತನ್ನ ಮಂತ್ರಿಯೊಂದಿಗೆ ಮಾತನಾಡುತ್ತಾ;

"ಮಂತ್ರಿ, ನನ್ನ ಮೆಗಳನ್ನು ನನ್ನ ಅಳಿಯನಿಗೆ ಕೊಟ್ಟು ಮದುವೆ ಮಾಡಿದ್ದೇ ಆದರೆ ನನ್ನ ವಂಶ ಬೆಳೆಯುವುದಿಲ್ಲ. ಬದಲಿಗೆ ಬೇರೆ ರಾಜನಿಗೆ ಕೊಟ್ಟು ಮದುವೆ ಮಾಡಿದ್ದೇ ಆದರೆ ನನ್ನ ಬಲವು ವೃದ್ಧಿಸುವುದು" ಎನ್ನಲು ಮಂತ್ರಿಯು;

"ಕ್ಷಮಿಸಿ ಮಹಾರಾಜ, ತಮ್ಮ ಮೊದಲ ನಿರ್ಧಾರವೆ ಉಚಿತ ವಾದದ್ದು. ಇಲ್ಲವೆಂದರೆ ಅಪಾಯ ತಪ್ಪಿದ್ದಲ್ಲ"

"ಅಪಾಯವೇ? ಏಕೆ?"

"ತಮ್ಮ ಅಳಿಯ ಮತ್ತು ಮಗಳು ಗಾಢವಾಗಿ ಪ್ರೀತಿಸುತ್ತಿದ್ದಾರೆ" ಎನ್ನಲು ಆತನ ಕೋಪವು ನೆತ್ತಿಗೇರಿತು;

"ಸಾಧ್ಯವಿಲ್ಲ. ಅಸಂಭವ. ಈ ಪ್ರೀತಿ ಊರ್ಜಿತವಾಗಲು ನಾನು ಬಿಡುವುದಿಲ್ಲ" ಎಂದ ರಾಜನು ಅಂದಿನಿಂದ ಮಗಳನ್ನು ಸ್ವತಃ ತಾನೇ ಕಾಯಲು ಮುಂದಾದ. ತನ್ನ ಕೋಣೆಯಲ್ಲಿಯೇ ಆಕೆಗೊಂದು ಪ್ರತ್ಯೇಕ ಮಂಚವನ್ನು ಹಾಕಿಸಿದ. ಆಕೆಗೆ ಬೇಕಾದ ಸೌಕರ್ಯವನ್ನೆಲ್ಲ ತಾನೇ ಮಾಡಿಕೊಡುತ್ತಾ ನಿಗಾವಹಿಸಿದ. ತನ್ನ ಅಳಿಯನಿಗೆ ಪ್ರತ್ಯೇಕ ಅರಮನೆಯನ್ನು ಕಟ್ಟಿಸಿ ಅದರಲ್ಲಿ ಅವನನ್ನು ಇರಿಸಿದ. ಆತನಿಗೆ ಅಂದಿನಿಂದ ರಾಜನ ಅರಮನೆಗೆ ಪ್ರವೇಶವು ರದ್ದಾಯಿತು. ಇದ ರಿಂದಾಗಿ ಆ ಇಬ್ಬರು ಯುವ ಪ್ರೇಮಿಗಳ ಭೇಟಿಯು ರದ್ದಾಯಿತು. ದಿನ ಕಳೆದಂತೆ ಇಬ್ಬರ ಮನಸ್ಸಿನಲ್ಲಿಯೂ ವಿರಹ ವೇದನೆ ಮೂಡಿತು.

ಅಳಿಯನು ರಾಜಕುಮಾರಿಯನ್ನು ಸಂಧಿಸುವ ಬಗೆ ಹೇಗೆ ಎಂದು ಯೋಚಿಸುತ್ತಿರುವಾಗ ಆತನಿಗೆ ಅಂತಃಪುರದ ಪರಿಚಾರಿಕಿಯ ನೆನಪಾಯಿತು. ಆಕೆಯನ್ನು ಸಂಧಿಸಿ ತನ್ನ ಪ್ರೇಮವನ್ನು ನಿವೇದಿಸಿದ. ಆಕೆಯ ಕೈಗೆ ಲಂಚದ ರೂಪದಲ್ಲಿ ಸ್ವಲ್ಪ ಹಣವನ್ನು ಕೊಟ್ಟ, ಅಂದು ಅಂತಃಪುರಕ್ಕೆ ಬಂದ ಪರಿಚಾರಿಕೆಯು ರಾಜಕುಮಾರಿಯನ್ನು ಕಂಡು ಎಂದಿಗಿಂತ ಹೆಚ್ಚು ಆದರದಿಂದ ಮಾತನಾಡಿಸಿದಳು. ಆಕೆಯ ತಲೆಯಲ್ಲಿ ಇರುವ ಹೇನನ್ನು ತೆಗೆಯಲು ಮುಂದಾಗಿ ರಾಜಕುಮಾರಿಯನ್ನು ತೊಡೆಯ ಮೇಲೆ ಮಲಗಿಸಿಕೊಂಡಳು. ಸುತ್ತು ಬಳಸಿ ಮಾತನಾಡುತ್ತಾ ಹೇನನ್ನು ಕುಕ್ಕುತ್ತಿದ್ದ ಸಂದರ್ಭದಲ್ಲಿ ರಾಜಕುಮಾರಿಗೆ ಅನುಮಾನ ಮೂಡಲು ಪರಿಚಾರಿಕೆಯನ್ನು ಉದ್ದೇಶಿಸಿ;

"ಸೇವಕಿ ನೀನು ರಾಜಕುಮಾರನನ್ನು ಸಂಧಿಸಿದೆಯಾ?"

"ಹೌದಮ್ಮ!"

"ಆತನಿಂದ ಏನು ಸಂದೇಶ ತಂದೆ?"

"ತಮ್ಮನ್ನು ಈ ಅರಮನೆಯಿಂದ ಹೊರಗೆ ಕರೆದುಕೊಂಡು ಹೋಗುವ ಉಪಾಯವನ್ನು ಕೇಳುತ್ತಿದ್ದಾನೆ" ಎನ್ನಲು ಒಗಟಿನ ರೂಪದಲ್ಲಿ;

"ಕೋಮಲ ಹಸ್ತವನ್ನು ಬಳಸಿ, ಕಲಿಸಿದ ಆನೆಯ ಮೇಲೆ ಕುಳಿತು, ಕಡುಕತ್ತಲೆಯ ನಡು ರಾತ್ರಿಯಲಿ ದೇವತೆಯು ಮಳೆ ಸುರಿಸಿದಾಗ ಆತನ ಇಚ್ಛೆಯು ನೆರವೇರುವುದು ಎಂದು ತಿಳಿಸು" ಎಂದಳು. ಪರಿಚಾರಿಕೆಯು ಆ ಒಗಟನ್ನು ಕಲಿತು ರಾಜಕುಮಾರನಿಗೆ ಒಪ್ಪಿಸಿದಳು. ಅದರ ಒಳ ಅರ್ಥವನ್ನು ಅರಿತು ಆಕೆಗೆ ಮತ್ತಷ್ಟು ಲಂಚದ ರೂಪದಲ್ಲಿ ಹಣವನ್ನು ಕೊಟ್ಟು ಕಳುಹಿಸಿದ. ಬಳಿಕ ಅರಮನೆಯಲ್ಲಿ ಕೋಮಲವಾದ ಹೆಣ್ಣಿನ ಕೈಗಳನ್ನು ಹೋಲುವಂತಂಥಹ ಒಬ್ಬನನ್ನು ಪತ್ತೆ ಹಚ್ಚಿ ಅವನಿಗೆ ಲಂಚವನ್ನು ಕೊಟ್ಟು ನಾನು ಕರೆದಾಗ ನೀನು ಬರಬೇಕೆಂದು ಹೇಳಿ ಕಳುಹಿಸಿದ. ಅದೆ

"ಕೋಮಲ ಹಸ್ತವನ್ನು ಬಳಸಿ, ಕಲಿಸಿದ ಆನೆಯ ಮೇಲೆ ಕುಳಿತು, ಕಡುಕತ್ತಲೆಯ ನಡುರಾತ್ರಿಯಲಿ ದೇವತೆಯು ಮಳೆ ಸುರಿಸಿದಾಗ ಆತನ ಇಚ್ಛೆಯು ನೆರವೇರುವುದು ಎಂದು ತಿಳಿಸು" ಎಂದಳು. ಪರಿಚಾರಿಕೆಯು ಆ ಒಗಟನ್ನು ಕಲಿತು ರಾಜಕುಮಾರನಿಗೆ ಒಪ್ಪಿಸಿದಳು. ಅದರ ಒಳ ಅರ್ಥವನ್ನು ಅರಿತು ಆಕೆಗೆ ಮತ್ತಷ್ಟು ಲಂಚದ ರೂಪದಲ್ಲಿ ಹಣವನ್ನು ಕೊಟ್ಟು ಕಳುಹಿಸಿದ. ಬಳಿಕ ಅರಮನೆಯಲ್ಲಿ ಕೋಮಲವಾದ ಹೆಣ್ಣಿನ ಕೈಗಳನ್ನು ಹೋಲುವಂತಂಥಹ ಒಬ್ಬನನ್ನು ಪತ್ತೆ ಹಚ್ಚಿ ಅವನಿಗೆ ಲಂಚವನ್ನು ಕೊಟ್ಟು ನಾನು ಕರೆದಾಗ ನೀನು ಬರಬೇಕೆಂದು ಹೇಳಿ ಕಳುಹಿಸಿದ.

ರೀತಿ ಒಬ್ಬ ನಂಬಿಕಸ್ಥ ಮಾವುತನನ್ನು ಸಂಧಿಸಿ ನಾನು ಕೇಳಿದಾಗ ಆನೆಯನ್ನು ಕೊಡಬೇಕೆಂದು ಒಪ್ಪಿಸಿದ. ಮುಂದಿನ ಕೃಷ್ಣ ಪಕ್ಷದ ಅಮಾವಾಸೆಗಾಗಿ ಎದುರು ಕಾದು ಕುಳಿತ. ಆ ದಿನವೂ ಬಂದಿತು. ಅಂದಿನ ನಡುರಾತ್ರಿ ಧಾರಾಕಾರ ಮಳೆ ಸುರಿಯ ತೊಡಗಿತು. ಇದೇ ಸರಿಯಾದ ಸಮಯವೆಂದು ಅರಿತ ರಾಜಕುಮಾರ ತಾನು ಮೊದಲೇ ಗೊತ್ತು ಪಡಿಸಿದ್ದ ಯುವಕನನ್ನು ಕರೆದು ಆತನ ಎರಡೂ ಕೈಗಳನ್ನು ರಾಜಕುಮಾರಿಯ ಕೈಗಳಂತೆ ಶೃಂಗರಿಸಿದನು.

ಮಾವುತನಿಂದ ಆನೆಯನ್ನು ಪಡೆದು ಶೃಂಗರಿಸಿದ ಯುವಕನನ್ನು ಕೂರಿಸಿಕೊಂಡು ರಾಜಕುಮಾರಿಯ ಸ್ನಾನದ ಗೃಹದ ಬಳಿ ಬಂದ. ಹಿಂಬಾಗಿಲಿನ ಕಿಟಿಕೆಯ ಮೂಲಕ ಆ ಯುವಕನನ್ನು ಸ್ನಾನ ಗೃಹದ ಒಳಗೆ ಕಳುಹಿಸುತ್ತಾ ಅಲ್ಲಿ ಆತನ ಪಾತ್ರವೇನು ಎಂಬುದನ್ನು ವಿವರಿಸಿದ. ಬಳಿಕ ತಾನು ಅದೇ ಆನೆಯ ಮೇಲೆ ಕುಳಿತು ನರಿಯಂತೆ ಕೂಗು ಹಾಕಿದ. ಅದನ್ನು ಸೂಕ್ಷ್ಮವಾಗಿ ಅರ್ಥ ಮಾಡಿ ಕೊಂಡ ರಾಜಕುಮಾರಿಯು ತನ್ನ ಮಂಚದಿಂದ ಮೇಲೆದ್ದು ಕುಳಿತಳು. ಎದುರಿನ ಮಂಚದಲ್ಲಿ ಮಲಗಿ ತನ್ನನ್ನೇ ಕಾಯುತ್ತಿದ್ದ ತಂದೆಯನ್ನು ಕಂಡು ಬೆಚ್ಚಿದಳು. ತನ್ನ ಮರ್ಮವನ್ನು ಮರೆಸುವ ಸಲುವಾಗಿ ತಂದೆಯನ್ನು ಉದ್ದೇಶಿಸಿ;

"ಅಪ್ಪ, ಸ್ನಾನ ಗೃಹಕ್ಕೆ ಹೋಗಬೇಕು" ಎನ್ನಲು

"ಮಗು ಬಾ!" ಎಂದು ಮಗಳ ಕೈ ಹಿಡಿದು ನೆಡೆಸಿ ಕರೆತಂದು ಸ್ನಾನ ಗೃಹದ ಒಳಗೆ ಆಕೆಯನ್ನು ಬಿಟ್ಟು ಬಾಗಿಲ ಬಳಿ ಕಾವಲು ನಿಂತ. ಸ್ವಲ್ಪ ಸಮಯ ಕಳೆದ ಬಳಿಕ;

"ಮಗು, ಶೌಚಕ್ರೀಯೆ ಮುಗಿಯಿತೆ?" ಎನ್ನಲು ಆಕೆ:

"ಇನ್ನೂ ಮುಗಿದಿಲ್ಲ. ನಿನಗೆ ಅನುಮಾನವಿದ್ದರೆ ನನ್ನ ಈ ಕೈಯನ್ನು ಹಿಡಿದುಕೊಂಡಿರು" ಎನ್ನುತ್ತಾ ಸ್ನಾನ ಗೃಹದ ಒಳಗೆ ಮೊದಲೇ ಇದ್ದ ಯುವಕನ ಕೈಗೆ ತನ್ನ ಕೈಯಲ್ಲಿದ್ದ ಅಭರಣಗಳನ್ನು ತೊಡಿಸಿ ಬಾಗಿಲು ಒರೆ ಮಾಡಿ ಹೊರಕ್ಕೆ ಚಾಚಿಸಿದಳು. ಇದು ತನ್ನ ಮಗಳ ಕೈ ಎಂದೇ ಭ್ರಮಿಸಿದ ರಾಜ ಬಹು ಹೊತ್ತು ನಿಂತಲ್ಲಿಯೇ ನಿಂತ. ಸ್ನಾನ ಗೃಹದ ಒಳಗೆ ಯಾವುದೇ ಸದ್ದು ಗದ್ದಲವು ಕೇಳದೆ ಹೋದಾಗ ಅನುಮಾನಗೊಂಡ ರಾಜನು ಬಾಗಿಲನ್ನು ತಳ್ಳಿಕೊಂಡು ಒಳ ಬಂದ. ಅಲ್ಲಿ ತರತರನೆ ನಡುಗುತ್ತಾ ನಿಂತಿದ್ದ ಯುವಕನನ್ನು ಕಂಡು ತಾನು ಮೋಸ ಹೋದುದ್ದನ್ನು ಖಚಿತ ಪಡಿಸಿಕೊಂಡ. ಆ ಯುವಕನ್ನು ವಿಚಾರಿಸಲಾಗಿ ಆ ಇಬ್ಬರೂ ವ್ಯವಸ್ಥಿತವಾಗಿ ಸಂಚು ಮಾಡಿ ಪಲಾಯನ ಗೈದದ್ದನ್ನು ದೃಢ ಪಡಿಸಿ ಕೊಂಡ. ಕಡೆಗೆ ತನ್ನ ಸೋಲನ್ನು ಒಪ್ಪಿಕೊಂಡು ಕುಸಿದು ಕುಳಿತ.

ತಕ್ಷಣವೆ ತನ್ನ ಮಂತ್ರಿಯನ್ನು ಕರೆಸಿ ವಿಷಯವನ್ನು ತಿಳಿಸಿ ಆ ಇಬ್ಬರನ್ನು ಬಂಧಿಸಿ ಕರೆ ತರುವಂತೆ ಆಜ್ಞೆ ಮಾಡಿದ. ಆತ ಹಾಗೆಯೆ ಮಾಡಿದ ಬಳಿಕ ಅವರನ್ನು ಯಾವುದೆ ವಿಚಾರಣೆಗೆ ಗುರಿ ಪಡಿಸಲಿಲ್ಲ. ಬದಲಿಗೆ ಆ ಇಬ್ಬರನ್ನು ವಿಜೃಂಭಣೆಯಿಂದ ಮದುವೆ ಮಾಡಿದ. ಅಳಯನಿಗೆ ರಾಜ ಪದವಿಯನ್ನು ನೀಡಿದ. ತನ್ನ ಮಗಳನ್ನು ಆತನ ಪಟ್ಟಮಹಿಷಿ ಎಂದು ಘೋಷಿಸಿದ. ಬಳಿಕ ತಾನು ಸಂನ್ಯಾಸವನ್ನು ಸ್ವೀಕರಿಸಿ ಅರಮನೆಯನ್ನು ತೊರೆದು ಹೊರಡಲು ನಿರ್ಧರಿಸಿದ. ಅಂಥಹ ಸಂದರ್ಭದಲ್ಲಿ ತನ್ನ ಹಿರಿಯ ರಾಜನನ್ನು ಸಂಧಿಸಿದ ಮಂತ್ರಿಯು;

> **ಕಾಮಕ್ಕೆ ವಶರಾದ ಹೆಂಡತಿಯನ್ನಾಗಲೀ ಅಥವಾ ಮಗಳನ್ನಾಗಲೀ ನಾವು ಕಾಯಲಾಗಲೀ ಕಟ್ಟಲಾಗಲೀ ಸಾಧ್ಯವಿಲ್ಲ. ಅವರ ಮೇಲಿನ ಮೋಹಕ್ಕೆ ವಶರಾದ ಪುರುಷರನ್ನು ಅವರು ಬೆಂಕಿಯಂತೆ ಸುಟ್ಟು ಬಿಡುತ್ತಾರೆ. ಅವರು ಅದೆಷ್ಟೇ ಬಲಿಷ್ಠರಾಗಿದ್ದರೂ ಸಹ ದುರ್ಬಲರಾಗಿ ಬಿಡುತ್ತಾರೆ. ಕಣ್ಣಿದ್ದು ಕುರುಡರಾಗಿ ಬಿಡುತ್ತಾರೆ. ಗುಣವಂತರು ನಿರ್ಗುಣಿಗಳಾಗಿ ಬಿಡುತ್ತಾರೆ. ಪ್ರಜ್ಞಾವಂತನ ಪ್ರಜ್ಞೆಯು ಕ್ಷೀಣಿಸಿ ಬಿಡುತ್ತದೆ. ಹಾಗಾಗಿ ಅವರ ಬಂಧನದಿಂದ ಹೊರಬರಲು ಸಾಧ್ಯವಾಗುವುದಿಲ್ಲ.**

"ಮಹಾ ಪ್ರಭು, ತಾವೇಕೆ ಸಂನ್ಯಾಸವನ್ನು ಸ್ವೀಕರಿಸಿದಿರಿ?" ಎನ್ನಲು

"ಸತ್ಯದ ಹಿಂದೆ ಇರುವ ಅಶಾಶ್ವತತೆಯನ್ನು ಕಂಡು!"

"ಪ್ರಭು, ತಾವು ಕಂಡ ಸತ್ಯ ಯಾವುದು?"

"ಕಾಮಕ್ಕೆ ವಶರಾದ ಹೆಂಡತಿಯನ್ನಾಗಲೀ ಅಥವಾ ಮಗಳನ್ನಾಗಲೀ ನಾವು ಕಾಯಲಾಗಲೀ ಕಟ್ಟಲಾಗಲೀ ಸಾಧ್ಯವಿಲ್ಲ. ಅವರ ಮೇಲಿನ ಮೋಹಕ್ಕೆ ವಶರಾದ ಪುರುಷರನ್ನು ಅವರು ಬೆಂಕಿಯಂತೆ ಸುಟ್ಟು ಬಿಡುತ್ತಾರೆ. ಅವರು ಅದೆಷ್ಟೇ ಬಲಿಷ್ಠರಾಗಿದ್ದರೂ ಸಹ ದುರ್ಬಲರಾಗಿ ಬಿಡುತ್ತಾರೆ. ಕಣ್ಣಿದ್ದು ಕುರುಡರಾಗಿ ಬಿಡುತ್ತಾರೆ. ಗುಣವಂತರು ನಿರ್ಗುಣಿಗಳಾಗಿ ಬಿಡುತ್ತಾರೆ. ಪ್ರಜ್ಞಾವಂತನ ಪ್ರಜ್ಞೆಯು ಕ್ಷೀಣಿಸಿ ಬಿಡುತ್ತದೆ. ಹಾಗಾಗಿ ಅವರ ಬಂಧನದಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಹೆದ್ದಾರಿಯ ಮರೆಯಲ್ಲಿ ಹೊಂಚು ಹಾಕಿ ಸಂಚು ಮಾಡಿ ನಿಂತ ದರೋಡೆಕೋರ ಜನರನ್ನು ಲೂಟಿ ಮಾಡುವಂತೆ, ಪುರುಷನ ವಿದ್ಯೆ, ಬುದ್ಧಿ, ಶೀಲ ತಪಸ್ಸು, ಸತ್ಯ, ತ್ಯಾಗ, ಸ್ಮೃತಿ, ಮತಿ ಎಲ್ಲವೂ ನಷ್ಟವಾಗಿ ಬಿಡುತ್ತದೆ. ಕಟ್ಟಿಗೆಯ ರಾಶಿಯನ್ನು ಬೆಂಕಿಯು ಸುಟ್ಟು ಹಾಕುವಂತೆ, ಪ್ರಮತ್ತ ಮನುಷ್ಯನ ಯಶಸ್ಸು, ಕೀರ್ತಿ, ಶೌರ್ಯ, ಬಹುಶ್ರುತ ಭಾವ ಮತ್ತು ಜ್ಞಾನವೆಲ್ಲವೂ ನಷ್ಟವಾಗಿ ಬಿಡುತ್ತದೆ!"

"ಮಹಾಮಂತ್ರಿಯೇ, ಇಷ್ಟಾದರೂ ಕೊನೆಗೆ ಸ್ತ್ರೀಯರು ಮೈಥುನದ ಕೊರತೆಯಿಂದ, ಮಕ್ಕಳನ್ನು ಹೆರುವ ಬಯಕೆಯಿಂದ ಮತ್ತು ಅಲಂಕಾರ ಮಾಡಿಕೊಳ್ಳುವ ವಿಷಯದಲ್ಲಿ ಅತೃಪ್ತರಾಗಿಯೇ ಸಾಯುತ್ತಾರೆ. ಹೀಗಾಗಿ ಪಂಡಿತರು ಸಂಸಾರ ತ್ಯಾಗವನ್ನು ಮಾಡುತ್ತಾರೆ. ಹಾಗಾಗಿ ನಾನೂ ಕೂಡ ಆ ಮಾರ್ಗವನ್ನೇ ಅನುಸರಿಸಲು ಬಯಸುತ್ತೇನೆ. ಕೃಪೆ ತೋರಿ ನನ್ನ ತಡೆಯುವ ಪ್ರಯತ್ನ ಮಾಡಬೇಡಿ" ಎಂದ ರಾಜನು ಅರಮನೆಯಿಂದ ಹೊರ ನೆಡೆದ. ಕೊನೆಯದಾಗಿ ರಾಜನಿಗೆ ವಂದಿಸಿದ ಮಂತ್ರಿಯು;

"ಹೌದು ಮಹಾಪ್ರಭು, ತಾವು ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡ ಸತ್ಯಾನ್ವೇಷಿಯೇ ಸರಿ. ನಿನಗೆ ವಂದನೆಯು ತಂದೆ...!!" ಎಂದು ತಲೆಬಾಗಿದ. □

ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

'SAMVADA' Kannada Monthly, APRIL 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಬೆಂಗಳೂರಿನ 'ಸ್ಫೂರ್ತಿಧಾಮ'ದಲ್ಲಿ

ಅಂಬೇಡ್ಕರ್ ಹಬ್ಬ

ಏಪ್ರಿಲ್ 14, 2011

ಕಾರ್ಯಕ್ರಮಗಳು

- ಬುದ್ಧ ವಂದನೆ
- ತಳ ಸಮುದಾಯಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಮಹನೀಯರಿಗೆ ಪ್ರಶಸ್ತಿ
- ಅಂಬೇಡ್ಕರ್ ಸ್ಮಾರಕ ರಾಷ್ಟ್ರೀಯ ಉಪನ್ಯಾಸ
- ದಿನವಿಡೀ ಸಾಂಸ್ಕೃತಿಕ ಕಾರ್ಯಕ್ರಮಗಳು

ಬನ್ನಿ, ಭಾಗವಹಿಸಿ